ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

ಶ್ರೀ ವಿಕಾರಿ
ಶ್ರೀ ಶಾರ್ವರಿ ಸಂವತ್ಸರ
ಫಾಲ್ಗುಣ-ಚೈತ್ರ
ಮಾರ್ಚ್ 2020
₹ 12.00



RAMAIAH
Indic Specialty Ayurveda
RESTORATION HOSPITAL

ರಾಮಯ್ಯ ಆಯುರ್ವೇದ



# ಚಳಿಗಾಲದ ಪ್ಯಾಕೇಜ್

ಪ್ರತಿ ಹನಿ ಗುಣಪಡಿಸುತ್ತದೆ!

## ಸೋಲೋ

### ವಿಂಟರ್ ಪ್ಯಾಕೇಜ್
(ಒಬ್ಬ ಪರಿಚಾರಕರಿಂದ)

ಅವಧಿ – 60 ನಿಮಿಷಗಳು

4 ಅವಧಿಗಳು
(ಸರ್ವಾಂಗ ಅಭ್ಯಂಗ, ಸ್ವೇದ, ಕೇಶ ಲೇಪನ,
ಮುಖ ಲೇಪನ, ಪಾದಪ್ರಕ್ಷಾಲನ)

₹ 4000 (ಔಷಧಿಗಳೊಂದಿಗೆ)

## ಸಿಂಕ್ರೋನೈಜ್

### ವಿಂಟರ್ ಪ್ಯಾಕೇಜ್
(ಇಬ್ಬರು ಪರಿಚಾರಕರಿಂದ)

ಅವಧಿ – 60 ನಿಮಿಷಗಳು

4 ಅವಧಿಗಳು
(ಸರ್ವಾಂಗ ಅಭ್ಯಂಗ, ಸ್ವೇದ, ಕೇಶ ಲೇಪನ,
ಮುಖ ಲೇಪನ, ಪಾದಪ್ರಕ್ಷಾಲನ)

₹ 4500 (ಔಷಧಿಗಳೊಂದಿಗೆ)

ಭಾರತದಾದ್ಯಂತ ಮತ್ತು ವಿದೇಶಗಳಲ್ಲಿ ಉಪಸಂಸ್ಥೆ ಸ್ಥಾಪಿಸಲು ಆಹ್ವಾನಿಸಲಾಗಿದೆ

ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ
ರೆಸ್ಟೋರೇಷನ್ ಆಸ್ಪತ್ರೆ

ನ್ಯೂ ಬಿ ಇ ಎಲ್ ರೋಡ್, ಎಂ ಎಸ್ ರಾಮಯ್ಯ ನಗರ,
ಎಮ್ ಎಸ್ ಆರ್ ಐ ಟಿ ಪೋಸ್ಟ್, ಮತ್ತಿಕೆರೆ,
ಬೆಂಗಳೂರು – 560 054

080 22183456, 8099959595, 9972313129

ರಾಮಯ್ಯ ಇಂಡಿಕ್ ಸ್ಪೆಷಾಲಿಟಿ ಆಯುರ್ವೇದ
ರೆಸ್ಟೋರೇಷನ್ ಕ್ಲಿನಿಕ್


ಯಲಹಂಕ ಉಪನಗರ, ಯಲಹಂಕ,
ಬೆಂಗಳೂರು – 560 064

80999 59595 / 7090533000

E-mail - msricaim@gmail.com | URL: www.ramaiahayurveda.com

## ಒಳ ಪುಟಗಳಲ್ಲಿ...


**ವಿಶೇಷ ಸಂತ-ಗುರು ವಾದಿರಾಜರು**
● ಡಾ. ಅನಸೂಯಾದೇವಿ



6

**ಶ್ರೀರಂಗನಾಥನ ಕರೆ ಬಂತು**
● ಡಾ. ಬಾಬು ಕೃಷ್ಣಮೂರ್ತಿ



10

**ಬಲಿ ವಿಜ್ಞಾನ ಪ್ರಾಪ್ತಿ**
● ನಂ. ನಾಗಲಕ್ಷ್ಮೀ



18

**ಅತ್ರಿ**
● ಡಾ. ಎಸ್. ಹೇಮಲತಾ



20

**ಶಾರ್ವರಿ ಸಂವತ್ಸರ**
● ಕೆ. ಭೀಮರಾವ್



25

**ದೇವಸ್ಮಿತೆ**
● ಡಾ. ಎಸ್.ಆರ್. ಲೀಲಾ




28

**'ನನ್ನನ್ನು ಋಣಮುಕ್ತನನ್ನಾಗಿ ಮಾಡು'**
● ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ



60



**ಮಾರ್ಚ್–೨೦೨೦**
ಶ್ರೀ ವಿಕಾರಿ–ಶಾರ್ವರಿ ಸಂವತ್ಸರ
ಫಾಲ್ಗುಣ–ಚೈತ್ರ

ಸಂಪುಟ ೨೦ ● ಸಂಚಿಕೆ ೩


# ನಿಮ್ಮೊಡನೆ...

**ಆತ್ಮೀಯ ಮಲ್ಲಾರ ಓದುಗರೇ ನಮಸ್ಕಾರ.**

ಕೈವಾರ ಶ್ರೀ ಕ್ಷೇತ್ರದ ಯೋಗಿನಾರೇಯಣ ಮಠದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಮ್ (ಮಲ್ಲಾರದ ಪ್ರಧಾನ ಸಂಪಾದಕರೂ ಅಹುದು) ಅವರಿಗೆ ಧಾರ್ಮಿಕ ಕಾಳಜಿ ಬಹಳ. ವಿಶ್ವದಲ್ಲೆಡೆ ಜರುಗುತ್ತಿರುವ ಘೋರ ಘಟನೆಗಳನ್ನು ಕುರಿತು ಸದಾ ಚಿಂತಿಸುವ ಅವರು ಮಾನವ ಅನಂತ ಸುಖ ಸಂತೋಷಗಳೊಂದಿಗೆ ಇಹಲೋಕದಲ್ಲಿ ಜೀವನ ಸವೆಸಬೇಕಾದರೆ ಅತ್ಯುತ್ತಮ ಮಾರ್ಗವೆಂದರೆ ಅಧ್ಯಾತ್ಮ ಮಾರ್ಗ ಎಂಬ ನಿಶ್ಕರ್ಷೆಗೆ ಬಂದು ಮುಟ್ಟಿರುವವರು. ಆದ್ದರಿಂದಲೇ ಭಕ್ತಿಯ ಮಹತ್ತ್ವವನ್ನು, ಧರ್ಮದ ಅರ್ಥವನ್ನು ಜನರಿಗೆ ತಲಪಿಸಬೇಕೆಂಬ ಕಳಕಳಿ ಅವರದು. ಅದಕ್ಕೆ ಸೂಕ್ತವಾದ, ಸುಲಭವಾದ ಮೂಲ ದ್ರವ್ಯವು ಕೈವಾರ ತಾತಯ್ಯನವರ ಕೃತಿಗಳಲ್ಲಿದೆ ಎಂಬುದನ್ನು



ಅರಿತು ತಾತಯ್ಯನವರ ಕೃತಿ ಪರಿಚಯದ ಮೂಲಕ ಜನರಿಗೆ ಧರ್ಮ ಸಂದೇಶವನ್ನು ತಲಪಿಸುವ ಸಲುವಾಗಿ 'ಧರ್ಮ ಚಿಂತನೆ' ಎಂಬ ಕಾರ್ಯಕ್ರಮವನ್ನು ನಿಯೋಜಿಸಿದ್ದಾರೆ. ಪ್ರತಿ ತಿಂಗಳ ಎರಡನೆಯ ಶನಿವಾರ ಯಾವುದಾದರೂ ತಾಲ್ಲೂಕ್ ಕೇಂದ್ರ ಒಂದರಲ್ಲಿ ಈ ಕಾರ್ಯಕ್ರಮವನ್ನು ನಡೆಸಿ ಜನರನ್ನು ಧರ್ಮ ಮಾರ್ಗದಲ್ಲಿ ಕರೆದೊಯ್ಯಲು ತ್ರಿಕರಣಪೂರ್ವಕ ಶ್ರಮಿಸುತ್ತಿದ್ದಾರೆ.

ಮೊದಲೊಂದು ವರ್ಷ ಅವರಿಗೆ ಜೊತೆಯಾಗಿ ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳು ಧರ್ಮ ಚಿಂತನೆ ಸಭೆಗಳಲ್ಲಿ ಭಾಗವಹಿಸಿ ಧರ್ಮ ಹಾಗೂ ಧಾರ್ಮಿಕ ನಡೆ ನುಡಿಗಳ ಬಗ್ಗೆ ಪ್ರವಚನಗಳನ್ನು ನೀಡಿ ಜನರನ್ನು ಎಚ್ಚರಿಸಿದರು.

ಧರ್ಮಾಧಿಕಾರಿಗಳು ಚಿಂತಕರಾಗಿರುವುದರ ಜೊತೆಗೆ ಅಪೂರ್ವ ಅಧ್ಯಯನಶೀಲರೂ ಅಹುದು. ಹಿಂದಿನ ಹಾಗೂ ಇಂದಿನ ಆಧ್ಯಾತ್ಮಿಕ ಗ್ರಂಥಗಳನ್ನು ವಿಶೇಷವಾಗಿ ಓದಿ, ತಮ್ಮ ಉಪನ್ಯಾಸಗಳನ್ನು ಹೊಸ ಹೊಸ ವಿಚಾರಗಳಿಂದ ಶ್ರೀಮಂತಗೊಳಿಸಿ ಸಭಿಕರನ್ನು ಜ್ಞಾನಿಗಳಾಗಿ ಮಾಡುವ ಜೊತೆಗೆ ಅವರನ್ನು ಧರ್ಮ ಮಾರ್ಗದಲ್ಲಿ ನಡೆಯುವಂತೆ ಆದೇಶಿಸುತ್ತಿದ್ದಾರೆ. ಅವರನ್ನು ತಮ್ಮ ಹೃದಯ ಕಲಕುವ ಭಾಷಣ ಶೈಲಿಯಿಂದ ಪ್ರೇರೇಪಿಸುತ್ತಿದ್ದಾರೆ. ಅವರು 'ಮಲ್ಲಾರ'ದ ಮೂಲಕ ನಡೆಸುತ್ತಿರುವ ಇದು ಧರ್ಮ ಜಾಗೃತಿಯ ಕೆಲಸದ ಇನ್ನೊಂದು ಪಾರ್ಶ್ವವಷ್ಟೆ.

*ಮಾರ್ಚ್ ತಿಂಗಳಿನ ಧರ್ಮ ಚಿಂತನೆಯ ಕಾರ್ಯಕ್ರಮದಲ್ಲಿ ಧರ್ಮಾಧಿಕಾರಿಗಳ ಪ್ರೇರಣಾತ್ಮಕ ಪ್ರವಚನ ಕೇಳಲು ಪಾವಗಡದ ಜನರಿಗೆ ಒಂದು ಸುವರ್ಣಾವಕಾಶ ಒದಗಿಬರಲಿದೆ. ಮಾರ್ಚ್ 14ರ ಶನಿವಾರದಂದು ತುಮಕೂರು ಜಿಲ್ಲೆ ಪಾವಗಡದ ವಿನಾಯಕ ನಗರದಲ್ಲಿರುವ ಶ್ರೀ ಯೋಗಿನಾರೇಯಣ ದೇವಸ್ಥಾನದಲ್ಲಿ ಧರ್ಮ ಚಿಂತನೆ ಸಭೆಯನ್ನು ಆಯೋಜಿಸಲಾಗಿದ್ದು ಅಲ್ಲಿಗೆ ಪಾವಗಡದ ಎಲ್ಲ ನಾಗರಿಕ ಬಂಧುಗಳಿಗೂ ಸ್ವಾಗತ ಉಂಟು.*

ನಿಮ್ಮ ವಿಶ್ವಾಸಿ
**ನಿರ್ವಾಹಕ ಸಂಪಾದಕ**


ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
**ಡಾ. ಎಂ.ಆರ್. ಜಯರಾಮ್**

ನಿರ್ವಾಹಕ ಸಂಪಾದಕರು
**ಡಾ. ಬಾಬು ಕೃಷ್ಣಮೂರ್ತಿ**

ಸಂಪಾದಕೀಯ ವಿಳಾಸ:
**ಶ್ರೀ ಯೋಗಿ ನಾರೇಯಣ ಅಧ್ಯಯನ ಕೇಂದ್ರ**
ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ,
ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560 054. ☎: 080–40502965 /7204095848
E-mail: mallaramagazine@hotmail.com

ಮುದ್ರಕರು:
**ಲಾವಣ್ಯ ಮುದ್ರಣ,**
ವಿದ್ಯಾಪೀಠ,
ಬೆಂಗಳೂರು–560 050.

ವಿನ್ಯಾಸ: ಕಿಶೋರ್ ಕೆ.ಟಿ., ಮಂಡ್ಯ


# ಪ್ರತಿಸ್ಪಂದನ

● ನಾನು ಮಲ್ಲಾರ ಮಾಸಪತ್ರಿಕೆಯ ಆಜೀವ ಚಂದಾದಾರ. ಮಲ್ಲಾರ ಮಾಸಪತ್ರಿಕೆಯ ಪ್ರತಿ ಸಂಚಿಕೆಯೂ ವಿಭಿನ್ನ, ಆಕರ್ಷಣೀಯ ಮತ್ತು ವೈವಿಧ್ಯಮಯವೂ ವರ್ಣರಂಜಿತವೂ ಆಗಿದೆ. ಎಲ್ಲ ವಯೋಮಾನದವರೂ ಓದಲೇಬೇಕಾದಂತಹ ಪತ್ರಿಕೆ. ಧರ್ಮ ಜಾಗೃತಿ, ಜ್ಞಾನದ ಅರಿವನ್ನುಂಟುಮಾಡುತ್ತಿದೆ. ಭದ್ರಾಚಲ ಭಕ್ತ ರಾಮದಾಸರ ಪೂರ್ವ ಜೀವನ ವೃತ್ತಾಂತ, ಕೀರ್ತನೆಗಳ ಕುರಿತು ನಾವು ತಿಳಿದುಕೊಂಡಿರುವುದಕ್ಕಿಂತ ಹೆಚ್ಚಿನ ವಿಷಯಗಳು ತಿಳಿದಂತಾಯಿತು. ಯುಗಪುರುಷ ರಾಮಕೃಷ್ಣ ಪರಮಹಂಸ ಲೇಖನ ಹಾಗೂ ಮಲ್ಲಪ್ಪ ಶೆಟ್ಟರ ಶ್ರೇಷ್ಠತೆ, ಮಾನವೀಯ ಗುಣಗಳ ಲೇಖನಗಳೂ ಸಹ ಮನೋಜ್ಞವಾಗಿವೆ.

■ **ಶ್ರೀ ಆರ್.ಎನ್. ಜಗದೀಶ್,**
ಕೆ.ಇ.ಎಸ್. ನಿವೃತ್ತ ಶಿಕ್ಷಣಾಧಿಕಾರಿ,
ಶ್ರೀರಾಂಪುರ–ಮೈಸೂರು–577 542.

● ಈಗಿನ ಬೆಂಗಳೂರು ಹೊಸಕೋಟೆಯ ಮುಖ್ಯರಸ್ತೆಯ ಪಕ್ಕದಲ್ಲೇ ಇರುವುದು ಎಲೆ ಮಲ್ಲಪ್ಪ ಶೆಟ್ಟರ ಕೆರೆ. ಎಲೆ ಮಲ್ಲಪ್ಪ ಶೆಟ್ಟರು ಕಟ್ಟಿಸಿದ ಕೆರೆ ಬತ್ತಿದ ಉದಾಹರಣೆಗಳೇ ಇಲ್ಲ ಎನ್ನುವುದು ಜನರ ಆಡುಮಾತು. ಅವರ ದಾನಗುಣ 2020ರ ಫೆಬ್ರವರಿ ಮಲ್ಲಾರ ಪತ್ರಿಕೆಯ ಮುಖಾಂತರ ತಿಳಿಯಿತು.

■ **ಜಕ್ಕೂರು ಶ್ರೀ ಎಸ್. ನಾಗರಾಜು,**
ಬೆಂಗಳೂರು–560 064.




● ಫೆಬ್ರವರಿ ಮಾಹೆಯಲ್ಲಿ ಮೂಡಿಬಂದಿರುವ 'ದೇವರನ್ನೇ ಜರಿದ ಮಹಾಭಕ್ತ' ಲೇಖನದಲ್ಲಿ ಮುಸಲ್ಮಾನರ ಸೈನ್ಯ ಹೆಣ್ಣುಮಕ್ಕಳನ್ನು ಹಾಳುಮಾಡಿ, ಗೋವಿಂದರಾಜನು ನಿದ್ರಿಸುತ್ತಿದ್ದನೆಯೇ, ಅವನ ಆಯುಧಗಳು ಮೊಂಡಾದವೇ? ವಯಸ್ಸಾಗಿದೆಯೇ ಎಂದು ವ್ಯಂಗ್ಯ ಮಾಡುತ್ತಾ ಗೋವಿಂದರಾಜಸ್ವಾಮಿಯನ್ನು ನಿಂದಿಸುತ್ತಿರುವ ಪ್ರಸಂಗವನ್ನು ಕಣ್ಣಿಗೆ ಕಾಣುವಂತೆ ಸ್ವಾರಸ್ಯಕರವಾಗಿದೆ.

■ **ಶ್ರೀಮತಿ ಸುವರ್ಣ,**
ಕೋಟಂಬಳ್ಳಿ–571 117.

● ಪರಮಪೂಜ್ಯ ಶ್ರೀ ರಾಮಕೃಷ್ಣ ಪರಮಹಂಸರ ಮುಖಪುಟವನ್ನು ಕಣ್ಣಿಗೊತ್ತಿಕೊಂಡು ಪತ್ರಿಕೆಯನ್ನು ಓದಲು ಪ್ರಾರಂಭಿಸಿದೆ. ಎಲ್ಲ ಲೇಖನಗಳು ಒಂದಕ್ಕಿಂತ ಮಗದೊಂದು ಚಿತ್ರಸಹಿತ ಅರ್ಥಪೂರ್ಣವಾಗಿವೆ. ನಿಮ್ಮೊಡನೆಯಲ್ಲಿ ನಿರ್ವಾಹಕ ಸಂಪಾದಕರು ಶ್ರೀ ವಿಶ್ವೇಶ್ವತೀರ್ಥ ಸ್ವಾಮಿರನ್ನು ಸ್ಮರಿಸಿರುವುದು ಸಮಯೋಜಿತವಾಗಿದೆ. ಮಾಸ ವೈಶಿಷ್ಟ್ಯದಲ್ಲಿ ಫೆಬ್ರವರಿ ತಿಂಗಳಿನ 9 ಮಹತ್ತ್ವಪೂರಿತ ದಿನಗಳ ಬಗ್ಗೆ ಪೂರ್ವಭಾವಿಯಾಗಿಯೇ ತಿಳಿಸಿರುವುದು ಸಂಬಂಧಿಸಿದ ದಿನಗಳ ಆಚರಣೆಗೆ ತುಂಬ ಉಪಕಾರವಾಗಿದೆ.

■ **ಶ್ರೀ ಎ.ಕೆ. ಅನಂತಮೂರ್ತಿ,** ಬೆಂಗಳೂರು–560 050.

● ಅನೇಕ ರೀತಿಯ ಭಕ್ತರ, ಜ್ಞಾನಿಗಳ, ಸಂತರ, ದೇವರುಗಳ ಲೇಖನಗಳನ್ನು ಸಮಾನತೆಯ ದೃಷ್ಟಿಯಿಂದ ಓದುಗರಿಗೆ ತಿಳಿಸಿಕೊಡುತ್ತಿರುವ ಮಲ್ಲಾರಕ್ಕೆ ಸರಿಸಮಾನವಾದ ಪತ್ರಿಕೆ ಮತ್ತೊಂದಿಲ್ಲ.

■ **ಶ್ರೀ ಚಂದ್ರಶೇಖರಯ್ಯ,** ಬೆಂಗಳೂರು–560 083.

● ತುರುಷ್ಕ ರಾಜಕುಮಾರಿ ಬೀಬಿ ನಾಚ್ಚಿಯಾರ್ ರಾಮಪ್ರಿಯನನ್ನು ಬಿಟ್ಟರಲಾದಂತಹ ಪ್ರೇಮ ಬಾಂಧವ್ಯವನ್ನು ಆ ಉತ್ಸವ ವಿಗ್ರಹದ ಮೇಲಿರಿಸಿಕೊಂಡು, ಮೇಲುಕೋಟೆಗೆ ಬಂದು ಶ್ರೀ ರಾಮಾನುಜಾಚಾರ್ಯರನ್ನು ಕಂಡಂತಹ ದೃಶ್ಯ ಭಕ್ತಿಯ ಪರಾಕಾಷ್ಠೆಯ ಉತ್ತಮ ಉದಾಹರಣೆ.

■ **ಶ್ರೀ ವೇಣುಗೋಪಾಲಚಾರ್,** ಹಾಸನ–573 134.

● ಡಾ. ಎಸ್.ಆರ್. ಲೀಲಾ ಅವರ ಕಥಾಸರಿತ್ಸಾಗರದಿಂದಾಯ್ದ 'ಉಪಕೋಶಾ'ಯ ಕಥೆ ಪ್ರಾಚೀನತೆಯಲ್ಲಿ ಆಧುನಿಕವಾಗಿದೆ. ಕಥಾವಸ್ತು ಓದುಗರನ್ನು ಆಕರ್ಷಣೀಯವಾಗಿ ಓದುವಂತೆ ಮಾಡುತ್ತದೆ. ವಿಷಯ ಸರಳ, ಸುಂದರವಾಗಿದೆ.

■ **ಶ್ರೀಮತಿ ಸುಶೀಲಮ್ಮ,**
ಆನೇಕಲ್–562 106.

● ಭಕ್ತಿಯ ರುಚಿಯನ್ನು ಒಮ್ಮೆ ನೋಡಿದರೆ ಸಾಕು–ಅದರ ಮುಂದೆ ಇನ್ನುಳಿದ ಎಲ್ಲ ರಸಗಳೂ ತುಚ್ಛವಾಗಿಯೂ ನೀರಸವಾಗಿಯೂ ಕಂಡಾವು ಎಂದು ಹೇಳುತ್ತಾ ಭಕ್ತಿಯಲ್ಲಿರುವ ಆನಂದವನ್ನು ಓದುಗರಿಗೆ ಉಣಬಡಿಸುತ್ತಿರುವ ಸಂತ ವಿನೋಬಾ ಭಾವೆಯವರ 'ಗೀತಾ ಪ್ರವಚನ'ವು ಅತ್ಯುತ್ತಮ ಮಾರ್ಗದರ್ಶಿ.

■ **ಶ್ರೀ ಸಂತೋಷ್ ಕುಮಾರ್,**
ಬೆಂಗಳೂರು–560 078.

● ಆತ್ಮ ಸಾಕ್ಷಾತ್ಕಾರ ದೊರೆತಾಗ ಇಡೀ ಬ್ರಹ್ಮಾಂಡದ ಜ್ಞಾನವೇ ನಮ್ಮದಾಗುವುದು. ನಮ್ಮ ಆತ್ಮದಲ್ಲೇ ಸರ್ವವೂ ಅಡಗಿದೆ. ಆದ್ದರಿಂದ ಅಂತರ್ಮುಖಿಯಾಗಿ ಸಾಧಿಸಬೇಕಾದ ಕಾರ್ಯವನ್ನು ಸಾಧಿಸು. ಬಾಹ್ಯ ಪ್ರಪಂಚದ ಜ್ಞಾನವು ನಿಜವಾದದ್ದು ಎಂದು ನಂಬಿದರೆ ನೀನು ಆ ಅಸುರರ ರೀತಿಯೇ ಮೋಸ ಹೋಗುತ್ತೀಯಾ ಎಂದು ನಿಜವಾದ ಆತ್ಮಜ್ಞಾನದ ಬಗ್ಗೆ ಕಶ್ಯಪರು ತಿಳಿಸಿರುವುದನ್ನು, ಸ್ವಾಮಿ ನಿಮಿಷಾನಂದಜೀಯವರು 'ಕಶ್ಯಪ ಸೂತ್ರಗಳ' ಲೇಖನದಲ್ಲಿ ಓದುಗರಿಗೆ ಅರ್ಥವಾಗುವ ರೀತಿಯಲ್ಲಿ ಬಹಳ ಸೊಗಸಾಗಿ ತಿಳಿಸಿದ್ದಾರೆ.

■ **ಶ್ರೀ ಚೆನ್ನಕೇಶವ,**
ತುಮಕೂರು–572 101.



# ಹೀಗೊಂದು ಅನಿಸಿಕೆ...

● ಡಾ। ಬಾಬು ಕೃಷ್ಣಮೂರ್ತಿ

ಕಾಮನ ಹುಣ್ಣಿಮೆ, ಕಾಮನ ಹಬ್ಬ ಅಥವಾ ಹೋಳಿ ಎಂದು ಕರೆಸಿಕೊಳ್ಳುವ ಹಬ್ಬ ನಮ್ಮ ಹುಡುಗರಿಗೆ ಬಲು ಉತ್ಸಾಹದ ಹಬ್ಬ. ಮನೆ ಮನೆಯಿಂದ ಕಟ್ಟಿಗೆ, ಬೆರಣಿ ಮುಂತಾದವನ್ನು ಸಂಗ್ರಹಿಸಿ ರಸ್ತೆಗಳು ಹಾದುಹೋಗುವ ಸ್ಥಳಗಳಲ್ಲಿ ಒಟ್ಟುಗೂಡಿಸಿ ಅದಕ್ಕೆ ಅಗ್ನಿಸ್ಪರ್ಷ ಮಾಡಿ ಖುಷಿಯಿಂದ ಅದರ ಸುತ್ತ ಕುಣಿಯುವುದನ್ನು ನೋಡುತ್ತೇವೆ.

ಈ ರೀತಿ ಸೌದೆ, ಬೆರಣಿ ಮುಂತಾದವನ್ನು ಒಟ್ಟುಗೂಡಿಸಿ ಬೆಂಕಿ ಹಚ್ಚುವ ಕಾಮನ ಹಬ್ಬದ ವಿಶೇಷದ ಹಿನ್ನೆಲೆಯಾಗಿ ಕೆಲವು ಕಥೆಗಳಿವೆ.

ಭವಿಷ್ಯ ಪುರಾಣ ಎಂಬುದು ನಮ್ಮ ಹಲವು ಪುರಾಣಗಳಲ್ಲಿ ಒಂದು. ಅದರಲ್ಲಿ ಇಕ್ಷ್ವಾಕು ವಂಶದ ರಘು ಮಹಾರಾಜನ ಕಾಲದಲ್ಲಿ ನಡೆದ ಒಂದು ಪ್ರಸಂಗದಲ್ಲಿ ಕೂಡ ಈ ಸೌದೆ ರಾಶಿಗೆ ಬೆಂಕಿ ಹಚ್ಚಿ ಖುಷಿ ಪಡುವ ಹಬ್ಬದ ಹಿನ್ನೆಲೆಯ ದೃಷ್ಟಾಂತವಿದೆ. ರಘು ಮಹಾರಾಜನ ಕಾಲದಲ್ಲಿ ದುಂಧ ಎಂಬ ರಾಕ್ಷಸ ಕಾಣಿಸಿಕೊಂಡನಂತೆ. ಅವನ ದಾಂಧಲೆಗೆ ಇಡೀ ರಾಜ್ಯ ತತ್ತರಿಸಿ ಹೋಯಿತಂತೆ. ಪ್ರಜೆಗಳು ಹಾಹಾಕಾರಕ್ಕೆ ಒಳಗಾದರಂತೆ. ಜನ ದಿಕ್ಕುಗಾಣದವರಾಗಿ ಮಹಾರಾಜನಲ್ಲಿ ಮೊರೆ ಇಟ್ಟರಂತೆ. ಮಹಾರಾಜರು ತಮ್ಮ ಆಸ್ಥಾನ ವಿದ್ವಾಂಸರನ್ನೂ ಮಂತ್ರಿಗಳನ್ನೂ ಸಭೆ ಸೇರಿಸಿ ಈ ಸಮಸ್ಯೆಯನ್ನು ಕುರಿತು ಚರ್ಚಿಸಿ ಅದಕ್ಕೊಂದು ಪರಿಹಾರ ಕಂಡುಕೊಂಡನಂತೆ. ಅದೇ ಬೀದಿ ಬೀದಿಗಳಲ್ಲಿ ಸೌದೆ, ಹುಲ್ಲು ಮತ್ತು ಮನೆಗಳಲ್ಲಿನ ಕಸದ ರಾಶಿಗಳನ್ನು ಸೇರಿಸಿ ಬೆಂಕಿ ಹಚ್ಚುವುದು. ಆಗ ಹುಡುಗರು ಬೆಂಕಿಯ ಸುತ್ತಲೂ ಕುಣಿಯುತ್ತಾ ಮಂತ್ರ ಹೇಳುವುದು. ಇಂದೂ ಅದು ಭಾರತದಲ್ಲಿ ಕೆಲವೆಡೆ ಜಾರಿಯಲ್ಲಿದೆ. ಮಂತ್ರಗಳ ಬದಲು ಕೂಗುತ್ತಾರೆ. ಇದು ಕಾಮನ ಹಬ್ಬದ ಸಮಯದಲ್ಲಿ ನಾವೂ ನಮ್ಮ ನಮ್ಮ ಸ್ಥಳಗಳಲ್ಲಿ ನೋಡುತ್ತೇವೆ.

## ಕಾಮನ ಹಬ್ಬದ ಹಿನ್ನಲೆ



ಭಾಗವತದಲ್ಲಿ ಶ್ರೀಕೃಷ್ಣನ ಬಾಲಲೀಲೆಗಳ ಕಥೆಗಳಿವೆ. ಆ ಲೀಲೆಗಳಲ್ಲಿ ಪೂತನಿಯ ಸಂಹಾರ ಒಂದು. ರಾಕ್ಷಸಿ ಪೂತನಿ ಶಿಶು ಕೃಷ್ಣನನ್ನು ಕೊಲ್ಲಲು ಸುಂದರ ಸ್ತ್ರೀಯಂತೆ ಬಂದು ಅವನಿಗೆ ಮೊಲೆ ಉಣಿಸಲು ಯತ್ನಿಸುತ್ತಾಳೆ. ಆಗ ಶ್ರೀಕೃಷ್ಣ ವಿಷ ಲೇಪನದ ಮೊಲೆ ಹಾಲು ಕುಡಿಯುತ್ತಾ ಕುಡಿಯುತ್ತಾ, ಅವಳು ತನ್ನನ್ನು ಕೊಲ್ಲಲು ಬಂದ ರಾಕ್ಷಸಿ ಎಂಬುದನ್ನು ಅರಿತು, ಅವಳ ಪ್ರಾಣವನ್ನೇ ಹೀರಿ ಬಿಡುತ್ತಾನೆ. ಅವಳು ತನ್ನ ಕಪಟ ಸುಂದರ ರೂಪವನ್ನು ಕಳಚಿ ನಿಜ ರಾಕ್ಷಸ ರೂಪದಲ್ಲಿ ನೆಲದ ಮೇಲೆ ಕುಸಿಯುತ್ತಾಳೆ. ಆಗ ಗೋಕುಲದ ಜನರೆಲ್ಲ ಸೇರಿ ಆ ರಾಕ್ಷಸಿಯ ಮೃತ ದೇಹಕ್ಕೆ ಅಗ್ನಿ ಸ್ಪರ್ಷ ಮಾಡಿ ಆ ಜ್ವಾಲೆಗಳನ್ನು ನೋಡುತ್ತಾ ತಮ್ಮ ಪ್ರೀತಿಯ ಶಿಶು ಕೃಷ್ಣನನ್ನು ಕೊಲ್ಲಲು ಬಂದ ಪೂತನಿಯನ್ನು ಶಪಿಸುತ್ತಾ, ಕೃಷ್ಣನು ಅಪಾಯದಿಂದ ಪಾರಾದುದಕ್ಕೆ ಸಂತಸ ವ್ಯಕ್ತಪಡಿಸುತ್ತಾ ಸಂಭ್ರಮಿಸಿದರಂತೆ. ಇದೂ ಹೋಳಿ ಹಬ್ಬಕ್ಕೆ ಸಂಬಂಧಿಸಿದ ಒಂದು ಕಥೆ.

ನಮ್ಮ ಕರ್ನಾಟಕ, ಆಂಧ್ರ, ತಮಿಳುನಾಡುಗಳಲ್ಲಿ ಹೋಳಿ ಹಬ್ಬ ಕಾಮಣ್ಣನ ಹಬ್ಬ ಎಂದೇ ಪ್ರಚಲಿತ. ಅಂದು ಶಿವನು ತನ್ನ ಮೂರನೆಯ ಕಣ್ಣಿನಿಂದ ಕಾಮನನ್ನು ಸುಟ್ಟನೆಂಬ ಕಥೆ ಈ ಹಬ್ಬಕ್ಕಿದೆ.

ಶಿವ ಮತ್ತು ಸತಿ ಗಂಡ ಹೆಂಡತಿಯರು. ಸತಿಯ ತಂದೆ ದಕ್ಷನು ಒಂದು ಯಜ್ಞ ಕಾರ್ಯಕ್ರಮದಲ್ಲಿ ತನ್ನ ಗಂಡ ಶಿವನಿಗೆ ಅಪಮಾನ ಮಾಡಿದನೆಂದು ನೊಂದ ಸತಿ ಅಗ್ನಿಗೆ ತನ್ನನ್ನು ಸಮರ್ಪಿಸಿಕೊಳ್ಳುತ್ತಾಳೆ.

ಸತಿಯನ್ನು ಕಳೆದುಕೊಂಡ ಶಿವ ತಪಸ್ಸಿನಲ್ಲಿ ನಿರತನಾಗುತ್ತಾನೆ. ಅದೇ ವೇಳೆ ತಾರಕಾಸುರ ಎಂಬ ರಾಕ್ಷಸ ಲೋಕ ಕಂಟಕನಾಗಿ ವಿಜೃಂಭಿಸುತ್ತಿರುತ್ತಾನೆ. ದೇವಾದಿ ದೇವತೆಗಳು ಇದರಿಂದ ಬಾಧೆಗೊಳಗಾಗಿ ಬ್ರಹ್ಮನನ್ನು ಕಂಡು ತಾರಕಾಸುರನಿಂದ ಮುಕ್ತಿ ದೊರಕಿಸಕೊಡಬೇಕೆಂದು ಪ್ರಾರ್ಥಿಸುತ್ತಾರೆ. ತಾರಕಾಸುರನೋ ಬಹು ದೀರ್ಘ ತಪಸ್ಸು ಮಾಡಿ ಬ್ರಹ್ಮನಿಂದಲೇ ತನ್ನ ಸಾವು ಶಿವನ ಮಗನಿಂದ ಆಗಬೇಕೆಂದು ವರವನ್ನು ಪಡೆದಿರುತ್ತಾನೆ. ಶಿವನ ಪತ್ನಿ ಬೆಂಕಿಯಲ್ಲಿ ಸುಟ್ಟು ಹೋಗಿರುವುದೂ ಶಿವನು ತಪಸ್ಸಿನಲ್ಲಿ ನಿರತನಾಗಿರುವುದೂ ಶಿವನಿಗೆ ಪುತ್ರೋತ್ಸವವಾಗುವ ಸಂಭವವೇ ಇಲ್ಲವೆಂದು ತಿಳಿದಿದ್ದ ತಾರಕಾಸುರ ತರ್ಕಿಸಿ ಈ ಬಗೆಯ ವರವನ್ನು ಬ್ರಹ್ಮನಿಂದ ಪಡೆದಿರುತ್ತಾನೆ. ಆದರೆ ದೇವತೆಗಳು ಬ್ರಹ್ಮನನ್ನು ಕೇಳಿ ಶಿವನ ಪುತ್ರನಿಂದಲೇ ತಾರಕಾಸುರ ಸಂಹಾರ ಸಾಧ್ಯವೆಂದು ತಿಳಿದು ಆ ನಿಟ್ಟಿನಲ್ಲಿ ಚಿಂತಿಸಲಾರಂಭಿಸುತ್ತಾರೆ.

ಅದೇ ವೇಳೆ ಪಾರ್ವತಿ ಶಿವನನ್ನು ವಿವಾಹವಾಗ ಬಯಸಿ ತಪೋನಿರತಳಾಗಿರುತ್ತಾಳೆ. ಶಿವ ತನ್ನ ತಪಸ್ಸಿನಲ್ಲಿ ಮುಳುಗಿದ್ದು ಪಾರ್ವತಿಯ ಕಡೆ ಗಮನ ಹರಿಸಲು ಸಾಧ್ಯವಾಗುವುದಿಲ್ಲ.


ಆಗ ದೇವತೆಗಳು ಶಿವ-ಪಾರ್ವತಿಯರ ವಿವಾಹವಾಗಿ ಅವರಿಂದ ಜನಿಸುವ ಮಗನೇ ತಾರಕನನ್ನು ಸಂಹರಿಸಬಲ್ಲನೆಂಬ ಕಾರಣದಿಂದ ಶಿವನಿಗೆ ಪಾರ್ವತಿಯಲ್ಲಿ ಮೋಹ ಉಂಟು ಮಾಡಲು ಇಂದ್ರನನ್ನು ಕೇಳುತ್ತಾರೆ. ಆಗ ಇಂದ್ರನು ಶಿವನ ತಪಸ್ಸನ್ನು ಕೆಡಿಸಿ ಪಾರ್ವತಿಯನ್ನು ಸೇರುವಂತೆ ಮಾಡಲು ಮನ್ಮಥನನ್ನು ಕಳಿಸುತ್ತಾನೆ. ಶಿವನ ಕೋಪಾಗ್ನಿಗೆ ತುತ್ತಾಗುವ ಸಾಧ್ಯತೆಗಳಿದ್ದುದರಿಂದ ಮನ್ಮಥ ಮೊದಲು ಹೋಗಲೊಲ್ಲೆ ಎನ್ನುತ್ತಾನೆ. ಆದರೆ ಅನಂತರ ಲೋಕ ಕಲ್ಯಾಣಕ್ಕಾಗಿ ತಾನು ಶಿವನ ಕೋಪಕ್ಕೆ ತುತ್ತಾಗಿ ಭಸ್ಮವಾದರೂ ಪರವಾಗಿಲ್ಲ ಎಂದು ಹೋಗುತ್ತಾನೆ.

ಮನ್ಮಥ ಎಂದರೆ ಮನವನ್ನು ಮಥಿಸುವವನು ಎಂದರ್ಥ. ಕಾಳಿಕಾ ಪುರಾಣದ ಪ್ರಕಾರ ಸೃಷ್ಟಿ ಕ್ರಿಯೆಯನ್ನು ಸುಲಭವಾಗಿಸಲು ಬ್ರಹ್ಮ ಹತ್ತು ಜನ ಪ್ರಜಾಪತಿಗಳನ್ನು ಮೊದಲು ಸೃಷ್ಟಿಸಿದನಂತೆ. ಅವನು ಸಂಧ್ಯಾ ಎಂಬ ಸೌಂದರ್ಯ ರಾಶಿಯಾಗಿದ್ದ ಕನ್ಯೆಯನ್ನೂ ಸೃಷ್ಟಿಸಿದ. ಅವಳ ಮೋಹಕ ವ್ಯಕ್ತಿತ್ವ ಬ್ರಹ್ಮನ ಪರಿವಾರದಲ್ಲಿ ಅಲ್ಲೋಲ ಕಲ್ಲೋಲ ಉಂಟುಮಾಡಿದನಂತೆ. ಬ್ರಹ್ಮನೂ ಸಂಧ್ಯೆಯ ಮೋಹ ಜಾಲದಿಂದ ಬಿಡಿಸಿಕೊಳ್ಳಲು ಸಾಧ್ಯವಾಗದಾಯಿತಂತೆ. ಆ ಸಮಯದಲ್ಲಿ ಬ್ರಹ್ಮನ ಮನಸ್ಸಿನಿಂದ ಒಬ್ಬ ಅದ್ಭುತ ಸುಂದರಾಂಗ ಸೃಷ್ಟಿಯಾದನಂತೆ. ಅವನ ಬಳಿ ಒಂದು ಹೂಬಿಲ್ಲು ಮತ್ತು ಐದು ಪುಷ್ಪ ಬಾಣಗಳು ಇದ್ದವಂತೆ. ಅವನಿಗೊಂದು ಮತ್ಸ್ಯದ ಚಿಹ್ನೆಯಿದ್ದ ಧ್ವಜವೂ ಇತ್ತಂತೆ. ಹೀಗೆ ಹುಟ್ಟಿದವನು ಮನ್ಮಥನಂತೆ. ಬ್ರಹ್ಮನು ಮನ್ಮಥನಿಗೆ ಕೊಟ್ಟ ಕೆಲಸವೆಂದರೆ ಅವನ ಬಿಲ್ಲು ಮತ್ತು ಹೂಬಾಣಗಳಿಂದ ಭೂಮಿಯ ಮೇಲಿನ ಹೆಣ್ಣು ಗಂಡುಗಳ ಮೇಲೆ ಮೋಹ ಜಾಲ ಬೀಸಿ ಸಂತಾನೋತ್ಪತ್ತಿಯ



▶▶ 38ನೇ ಪುಟಕ್ಕೆ

**ಇದೇ ಮಾರ್ಚ್ ತಿಂಗಳ 12ನೆಯ ದಿನಾಂಕದಂದು (ವಿಕಾರಿ ನಾಮ ಸಂವತ್ಸರ, ಉತ್ತರಾಯಣ ಶಿಶಿರ ಋತು, ಫಾಲ್ಗುಣಮಾಸ ತೃತೀಯಾ ಚಿತ್ತ ನಕ್ಷತ್ರದಂದು) ಶ್ರೀ ವಾದಿರಾಜರ ಆರಾಧನೆಯ ದಿನ. ಈ ಪ್ರಯುಕ್ತ "ಮಲ್ಲಾರ" ಪತ್ರಿಕೆಯ ಮೂಲಕ ಶ್ರೀ ವಾದಿರಾಜ ತೀರ್ಥ ಗುರುಗಳಿಗೆ ಸಲ್ಲಿಸುತ್ತಿರುವ ನುಡಿನಮನವಿದು. ವಾದಿರಾಜರು 1402ನೇ ಶಾರ್ವರಿ ಸಂವತ್ಸರದ ಮಾಘಮಾಸದ ದ್ವಾದಶಿಯಂದು ಈ ಭೂಮಿಯಲ್ಲಿ ಜನಿಸಿದ್ದು.**



ಭಾರತದಲ್ಲಿ ಉದಿಸಿ ಬಂದಿರುವ ಮಹಾನ್ ಸಂತರುಗಳೆಲ್ಲ ಮಾನವ ಕುಲದ ಉದ್ಧಾರಕ್ಕಾಗಿ ಶ್ರಮಿಸಿರುವ ಗುರುಗಳೇ ಆಗಿದ್ದಾರೆ. ಹಾಗೆಯೇ ಗುರುವಾಗಿ ಬಂದಿರುವ, ಒದಗಿರುವ ಅನೇಕ ಹಿಂದಿನ ಗುರುಗಳೆಲ್ಲ ಸಂತರೇ ಆಗಿದ್ದಾರೆ. ಸಂತ ವ್ಯಕ್ತಿತ್ವವಿಲ್ಲದೆಯೇ ಯಾರೂ ಗುರುವಾಗಲು ಸಾಧ್ಯವಿಲ್ಲ. ಉತ್ತರ ಭಾರತದಲ್ಲಿಯ ಹಾಗೇ ದಕ್ಷಿಣ ಭಾರತದಲ್ಲಿಯೂ ಅನೇಕ ಮಹಾನ್ ಸಂತ ಗುರುಗಳು ಆಗಿಹೋಗಿದ್ದಾರೆ. ಅಂಥವರಲ್ಲಿ ಕನ್ನಡನಾಡಿನ ಮಹಾನ್ ಯತಿವರೇಣ್ಯರಾದ ವಾದಿರಾಜರನ್ನು ನಾವು ನೆನೆಯಲೇಬೇಕು. ಅಪಾರ ಜ್ಞಾನಿಗಳೂ ಅಪೂರ್ವ ಯೋಗಿಗಳೂ ಸಮಾಜ ಸುಧಾರಕ ಸಂತರೂ ಆಗಿದ್ದು ಜನಮಾನಸದಲ್ಲಿ ಇಂದಿಗೂ ನೆಲೆನಿಂತಿರುವ ಗುರುಗಳೇ ವಾದಿರಾಜರು. ಸೋದೆಯ ಶ್ರೀ ವಾದಿರಾಜತೀರ್ಥರೆಂದೇ ಕರೆಯಲ್ಪಡುವ ಅಪರೂಪದ ಅಧ್ಯಾತ್ಮ ಸಾಧಕರು. ಶ್ರೀಕೃಷ್ಣನ ಪರಮಭಕ್ತರಾಗಿ ಮಠಾಧಿಪತ್ಯದಲ್ಲೇ ಮೈ ಮರೆಯದೆ ತಮ್ಮ ಸುತ್ತಣದ ಜನತೆಯ ನೋವು, ಸಂಕಷ್ಟಗಳಿಗೆ

# ವಿಶೇಷ ಸಂತ-ಗುರು ವಾದಿರಾಜರು



■ಡಾ. ಅನಸೂಯಾದೇವಿ
ನಿವೃತ್ತ ಪ್ರಾಧ್ಯಾಪಕಿ, ಚಿಂತಕಿ, ಕಾದಂಬರಿಗಾರ್ತಿ.

ಸ್ಪಂದಿಸುತ್ತ ಉದ್ಧಾರದ ಹಾದಿ ತೋರಿದವರು. ಸಮಾಜ ಸೇವೆಯೂ ಭಗವಂತನ ಪೂಜೆ ಎಂದು ಬಾಳಿದಂಥ ಆದರ್ಶ ಗುರು.

ದಕ್ಷಿಣ ಕರಾವಳಿಯಲ್ಲಿ ಕುಂದಾಪುರದ ಸಮೀಪ ಇರುವ "ಹೂವಿನ ಕೆರೆ" ಎಂಬುದು ವಾದಿರಾಜರ ಹುಟ್ಟೂರು. ಕುಂಭಾಸಿಯ ಆಣೆಗುಡ್ಡೆ ಗಣಪತಿಯ (ಈಗಲೂ ಪ್ರಸಿದ್ಧವಾದ ಕ್ಷೇತ್ರವಿದು) ದೇಗುಲಕ್ಕೆ ಬಹಳ ಸಮೀಪವಾದ ಗ್ರಾಮವಾಗಿತ್ತು ಈ "ಹೂವಿನ ಕೆರೆ". ಜನ್ಮ ನಾಮ ಭೂವರಾಹ" ಎಂದು ಇಡಲಾಯಿತು. ರಾಮಾಚಾರ್ಯ ಮತ್ತು ಗೌರೀದೇವಿ ಎಂಬ ದಂಪತಿಗೆ ಜನಿಸಿದ ಮಗುವಾಗಿ ಮುಂದೆ ಲೋಕೋದ್ಧಾರಗೈದವನು.

ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಸೋದೆಯ ಮಠದ ಮೂಲಪುರುಷರಾದ ವಿಷ್ಣುತೀರ್ಥರ ಪರಂಪರೆಯಲ್ಲಿ ಬಂದ ವಾಗೀಶತೀರ್ಥರು ಒಮ್ಮೆ ಚಾತುರ್ಮಾಸ್ಯಕ್ಕೆ ಎಂದು ಕುಂಭಾಸಿಗೆ ಬಂದಿದ್ದರು. ರಾಮಾಚಾರ್ಯ ದಂಪತಿ ಈ ಗುರುಗಳ ಬಳಿ ಬಂದು ಶರಣಾಗಿ "ಪುತ್ರ ಸಂತಾನವಾಗಲೆಂದು ಹರಸಿರಿ. ಮಕ್ಕಳಿಲ್ಲದೆ ನೊಂದಿದ್ದೇವೆ" ಎಂದು ಪುತ್ರ ಭಿಕ್ಷೆ ಕೇಳಿದರು. "ಹುಟ್ಟುವ ಕೂಸನ್ನು ನಮಗೆ ಅರ್ಪಿಸುವುದಾದಲ್ಲಿ ನಿಮ್ಮ ಇಚ್ಛೆ ನೆರವೇರುತ್ತದೆ" ಎಂದರು ವಾಗೀಶತೀರ್ಥರು. "ಇದು ಭಗವಂತನ ಸಂಕಲ್ಪ. ಭೂವರಾಹಸ್ವಾಮಿ ತನ್ನ ಭಕ್ತನ ಅವತಾರಕ್ಕೆ ನಿಮ್ಮನ್ನು ಕ್ಷೇತ್ರವನ್ನಾಗಿ ಆರಿಸಿದ್ದಾನೆ. ಲೋಕೋದ್ಧಾರಕನಾದ ಪುತ್ರ ಜನಿಸುತ್ತಾನೆ. ಆದರೆ ದೈವ ಸಂಕಲ್ಪ ಮಗುವನ್ನು ನಾವೇ ಬೆಳೆಸುತ್ತೇವೆ. ನಮಗೆ ಒಪ್ಪಿಸಿರಿ" ಎಂಬ ಗುರುವಿನ ಆಜ್ಞೆಗೆ ನಡುಗಿಹೋದರೂ ಮಗುವೊಂದು ಜನಿಸುತ್ತದಲ್ಲ ಎಂಬ ಆಶೆಗೆ ದಂಪತಿ ಒಪ್ಪಿಕೊಂಡುಬಿಟ್ಟರು. ಗೌರೀದೇವಿ ಗರ್ಭವತಿಯಾಗಿ ನವಮಾಸಗಳು ಕಳೆದವು. ಮಗುವಿನ ಜನನವಾದ ದಿನವನ್ನು ಹೇಗೆ ಅರಿತರೋ, ವಾಗೀಶತೀರ್ಥರು ಹೂವಿನ ಕೆರೆಗೆ ಬಂದು ಮಗುವನ್ನು ಒಪ್ಪಿಸಲು ಕೋರಿದರು. ಅಗಲಿಕೆಯ ದುಃಖದಿಂದ ತತ್ತರಿಸುತ್ತಿದ್ದ ದಂಪತಿಗೆ ಸಾಂತ್ವನ ಹೇಳಿ, "ಮುಂದೆ ನಿಮಗೆ ಮತ್ತೊಂದು ಪುತ್ರ ಸಂತಾನ ಯೋಗವಿದೆ. ಅಲ್ಲಿಯವರೆಗೂ ನಮ್ಮ ಮಠದಲ್ಲೇ ಇದ್ದು ಮಗುವನ್ನು ಜೊತೆಗಿರಿಸಿಕೊಂಡು ಪಾಲಿಸಿರಿ. ಐದು ವರ್ಷಗಳ ಅನಂತರವೇ ಒಪ್ಪಿಸಿ" ಎಂದು ಮಗುವಿನ ಸಮೇತ ಆ ದಂಪತಿಯನ್ನು ಉಡುಪಿಯ ಸೋದೆಯ ಮಠಕ್ಕೆ ಕರೆದೊಯ್ದು ನೆಲೆ ಕಲ್ಪಿಸಿಕೊಟ್ಟರು.

ಎಳೆಯ ಬಾಲ್ಯದಿಂದಲೂ ಜಪತಪಾನುಷ್ಠಾನ, ಪೂಜೆ ಪುನಸ್ಕಾರ,

ಗ್ರಂಥಾಭ್ಯಾಸ ಇವುಗಳಲ್ಲಿಯೇ ಮನಸ್ಸನ್ನು ತೊಡಗಿಸಿಕೊಂಡು ಬೆಳೆದ ವಾದಿರಾಜರಲ್ಲಿ ವೈರಾಗ್ಯಶೀಲತೆ ಎನ್ನುವುದು ವ್ಯಕ್ತಿತ್ವದ ಹಾಸುಹೊಕ್ಕಾಗಿ ಬೆರೆತುಕೊಂಡು ಬಂದಿತು. ಹಾಗೆಂದು ಅವರು ಶುಷ್ಕ ವೇದಾಂತಿಯಾಗಿ ಮಾರ್ಪಡದೇ ಸಾಹಿತ್ಯ, ಲಲಿತ ಕಲೆಗಳಲ್ಲಿ ಆಸಕ್ತರೂ ಭಾವಭಕುತಿಯ ಸಹೃದಯರೂ ಆಗಿದ್ದುದೇ ಅವರ ವ್ಯಕ್ತಿ ವೈಶಿಷ್ಟ್ಯತೆ! ಲೌಕಿಕ ವ್ಯಾಪಾರಗಳಲ್ಲಿ ಅನಾಸಕ್ತರೂ ಧಾರ್ಮಿಕ ಕಾರ್ಯಗಳಲ್ಲಿ, ಕರ್ತವ್ಯಗಳಲ್ಲಿ ಲೋಪವಿಲ್ಲದವರೂ ಆಗಿದ್ದುದೇ ಅವರು ಭಗವಂತನಿಗೆ ಪ್ರೀತಿಯ ಜೀವವಾಗಲು ಕಾರಣವಾಗಿತ್ತು.

## ಯತ್ಯಾಶ್ರಮ ಸ್ವೀಕಾರ

**ಐದು ವರ್ಷದ ಅನಂತರ ಭೂವರಾಹನಿಗೆ ಸಕಲ ವೇದವಿದ್ಯಾಭ್ಯಾಸವನ್ನು ವಾಗೀಶತೀರ್ಥರೇ ಕೊಟ್ಟು ಬಾಲಕನಿಗೆ ಎಂಟು ವರ್ಷವಾದಾಗ "ಬಾಲಯತಿ ದೀಕ್ಷೆ"ಯನ್ನೂ ನೀಡಿಬಿಟ್ಟರು. "ವಾದಿರಾಜ"ನೆಂಬ ಅಭಿದಾನವಿತ್ತರು. ಬಾಲಯತಿಗೆ ಹಯವದನ ಮಹಾಮಂತ್ರವನ್ನು ತಾವೇ ಉಪದೇಶಿಸಿದರು.**

**ಮುಂದೆ "ಹಯವದನ" ಎಂಬುವುದೇ ವಾದಿರಾಜತೀರ್ಥರ ಸಕಲ ಕೃತಿಗಳ ಅಂಕಿತನಾಮವೂ ಆಯಿತು.**

**ಎಂಟು ವರ್ಷದ ಬಾಲಯತಿಯು ಮುಂದೆ ನೂರ ಇಪ್ಪತ್ತು ವರ್ಷ ಕಾಲ ಬದುಕಿದ್ದು ಅಧ್ಯಾತ್ಮ ತಪಸ್ವಿಯಾಗಿದ್ದರು.**

ಮುಂದೆ ಈ ಬಾಲಯತಿಯು ಹಂಪೆಯ ಶ್ರೀ ವ್ಯಾಸತೀರ್ಥರಲ್ಲಿ ತಮ್ಮ ಮುಂದಿನ ವಿದ್ಯಾಭ್ಯಾಸಕ್ಕೆ ತೆರಳಿದರು. ವ್ಯಾಸತೀರ್ಥರಲ್ಲಿ ಶಿಷ್ಯತ್ವ ತಾಳಿ ಅವರೊಂದಿಗಿರುವಷ್ಟು ವರ್ಷಗಳಲ್ಲಿ ತಮ್ಮ ಈ ಗುರುವಿನಿಂದ ತುಂಬ ಪ್ರಭಾವಿತರಾದರು. ಗುರುವಿನಂತೆಯೇ ತಾವೂ ಮುಂದೆ **ವ್ಯಾಸಕೂಟ** (ಮಹಾನ್ ವಿದ್ವಾಂಸ, ಪಂಡಿತರ ಸಮೂಹ **ದಾಸಕೂಟ** (ತಾವು ಹರಿಯ ದಾಸನೆಂದು ಕರೆದುಕೊಂಡು ಜ್ಞಾನಿಗಳೇ ಆಗಿದ್ದರೂ ಪರಮಭಕ್ತಿಯಲ್ಲಿ ಬಾಳುವವರು)ಗಳನ್ನು ಬೆಳೆಯಿಸಿ ಪ್ರೋತ್ಸಾಹಿಸಿದವರಾದರು. ಹೀಗೆ ಜ್ಞಾನ ಮತ್ತು ಭಕ್ತಿಗಳೆರಡೂ ಕೂಡ ಪರಮಾತ್ಮನನ್ನು ಸೇರುವ ಹಾದಿಗಳೆಂದು ತೋರಿಸಿಕೊಟ್ಟವರಾದರು.

ಮುಂದೆ ಬಂದಂಥ ಪುರಂದರದಾಸರು, ವಿಜಯದಾಸರು, ಗೋಪಾಲದಾಸರು, ಜಗನ್ನಾಥದಾಸರು ಇವರ ಕೀರ್ತನೆಗಳಲ್ಲೆಲ್ಲ ವಾದಿರಾಜರು ವ್ಯಾಸತೀರ್ಥರ ಪ್ರಮುಖ ಶಿಷ್ಯರೆಂಬ ಪ್ರಸ್ತಾಪವಿದೆ.

ಉಡುಪಿಯ ಅಷ್ಟ ಮಠಗಳಲ್ಲಿ ಒಂದಾದ ಕುಂಭಾಸಿ ಮಠದ ಉತ್ತರಾಧಿಕಾರಿಯಾಗಿ ಹೀಗೆ ವಾದಿರಾಜ ತೀರ್ಥರು ಮುಂದೆ ಭಾರತವಿಡೀ ಸಂಚಾರವನ್ನು ಕೈಗೊಂಡು ತಾವು ಸಂದರ್ಶಿಸಿದ ವೈಷ್ಣವ ತೀರ್ಥಕ್ಷೇತ್ರಗಳನ್ನು ಕುರಿತಾದ ಅಮೂಲಾಗ್ರ ವಿವರಗಳನ್ನೊಳಗೊಂಡ "ತೀರ್ಥ ಪ್ರಬಂಧ"ವೆಂಬ ಉತ್ಕೃಷ್ಟ ಗ್ರಂಥವನ್ನು ರಚಿಸಿದ್ದಾರೆ. ಆಯಾ ಕ್ಷೇತ್ರಗಳ ಪೌರಾಣಿಕ, ಐತಿಹಾಸಿಕ ಹಿನ್ನೆಲೆಯನ್ನಷ್ಟೇ ಅಲ್ಲ, ಅವುಗಳಲ್ಲಿಯ ಆಧ್ಯಾತ್ಮಿಕ ರಹಸ್ಯವನ್ನೂ ತೆರೆದು ತೋರಿಸುವಂಥದ್ದು ಈ ಕೃತಿಯ ವೈಶಿಷ್ಟ್ಯವಾಗಿದೆ. ಅಂದಿನ ಕಾಲದಲ್ಲೇ ವಾದಿರಾಜರಿಂದ ಬಂದ ಸೊಗಸಾದ ಪ್ರವಾಸ ಕಥನವು ಹೌದು ಇದು ಎಂದು ಆಧುನಿಕವಾಗಿ ಹೇಳಬಹುದಾದ ಕೃತಿ ಇದು. ಪೂರ್ವ ಪಶ್ಚಿಮ, ದಕ್ಷಿಣ ಉತ್ತರ ಎಂಬ ಹೆಸರಿನ ನಾಲ್ಕು ಪ್ರಬಂಧಗಳನ್ನೊಳಗೊಂಡಿದ್ದು ಒಟ್ಟು 235 ಸಂಸ್ಕೃತ ಶ್ಲೋಕಗಳಿಂದ ರಚಿತವಾಗಿದೆ. ಇದರ ಓದುವಿಕೆ, ಶ್ರವಣಗಳಿಂದಲೇ ಇದ್ದ ಸ್ಥಳದಲ್ಲಿಯೇ ತೀರ್ಥಯಾತ್ರೆಯ ಮಹದನುಭವವನ್ನು ತಂದುಕೊಡುತ್ತದೆಂದು ಜಗನ್ನಾಥದಾಸರು ಹೇಳಿದ್ದಾರೆ.



ಸೋಧೆ ವಾದಿರಾಜ ಮಠ

## ಗುರು ಸ್ತುತಿ

ವ್ಯಾಸತೀರ್ಥರು ತಮ್ಮನ್ನು ರೂಪಿಸಿದ ಗುರುಗಳೆಂದು ವಾದಿರಾಜರು ತಮ್ಮ "ಪ್ರಮೇಯಮಾಲಾ" ಹಾಗೂ "ಏಕಾದಶೀ ನಿರ್ಣಯ" ಗ್ರಂಥದಲ್ಲಿ ಹೇಳಿಕೊಂಡು ಗುರು ಸ್ತುತಿ ಗೈದಿದ್ದಾರೆ. ತಾವು ವ್ಯಾಸರಾಜ ಯತಿಗಳ ಶಿಷ್ಯ ವರ್ಗದವರಲ್ಲಿ ಶ್ರೇಷ್ಠರಾದ ಶಿಷ್ಯರೆಂದು ತಾವೇ ಹೇಳಿಕೊಂಡಿದ್ದಾರೆ.

ತಮ್ಮ ಕನ್ನಡ ಕೃತಿಯೊಂದರಲ್ಲಿ ವಾದಿರಾಜರು "ಶುದ್ಧ ಕೀರುತಿ ಛತ್ರದಿಂದ ಲೋಕದಿ ಬೆಳಗಿದ ವ್ಯಾಸಮುನಿರಾಯ ನಿಮ್ಮ ಪೆಸರೆನಗೆ ಬಲವೀವುದು" ಎಂದು ನೆನೆದುಕೊಂಡಿದ್ದಾರೆ ಗುರುವನ್ನು.

"ಮಂಡೆ ಬೋಳಾದರೂ ಮನ ಶುದ್ಧವಿಲ್ಲ" ಎಂಬ ತಮ್ಮ ಕನ್ನಡ ಕೃತಿಯಲ್ಲಿ ವಾದಿರಾಜರು ತಮ್ಮ ಗುರುಗಳಾದ ವ್ಯಾಸರಾಜರ ವಿಷಯದಲ್ಲಿ ತಪ್ಪಿ ನಡೆದವನು "ಒಮ್ಮನೆ ತಮಸಿನಲಿ ಬೀಳುವುದು ಸತ್ಯ" ಎಂದು ಸಾರಿದ್ದಾರೆ. ಇನ್ನೊಂದು ಕೀರ್ತನೆಯಲ್ಲಿ ಹೀಗೆ ಹಾಡಿದ್ದಾರೆ:

"ವ್ಯಾಸರಾಯರ ಮಹಿಮೆ<br>
ದಾಸರೇ ಬಲ್ಲರು ।<br>
ದಾಸರ ಮಹಿಮೆಗಳನು<br>
ವ್ಯಾಸ ಮುನಿ ಬಲ್ಲನು"

"ಆನೆ ಬರುತ್ತಿದೆ ಇದೋ । ವ್ಯಾಸರಾಜರು ಎಂಬ ಆನೆ ಬರುತ್ತಿದೆ" ಎಂದೂ ಮತ್ತೊಂದು ತಮ್ಮ ಕೃತಿಯಲ್ಲಿ ಗುರು ಸ್ತುತಿ ಗೈದಿದ್ದಾರೆ.

ವಾದಿರಾಜರಿಗೆ ಸಂಸ್ಕೃತದಲ್ಲಿ ಅಪಾರ ವಿದ್ವತ್ ಇದ್ದಿತ್ತು. ಅಂತೆಯೇ ತಮ್ಮ ಮಾತೃ ಭಾಷೆಯಲ್ಲಿ ವಿಚಾರ, ಪರಮತ ಖಂಡನೆ, ಸ್ವಮತ ಮಂಡನೆಗಳ ವಿಚಾರ ಸಂಕಿರಣ ಇಂಥ ಚಟುವಟಿಕೆಗಳನ್ನು ಮಠದಲ್ಲಿ ಹಮ್ಮಿಕೊಂಡು ಭಾಗವಹಿಸುತ್ತಿದ್ದಂತೆಯೇ ಕನ್ನಡದ ಹರಿದಾಸರಿಗೆ ಅಖಂಡವಾದ, ಅನನ್ಯವಾದ ಪ್ರೋತ್ಸಾಹ ನೀಡುತ್ತಿದ್ದರು. ದಾಸಸಾಹಿತ್ಯದ ರಚನೆಗೆ, ಹಾಡುಗಾರಿಕೆಗೆ, ಭಾಗವತದ ಕಥಾನಕಗಳ ಏರ್ಪಾಡಿಗೆ ಸದಾ ಮುಂದೆ ಇರುತ್ತಿದ್ದರು. ವಾದಿರಾಜರಲ್ಲಿ ಶಾಸ್ತ್ರ ಪ್ರಭುತ್ವವೂ ಸಾಹಿತ್ಯ ಪಟುತ್ವವೂ ನೆಲೆಗೊಂಡಿದ್ದುವೆಂದೇ ಅವರು ವ್ಯಾಸ-ದಾಸ ಪರಂಪರೆಯನ್ನು ಮುಖ್ಯವಾಹಿನಿಗಳನ್ನಾಗಿ ಮುಂದುವರಿಯಿಸಿಕೊಂಡು ಹೋದರು. ತತ್ತ್ವಜ್ಞಾನದ ಪ್ರಸಾರ, ವೈಷ್ಣವ ಸಿದ್ಧಾಂತದ ಪ್ರಬಲ ಪ್ರತಿಷ್ಠಾಪನೆಯಲ್ಲಿ ಅವರು ಸಿದ್ಧಹಸ್ತರು. ಜೊತೆ ಜೊತೆಯಾಗಿ ಕನ್ನಡ ಸಂಸ್ಕೃತಿ-ಸಾಹಿತ್ಯಗಳಿಗೆ ನೀರೆರೆದು ಪೋಷಿಸಿರುವ ಸ್ವಯಂ ಕವಿವರೇಣ್ಯರೂ ದಾಸವರೇಣ್ಯರೂ ಹೌದು ಅವರು! ಹೀಗಾಗಿ ಮಠಾಧಿಪತಿಯೂ ಹೌದು, ಹರಿದಾಸ ದೀಕ್ಷೆಯಲ್ಲಿ ಬಾಳಿದ ಗುರುವರೇಣ್ಯರೂ ಹೌದು!

ಸಂಸ್ಕೃತದಲ್ಲಿ "ನ್ಯಾಯ ಸುಧಾಗುರ್ವರ್ಥ ದೀಪಿಕಾ", "ತತ್ತ್ವ ಪ್ರಕಾಶಿಕಾಗುರ್ವರ್ಥ ದೀಪಿಕಾ" ಈಶಾವಾಸ್ಯೋಪನಿಷದ್ಭಾಷ್ಯ

ಟೀಕಾ ಟಿಪ್ಪಣಿ" "ಷಟ್ ಪ್ರಶ್ನೋಪನಿಷದ್ಭಾಷ್ಯ ಟೀಕಾ ಟಿಪ್ಪಣಿ" "ಗೀತಾ ಭಾಷ್ಯ ಟಿಪ್ಪಣಿ" ಎಂಬ ಐದು ಉತ್ಕೃಷ್ಟವೆನ್ನಲಾಗಿರುವ ಟಿಪ್ಪಣಿ ಗ್ರಂಥಗಳನ್ನು ರಚಿಸಿದ್ದಾರೆ.

**ವಾದಿರಾಜ ತೀರ್ಥರು ರಚಿಸಿರುವ ಎಂಟು ಟೀಕಾ ಗ್ರಂಥಗಳು**

1. ಮಹಾಭಾರತ ಲಕ್ಷಾಲಂಕಾರ
2. ಮಹಾಭಾರತ ತಾತ್ಪರ್ಯ ನಿರ್ಣಯ ಭಾವ ಪ್ರಕಾಶಿಕಾ
3. ತಲವಕಾರೋಪನಿಷದ್ಭಾಷ್ಯ ಟೀಕಾ
4. ತೈತ್ತಿರೀಯೋಪನಿಷದ್ಭಾಷ್ಯ ಟೀಕಾ
5. ಕಾಠಕೋಪನಿಷದ್ಭಾಷ್ಯ ಟೀಕಾ
6. ಮಾಂಡೂಕೋಪನಿಷದ್ಭಾಷ್ಯ ಟೀಕಾ
7. ಅಥರ್ವಣೋಪನಿಷದ್ಭಾಷ್ಯ ಟೀಕಾ
8. ತಂತ್ರಸಾರ ಟೀಕಾ

ಇದಲ್ಲದೆ ಇಪ್ಪತ್ತು ಸ್ವತಂತ್ರ ಶಾಸ್ತ್ರ ಗ್ರಂಥಗಳನ್ನು ವಾಙ್ಮಯ ಲೋಕಕ್ಕೆ ರಚಿಸಿಕೊಟ್ಟಿದ್ದಾರೆ. 5379ರಷ್ಟು ಶ್ಲೋಕಗಳಿಂದ ಕೂಡಿದ ಬಹು ವಿಸ್ತಾರ ಗ್ರಂಥ "ಯುಕ್ತಿ ಮಲ್ಲಿಕಾ" ಎಂಬುದು ವಾದಿರಾಜರ ಮೇರು ಕೃತಿ. "ಶೃತಿ ತತ್ತ್ವ ಪ್ರಕಾಶಿಕಾ" ಗ್ರಂಥವೊಂದನ್ನು ರಚಿಸಿ ಅದರಲ್ಲಿ "ಜಗನ್ಮಿಥ್ಯ" ವಾದವನ್ನು ಖಂಡಿಸಿ ದೈವ ಮತ್ತು ಜೀವ ಒಂದೇ ಅಲ್ಲವೆಂದು ಸಶಕ್ತವಾಗಿ ಪ್ರತಿಪಾದಿಸಿದ್ದಾರೆ. "ದ್ವೈತ ವೇದಾಂತ ಕೋಶ"ವೆಂದೇ ವಾದಿರಾಜ ತೀರ್ಥರ ಈ ಕೃತಿ ಪ್ರಸಿದ್ಧವಾಗಿದೆ. ಇವುಗಳಲ್ಲದೆ "ಭೂಗೋಳ ವಿವರಣಾ" ಮತ್ತು "ಲಕ್ಷಾಲಂಕಾ" ಕೃತಿಗಳನ್ನು ರಚಿಸಿದ್ದು ಸಂಸ್ಕೃತ ವಾಙ್ಮಯದಲ್ಲಿನ ಮೈಲಿಗಲ್ಲುಗಳೆನಿಸಿವೆ.



ವಾದಿರಾಜರು ಕನ್ನಡ ಜನರನ್ನು ಸಂಘಟಿಸಿ, ಹರಿಭಕ್ತಿಯನ್ನು ಅವರಲ್ಲಿ ಪ್ರಸರಿಸಿ, ಸನ್ಮಾರ್ಗಕ್ಕೆ ಜನರನ್ನು ಪ್ರವರ್ತಿಸಿದ ಮಹಾನುಭಾವರು. ಹರಿದಾಸರನ್ನು ಸಂಘಟಿಸಿ ದಾಸ ಸಾಹಿತ್ಯ ಕೃಷಿಗೆ ತಾವೇ ಮಾರ್ಗದರ್ಶನ ಮಾಡಿ ಅಪಾರ ಪ್ರೋತ್ಸಾಹವಿತ್ತವರು. ಕನ್ನಡ ಹರಿದಾಸ ಸಾಹಿತ್ಯಕ್ಕೊಂದು ಧೀಮಂತಿಕೆ, ಸತ್ತ್ವಯುಕ್ತವಾದ ಶ್ರೀಮಂತಿಕೆಯನ್ನು ತುಂಬಿಕೊಟ್ಟ ಯತಿವರ್ಯರೂ, ಹರಿದಾಸವರ್ಯ ಎರಡೂ ಹೌದವರು.

ವಾದಿರಾಜರ ಕನ್ನಡ ಕೃತಿಗಳ ರಚನೆಯಲ್ಲಿ ಭಾವಾರ್ಥಗಳ ಸ್ಪಂದನಕ್ಕೆ ಹೆಚ್ಚು ಅವಕಾಶವಿದ್ದು ನಾದಕ್ರಿಯೆಯ ಆವರ್ತನವು ಭಕ್ತಿಯನ್ನು ಪ್ರಚೋದಿಸುತ್ತವೆ. ವಾದಿರಾಜರ ಕೀರ್ತನೆಯೊಂದು ತಾಳ್ಮೆಯ ಪಾಠವನ್ನು ಬಲು ಸೊಗಸಾಗಿ ನೀಡುತ್ತದೆ. ತಾಳ್ಮೆ ಗುಣದ ಆವಶ್ಯಕತೆಯನ್ನು ಸಾರುತ್ತದೆ. "ತಾಳುವಿಕೆಗಿಂತನ ತಪವು ಇಲ್ಲ" ಎಂದು ಪ್ರಾರಂಭವಾಗುವ ಈ ಕೀರ್ತನೆ ಮಾನವನಿಗೆ ನೀಡುವ ಸಾಂತ್ವನದ ಪರಿ ಅದ್ಭುತವಾಗಿದೆ. ತಾಳು ಎಂದರೆ "ಸಹಿಸಿಕೋ, ಧರಿಸು, ಧರಿಸಿಕೋ" ಎಂಬುದು ಒಂದು ಅರ್ಥವಾದರೆ "ತಡೆ, ತಾಳು, ಸ್ವಲ್ಪ ಸಮಯ ತಡೆ, ಕಾಲಾವಕಾಶ ನೀಡು" ಎಂಬ ಇನ್ನೊಂದರ್ಥ ಎರಡೂ ಅರ್ಥದಲ್ಲಿ ಈ ಕೃತಿ ಸಹನಾಗುಣದ ಮೌಲ್ಯ ತಿಳಿಸುತ್ತದೆ. ಧರಿಸಿಕೊಳ್ಳಲಾಗದಿದ್ದಲ್ಲಿ, ಸಹಿಸಿಕೊಳ್ಳಲಾಗದಿದ್ದಲ್ಲಿ ಕೃಷ್ಣಾರ್ಪಣ ಎನ್ನುತ್ತ, "ಪಕ್ಷೀಶ ಹಯವದನ ಶರಣು ಎಂದು ಬಾಳು" ಎನ್ನುತ್ತಾರೆ. ದೇವರಿಗೆ ಶರಣಾಗಿ ಒಪ್ಪಿಸಿ ಬಿಡು, ಕಾಲರಾಯನೆಂಬ ದೇವರೇ ಎಲ್ಲ ನೋಡಿಕೊಳ್ಳುತ್ತಾನೆ ಎಂಬ ಭರವಸೆ ಇಲ್ಲಿದೆ. ತಾಳ್ಮೆಯ ಪಾಠವನ್ನು ಇದಕ್ಕಿಂತ ಮನೋಜ್ಞವಾಗಿ ಇನ್ನು ಹೇಳಲು ಸಾಧ್ಯವಿಲ್ಲದಷ್ಟು ಅತ್ಯಂತ ಸೊಗಸಾದ ಕವಿತೆಯಲ್ಲವೆ ಇದು? ನಾವು ಚೆನ್ನಾಗಿ ಅರ್ಥೈಸಿಕೊಂಡು ಪರಿಭಾವಿಸಬೇಕಲ್ಲವೆ ಇದನ್ನು?

**ತಾಳ್ಮೆಯ ಪಾಠ–ವಾದಿರಾಜರು**

ತಾಳುವಿಕೆಗಿಂತನ್ಯ ತಪವು ಇಲ್ಲ
ಕೇಳಬಲ್ಲವರಿಂಗೆ ಹೇಳುವೆನು ಸೊಲ್ಲ ॥ಪ॥

*

ದುಷ್ಟ ಮನುಜರು ಪೇಳ್ವ ನಿಷ್ಠುರದ ನುಡಿತಾಳು
ಕಷ್ಟ ಬಂದರೆ ತಾಳು, ಕಂಗೆಡದೆ ಬಾಳು ।
ನೆಟ್ಟ ಸಸಿ ಫಲ ಬರುವ ತನಕ ಶಾಂತಿಯ ತಾಳು
ಕಟ್ಟು ಬುತ್ತಿಯ ಮುಂದೆ, ಉಣಲುಂಟು ತಾಳು ॥

*

ಹಳಿದು ಹಂಗಿಸುವಂಥ ಹಗೆಯ ಮಾತನೆ ತಾಳು
ಸುಳಿ ನುಡಿ, ಕುಹಕಗಳ ಕುಮಂತ್ರಗಳ ತಾಳು ।
ಅಳುಕದೆಲೆ ಬಿರುಸು ಮಾತುಗಳ ನೀ ತಾಳು
ಹಲಧರಾನುಜನನ್ನು ಹೃದಯದಲಿ ನೀ ತಾಳು ॥

*

ನಕ್ಕು ನುಡಿದವ ಮುಂದೆ ಮುಕ್ಕರಿಸದೆ ತಾಳು
ಅಕ್ಕಸವ ಮಾಡುವರ ಅಕ್ಕರದಿ ತಾಳು ।
ಉಕ್ಕೊ ಹಾಲಿಗೆ ನೀರ ಇಕ್ಕವಂದದಿ ತಾಳು
ಪಕ್ಷೀಶ ಹಯವದನ ಶರಣೆಂದು ನೀ ಬಾಳು ॥

ಕೃಷ್ಣನ ಬಗೆಗಿನ ವಾದಿರಾಜರ ಕೃತಿಗಳು ವಾತ್ಸಲ್ಯ ಭಾವ, ವಿರಹಭಾವದಿಂದ ಕೂಡಿ ಭಾವಾಗೀತಾತ್ಮಕವಾಗಿವೆ. ಭಗವಂತ ಕರುಣಾಮಯಿ ಎಂದು ಸಾರುವ ಕನ್ನಡ ಕೃತಿಗಳು ಬೇಕಷ್ಟಿವೆ. ಅನನ್ಯ ಶರಣಾಗಿ ಅಪೂರ್ವ ಸಮರ್ಪಣಾ ಭಾವ ಅವರ ಕೃತಿಗಳಲ್ಲಿ ಹಾಸುಹೊಕ್ಕಾಗಿವೆ. ಶರಣಾಗತಿಯಲ್ಲಿನ ದೈನ್ಯ, ಬವಣೆಯ ನಿವೇದನೆಗಳು ದೈವ ಕರುಣೆಯನ್ನು ಬೇಡುತ್ತ ಭಕ್ತಿಭಾವತೇವತ್‌ಯಿಂದ ಕೂಡಿಕೊಂಡು ಮಾನವ ಜನ್ಮದ ರಗಳೆಗಳನ್ನು ಹಿಡಿದು ತೋರುತ್ತದೆ. ಅವರ ಸುಳಾದಿ ಒಂದು ಹೀಗೆನ್ನುತ್ತದೆ:

**ಅಡಿಗಾಧಾರವಿಲ್ಲ, ಹಿಡಿವುದಕೆ ಕೊಂಬಿಲ್ಲ**
**ಕಡೆ ಹಾಯಿಸುವವರಿಲ್ಲ, ಕಷ್ಟ ಪಟ್ಟೆನಲ್ಲ**
**ಕಣ್ಣೀರು ತಪ್ಪಲಿಲ್ಲ, ಕಾಯ ಸುಖ ಪಡಲಿಲ್ಲ**
**ಉಣ ಹೋಗಿ ಬಾಯ ಮರೆತಂತಾದೆನಲ್ಲ....॥**

ಹೀಗೆ ಅನೇಕ ಕೃತಿಗಳು ಮನುಷ್ಯ ತನ್ನ ಬದುಕನ್ನು ವ್ಯರ್ಥಮಾಡಿಕೊಂಡು ಕಡೆಗೆ ದೈನ್ಯತೆಗೆ ಒಳಗಾಗುವ ಪರಿಯನ್ನು ಬೆಳೆಸಿಕೊಡುತ್ತವೆ. ಮನುಷ್ಯ ಜನ್ಮಕ್ಕೆ ಬಂದೇ ಬರುವ ಮುದಿತನ ತರುವ ಅಸಹಾಯಕತೆ ಹಲವು ಕೃತಿಗಳಲ್ಲಿ ಅಭಿವ್ಯಕ್ತಿಯಾಗಿದೆ.

ಅನೈತಿಕವಾಗಿ ಬರುವ ಹಣವು ಮಾನವನನ್ನು ಹೇಗೆ ಅಧಃಪತನಕ್ಕೆ ತಳ್ಳುವುದೆಂದು ಹಲವು ಕಡೆ ಚಿತ್ರಿಸಿದ್ದಾರೆ. "ಹಣವೇ ನಿನ್ನಯ ಗುಣವೇನು ಬಣ್ಣಿಪೆನೋ, ಹಣವಿಲ್ಲದವನೊಬ್ಬ ಹೆಣವೇ ಸರಿ ಕಂಡ್ಯಾ" ಎಂದು ಮತ್ತೊಂದು ಕೃತಿಯಲ್ಲಿ ಉದ್ಗರಿಸಿದ್ದಾರೆ.

ವಾದಿರಾಜರ ಕವಿತ್ವಗುಣದ ಅಂತಃಕರಣವು ಮಾರ್ಮಿಕವಾಗಿ ಅಭಿವ್ಯಕ್ತಿಯಾಗಿರುವ ಅನೇಕ ಕೀರ್ತನೆಗಳಲ್ಲಿ ಒಂದು "ಈ ತನುವಿನೊಳಗೆ ಅನುದಿನವಿದ್ದು ಎನಗೊಂದು ಮಾತು ಹೇಳದೆ ಹೋದೆಯ ಹಂಸ?" ಎಂಬುದಾಗಿ ಪ್ರಾರಂಭವಾಗುತ್ತದೆ. ಹಂಸ ಎಂದರೆ ಇಲ್ಲಿ ಜೀವ. (ನಮ್ಮ ಉಸಿರಾಟದಲ್ಲಿ 'ಸೋಹಂ' ಎಂದು ಕೇಳಿಸುವುದೇ ಈ "ಹಂಸಃ" ಜೀವವನ್ನು ಎಷ್ಟೇ ಪ್ರೀತಿಯಿಂದ ಈ ದೇಹದೊಳಗೆ ಸಾಕಿರಲಿ, (ಜೀವದ ಸಂತೋಷಕ್ಕಾಗಿಯೇ ಬಗೆಬಗೆಯ ಉಣಿಸು, ತಿನಿಸು, ಉಡುಗೆ ತೊಡುಗೆ, ಸಕಲ ಭೋಗಗಳು) ಏನೂ ಮುನ್ಸೂಚನೆ ಕೊಡದೇ, ಆಸರೆಯಾಗಿದ್ದ ಈ ದೇಹವನ್ನು ಅದು ತೊರೆದು ಹೋಗುವ ನಿರ್ದಾಕ್ಷಿಣ್ಯ, ನಿಷ್ಠುರತೆಯನ್ನು ಎಂಬುದನ್ನು ಈ ರೀತಿ ಸೊಲ್ಲಿಸಿದ್ದಾರೆ. ಸಾವು ಬಂದೊಡನೆ ಜೀವವು ವಿಶ್ವಾಸಘಾತಕಿಯಾಗಿ ಬಿಡುತ್ತದೆಯೆ? ಅಥವಾ ಜೀವವನ್ನು ಹಾಗೆ ಎಗರಿಸಿಕೊಂಡು ಹೋಗುವ ಸಾವು ಅಷ್ಟು ಕ್ರೂರಿಯೆ? ನಿರ್ದಯವೆ? ಜೀವನ ಮರಣಗಳ ಬಗ್ಗೆ ಚಿಂತನೆಯನ್ನು ತಾತ್ವಿಕತೆಯ ಒರೆಗಲ್ಲಿಗೆ ತೀಡುವಂಥ ಈ ಕೃತಿ ಮರ್ಮಭೇದಕವಾಗಿ ಹೊರಹೊಮ್ಮಿದೆ.

ಹುಟ್ಟು ಕವಿಯಾದ ವಾದಿರಾಜರು ಅಸಂಖ್ಯವಾಗಿ, ವಿಷಯಗಳ ಮೇಲೆ ಕಾವ್ಯಕೃತಿ, ದೀರ್ಘಕೃತಿಗಳನ್ನು ರಚಿಸಿ ಹರಿದಾಸ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ, ಧೀಮಂತಗೊಳಿಸಿದ ಸಮಾಜಮುಖೀ ಚಿಂತನೆಗಳಿಂದ ದಾಸ ಸಾಹಿತ್ಯ ರಚನೆ ಅವರ ತಮ್ಮ ಅಂತರಂಗದ ಸುಶೀಲತೆಯಿಂದ ಅನೇಕ ಭಕ್ತಿ ಗೀತೆಗಳನ್ನು ಹೃದಯದಿಂದ ಚಿಮ್ಮಿಸಿರುವ ಒಬ್ಬ ಅಪೂರ್ವ ಮಠಾಧೀಶರು ಅವರಾಗಿದ್ದಾರೆ.

## ವಾದಿರಾಜರ ಇತರ ಕೆಲವು ಕನ್ನಡ ಕೃತಿಗಳು

ಕೃಷ್ಣ, ಹರಿಯ ಪರ ಸ್ತುತಿಗಳನ್ನಲ್ಲದೆ ಶಿವಸ್ತುತಿಯ ಅನೇಕ ಕೃತಿಗಳು ಇವೆ. ವಾಯುಪುತ್ರ ಭೀಮಸೇನ ಸ್ತುತಿ ಪರವಾದ "ಭೀಮಸೇನ ಭಾಮಿನಿಯಾದನು" ಎಂಬ ಕೃತಿ ಸೊಗಸಾಗಿ ನಾಟಕೀಯ ಗುಣದಿಂದ ಕೂಡಿದೆ. ಇದಲ್ಲದೇ "ಲಘು ವಾಯು ಸ್ತುತಿ" "ಸ್ವಪ್ನ ಪದ" "ಮಧ್ವ ಸ್ತುತಿ" ಹಾಡುಗಳಿವೆ.

ನೃತ್ಯರೂಪಕವೆನಿಸುವ ಇನ್ನೊಂದು ಕೃತಿ "ನಾರದ ಕೊರವಂಜಿ" ತುಂಬ ರಸಭಿಜ್ಞತೆಯಿಂದ ಕೂಡಿದೆ. "ವೈಕುಂಠ ವರ್ಣನೆ" "ಗುಂಡ ಕ್ರಿಯೆ", "ಭ್ರಮರ ಗೀತಾ", "ಹರಿ ಭಕ್ತಿ ಲತಾ" ಇವೆಲ್ಲ ವಾದಿರಾಜರ ಕವಿತ್ವ ಗುಣಕ್ಕೆ ಸಾಕ್ಷಿಯಾಗಿವೆ. ಓದಿಯೋ ಅಥವಾ ಹಾಡಿಯೋ ಈ ಕೃತಿಗಳ ಅನುಸಂಧಾನದಲ್ಲಷ್ಟೇ ಈ ಕೃತಿಗಳ ಮೌಲ್ಯಗುಣ ಗೊತ್ತಾಗುತ್ತದೆ. ಆದರೆ ಈಗ ಇವುಗಳನ್ನು ಪಡೆದು ಹಾಡುವವರ ಅಥವಾ ಓದುಗರ ಸಂಖ್ಯೆ ಕ್ಷೀಣಿಸಿದೆ. ಜನ ಇದನ್ನೆಲ್ಲ ಮರೆತುಬಿಟ್ಟಿದ್ದಾರೆ.

ವ್ಯಾಸತೀರ್ಥರಾದಿಯಾಗಿ ಪುರಂದರದಾಸರು, ಕನಕದಾಸರು, ಬೇಲೂರು ವೈಕುಂಠದಾಸರು ಮುಂತಾದವರ ಸಮಕಾಲೀನರು ವಾದಿರಾಜರು. ಅವರೆಲ್ಲರ ಒಡನಾಟದಲ್ಲಿ ಒಂದಾಗಿ ಬೆರೆತು, ಕೃಷ್ಣ ಭಕ್ತಿ, ಕೃಷ್ಣ ಪ್ರೀತಿಯೇ ತಮ್ಮ ಉಸಿರೆಂಬಂತೆ ಬಾಳಿದವರು. ಉಡುಪಿಯ ತಮ್ಮ ಕಾರ್ಯಕ್ಷೇತ್ರದಲ್ಲಿ ಅನೇಕ ಹರಿದಾಸ ಕೂಟವನ್ನು ಬೆಳೆಯಿಸಿದರು, ದಾಸ ಸಾಹಿತ್ಯ ರಚನೆಗೆ ಅಖಂಡ ಪ್ರೋತ್ಸಾಹದ ನೀರೆರೆದರು. ತಮ್ಮ ಉಪಾಸ್ಯಮೂರ್ತಿ 'ಹಯವದನ' ಅಂಕಿತದಿಂದ ಸಾವಿರಕ್ಕೂ ಮಿಗಿಲಾಗಿ ಕನ್ನಡ ಕೀರ್ತನೆಗಳನ್ನು ರಚಿಸಿದರು. ಹರಿದಾಸರನ್ನು ಕೂಡಿಕೊಂಡು ತಾವೂ ಭಜನೆ ಹಾಡುತ್ತ ಕೃಷ್ಣನ ಮುಂದೆ ನರ್ತನ ಸೇವೆ ಗೈದವರು ಅವರು. ಹೀಗೆ ಕನ್ನಡ ಜನರ ಭಕ್ತಿ ಭಾವ ಶ್ರೀಮಂತಿಕೆಗೆ ಪ್ರೇರಣರಾದ ಯತಿಗಳವರು.

ವಾದಿರಾಜರು ಚಾಲ್ತಿಗೆ ತಂದ ಭಜನಾ ಪದ್ಧತಿ ಎಂದರೆ ಪೂಜೆಯಾದ ಅನಂತರ, ಹರಿದಾಸರು, ಭಕ್ತರು ಎಲ್ಲರೂ ಸೇರಿ ಸುತ್ತುಗಟ್ಟಿಕೊಂಡು (ವೃತ್ತಾಕಾರದಲ್ಲಿ) ನಡುವೆ ಬೆಳಗುವ ದೀಪವಿರಿಸಿಕೊಂಡು, ಕೈಯಲ್ಲಿ ಹಿತ್ತಾಳೆ ತಾಳಗಳನ್ನು ಹಿಡಿದು ಲಯಬದ್ಧವಾಗಿ ಹಾಕುತ್ತಾ, ಎಲ್ಲರೂ ನರ್ತಿಸುವ ಹೆಜ್ಜೆಗಳನ್ನು ಹಾಕುತ್ತಾ ಭಗವಂತನ ನಾಮಸ್ಮರಣೆಯ ಹಾಡುಗಳನ್ನು ಹಾಡುತ್ತ ದೀಪದ ಸುತ್ತಲೂ ಪ್ರದಕ್ಷಿಣೆ ಮಾಡುತ್ತಿರುವುದು ಇಂಥಾ ಭಜನೆಗೆ ಒಪ್ಪುವಂಥ ಅವರ ಅನೇಕ ರಚನೆಗಳಲ್ಲಿ ನಾದಕ್ರಿಯೆಯ ಆವರ್ತನವು ಹೆಚ್ಚಾಗಿ ಬಂದು ಭಕ್ತಿಯನ್ನು ಪ್ರಚೋದಿಸುತ್ತವೆ. ಇವುಗಳಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಅವರ "ಲಕ್ಷುಮಿ ನಾರಾಯಣ ಜಯ ಲಕ್ಷುಮಿ ನಾರಾಯಣ" ಎಂಬೊಂದು ಅವರ ರಚನೆ ಉದಾಹರಿಸಬಹುದು.

## ವಾದಿರಾಜರ ಮೇಲ್ಪಂಕ್ತಿ

ಇವತ್ತಿಗೂ, ಈಗಲೂ, ಉಡುಪಿಯ ಮಠಗಳಲ್ಲಿ ವಾದಿರಾಜರು ಅಂದು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಅನುಸರಿಸಿ ರಾತ್ರಿ ಪೂಜಾ ಅನಂತರ ಭಾಗವತರ ಜೊತೆ ಯತಿಗಳೂ ಕಲೆತು ಭಜನೆ ಮಾಡುವ, ನರ್ತಿಸುವ ಪದ್ಧತಿಯನ್ನು ತಪ್ಪದೇ ನಡೆಸಿಕೊಂಡು ಬರುತ್ತಿದ್ದಾರೆ.

ಈಗಲೂ ಉಡುಪಿಯ ಮಠಗಳಲ್ಲಿ ಅತಿ ಹೆಚ್ಚಾಗಿ ಹಾಡುವುದೆಂದರೆ ವಾದಿರಾಜರ ರಚನೆಗಳನ್ನೇ. ದೇವಸ್ಥಾನ, ಮಠಗಳಲ್ಲಿ ಅಷ್ಟೇ ಅಲ್ಲ, ದಕ್ಷಿಣ ಕನ್ನಡ ಜಿಲ್ಲೆಯ ಮನೆಮನೆಗಳಲ್ಲಿಯೂ ಈ ಭಜನಾ ಪದ್ಧತಿ ಚಾಲ್ತಿಯಲ್ಲಿದ್ದು, ಈ ಭಕ್ತಿಪೂರ್ಣ ವಾತಾವರಣ ಕಾಲರಾಯನ ಬೇರೆ ಬೇರೆ ಆಯಾಮ, ಆಕರ್ಷಣೆಗೊಳಗಾಗಿ ಇತ್ತೀಚೆಗೆ ಕನ್ನಡ ಸಂಸ್ಕೃತಿಯಿಂದ ಕಾಲ್ತೆಗೆದು ಮರೆಯಾಗಿದೆ.

ವಾದಿರಾಜರ ಕನ್ನಡ ಕೃತಿಗಳಲ್ಲಿ ಅನುಭಾವತೆ, ರಸದೃಷ್ಟಿ ಎರಡೂ ಕಾವ್ಯಾತ್ಮಕವಾಗಿ ಚಿಮ್ಮಿವೆ. ಇವೆಲ್ಲ ಅಲ್ಲದೆ ಮಹಿಳೆಯರ (ಅಂದಿನ) ಲೋಕಕ್ಕೆಂದೇ ಅನೇಕ ಹಾಡುಗಳನ್ನು ರಚಿಸಿಕೊಟ್ಟಿದ್ದಾರೆ. ಸರಳವಾದ ಸೊಗಸಾದ ಅನೇಕ ಆರತಿ ಹಾಡು, ಹಸೆಗೆ ಕರೆಯುವ ಹಾಡು, ಸುವ್ವಿ ಹಾಡುಗಳನ್ನು ರಚಿಸಿದ್ದಾರೆ. ಇಂದಿಗೂ ಕೆಲ ಭಕ್ತ ಮಹಿಳೆಯರು (ವಯೋವೃದ್ಧರು) ಈ ಶೋಭಾನೆ, ಸುವ್ವಿ, ಆರತಿ ಹಾಡುಗಳನ್ನು ಹಾಡುತ್ತಿರುತ್ತಾರೆ. ಇಂದಿನ ಮಹಿಳಾ ಲೋಕಕ್ಕೆ ಈ ಪರಂಪರೆಯನ್ನು ಉಳಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ. ಅನೇಕ ಸಮಾಜಮುಖೀ ಚಿಂತನೆಗಳಿರುವ ವಾದಿರಾಜರ ಕೃತಿಗಳೂ ಕೂಡ ಲಭ್ಯವಿದೆ.

ಉಡುಪಿಯೇ ವಾದಿರಾಜರ ಮೂಲ ಕಾರ್ಯಕ್ಷೇತ್ರ. ಆದರೆ ಅವರು ತಮ್ಮ ಸಾಧನೆಯನ್ನು ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಬಳಿ ಇರುವ "ಸೋದೆ" ಎಂಬ ಊರಲ್ಲೂ ವಿಸ್ತರಿಸಿದರು. ಸೋದೆಗೂ ವಾದಿರಾಜರಿಗೂ ಅವಿನಾಭಾವ ಸಂಬಂಧವೆಂಬಂತೆ ಅಲ್ಲಿಯ ಕ್ಷೇತ್ರವನ್ನು ಬೆಳೆಯಿಸಿದರು. ಉಡುಪಿ ಕ್ಷೇತ್ರದಲ್ಲೂ ಕ್ರಾಂತಿಕಾರಕ ಬದಲಾವಣೆ, ಬೆಳವಣಿಗೆ ತಂದರು. ಕೃಷ್ಣ ಮಠದಲ್ಲಿ ಪೂಜಾ ಕಾರ್ಯಕ್ರಮಗಳನ್ನು ಅವರು ಸಶಿಸ್ತುಗೊಳಿಸಿದರು. ನಿತ್ಯ ಪೂಜೆ,

39ನೇ ಪುಟಕ್ಕೆ



ಶ್ರೀ ರಾಮಾನುಜ ವೈಭವ-47

● ಡಾ. ಬಾಬು ಕೃಷ್ಣಮೂರ್ತಿ

# ಶ್ರೀರಂಗನಾಥನ ಕರೆ ಬಂತು

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**


ಆ ಹುಡುಕಾಟದಲ್ಲಿ ಅವರ ಮುಂದೆ ಮಿಂಚಿದ ಹೆಸರುಗಳಲ್ಲಿ ರಂಗರಾಜ ಭಟ್ಟರ್ ಎಂಬುದು ಒಂದು. ಆತ ಶ್ರೀರಂಗಂನಲ್ಲಿ ತಮ್ಮ ಶಿಷ್ಯತ್ವ ಸ್ವೀಕರಿಸಿ ಬಂದಾಗ ಅವನದು ಬಾಲ್ಯಾವಸ್ಥೆ. ಬಹಳ ಚುರುಕು ಬುದ್ಧಿಯ ಪ್ರತ್ಯುತ್ಪನ್ನಮತಿಯಾಗಿದ್ದ ರಂಗರಾಜ ಶ್ರದ್ಧೆ ಭಕ್ತಿ ಪ್ರಪತ್ತಿಗಳ ಮೂರ್ತಿ ಸ್ವರೂಪನೇ ಆಗಿದ್ದ. ವೈಖಾನಸ ಮತ್ತು ಪಾಂಚರಾತ್ರ ಆಗಮಗಳನ್ನು ಆಗಲೇ ಜೀರ್ಣಿಸಿಕೊಂಡಿದ್ದ. ಸಕಲ ಶಾಸ್ತ್ರಗಳನ್ನೂ ಕಲಿತಿದ್ದ. ಮಠ ಮತ್ತು ದೇವಸ್ಥಾನದ ಆಡಳಿತದಲ್ಲಿ ಆ ಚಿಕ್ಕ ವಯಸ್ಸಿನಲ್ಲೇ ತಮಗೆ ಅತ್ಯಂತ ಸನ್ನಿಹಿತನೂ ನಂಬಿಕಸ್ಥನೂ ಆಗಿದ್ದ ರಂಗರಾಜನ ಹೆಸರು ಹೊಳೆದ ಕೂಡಲೇ 'ಅಬ್ಬಾ! ಒಬ್ಬ ಯೋಗ್ಯ ವ್ಯಕ್ತಿ ದೊರಕಿದ!' ಎಂದು ಮನಸ್ಸು ಹರ್ಷಗೊಂಡಿತ್ತು. ಅದು ಕ್ಷಣಿಕವಾಗಿತ್ತು. ಏಕೆಂದರೆ ಅವನು ಆಗ ಶ್ರೀರಂಗಂನಲ್ಲಿಯೇ ಇದ್ದಿರಬಹುದು. ಅವನು ಅಲ್ಲಿ ಇದ್ದಾನೆಂದರೆ ಅವನಿಗೆ ಅವಕಾಶ ದೊರೆಯಲು 'ತನಗೂ ರಾಮಾನುಜರಿಗೂ ಯಾವ ಸಂಬಂಧವೂ ಇಲ್ಲ' ಎಂದು ರಾಜ್ಯಾಧಿಕಾರಿಗಳ ಮುಂದೆ ಹೇಳಿಕೆ ನೀಡಿರಬಹುದು. ಹಾಗಿಲ್ಲದಿದ್ದ ಪಕ್ಷದಲ್ಲಿ ಅವನಿಗೆ ಶ್ರೀರಂಗಂ ದೇವಾಲಯದಲ್ಲಿ ಮುಂದುವರಿಯಲು ಅವಕಾಶವಾದರು ಹೇಗೆ ದೊರೆಯುತ್ತಿತ್ತು?...ಹೀಗೆ ರಾಮಾನುಜರ ಮನಸ್ಸಿನಲ್ಲಿ ಪುಂಖಾನುಪುಂಖವಾಗಿ ಅನುಮಾನಗಳು ಏಳಲಾರಂಭಿಸಿದವು.

ಈ ಕುರಿತು ಒಂದು ತೀರ್ಮಾನಕ್ಕೆ ಬರಬೇಕಾದರೆ ಚೋಳ ರಾಜ್ಯದಲ್ಲಿನ ಆಗಿನ ವೈಷ್ಣವ ಮತದ ಪರಿಸ್ಥಿತಿ, ಆಡಳಿತ ವರ್ಗದ ಮನಃಸ್ಥಿತಿ, ಶ್ರೀರಂಗನಾಥ ದೇವಾಲಯದ ಪರಿಸ್ಥಿತಿ... ಮುಂತಾದವುಗಳ ಬಗ್ಗೆ ಅರಿಯಬೇಕಿತ್ತು. ಈ ಕುರಿತು ಚರ್ಚಿಸಲು ಮಹಾರಾಜರಿಗಿಂತ ಇನ್ನಾರು ಯೋಗ್ಯರು? ಆ ದಿನಗಳಲ್ಲೇ ಮಹಾರಾಜ ವಿಷ್ಣುವರ್ಧನನನ್ನು ಸಂಧಿಸಬೇಕಾದ ಸಂದರ್ಭ ಬಂದಾಗ ಈ ಪ್ರಶ್ನೆ ಕುರಿತು ಪ್ರಸ್ತಾವ ಮಾಡಿದರು.

"ಮಹಾರಾಜಾ ನನಗೂ ಬಹಳ ವಯಸ್ಸಾಯಿತು. ಶತಾಯುವಾಗುತ್ತಿದ್ದೀನಿ. ದೇಹದಲ್ಲಿ ಶಕ್ತಿ ಉಡುಗುತ್ತಿದೆ. ಪ್ರಸ್ತುತ ಚೆಲುವನಾರಾಯಣನ ದೈನಂದಿನ ದೇವತಾರ್ಚನೆಯನ್ನು ನಾನೇ ಮಾಡುತ್ತಿದ್ದೀನಿ. ಆದರೆ ಹೆಚ್ಚು ಕಾಲ ಹೀಗೆಯೇ ಮುಂದುವರಿಯುವಂತಿಲ್ಲ...ಅದಕ್ಕೇ....."

"ಅದಕ್ಕೆ?"

"ಒಬ್ಬ ಸುಯೋಗ್ಯ, ಸಮರ್ಥ, ಅನುಷ್ಠಾನ ನಿಷ್ಠಾವಂತ ಅರ್ಚಕರನ್ನು ಚೆಲುವನಾರಾಯಣನ ಸೇವೆಗೆ ನೇಮಿಸಿ ನಾವು ದೈನಂದಿನ ಅರ್ಚನಾ ಕೈಂಕರ್ಯದಿಂದ



ವಿರಮಿಸಬೇಕೆಂದಿದ್ದೀನಿ...."

"ಏಕೆ ಈ ನಿರ್ಧಾರ ಮಹಾಸ್ವಾಮಿ?"

"ನನ್ನ ದೈಹಿಕ ಶಕ್ತಿಯ ಕೊರತೆಯಷ್ಟೇ ಕಾರಣ. ಬೇರೇನೂ ಇಲ್ಲ."

"ಇಲ್ಲಿ ನಿಮ್ಮ ಶಿಷ್ಯರಲ್ಲಿ ಸಮರ್ಥರಾರೂ ಇಲ್ಲವೇ?"

"ಇದ್ದಾರೆ. ಆದರೆ ಅವರಿಗೆ ಬೇರೆ ಬೇರೆ ಹೊಣೆಗಾರಿಕೆಗಳೂ ಇದ್ದು ಈ ಕಾರ್ಯವನ್ನು ಸಂಪೂರ್ಣವಾಗಿ ನೋಡಿಕೊಳ್ಳುವಂತಿಲ್ಲ...ನಮ್ಮ ದಾಶರಥಿ ಸರ್ವ ಸಮರ್ಥ. ಆದರೆ ಆತನನ್ನು ದೇವಸ್ಥಾನದ ಆಡಳಿತ ನೋಡಿಕೊಳ್ಳುವ ಕೆಲಸಕ್ಕೆ ಸಿದ್ಧಗೊಳಿಸಿದ್ದೀನಿ. ಅವನನ್ನು ಅದರಿಂದ ಬೇರ್ಪಡಿಸುವುದು ಬೇಡ."

"ಹಾಗಾದರೆ ನಿಮ್ಮ ದೃಷ್ಟಿಯಲ್ಲಿ ಬೇರಾರೂ ಇಲ್ಲವೇ? ಇದ್ದರೆ ಹೇಳಿ. ಅವರನ್ನೇ ನೇಮಿಸೋಣ."

"ಇದ್ದಾರೆ. ಆದರೆ ಆತನನ್ನು ಕರೆತರುವುದು ಅಷ್ಟು ಸುಲಭ ಕಾರ್ಯವಲ್ಲ."

"ಏಕೆ ಹಾಗೆನ್ನುವಿರಿ ಮಹಾಸ್ವಾಮಿ?"

"ಆ ವ್ಯಕ್ತಿ ಪ್ರಸ್ತುತ ಶ್ರೀರಂಗದ ರಂಗನಾಥಸ್ವಾಮಿಯ ದೇವಸ್ಥಾನದಲ್ಲಿರುವನೆಂದು ನನ್ನ ಭಾವನೆ. ಆದರೆ ಶ್ರೀರಂಗಂನಲ್ಲಿ ಅಲ್ಲಿನ ಚೋಳ ಆಡಳಿತಗಾರರು ನನ್ನ ಬಗ್ಗೆ ಎಂಥ ಅಪಪ್ರಚಾರ ಮಾಡಿದ್ದಾರೆಂದರೆ ಜನ ನನ್ನ ಹೆಸರು ಹೇಳಲು ಕೂಡ ಹೆದರುತ್ತಾರೆ. ಹೇಳಿದರೆ ಎಲ್ಲಿ ಶಿಕ್ಷೆಯಾಗುವುದೋ ಎಂಬ ಭಯ! ಪರಿಸ್ಥಿತಿ ಹೀಗಿರುವಾಗ ಆತನನ್ನು ಸಂಪರ್ಕಿಸುವುದು ಹೇಗೆ? ಇಲ್ಲಿಗೆ ಕರೆತರುವುದು ಹೇಗೆ?"

"ಹುಂ ಹಾಗೋ. ನಮ್ಮ ಮಾಹಿತಿಗಳ ಪ್ರಕಾರವೂ ನೀವು ಹೇಳುತ್ತಿರುವುದು ನಿಜ ಎಂದು ತಿಳಿದು ಬಂದಿದೆ.... ಇರಲಿ... ಯಾರು ಆ ಅರ್ಚಕ?"

"ರಂಗರಾಜ ಎಂದು ಅವನ ಹೆಸರು. ಚಿಕ್ಕ ವಯಸ್ಸಿನಲ್ಲಿಯೇ ನಮ್ಮ ಮಠಕ್ಕೆ ಬಂದ. ಚುರುಕುಬುದ್ಧಿಯ ಸಾಮರ್ಥ್ಯಶಾಲಿ. ನಾನಲ್ಲಿರುವವರೆಗೆ ಅವನಿಗೆ ಶಿಕ್ಷಣವನ್ನು ನೀಡಿದೆ. ಅವನು ಪ್ರಚಂಡ. ಅಂಥವನು ಈ ಮೇಲುಕೋಟೆ ಚೆಲುವನಾರಾಯಣನ ದೇವಸ್ಥಾನದ ಹೊಣೆ ಹೊತ್ತರೆ ದೇವಸ್ಥಾನ ಸರಿಯಾದ ಮಾರ್ಗದಲ್ಲಿ ಸಾಗಿ ಉತ್ತರೋತ್ತರ ಶತಶತಮಾನಗಳ ಪರ್ಯಂತ ಅಭಿವೃದ್ಧಿ ಸಾಧಿಸುತ್ತದೆ..... ಯಾವಾಗಲೂ ದೇವಸ್ಥಾನಗಳಿಗೆ ಸಮರ್ಥ ಆಡಳಿತಗಾರರೂ ಸುಯೋಗ್ಯ ಅರ್ಚಕರೂ ಬೇಕು... 'ಅರ್ಚಕಸ್ಯ ಪ್ರಭಾವೇನ ಶಿಲೋ ಭವತಿ ಕೇಶವಃ' ಅಲ್ಲವೇ?"

"ಸರಿ ಮಹಾಸ್ವಾಮಿ.. ಸ್ವಲ್ಪ ಕಾಲಾವಕಾಶ ಕೊಡಿ. ನನ್ನ ಪ್ರಯತ್ನ ನಾನು ಮಾಡುತ್ತೀನಿ." ವಿಷ್ಣುವರ್ಧನ ಮಹಾರಾಜನೇ ಈ ಕುರಿತು ಚೋಳರಾಜರ ಬಳಿ ಪ್ರಸ್ತಾವಿಸುವಂತಿರಲಿಲ್ಲ. ಇಬ್ಬರ ನಡುವೆ ಶತ್ರುತ್ವ ಸದಾ ಕಾಲ ಹೊಣೆಯಾಡುತ್ತಲೇ ಇತ್ತು. ಹಾಗಾದರೆ ಈ ಸಮಸ್ಯೆ ಪರಿಹಾರಕ್ಕೆ ದಾರಿ ಯಾವುದು?

ತಂದೆ ಎರೆಯಂಗ ದೇವರ ಸಹಾಯವನ್ನು ಪಡೆದು ದಾರಿ ಹುಡುಕಬೇಕು. ಅವರೂ ಚೋಳರಾಜನ ಬಳಿ ಮಾತನಾಡುವಂತಿರಲಿಲ್ಲ. ಆದರೆ ತಂದೆಯ ಸ್ನೇಹ ವಲಯದಲ್ಲಿದ್ದ ಚಾಲುಕ್ಯ ರಾಜ ಆರನೇ ವಿಕ್ರಮಾದಿತ್ಯರನ್ನು ಬಳಸಬಹುದು. ಆರನೇ ವಿಕ್ರಮಾದಿತ್ಯರೇನೂ ಚೋಳರಾಜ ಮೊದಲನೇ ಕುಲೋತ್ತುಂಗನ ಸ್ನೇಹಿತನಾಗಿರಲಿಲ್ಲ. ಇಬ್ಬರ ನಡುವೇ ಭಯಂಕರ ದ್ವೇಷವೇ ಇತ್ತು. ಆದರೆ ಆ ದಿನಗಳಲ್ಲಿ ವಿಷ್ಣುವರ್ಧನನ ಗುಪ್ತಚರರು ಅವನಿಗೆ ಒಂದು ಮಾಹಿತಿ ಒದಗಿಸಿದ್ದರು. ಆರನೇ ವಿಕ್ರಮಾದಿತ್ಯ ತ್ರಿಭುವನಮಲ್ಲನಿಗೆ ಶ್ರೀರಂಗಂದ ರಂಗನಾಥಸ್ವಾಮಿಯ ದರ್ಶನ ಮಾಡಿ ಸೇವೆ ಸಲ್ಲಿಸಬೇಕೆಂದು ಅಭಿಪ್ರಾಯ ಬಂದಿತಂತೆ. ಆದರೆ ತನಗೂ ಮೊದಲ ಕುಲೋತ್ತುಂಗ ಚೋಳರಾಜನಿಗೂ ಎಣ್ಣೆ ಸೀಗೇಕಾಯಿ! ಅದಕ್ಕೆ ಅವನು ಒಂದು ಆಲೋಚನೆ ಮಾಡಿದ. ಸಂಧಿವಿಗ್ರಹಿಯೊಬ್ಬನನ್ನು ಚೋಳರಾಜನ ಬಳಿಗೆ ಕಳುಹಿಸಿ ತನ್ನ ಆಶಯ ವ್ಯಕ್ತಪಡಿಸಿ ರಂಗನಾಥಸ್ವಾಮಿಯ ದೇವಸ್ಥಾನದ ಪ್ರವೇಶಕ್ಕೆ ಅನುಕೂಲಮಾಡಿಕೊಳ್ಳಬೇಕೆಂಬುದೇ ಅದು. ಅದು ದೇವತಾ ಕಾರ್ಯವಾದುದರಿಂದ ಕುಲೋತ್ತುಂಗ ಒಪ್ಪದಿರಲಾರನೆಂದು ತ್ರಿಭುವನಮಲ್ಲ ವಿಕ್ರಮಾದಿತ್ಯ ಅಂದಾಜು ಮಾಡಿದ.

ತನ್ನ ಚತುರಮತಿಯಾದ ದಂಡನಾಯಕನೊಬ್ಬನನ್ನು ಚೋಳರಾಜನ ಬಳಿಗೆ ಕಳುಹಿಸಿ ರಂಗನಾಥಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಲು ದಾರಿ ಕಂಡುಕೊಂಡ.

ಇಷ್ಟಕ್ಕೂ ತ್ರಿಭುವನಮಲ್ಲ ವಿವಾಹವಾಗಿದ್ದಿದ್ದೇ ಅಧಿರಾಜೇಂದ್ರ ಚೋಳನ ಸೋದರಿಯನ್ನು. ಅಧಿರಾಜೇಂದ್ರನ ತಂದೆ ವೀರರಾಜೇಂದ್ರ ಚೋಳ ತ್ರಿಭುವನಮಲ್ಲನಿಗೆ ತನ್ನ ಮಗಳನ್ನು, ಅಂದರೆ ಅಧಿರಾಜೇಂದ್ರನ ಸೋದರಿಯನ್ನು ಕೊಟ್ಟು ಮದುವೆ ಮಾಡಿ ಆ ಸನಿಹದಲ್ಲೇ ಅಸುನೀಗಿದ್ದ. ಅಧಿರಾಜೇಂದ್ರ ಸಿಂಹಾಸನವೇರಲು ಯತ್ನಿಸಿದಾಗ ಅವನ ವಿರೋಧಿ ಶಕ್ತಿಗಳು ದಂಗೆ ಎದ್ದವು. ಆಗ ಅವರನ್ನು ಅಡಗಿಸಿ ಅಧಿರಾಜೇಂದ್ರನನ್ನು ಸಿಂಹಾಸನದ ಮೇಲೆ ಕೂರಿಸಿದ್ದೇ ಈ ತ್ರಿಭುವನಮಲ್ಲ! ಆದರೆ ಸಿಂಹಾಸನವೇರಿದ ಅಲ್ಪ ಕಾಲದಲ್ಲೇ ಜನ ದಂಗೆ ಎದ್ದರು. ಅಧಿರಾಜೇಂದ್ರ ತೀರಿಕೊಂಡ. ಆಗ ರಾಜೇಂದ್ರ ಚಾಲುಕ್ಯನು ಚೋಳ ಸಿಂಹಾಸನವನ್ನು ಆಕ್ರಮಿಸಿ ಮೊದಲನೆಯ ಕುಲೋತ್ತುಂಗ ಎಂಬ ಹೆಸರು ಇಟ್ಟುಕೊಂಡ. ಈ ಮೊದಲನೇ ಕುಲೋತ್ತುಂಗ ಅರ್ಥಾತ್ ಚಾಲುಕ್ಯ ರಾಜಕುಮಾರ ರಾಜೇಂದ್ರ ಚಾಲುಕ್ಯನ ತಂದೆ ರಾಜ ರಾಜ ನರೇಂದ್ರ ಚಾಲುಕ್ಯ. ಕುಲೋತ್ತುಂಗ ಅಧಿರಾಜೇಂದ್ರನ ಉತ್ತರಾಧಿಕಾರಿಯಾಗಿ ಚೋಳ ಸಿಂಹಾಸವನ್ನೇರಿಸಿದ. ಆದರೆ ಕುಲೋತ್ತುಂಗನು ವೀರ ರಾಜೇಂದ್ರ ಅಥವಾ ಅಧಿರಾಜೇಂದ್ರನ ಉತ್ತರಾಧಿಕಾರಿ ಎಂದು ಒಪ್ಪಲಿಲ್ಲ. ತಾನು ರಾಜರಾಜೇಂದ್ರ ಚೋಳರ ಉತ್ತರಾಧಿಕಾರಿ ಎಂದೇ ಘೋಷಿಸಿಕೊಂಡಿದ್ದು. ಈ ಆಕ್ರಮಣವನ್ನು ಪ್ರತಿಭಟಿಸಲು ತ್ರಿಭುವನಮಲ್ಲ ಆರನೇ ವಿಕ್ರಮಾದಿತ್ಯ ಅವನ ಮೇಲೆ ಯುದ್ಧಕ್ಕೆ ಹೋದ. ಇಬ್ಬರ ನಡುವೆ ದ್ವಂದ್ವ ಮುಂದುವರಿಯಿತು.

ರಾಮಾನುಜರು ಚೋಳ ರಾಜ್ಯವನ್ನು ತೊರೆಯುವಂತೆ ಆದದ್ದು ಈ ಕುಲೋತ್ತುಂಗ ಆಡಳಿತ ಕಾಲದಲ್ಲೇ. ಆದರೆ ರಾಮಾನುಜರ ವಿರುದ್ಧ ಆ ಬಗೆಯ ವಿರೋಧಿ ವಾತಾವರಣ ಸೃಷ್ಟಿಯಾಗಲು ಕಾರಣ ಕುಲೋತ್ತುಂಗನಲ್ಲ. ಹಾಗೆ ನೋಡಿದರೆ ಸಂಸ್ಕೃತದ 'ನಾ ವಿಷ್ಣುಃ ಪೃಥ್ವೀಪತಿಃ' ಎಂಬ ಮಾತಿಗೆ ಸನಿಹವಾದ 'ಅಮಲನೇ ಅಭಯನಾಗ ಅರಿಗ' (ಕುಲೋತ್ತುಂಗ ವಿಷ್ಣುವಿನ ಅವತಾರ) ಎಂದು ಅವನ ಕಾಲದ ಅವನ ಜೀವನ ಚರಿತ್ರೆಕಾರರು ಬಣ್ಣಿಸಿದ್ದಾರೆ. ರಾಮಾನುಜ ವಿರೋಧಿ ವಾತಾವರಣ ಸೃಷ್ಟಿಯಾಗಲು ಕಾರಣಕರ್ತರೇ ದುಷ್ಟ, ಧೂರ್ತ, ಕುತಂತ್ರಿ ಶೈವ ಮತಸ್ಥ ಪ್ರಧಾನಮಾತ್ಯ ಮತ್ತು ಅವನೇ ನೇಮಿಸಿಕೊಂಡ ಶೈವ ಸಿಬ್ಬಂದಿವರ್ಗ. ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ ಎಂಬಂತೆ ಅವರನ್ನು ಸೇರಿಕೊಂಡವನು ರಾಮಾನುಜ ದ್ವೇಷಿ, ದುಷ್ಟ ಹಾಗೂ ಕ್ಷಣಕ್ಕೊಮ್ಮೆ ಬಣ್ಣ ಬದಲಾಯಿಸುತ್ತಿದ್ದ ಊಸರವಳ್ಳಿ ಸ್ವಭಾವದ ನಾಲೂರನ್!

ಮೊದಲನೆಯ ಕುಲೋತ್ತುಂಗನಿಗೂ ತ್ರಿಭುವನಮಲ್ಲ ವಿಕ್ರಮಾದಿತ್ಯನಿಗೂ ಹೀಗೆ ಬದ್ಧದ್ವೇಷ ಉಂಟಾಗಿತ್ತು. ವಿಕ್ರಮಾದಿತ್ಯ ಮತ್ತು ಎರೆಯಂಗ ದೇವರ ನಡುವೆ ಒಳ್ಳೆಯ

ಸ್ನೇಹ ಇತ್ತು. ತ್ರಿಭುವನಮಲ್ಲನ ಸೋದರ ಹಾಗೂ ಸಿಂಹಾಸನದ ಪ್ರತ್ಯಾಕಾಂಕ್ಷಿ ಸೋಮೇಶ್ವರನನ್ನು ಹೊಡೆದಟ್ಟುವಲ್ಲಿ ಎರೆಯಂಗ ದೇವ ತ್ರಿಭುವನಮಲ್ಲನ ಪರವಾಗಿ ಹೋರಾಡಿದ್ದ. ಇದು ಅವರಿಬ್ಬರ ಸ್ನೇಹವನ್ನು ಗಟ್ಟಿಯಾಗಿ ಬೆಸೆದಿತ್ತು.

ರಾಮಾನುಜರು ಮೇಲುಕೋಟೆಯಲ್ಲಿ ಚೆಲುವನಾರಾಯಣನನ್ನು ಪ್ರತಿಷ್ಠಾಪಿಸಿದ ವರ್ಷದಲ್ಲೇ ತ್ರಿಭುವನಮಲ್ಲ ವಿಕ್ರಮಾದಿತ್ಯನು ತನ್ನ ಸಂಧಿ ವಿಗ್ರಹಿ ದಂಡನಾಯಕನ ಮೂಲಕ ಮೊದಲನೆಯ ಕುಲೋತ್ತುಂಗನೊಂದಿಗೆ ಅನುಸಂಧಾನ ನಡೆಸಿ ಶ್ರೀರಂಗದ ರಂಗನಾಥಸ್ವಾಮಿ ದೇವಾಲಯಕ್ಕೆ ಎರಡು ದೀಪ ಸ್ತಂಭಗಳನ್ನು ನೀಡಿದ್ದ. ಅಷ್ಟೇ ಅಲ್ಲದೆ ಆ ದೀಪ ದಾನ ಕುರಿತು ಒಂದು ಶಿಲಾ ಶಾಸನವನ್ನು ಕೆತ್ತಿಸಿ ಶ್ರೀರಂಗಂ ದೇವಾಲಯದಲ್ಲಿ ಇರಿಸಿದ್ದ.

ಈ ಎಲ್ಲ ಇತಿಹಾಸವನ್ನು ಅರಿತಿದ್ದ ವಿಷ್ಣುವರ್ಧನನು ತ್ರಿಭುವನಮಲ್ಲ ವಿಕ್ರಮಾದಿತ್ಯನ ಚತುರ ದಂಡನಾಯಕ ಸಂಧಿವಿಗ್ರಹಿಯನ್ನು ಬಳಸಿಕೊಂಡು ರಾಮಾನುಜರ ಅರ್ಚಕ ಸಮಸ್ಯೆಯನ್ನು ಏಕೆ ಬಿಡಿಸಬಾರದು ಎಂದು ಯೋಚಿಸಿದ.

ಅದನ್ನು ತಂದೆ ಎರೆಯಂಗ ದೇವನ ಬಳಿ ಪ್ರಸ್ತಾವಿಸಿದಾಗ ವಿಷ್ಣುವರ್ಧನನ ಮೇಲೆ ಅಪಾರ ಪ್ರೀತಿಯನ್ನು ಇರಿಸಿದ್ದ ಎರೆಯಂಗ ದೇವ ಅವನ ವಿಜ್ಞಾಪನೆಯಂತೆ ಸಂಧಿ ವಿಗ್ರಹಿ ದಂಡನಾಯಕನನ್ನು ತನ್ನ ಬಳಿಗೆ ಕರೆಸಿಕೊಂಡು, ಅರ್ಚಕ ರಂಗರಾಜ ಭಟ್ಟರರನ್ನು ಮೇಲುಕೋಟೆಗೆ ಕರೆತರಲು ಚೋಳ ರಾಜಧಾನಿ ಕಾಂಚೀಪುರಕ್ಕೆ ಹೋಗಿ ಸ್ವತಃ ಕುಲೋತ್ತುಂಗರನ್ನು ಸಂಧಿಸಿ ಶ್ರೀರಂಗಂನಿಂದ ಯಾದವಾದ್ರಿಯ ದೇವಾಲಯಕ್ಕೆ ಒಬ್ಬ ಅರ್ಚಕನನ್ನು ಕಳುಹಿಸಬೇಕಾಗಿದೆ ಎಂಬ ಸಂಗತಿಯನ್ನು ಪ್ರಸ್ತಾವಿಸಲು ಆದೇಶಿಸಿದ.

ಆವೇಳೆಗಾಗಲೇ ಹಿಂದಿನ ಪ್ರಧಾನಾಮಾತ್ಯ ಪದಚ್ಯುತಗೊಂಡು ದೇಶಭ್ರಷ್ಟನಾಗಿದ್ದ. ಹೊಸಬ ಅಧಿಕಾರ ವಹಿಸಿಕೊಂಡಿದ್ದರಿಂದ ಮೊದಲಿನ ರಾಮಾನುಜ ದ್ವೇಷ ಆಡಳಿತ ವರ್ಗದಲ್ಲಿ ಉಳಿದಿರಲಿಲ್ಲ. ಸ್ವತಃ ಕುಲೋತ್ತುಂಗನೇನೂ ವಿಷ್ಣು ದ್ವೇಷಿಯಾಗಿರಲಿಲ್ಲವಲ್ಲ.

ಶಿವ ದೇವಾಲಯಗಳಿಗೆ ಅನೇಕ ದತ್ತಿಗಳನ್ನು ನೀಡಿ ಶಿಲಾ ಶಾಸನ ಮಾಡಿದ್ದು ಕಂಡರೆ ಅವನಿಗೆ ಶಿವ ಕೇಶವರಲ್ಲಿ ಭೇದವಿರಲಿಲ್ಲ ಎನ್ನುವುದು ಸ್ಪಷ್ಟಗೊಂಡಿತ್ತು.

ಹೀಗಾಗಿ ಕಾಂಚೀಪುರಕ್ಕೆ ಸಂಧಿ ವಿಗ್ರಹಿ ದಂಡನಾಯಕ ಸುಲಭವಾಗಿಯೇ ಕೆಲಸ ಸಾಧಿಸಿ ಸಂತೋಷದ ಸುದ್ದಿಯೊಂದಿಗೆ ಹಿಂದಿರುಗಿದ್ದ.

ಮೇಲುಕೋಟೆಯ ದೇವಾಲಯಕ್ಕೆ ಶ್ರೀರಂಗಂನಿಂದ ರಂಗರಾಜ ಭಟ್ಟರ್‌ರನ್ನು ಕರೆತಂದು ಅರ್ಚಕರನ್ನಾಗಿ ನೇಮಿಸಿ ಇಡೀ ದೇವಸ್ಥಾನದ ಧಾರ್ಮಿಕ ಕ್ರಿಯೆಗಳ ಹೊಣೆಗಾರಿಕೆಯನ್ನು ಒಪ್ಪಿಸುವುದರಲ್ಲಿ ರಾಮಾನುಜರು ವಿಜಯ ಸಾಧಿಸಿದ್ದರು. ಆದರೆ ಇದು ಸಾಧ್ಯವಾದದ್ದು ವಿಷ್ಣುವರ್ಧನನಿಂದ. ಅವನು ಗುರು ರಾಮಾನುಜರ ಮೇಲೆ ಇರಿಸಿದ್ದ ಭಕ್ತಿ ಶ್ರದ್ಧೆಗಳಿಂದ.

ಹೀಗೆ ಕಾಲ ಉರುಳಿತು. ರಾಮಾನುಜರೂ ಶತಾಯುಗಳಾಗುವತ್ತ ದಾಪುಗಾಲು ಹಾಕಲಾರಂಭಿಸಿದರು. ದೇಹಕ್ಕೆ ಹೆಚ್ಚು ಶ್ರಮ ಕೊಡುವುದು ಸಾಧ್ಯವಿಲ್ಲದಾಯಿತು. ತಪೋಯೋಗಿಯಾಗಿ ಶಾಸ್ತ್ರೋಕ್ತ ಸಂನ್ಯಾಸ ಜೀವನ ನಡೆಸುತ್ತಿದ್ದ ಅವರಿಂದ ಶ್ರೀಮನ್ನಾರಾಯಣ ಇನ್ನು ಹೆಚ್ಚು ಸೇವೆ ನಿರೀಕ್ಷಿಸುತ್ತಿದ್ದುದರಿಂದ ಅವರು ಕೆಲವು ಪ್ರಮುಖ ಕೆಲಸಗಳನ್ನಷ್ಟೇ ಮಾಡುತ್ತಾ ಕಾಲಯಾಪನೆ ಮಾಡಲಾರಂಭಿಸಿದ್ದರು. ಬಯಸಿಬಂದ ಯೋಗ್ಯರಿಗೆ ಸಂನ್ಯಾಸ ದೀಕ್ಷೆ ನೀಡಿ ಶ್ರೀಹರಿಯ ಕೈಂಕರ್ಯಕ್ಕೆ ತೊಡಗಿಸುವುದು, ಶಾಸ್ತ್ರಾರ್ಥಗಳಿಗೆ ಮಾರ್ಗದರ್ಶನ ಮಾಡುವುದು, ಅಧ್ಯಾಪನದ ಮೂಲಕ ಮುಂದಿನ ಪೀಳಿಗೆಯ ಶ್ರೀವೈಷ್ಣವ ಪಂಡಿತರನ್ನು ತಯಾರು ಮಾಡುವುದೇ ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು.

ಶ್ರೀರಂಗದಿಂದ ಬಂದ ಅರ್ಚಕ ರಂಗರಾಜ ಭಟ್ಟರ್ ಪರಮ ಸಾತ್ವಿಕ. ಶ್ರೇಷ್ಠ ವಿದ್ವಾಂಸ. ಆದರೆ ಭಯಸ್ಥ. ರಾಜ ಶಾಸನದ ಎದುರು ನಿಲ್ಲುವಂಥ ವೀರ ಪ್ರವೃತ್ತಿ ಅವನದಾಗಿರಲಿಲ್ಲ. ಮತ್ತೆ ತನ್ನ ಬಾಲ್ಯದ ಗುರು ರಾಮಾನುಜರ ಬಳಿಗೆ ಬಂದಿದ್ದು ಅವನಿಗೆ ಪರಮ ಸಂತೋಷವನ್ನುಂಟುಮಾಡಿತ್ತು.

ರಾಮಾನುಜರು ಒಂದು ದಿವಸ ರಂಗರಾಜರನ್ನು ಕರೆದು ಚೋಳ ರಾಜ್ಯದ ಪರಿಸ್ಥಿತಿಯನ್ನು ಕುರಿತು ಕೇಳಲಾರಂಭಿಸಿದರು.

"ರಂಗರಾಜಾ, ನೀನು ಮೇಲುಕೋಟೆಗೆ ಬಂದಿದ್ದು ನನ್ನ ತಲೆಯ ಮೇಲಿನ ಬಹುದೊಡ್ಡ ಹೊರೆಯನ್ನು ಇಳಿಸಿದಂತಾಯಿತು. ನಾನು ನಿಶ್ಚಿಂತೆಯಿಂದಿರಬಹುದು ಈಗ..."

"ನನಗೂ ತಮ್ಮ ಸನ್ನಿಧಾನಕ್ಕೆ ಬಂದಿದ್ದು ಬಹಳ ಆನಂದ ತಂದುಕೊಟ್ಟಿದೆ. ಇದು ನೂತನ ದೇವಸ್ಥಾನ. ಇಷ್ಟು ಕಾಲ ತಾವು ತಮ್ಮ ಕೈಯಾರ ಚೆಲುವನಾರಾಯಣನ ಸೇವೆ ಮಾಡಿದ್ದೀರಿ. ಅದನ್ನು ಮುಂದುವರಿಸುವ ಭಾಗ್ಯ ನನ್ನದಾಗಿರುವುದು ನನ್ನ ಪೂರ್ವಜನ್ಮದ ಪುಣ್ಯ. ತಂದೆ ತಾಯಿಯರ ಪುಣ್ಯ."

ರಾಮಾನುಜರು ಮುಗುಳು ನಗುತ್ತಾ,

"ನಿಜ..ನಿಜ.. ಅಂದ ಹಾಗೆ ಚೋಳ ರಾಜ್ಯದ ಸ್ಥಿತಿಗತಿ ಹೇಗಿದೆ?"

"ಈಗ ಬಹಳಷ್ಟು ಬದಲಾವಣೆಗಳಾಗಿವೆ. ಮಹಾರಾಜ ಕುಲೋತ್ತುಂಗ ಚೋಳರು ಮೊದಲಿನಷ್ಟು ಯುದ್ಧಗಳನ್ನು ಮಾಡುತ್ತಿಲ್ಲ. ವಯಸ್ಸೂ ಆಯಿತು. ಹೆಚ್ಚಿನ ಧಾರ್ಮಿಕ ಚಟುವಟಿಕೆಗಳಲ್ಲೇ ತಲ್ಲೀನರಾಗಿದ್ದಾರೆ."

"ವೈಷ್ಣವ ದ್ವೇಷ ಹೇಗಿದೆ?"

"ವೈಷ್ಣವ ದ್ವೇಷ ಎಲ್ಲೂ ಕಾಣುತ್ತಿಲ್ಲ. ನೀವು ಶ್ರೀರಂಗದಲ್ಲಿ ಇದ್ದಾಗ ಇದ್ದಂಥ ಭಯಾನಕ ವಾತಾವರಣ ಇಲ್ಲ. ಚೋಳ ರಾಜ್ಯದಲ್ಲಿನ ಶ್ರೀವೈಷ್ಣವರೂ ತಣ್ಣಗಿದ್ದಾರೆ. ಮತ ಪ್ರಚಾರವಾಗಲೀ ಪಂಚಸಂಸ್ಕಾರ ಸಮಾಶ್ರಯಣಗಳಾಗಲೀ ಎಲ್ಲೂ ನಡೆಯುತ್ತಿಲ್ಲ. ಇರುವಷ್ಟು ಜನ ವೈಷ್ಣವರು ತಂತಮ್ಮ ಪಾಡಿಗೆ ತಾವು ಮನೆಗಳಲ್ಲಿ ಪೂಜೆ ಪುರಸ್ಕಾರ ನಡೆಸಿಕೊಂಡು ಹೋಗುತ್ತಿದ್ದಾರಷ್ಟೆ. ಎಲ್ಲ ವೈಷ್ಣವ ಮನೆಗಳಲ್ಲೂ ಉತ್ಸಾಹ,

ಸಂಭ್ರಮಗಳಿಲ್ಲ. ಒಂದು ಬಗೆಯ ಸ್ಮಶಾನ ಮೌನ ಕವಿದುಬಿಟ್ಟಿದೆ. ಜೀವಂತಿಕೆ ಮಾಯವಾಗಿದೆ."

"ರಂಗರಾಜ, ನಾವು ಶ್ರೀರಂಗದಿಂದ ಇಲ್ಲಿಗೆ ಬಂದ ಮೇಲೆ ಶ್ರೀಹರಿ ನಮಗೆ ಹಿಂದಿನದೆಲ್ಲವನ್ನು ಮನಸ್ಸಿನಿಂದ ಅಳಿಸಿ ಹಾಕಿ ಇಲ್ಲಿ ತನ್ನ ಸೇವೆಯನ್ನು ಪರಿಪೂರ್ಣವಾಗಿ ಮಾಡುವಂತೆ ನೇಮಿಸಿಬಿಟ್ಟ. ನಾವೂ ಇಲ್ಲಿ ಭಗವಂತನ



ಕೈಂಕರ್ಯದಲ್ಲಿ ಮುಳುಗಿಬಿಟ್ಟೆವು. ಅಲ್ಲಿ ಶ್ರೀರಂಗಂನಲ್ಲಿ ಏನಾಯಿತೋ ಏನೋ ಒಂದು ತಿಳಿಯಲಿಲ್ಲ. ಅಲ್ಲಿಂದ ಇಷ್ಟು ವರ್ಷ ಕಾಲ ಯಾರೂ ನಮ್ಮನ್ನು ನೋಡಲು ಬರಲೂ ಇಲ್ಲ. ನಮಗೆ ಅಲ್ಲಿನ ಯಾವ ಸಮಾಚಾರವೂ ತಿಳಿಯಲಿಲ್ಲ. ಅಂದ ಹಾಗೆ ಕೂರೇಶ, ಮಹಾಪೂರ್ಣರು ಹೇಗಿದ್ದಾರೆ? ನಮ್ಮ ಇತರ ಗುರುಹಿರಿಯರು ಹೇಗಿದ್ದಾರೆ?"

ರಂಗರಾಜ ಭಟ್ಟರ್ ರಾಮಾನುಜರು ಶ್ರೀರಂಗಂ ಮಠದಿಂದ ತಪ್ಪಿಸಿಕೊಂಡು ಹೋದ ಅನಂತರದ ವಿದ್ಯಮಾನಗಳನ್ನೆಲ್ಲ ವಿವರವಾಗಿ ಹೇಳಿದರು. ಚೋಳ ರಾಜ್ಯದ ದುಷ್ಟ ವೈಷ್ಣವ ದ್ವೇಷಿ ಶೈವ ಪ್ರಧಾನಾಮಾತ್ಯನು, ಕುಲೋತ್ತುಂಗ ಚೋಳರ ಅನುಪಸ್ಥಿತಿಯಲ್ಲಿ, ಆಡಳಿತ ಸೂತ್ರಗಳನ್ನು ಕೈಗೆ ತೆಗೆದುಕೊಂಡು ಅದನ್ನು ದುರ್ಬಳಕೆ ಮಾಡಿ ಕೂರೇಶರ, ಮಹಾಪೂರ್ಣರನ್ನು ನೇತ್ರಗಳನ್ನು ಕೀಳಿಸಿ ಅಂಧರನ್ನಾಗಿ ಮಾಡಿದ್ದು, ಮಹಾಪೂರ್ಣರು ವೃದ್ಧಾಪ್ಯ ಮತ್ತು ಕಣ್ಣುಗಳನ್ನು ಕಳೆದುಕೊಂಡ ವೇದನೆಯಿಂದಾಗಿ ಮಾರ್ಗ ಮಧ್ಯದಲ್ಲೇ ಪಳಯರ್ರೈ ಎಂಬಲ್ಲಿ ಪ್ರಾಣಬಿಟ್ಟಿದ್ದು ಮತ್ತು ರಾಮಾನುಜರಿಗೆ ತಿರುಕ್ಕೊಟ್ಟಿಯಾರ್ ನಂಬಿಗಳು, ತಿರುಮಲೈಯಾಂಡಾನ್‌ರು, ತಿರುವರಂಗ ಪೆರುಮಾಳ್ ಅರೈಯವರು, ಪೆರಿಯ ತಿರುಕಚ್ಚಿ ನಂಬಿಗಳು, ತಿರುಕ್ಕಚ್ಚಿ ನಂಬಿಗಳು ವೈಕುಂಠವನ್ನು ಸೇರಿದ ಆಘಾತಕಾರಿ ಸುದ್ದಿಯನ್ನು ತಿಳಿಸಿದ.

ಎಲ್ಲವನ್ನು ಶಾಂತಚಿತ್ತರಾಗಿ ಆಲಿಸಿದ ರಾಮಾನುಜರು ಕೊನೆಯಲ್ಲಿ ಒಮ್ಮೆಲೆ ನಿಯಂತ್ರಣ ತಪ್ಪಿ "ಶ್ರೀಹರಿ ಶ್ರೀಹರಿ...ಎಂಥ ಸುದ್ದಿ ನೀಡಿದೆಯಪ್ಪಾ...ಈ ಹೃದಯ ಒಡೆಯುವ ಸುದ್ದಿಗಳನ್ನು ಕೇಳಲಿಕ್ಕಾಗಿಯೇ ನನಗೆ ಇಷ್ಟು ದೀರ್ಘಾಯಸ್ಸು ಕೊಟ್ಟೆಯಾ ತಂದೆ..." ಎಂದು ಬಿಕ್ಕಿ ಬಿಕ್ಕಿ ಅಳಲಾರಂಭಿಸಿದರು.

ಮೊದಲಿಯಾಂಡಾನ್ ದಾಶರಥಿಯನ್ನು ಬಿಟ್ಟರೆ ಅವರ ಪ್ರಮುಖ ಶಿಷ್ಯ ಕೂರೇಶನೇ. ಕೂರೇಶನ ವಿಷಯ ಕೇಳಿ ಹೆಚ್ಚು ವಿಚಲಿತರಾದ ರಾಮಾನುಜರು "ಈಗ ಕೂರೇಶ ಎಲ್ಲಿದ್ದಾನೆ?" ಎಂದು ಕೇಳಿದರು.

"ಪಳಯರ್ರೈ ಇಂದ ಪಾಂಡ್ಯ ರಾಜ್ಯದ ತಿರುಮಲಿರುಂಬೋಲೈ ಎಂಬ ಸ್ಥಳಕ್ಕೆ ಹೋದರೆಂದು ಆಗ ವರ್ತಮಾನವಿತ್ತು..."

"ಹೂಂ ಶ್ರೀಹರಿ...ಕೂರೇಶನನ್ನು ಕಾಪಾಡು ತಂದೆ" ಎಂದು ಪ್ರಾರ್ಥಿಸಿದರು. ಅನಂತರ ಮಾರೋನ್ರಿಲ್ಲ ಮಾರುತಿ ಶಿರಿಯಾಂಡಾನ್ ಎಂಬ ತಮ್ಮ ಶಿಷ್ಯನನ್ನು ಕರೆದು ತಿರುಮಲಿರುಂಚೋರ್ಲೈಗೆ ಹೋಗಿ ಕೂರೇಶನನ್ನು ಹುಡುಕಿ ಅವರಿಗೆ ತಮ್ಮ ಆಶಿಸ್ಸುಗಳನ್ನು ಹೇಳಿ ಸಾಂತ್ವನವನ್ನು ತಿಳಿಸಲು ಕಳುಹಿಸಿದರು. ತಾವು ಶ್ರೀರಂಗಂಗೆ ಹಿಂದಿರುಗುವ ಉದ್ದೇಶವಿರಿಸಿಕೊಂಡಿರುವುದಾಗಿಯೂ ತಮ್ಮನ್ನು ಶ್ರೀರಂಗಂನಲ್ಲಿ ಭೇಟಿಯಾಗಬೇಕೆಂದೂ ಸಂದೇಶ ಕಳಿಸಿದರು.


ಅನಂತರ ರಂಗರಾಜ ಭಟ್ಟರ್‌ರನ್ನು ಚೋಳ ರಾಜ್ಯದ ರಾಜಕೀಯ ಪರಿಸ್ಥಿತಿಯ ಬಗ್ಗೆ ಪ್ರಶ್ನಿಸಿದರು.

"ನಿಜಕ್ಕೂ ಕುಲೋತ್ತುಂಗ ಮಹಾರಾಜರು ಖಂಡಿತ ವಿಷ್ಣು ದ್ವೇಷಿಯಲ್ಲ. ಅವರು ಎಲ್ಲ ಮತಗಳನ್ನು ಸಮಾನವಾಗಿ ಕಾಣುವ ಸುಸಂಸ್ಕೃತ ಮಹಾರಾಜರು. ಸುಮಾರು ಐದು ವರ್ಷಗಳ ಕೆಳಗೆ ಅವರು ತಮ್ಮ ರಾಜ್ಯಾಡಳಿತದ ನಲವತ್ತಮೂರನೇ ವರ್ಷಾಚರಣೆಯ ಸಂದರ್ಭದಲ್ಲಿ ಕುಲೋತ್ತುಂಗ ಚೋಳಪುರಂ ಎಂಬಲ್ಲಿ ಎರಡು ದೇವಸ್ಥಾನಗಳನ್ನು ಕಟ್ಟಿಸಿ ಶಿಲಾಶಾಸನವನ್ನು ಬರೆಸಿದ್ದಾರೆ. ಈ ಕುಲೋತ್ತುಂಗ ಚೋಳಪುರಂಗೆ ಚಿಕ್ಕ ಮಧುರೆ ಎಂಬ ಹೆಸರು ಬಂತು. ಏಕೆಂದರೆ ಆ ಊರಿನ ವಿನ್ಯಾಸ ಮಧುರೆಯಂತೆಯೇ ಮಾಡಿಸಿದ್ದಾರೆ. ಆ ಎರಡು ದೇವಸ್ಥಾನಗಳಲ್ಲಿ ಒಂದು ಸೊಕ್ಕನಾಥರ್ ಕೋಯಿಲ್ ಎಂಬ ಶಿವ ದೇವಾಲಯ. ಅಷ್ಟೇ ಶ್ರದ್ಧೆಯಿಂದ ವಿನವ ಪೆರುಮಾಳ್ ಕೋಯಿಲ್ ಎಂಬ ಹೆಸರಿನ ವರದರಾಜ ದೇವಸ್ಥಾನವನ್ನು ಕಟ್ಟಿಸಿದ್ದಾರೆ."

"ಹಾಗಿದ್ದ ಪಕ್ಷದಲ್ಲಿ ನಮಗೂ ನಮ್ಮ ಶ್ರೀಮಠಕ್ಕೂ ನಮ್ಮ ಪ್ರಮುಖ ಶಿಷ್ಯ ಕೂರೇಶನಿಗೂ ಗುರುಗಳಾದ ಮಹಾಪೂರ್ಣರಿಗೂ ಏಕೆ ದುರ್ಗತಿ ಬಂತು ರಂಗರಾಜ? ವೈಷ್ಣವ ಮತದ ಮೇಲೆ ಏಕೆ ದೌರ್ಜನ್ಯ ನಡೆಯಿತು?"

"ಇದು ಕುಲೋತ್ತುಂಗರ ಕೆಲಸವಲ್ಲ. ಅವರು ಆಗಿನ ದಿನಗಳಲ್ಲಿ ಸದಾಕಾಲ ಕಳಿಂಗ ರಾಜ್ಯದೊಡನೆ ಯುದ್ಧದಲ್ಲಿರುತ್ತಿದ್ದರು. ತಮ್ಮ ಸ್ಥಳೀಯ ರಾಜ್ಯಾಡಳಿತ

▶▶ 31ನೇ ಪುಟಕ್ಕೆ





ಈವರೆಗೆ ‘ದಾಸವಾಣಿ’ ಎಂಬ ಅಂಕಣದಲ್ಲಿ ಪುರಂದರದಾಸರ ಕೀರ್ತನೆಗಳಿಗೆ ವ್ಯಾಖ್ಯಾನ ನೀಡಿರುವ ಯತಿರಾಜ್ ವೀರಾಂಬುಧಿಯವರು ಈ ಸಂಚಿಕೆಯಿಂದ ಶ್ರೀ ವಿಷ್ಣು ಸಹಸ್ರನಾಮದ ಕೆಲವು ಪದಗಳನ್ನು ಆಯ್ದುಕೊಂಡು ಅವನ್ನು ಅರ್ಥೈಸುತ್ತಾ ವಿಷ್ಣು ಸಹಸ್ರನಾಮವನ್ನು ಕುರಿತು ವ್ಯಾಖ್ಯಾನ ಮಾಡುತ್ತಾರೆ. ಸ್ವತಃ ಕಾದಂಬರಿಕಾರರಾಗಿರುವ ಯತಿರಾಜ ವೀರಾಂಬುಧಿಯವರು ಅಧ್ಯಾತ್ಮಜೀವಿಗಳೂ ಆಗಿದ್ದಾರೆ.



# ಕ್ಷಮಃ

ಎಲ್ಲವನ್ನೂ ಕ್ಷಮಿಸುವ ಭಗವಂತ ಕ್ಷಮಃ. ಕ್ಷಮೆ ಎಂದರೆ ಎದುರಾಳಿಗಳ ಪ್ರತಿಭಟನೆಯನ್ನು ತಡೆದುಕೊಳ್ಳುವ ಸೋಲಿಲ್ಲದ ಸಹನಾಶಕ್ತಿ. ಭಗವಂತನ ಕ್ಷಮಾಗುಣವನ್ನು ಹೇಳುವ ಅನೇಕ ದೃಷ್ಟಾಂತಗಳನ್ನು ಅವನ ಲೀಲೆಗಳಲ್ಲಿ ಕಾಣುತ್ತೇವೆ. ರಾಮನ ಅವತಾರದ ಸಂಪೂರ್ಣ ಕ್ಷಮೆ, ಸಹನೆ, ತಾಳ್ಮೆಗಳು ಜನಜನಿತವಾದವುಗಳು.

ಕರ್ತವ್ಯನಿರತ ಜಯ ವಿಜಯರನ್ನು ಕೋಪದಿಂದ ಶಪಿಸಿದ ಸನಕಾದಿಗಳನ್ನು ಭಗವಂತ ನಡೆಸಿಕೊಂಡ ರೀತಿ; ಸಿಟ್ಟಿನಿಂದ ಭಗವಂತನ ಎದೆಯನ್ನೊದ್ದ ಭೃಗು ಮಹರ್ಷಿಯನ್ನು ಭಗವಂತ ನಡೆಸಿಕೊಂಡ ರೀತಿ; ಅವು ಕ್ಷಮಾಗುಣಗಳು. ಅವನು ಕ್ಷಮಿಸದಿದ್ದರೆ ನಾವು ನಮ್ಮ ಪಾಪಗಳಿಂದ ಮುಕ್ತರಾಗುವುದು ಸಾಧ್ಯವಿಲ್ಲ. ಮನಸ್ಸಿನ ಎಲ್ಲ ಬದಲಾವಣೆಗಳಿಂದ ಸೊರಗಿದ ಅನಂತರವೂ ಪರಿಶುದ್ಧವಾಗಿರುವವನು ಕ್ಷಮಃ. ಎಲ್ಲರಲ್ಲೂ ಇರುವವನು ಕ್ಷಮಃ.

ಯಾವ ಕೆಲಸ ಮಾಡಿದರೂ ಅದರಲ್ಲಿ ಅತ್ಯಂತ ಸಾಮರ್ಥ್ಯ ಇರುವವನು ಕ್ಷಮಃ..

ನಮ್ಮ ಸಾಮರ್ಥ್ಯವು ನಮ್ಮ ಸ್ಥೈರಣೆ ಮತ್ತು ಸಹಿಷ್ಣುತೆಗಳ ಮೇಲೆ ಆಧಾರಗೊಂಡಿರುತ್ತದೆ. ಸಾಮಾನ್ಯವಾಗಿ ಒಂದು ಕೆಲಸವು ಮೂಲ ವಸ್ತುಗಳ ಸಾಮಾನ್ಯ ಯೋಗ್ಯತೆ, ಕಳಪೆ ವಸ್ತುಗಳು ಮತ್ತು ಅಸಮರ್ಥತೆಯ ಉಪಕರಣಗಳೊಂದಿಗೆ ತಳಕು ಹಾಕಿಕೊಂಡಿರುತ್ತದೆ. ಇವೆಲ್ಲವನ್ನೂ ಸಾಧಿಸುವುದೇ ಕ್ಷಮಃ.

ವಿಶ್ವವನ್ನು ಸೃಷ್ಟಿಸುವ ಭಗವಂತನ ಅಭಿಲಾಷೆಯನ್ನು ನಾವು ಪರೀಕ್ಷಿಸಿದರೆ ಒಂದು ವಿಷಯ ಅರ್ಥವಾಗುತ್ತದೆ. ಅವನೇನಾದರೂ ಮನುಷ್ಯನಾಗಿದ್ದಿದ್ದರೆ ಈ ವಿಶ್ವನ್ನು ಅವನು ನಾಶ ಮಾಡಿ ಯಾವುದೋ ಕಾಲವಾಗಿರುತ್ತಿತ್ತು, ಏಕೆಂದರೆ ನಾವು ಮನುಷ್ಯರು ಆ ರೀತಿ ಈ ಭೂಮಿಯನ್ನು ನಡೆಸಿಕೊಳ್ಳುತ್ತಿದ್ದೇವೆ; ಈ ಭೂಮಿಯ ಮೇಲೆ ನಡೆದುಕೊಳ್ಳುತ್ತಿದ್ದೇವೆ.

ಆದರೆ ಅವನು ಮನುಷ್ಯರ ಅನುಚಿತ ವರ್ತನೆಗಳನ್ನು ಸಹಿಸುತ್ತಾನೆ; ಮನುಷ್ಯರು ದುರಾಶೆ, ಮತ್ಸರ, ದುಷ್ಟಬುದ್ಧಿ, ಒರಟುತನ ಮತ್ತು ಅವಿಧೇಯತೆಗಳನ್ನು ಭಗವಂತನು ನಮಗಾಗಿ ಇಟ್ಟಿರುವ ಸಂಪತ್ತಿನ ಮೇಲೆ ತೋರಿಸುತ್ತಾರೆ. ಆದರೂ ಅವನು ನಮ್ಮಂತಹವರ ಮೇಲೆ ನಮ್ಮ ಉಳಿವಿಗೆ ಬೇಕಾದ ನೀರು ಮತ್ತು ಶಾಖಗಳನ್ನು ಒದಗಿಸುತ್ತಾನೆ. ನಮಗಾಗಿ ಧಾನ್ಯಗಳನ್ನು ನೀಡುತ್ತಾನೆ, ಬೆಳಕು, ಆಹಾರಗಳು ನಮಗೆ ಸಿಗುವಂತೆ ನೋಡಿಕೊಳ್ಳುತ್ತಾನೆ. ನಾವು ಎಂತೆಂತಹ ಕೆಟ್ಟಬುದ್ಧಿ ತೋರಿಸಿ, ಪ್ರಕೃತಿಯ ಸಂಪತ್ತನ್ನು ನಾಶಗೊಳಿಸಿದರೂ ಮತ್ತೆ ಮತ್ತೆ ನಮಗೆ ಎಲ್ಲವೂ ಸಿಗುವಂತೆ ಮಾಡುತ್ತಾನೆ ಭಗವಂತ.

ಅವನ ಕ್ಷಮತೆ, ಸಹಿಷ್ಣುತೆ ಇದು. ಏನೆಂದರೆ ತಾನು ಸೃಷ್ಟಿಸಿದ್ದನ್ನು ತಾನು ಒಳ್ಳೆಯ ಸ್ಥಿತಿಯಲ್ಲಿ ಇಡುವ ಕೆಲಸ.

ನಾವು ಕೂಡ ಭಗವಂತನಿಂದ ಅದೇ ಕ್ಷಮತೆ, ಸಹಿಷ್ಣುತೆ, ಅನುಕಂಪ ಮತ್ತು ಸಾಮರ್ಥ್ಯಗಳಿಗಾಗಿ ಬೇಡಿಕೊಳ್ಳೋಣ. ಅವನ್ನು ಅವನು ಕೊಟ್ಟೇ ಕೊಡುತ್ತಾನೆ. ಆಗ ಅವನ್ನು ನಮ್ಮ ಜೀವನದ ಯಜ್ಞಕ್ಕೆ ಉಪಯೋಗಿಸೋಣ. ಈ ಪ್ರಪಂಚವನ್ನು ಉತ್ತಮ ಸ್ಥಳವನ್ನಾಗಿ ಮಾಡೋಣ.



ಮಹಾನ್ ಸಹಿಷ್ಣುತೆ ಇರುವ ಎಲ್ಲರನ್ನೂ ಕ್ಷಮಿಸುವ ಭಗವಂತನನ್ನು ಪ್ರಾರ್ಥಿಸೋಣ.

ಅವನು ಬಹಳ ಸಾಮರ್ಥ್ಯಶಾಲಿ. ಅವನಿಗೆ ಬಹಳವೇ ತಾಳ್ಮೆ ಇದೆ.

ರಾಮಾಯಣದ ಶ್ರೀರಾಮನನ್ನು ನೋಡಿದರೆ ಕ್ಷಮಃ ನಾಮಕ್ಕೆ ಅರ್ಥ ಅರಿವಾಗುತ್ತದೆ. ಅವನು ಅದೆಷ್ಟು ಸ್ಥೈರಣೆ ಹೊಂದಿದ್ದ. ಪ್ರತಿ ರಾಕ್ಷಸನನ್ನೂ ಕೊಲ್ಲುವ ಮೊದಲು ಅವರು ಒಳ್ಳೆಯ ಬುದ್ಧಿ ಕಲಿತರೆ ಬಿಟ್ಟುಬಿಡೋಣವೆಂದುಕೊಳ್ಳುವ ಸ್ಥೈರಣೆಯ ಸ್ವಭಾವ ಶ್ರೀರಾಮನದು.

**ಕ್ಷಮಯಾ ಧರಿತ್ರೀ** ಎನ್ನುತ್ತಾರೆ. ಅಂದರೆ ಕ್ಷಮೆಯಲ್ಲಿ ನಾವು ಭೂಮಿಯಂತಿರಬೇಕಂತೆ. ಶ್ರೀರಾಮ ಹಾಗಿದ್ದ.

ಶ್ರೀರಾಮನು ಕ್ಷಮಃ ಗುಣವನ್ನು ಅವನ ಚಿಕ್ಕಂದಿನಿಂದ ತೋರಿಸಿದ್ದ. ಬಾಲಕಾಂಡದಲ್ಲಿ ವಿಶ್ವಾಮಿತ್ರರು ಅಯೋಧ್ಯೆಗೆ ಬಂದು ದಶರಥನ ಬಳಿ ಶ್ರೀರಾಮನನ್ನು ಕಳಿಸು ಎಂದಾಗ ದಶರಥ ಹೆದರಿದ. ರಾಮನಿನ್ನೂ ಬಾಲಕ ಎಂದು ಹೇಳಲು ಯತ್ನಿಸಿದ. ವಿಶ್ವಾಮಿತ್ರರ ಕೋಪವನ್ನೂ, ರಾಮನ ಮಹಿಮೆಯನ್ನೂ ತಿಳಿದಿದ್ದ ವಸಿಷ್ಠರು ದಶರಥನಿಗೆ ಬುದ್ಧಿ ಹೇಳಿ ರಾಮನು ವಿಶ್ವಾಮಿತ್ರನೊಂದಿಗೆ ಹೋಗುವಂತೆ ಮಾಡಿದರು. ಆಗ ಲಕ್ಷ್ಮಣನೂ ಹೊರಟ.

ತಾಟಕಿ ಸಂಹಾರ ಮಾಡುವಾಗ ರಾಮ ಬಹಳವೇ ಹಿಂದೆಗೆದ. ಏಕೆಂದರೆ ಅವಳು ಹೆಂಗಸೆಂದು ಅವಳನ್ನು ಕೊಲ್ಲಬಹುದೇ ಇಲ್ಲವೇ ಎನ್ನುವ ಜಿಜ್ಞಾಸೆಗೆ ಬಿದ್ದ. ವಿಶ್ವಾಮಿತ್ರ ಹೇಳಿದ ಮೇಲೆ ಕೊಂದ.

ದಾರಿಗುಂಟ ವಿಶ್ವಾಮಿತ್ರರು ಹೇಳಿದ ಕಥೆಗಳನ್ನೆಲ್ಲ ಕೇಳಿಕೊಳ್ಳುತ್ತಾ, ಅಹಲ್ಯಾಗೆ ಶಾಪ ವಿಮೋಚನೆ ಮಾಡಿದ. ಆಕೆಯ ಪತಿ ಗೌತಮರಿಗೆ ಪತ್ನಿಯೊಂದಿಗಿರುವಂತೆ ವಿನಂತಿಸಿಕೊಂಡ. ಜನಕನ ಅರಮನೆಯಲ್ಲಿ ಶಿವಧನುಸ್ಸನ್ನು ಮುರಿದ. ತಂದೆ, ತಾಯಿಯರ ಸಮ್ಮುಖದಲ್ಲಿ ಮದುವೆಯಾದ.

ಪರಶುರಾಮ ಎದುರಿಗೆ ಬಂದಾಗ ತಾಳ್ಮೆಯಿಂದ ಅವರನ್ನು ಎದುರಿಸಿದ. ಅವರನ್ನು ಸೋಲಿಸಿ, ಅವರಿಂದ ವೈಷ್ಣವ ಧನುಸ್ಸನ್ನು ಪಡೆದ.

ತನಗೆ ಪಟ್ಟಾಭಿಷೇಕ ಆಗಲಿದೆ ಎಂದಾಗ ಕೂಡ ಕ್ಷಮಃ ಅವನು. ಅನಂತರ ಅದು ತಪ್ಪಿ ಹೋದಾಗ ಕೂಡ ಕ್ಷಮಃ ಅವನು. ಕೈಕೇಯಿ ಕೂಗಾಡಿದಾಗ, ದಶರಥ ಕಣ್ಣೀರಾಗಿ ಬಿದ್ದಿದ್ದಾಗ ಕೂಡ ಕ್ಷಮಃ ಅವನು.

ಸೀತೆ ಜೊತೆಯಲ್ಲಿ ಬರುವೆನೆಂದಳು. ಅನಂತರ ಲಕ್ಷ್ಮಣ ತಂದೆಯ ಬಗ್ಗೆ ಒರಟು ಮಾತುಗಳನ್ನಾಡಿದಾಗ ಕೂಡ ಅವನು ಕ್ಷಮಃ.

ಭರತ ಇವನನ್ನು ಹುಡುಕಿಕೊಂಡು ಕಾಡಿಗೆ ಬಂದಾಗ ಲಕ್ಷ್ಮಣನಿಗೆ ಭರತನ ಮೇಲೆ ಅನುಮಾನ ಬಂದಿತು. ಆದರೆ ರಾಮ ತಾಳ್ಮೆಯಿಂದ ಆಲೋಚಿಸಿದ.

ಸೀತೆಯ ಅಪಹರಣವಾದ ಮೇಲೆ ಶೂರ್ಪನಖಿ ರಾಮನನ್ನು ನೋಡಿ ಮೋಹಿಸಿದಾಗ ಕೂಡ ಅವನು ತಾಳ್ಮೆಯಿಂದಿದ್ದ.

ಸುಗ್ರೀವನನ್ನು ಅಗ್ನಿಸಾಕ್ಷಿಯಾಗಿ ಸ್ನೇಹಿತನನ್ನಾಗಿ ಮಾಡಿಕೊಂಡು ಅವನ ವೈರಿಯಾಗಿದ್ದ ವಾಲಿಯನ್ನು ಕೊಂದು ಅವನಿಗೆ ರಾಜ್ಯ ಕೊಡಿಸಿದ.

ಶಬರಿಯನ್ನು ಕಂಡು, ಅವಳ ಆತಿಥ್ಯವನ್ನು ಸ್ವೀಕರಿಸಿ ಅವಳನ್ನು ಆಶೀರ್ವದಿಸಿದ.

ವಿಭೀಷಣನು ಅಣ್ಣನ ದಬ್ಬಾಳಿಕೆ, ಅನ್ಯಾಯಗಳನ್ನು ಎದುರಿಸಿ, ಅವನಿಂದ ಅಪಮಾನಿತಗೊಂಡು ಬಂದಾಗ ಅವನನ್ನು ಆದರಿಸಿದ.

ಪ್ರತಿಯೊಬ್ಬ ರಾಕ್ಷಸನನ್ನೂ ಕೊಂದು ಕೊನೆಗೆ ರಾವಣನನ್ನು ಎದುರಿಸಿದಾಗ ಕೂಡ ಅವನು ಕ್ಷಮಃ. ಅವನಿಗೆ ಪ್ರಾಣದಾನ ಕೊಡುವೆನೆಂದ ರಾಮ.

ಸೀತೆಯನ್ನು ಮತ್ತೆ ಕಾಡಿಗೆ ಕಳುಹಿಸುವಾಗ ಬಹಳವೇ ಆಲೋಚನೆ ಮಾಡಿದ. ಆದರೆ ಲೋಕಾಪವಾದವು ಪ್ರಾಮುಖ್ಯ ಪಡೆದಾಗ ಕಳಿಸಿಬಿಟ್ಟ.

ರಾಮರಾಜ್ಯದಲ್ಲಿ ಅದೆಷ್ಟು ಒಳ್ಳೆಯ ಆಡಳಿತವಿತ್ತೆಂದರೆ ಅದನ್ನು ಭಾರತದಲ್ಲಿ ತರಬೇಕೆಂದು ಗಾಂಧೀಜಿ ಬಹಳವೇ ಆಸೆ ಪಟ್ಟರು.

ಭರತನು ಪಾದುಕೆಗಳನ್ನು ಹೊತ್ತೊಯ್ದಾಗ ರಾಮನು ರಾಜ್ಯದ ಆಡಳಿತ ಹೇಗೆ ನಡೆಸಬೇಕೆಂದು ನೀಡುವ ಉಪದೇಶ ಬಹಳವೇ ವಿಶಿಷ್ಟವಾದದ್ದು.

ಜೀವಾತ್ಮರು ಕೆಲವು ಸಲ ಧರ್ಮದ ಹಾದಿ ಬಿಟ್ಟು ಅನೇಕ ಆಸೆಗಳ ಹಿಂದೆ ಓಡುತ್ತಾರೆ. ಆಗ ಭಗವಂತನು ತಾಳ್ಮೆಯನ್ನು ಕಳೆದುಕೊಳ್ಳುವುದಿಲ್ಲ. ಅವರು ಮಾಡಿದ ಯಾವುದೇ ಕೆಲಸವಾದರೂ ಅದಕ್ಕೆ ಫಲವನ್ನು ಕೊಡುತ್ತಾನೆ. ಅನಂತರವಾದರೂ ಅವರು ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಸರಿಯಾದ ಹಾದಿಯನ್ನು ಹಿಡಿಯುವರೇನೋ ಎಂದು.

ಕೂರ್ಮಾವತಾರದ ಸಮಯದಲ್ಲಿ ಮಂದರ ಪರ್ವತವನ್ನು ಬೆನ್ನ ಮೇಲೆ ಹೊತ್ತ. ವಾಸುಕಿಯನ್ನು ಪರ್ವತಕ್ಕೆ ಸುತ್ತಿ ದೇವತೆಗಳೂ ದಾನವರೂ ಕಡೆಯುವಾಗ ಅವರನ್ನು ಕ್ಷಮಿಸಿದ. ಅಮೃತ ಹೊರಬಂದಾಗ ಅದನ್ನು ಪಾತ್ರೆಯೊಂದಕ್ಕೆ ಹಾಕಿಕೊಂಡು, ಮೋಹಿನಿಯ ವೇಷ ಧರಿಸಿ ದಾನವರಿಗೆ ಬಡಿಸದೇ, ಕೇವಲ ದೇವತೆಗಳಿಗೆ ಮಾತ್ರ ಅಮೃತ ಬಡಿಸಿದ. ಏಕೆಂದರೆ ಅವನಿಗೆ ತಿಳಿದಿತ್ತು, ದಾನವರಿಗೆ ಅದನ್ನು ಕೊಟ್ಟರೆ ವಿನಾಶ ಖಚಿತವೆಂದು.

ವಾಮನನಾಗಿ ಪುಟ್ಟ ಹುಡುಗನಂತೆ ಬಲಿ ಚಕ್ರವರ್ತಿಯ ಬಳಿಗೆ ಬಂದು, ಶುಕ್ರಾಚಾರ್ಯನ ವಿರೋಧದ ನಡುವೆಯೇ ಮೂರು ಅಡಿ ಭೂಮಿ ಕೇಳಿದ. ಬಲಿಯಿಂದ ದಾನ ಪಡೆದ ಅನಂತರ ತ್ರಿವಿಕ್ರಮನಾಗಿ ಅಗಾಧವಾಗಿ ಬೆಳೆದು, ಆಕಾಶ, ಭೂಮಿಗಳನ್ನು ತನ್ನೆರಡು ಪಾದಗಳಿಂದ ಆಕ್ರಮಿಸಿ, ಮೂರನೆಯ ಹೆಜ್ಜೆಯನ್ನು ಬಲಿಯ ತಲೆಯ ಮೇಲಿಟ್ಟು ಅವನನ್ನು ಪಾತಾಳಕ್ಕೆ ಕಳಿಸಿದ.

ಅನಂತರ ಅವನ ಅಪೇಕ್ಷೆಯಂತೆ, ಅವನ ಮನೆಯ ಬಾಗಿಲು ಕಾದ ಕ್ಷಮಃ ಭಗವಂತ.

ಶ್ರೀಕೃಷ್ಣನಾಗಿಯಂತೂ ಅನೇಕ ಸಲ ಕ್ಷಮೆಯ ಅವತಾರವಾದ ಭಗವಂತ. ಹದಿನೇಳು ಸಲ ಜರಾಸಂಧನಿಂದ ಸೋತು ಓಡಿ ಹೋಗಿ ರಣಛೋಡ್ (ಯುದ್ಧಭೂಮಿ ಬಿಟ್ಟವನು) ಎನ್ನುವ ಹೆಸರನ್ನೇ ಪಡೆದ. ಜರಾಸಂಧನನ್ನು ಅವನು ಕೊಲ್ಲಲಿಲ್ಲ. ಅವನಿಗೆ ಸಾವಿದ್ದುದು ಭೀಮಸೇನನ ಕೈಯಲ್ಲಿ.

ಹೀಗೆ ಭಗವಂತ ತನ್ನ ಅವತಾರಗಳಲ್ಲಿ ಕ್ಷಮಃ ಗುಣವನ್ನು ಪಾಲಿಸಿದ.

ಒಂದೇ ಜನ್ಮದಲ್ಲಿ ಮುಂದಿನ ಹತ್ತು ಜನ್ಮಗಳಿಗೆ ಸಾಕಾಗುವಷ್ಟು ಪಾಪಗಳನ್ನು ಕಲೆಹಾಕುವ ನಮ್ಮನ್ನು ಕ್ಷಮಿಸಿ, ನಮ್ಮ ಪಾಪಗಳನ್ನು ಅಳಿಸಿ ಮುಕ್ತಿಯ ಮಾರ್ಗದತ್ತ ಕೊಂಡೊಯ್ಯುವ ಭಗವಂತ ಕ್ಷಮಃ.

**ನಂ. ೮೯, 'ಚಿರಸ್ಮಿತ' ಬಸಪ್ಪ ಬಡಾವಣೆ, ಪಟ್ಟಣಗೆರೆ, ವೇರ್‌ಹೌಸ್ ಹಿಂದೆ, ರಾಜರಾಜೇಶ್ವರಿನಗರ, ಬೆಂಗಳೂರು–೫೬೦ ೦೯೮.**



# ಅಮರನಾರೇಯಣ ಶತಕ

■ ನಿರೂಪಣೆ: ನಾರೇಯಣ ದಾಸ

## ಪದ್ಯ-೧೦೨

**ಬೋಧಗುರುಡು ದೊರಕುಟದಿ ಯೆಂತೊ ಯಕ್ಕುವ**
**ಬಾಧಗುರುವುಲು ಬಹುಮಂದಿ ಕಲರು ।**
**ಸಜ್ಜನ-ಸಾವಾಸಮದಿ ಯೆಂತೊ ಯಕ್ಕುವ**
**ದುರ್ಜನುಲು ಕೋಟಾನುಕೋಟ್ಲು ಕಲಗು ।**
**ಧನವಂತುನಕು ದಾನಗುಣಮೆಂತೊ ಯಕ್ಕುವ**
**ಅನುಭವಿಂಚನಿವಾರು - ಅನೇಕುಲು ಕಲರು ।**
**ಮಾನವತಿ ಸತಿ ದೊರಕುಟದಿ ಯೆಂತೊ ಯಕ್ಕುವ**
**ಚಂಡಾಸ್ತ್ರೀಲು ಬಹು ಶಾಣ ಕಲರು ॥**
**ಪೂರ್ವಜಲ್ಮಮುನಾಟಿ ಪುಣ್ಯಾಪಾಪಮಂತ ।**
**ಅನುಭವಿಂಚಕ ತೀರದು ಅಜುನಕ್ಕೈನ ।**
**ಅಮರನಾರೇಯಣಾಚ್ಯುತ - ಹರಿ ಮುಕುಂದ ।**
**ಕಲುಷಸಂಹಾರ ಕೈವರಪುರವಿಹಾರಾ ॥102॥**

ಭಾರತೀಯ ಸನಾತನ ಧರ್ಮದ ನಂಬಿಕೆಯ ಪ್ರಕಾರ ಕರ್ಮಫಲ ಎಂಬುದೊಂದುಂಟು. ಪೂರ್ವಜನ್ಮದಲ್ಲಿ ಮಾಡಿದ ಪಾಪಪುಣ್ಯಗಳ ಅನುಸಾರವಾಗಿ ಮುಂದಿನ ಜನ್ಮದಲ್ಲಿ ಫಲಗಳನ್ನು ಅನುಭವಿಸಬೇಕಾಗುತ್ತದೆ. ಪಾಪ ಕರ್ಮಗಳನ್ನು ಮಾಡಿದವರಿಗೆ ಕೆಟ್ಟ ಫಲಗಳು ಮತ್ತು ಪುಣ್ಯದ ಕೆಲಸಗಳನ್ನು ಮಾಡಿದವನಿಗೆ ಶುಭ ಫಲಗಳು ದೊರೆಯುತ್ತವೆ ಎಂಬುದು ಭಾರತೀಯರ ನಂಬಿಕೆ. ಕರ್ಮ ಸವೆಯುವವರೆಗೆ ಮುಕ್ತಿ ಸಿಗುವುದಿಲ್ಲ. ಆದರೆ ಮುಕ್ತಿ ದೊರೆಯುವ ಮುನ್ನ ಎಲ್ಲ ಕರ್ಮಗಳೂ ಕಳೆದು ಹೋಗಬೇಕು. ನಿಶ್ಶೇಷವಾಗಬೇಕು. ಅನಂತರವೇ ಮುಕ್ತಿ. ಇಲ್ಲದಿದ್ದರೆ ಮಾಡಿದ್ದುಣ್ಣೋ ಮಹರಾಯ ಎಂಬಂತೆ ಜೀವನು ಕರ್ಮಫಲಗಳನ್ನು ಅನುಭವಿಸಿಯೇ ತೀರಬೇಕು ಎಂಬ ಮಾತಿಗನುಸಾರವಾಗಿ ಈ ಪದ್ಯದಲ್ಲಿ ನಾಲ್ಕು ಬಗೆಯ ಜೋಡಿಗಳನ್ನು ತೆಗೆದುಕೊಂಡು ಕೈವಾರ ತಾತಯ್ಯನವರು ಜೀವಾತ್ಮನ ಮರ್ಮವನ್ನು ವಿವರಿಸಿದ್ದಾರೆ.

**ಬೋಧಗುರುಡು ದೊರಕುಟದಿ ಯೆಂತೊ ಯಕ್ಕುವ**
**ಬಾಧಗುರುವುಲು ಬಹುಮಂದಿ ಕಲರು ।**

ಬೋಧ ಗುರು ಎಂದರೇನು ಬಾಧ ಗುರು ಎಂದರೇನು ಎಂಬ ಪ್ರಶ್ನೆ ಎದುರಾಗುತ್ತದೆ.


**ಗುರುವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಃ**
**ದುರ್ಲಭಃ ಸ ಗುರುರ್ಲೋಕೇ ಶಿಷ್ಯಚಿತ್ತಾಪಹಾರಕಃ ॥**

ಎಂಬ ಸುಭಾಷಿತ ಒಂದು ಸಂಸ್ಕೃತದಲ್ಲಿದೆ. 'ಶಿಷ್ಯರ ಹಣವನ್ನು ಅಪಹರಿಸುವ ಗುರುಗಳು ಬಹು ಜನರಿರುತ್ತಾರೆ. ಶಿಷ್ಯರ ಚಿತ್ತವನ್ನು ಸೆಳೆಯುವ ಗುರುಗಳು ಲೋಕದಲ್ಲಿ ದುರ್ಲಭ' ಎಂಬುದು ಇದರ ಅರ್ಥ.

ಬೋಧ ಗುರು ಮತ್ತು ಬಾಧ ಗುರು ಎಂದು ತಾತಯ್ಯನವರು ಗುರುಗಳನ್ನು ಎರಡು ಭಾಗ ಮಾಡುತ್ತಾರೆ. ಬೋಧ ಗುರು ಎಂದರೆ ಯಾವ ಗುರುವು ಪ್ರಾಮಾಣಿಕವಾಗಿ ಶ್ರದ್ಧಾಸಕ್ತಿಗಳಿಂದ ಯೋಗ್ಯ ಶಿಷ್ಯರಿಗೆ ಶಿಕ್ಷಣವನ್ನು ಅಥವಾ ಬೋಧನೆಯನ್ನು ಮಾಡುತ್ತಾನೋ ಅವನು. ಬಾಧ ಗುರುವೆಂದರೆ ಶಿಷ್ಯರಿಗೆ ನೋವುಂಟು ಮಾಡುವ ಗುರುಗಳು. ಬೋಧನೆಗಿಂತಲೂ ಬಾಧೆ ನೀಡುವುದೇ ಇಂಥ ಗುರುಗಳ ಕಾಯಕ. ಬೈದು ಮಾನಸಿಕ ಹಿಂಸೆ ಕೊಡಬಹುದು ಅಥವಾ ದಕ್ಷಿಣೆಯನ್ನು ಇಡು

### ತಾತಯ್ಯನವರ ದಾರಿದೀಪ

'ಕಬ್ಬಿನ ಜಲ್ಲೆಯ ತುದಿಯಿಂದ ಗೆಣ್ಣು ಗೆಣ್ಣಿಗೂ ಹೇಗೆ ರುಚಿ ಹೆಚ್ಚುವುದೋ ಹಾಗೇ ಸಜ್ಜನರ ಸ್ನೇಹವು ದಿನಕಳೆದಂತೆಲ್ಲ ಮಧುರವಾಗುವುದು. ಆದರೆ ದುರ್ಜನರ ಸ್ನೇಹವು ದಿನೇ ದಿನೇ ಕೆಡುತ್ತಾ ಹೋಗುವುದು.' ಇದು ಸಜ್ಜನರನ್ನು ಮತ್ತು ದುರ್ಜನರನ್ನು ವಿವರಿಸುವ ಸುಭಾಷಿತ. ಜನರಲ್ಲಿ ಸಜ್ಜನರೂ ದುರ್ಜನರೂ ಇಬ್ಬರೂ ಇರುತ್ತಾರೆ. ಸಜ್ಜನರು ಎಲ್ಲೋ ಕೆಲವರು. ದುರ್ಜನರೇ ಅಧಿಕ ಸಂಖ್ಯಾತರು. ಆದ್ದರಿಂದ ಸಜ್ಜನರ ಸಂಗವನ್ನು ಸೇರುವುದೇ ಯೋಗ್ಯವೆಂಬುದು ತಾತಯ್ಯನವರ ಕಿವಿಮಾತು.



ಎಂದು ಪೀಡಿಸಿ ಅವನ ಹಣವನ್ನು ಕಸಿಯಬಹುದು. ಅದನ್ನೇ ಸುಭಾಷಿತದಲ್ಲಿ 'ವಿತ್ತಾಪಹಾರಕ ಗುರು' 'ಚಿತ್ತಾಪಹಾರಕ ಗುರು' ಎಂದು ವಿಂಗಡಿಸಲಾಗಿದೆ.

ಅದನ್ನು ತಾತಯ್ಯನವರು ತಮ್ಮೊಂದು ಕೀರ್ತನೆಯಲ್ಲಿ ಎಚ್ಚರಿಕೆಯ ಮಾತಿನಲ್ಲಿ ನುಡಿದಿದ್ದಾರೆ. ಅಧ್ಯಾತ್ಮ ಸಾಧಕರಿಗೆ ಅವರು ಈ ಬಗೆಯ ಉಪದೇಶ ಮಾಡಿದ್ದಾರೆ.

**ಬುದ್ಧಿಮಂತುಡೈ ಮಂಚಿ-ಬೋಧಗುರುನಿ ಪ್ರಾಪು ಚೇರಿ**
**ಬಾಧ ಗುರುವುಲ ನಮ್ಮಬೋಕುರಾ-ಓ ಸಜ್ಜನ ಸಂಗಾ ।**
**ಚೇತಿ ಕಾಸುಲು ಚಾರತೀತರು ॥**

'ಬುದ್ಧಿವಂತನಾಗಿ ಬೋಧ ಗುರುವನ್ನು ಸೇರಿಕೊಳ್ಳೋ ಸಜ್ಜನ ಸಂಗವನ್ನು ಅರಸುವವನೇ. ಬಾಧೆ ಗುರುಗಳನ್ನು ನಂಬಬೇಡವಯ್ಯಾ. ಏಕೆಂದರೆ ಬಾಧೆ ಗುರುಗಳು ನಿನ್ನ ಕೈಯಲ್ಲಿನ ಕಾಸುಗಳನ್ನು ಕಸಿಯುವರು' ಎಂದು ಕಿವಿಮಾತು ಹೇಳುತ್ತಾರೆ.

ಈ ಪದ್ಯದ ಮೊದಲೆರಡು ಸಾಲುಗಳಲ್ಲಿ ನಿಜವಾಗಿಯೂ ಜ್ಞಾನವನ್ನು ನೀಡುವಂತಹ, ಬೋಧನೆಯನ್ನು ಮಾಡುವಂತಹ ಗುರುವು ಸಿಗುವುದೆಂದರೆ ಅದು ಬಹು ಹೆಚ್ಚಿನದು. ಬಾಧೆ ಗುರುಗಳು ಬಹಳ ಮಂದಿ ಸಿಗುವರು ಎನ್ನುತ್ತಾರೆ. ಬೋಧೆ ಗುರು ಸಿಗುವುದು ಪೂರ್ವಜನ್ಮದ ಪುಣ್ಯದ ಫಲ. ಪಾಪದ ಫಲವೇ ಬಾಧೆ ಗುರು ದೊರೆಯುವುದು ಎನ್ನುವರು.

**ಸಜ್ಜನ-ಸಾವಾಸಮದಿ ಯೆಂತೊ ಯಕ್ಕುವ**
**ದುರ್ಜನುಲು ಕೋಟಾನುಕೋಟ್ಲು ಕಲರು ।**

ಸಜ್ಜನರ ಸಾವಾಸ ಸಿಕ್ಕರೆ ಅದು ಮಹತ್ತಾದುದು. ದುರ್ಜನರಿಗೆ ಕೊರತೆ ಇಲ್ಲ. ಅವರ ಸಂಖ್ಯೆ ಕೋಟಿ ಕೋಟಿ.

ಸಜ್ಜನರ ಸಹವಾಸ ಎಂದರೇನು ಎಂಬುದಕ್ಕೆ ಸುಭಾಷಿತರತ್ನ ಭಾಂಡಾಗಾರದಲ್ಲಿ ಒಂದು ಸುಂದರ ಸುಭಾಷಿತವಿದೆ.

**ಇಕ್ಷೋರಗ್ರಾತ್ ಕ್ರಮಶಃ ಪರ್ವಣಿ ಪರ್ವಣಿ ಯಥಾರಸ ವಿಶೇಷಃ**
**।ತದ್ವತ್ಸಜ್ಜನಮೈತ್ರೀ ವಿಪರೀತಾನಾಂ ಚ ವಿಪರೀತ ॥**

'ಕಬ್ಬಿನ ಜಲ್ಲೆಯ ತುದಿಯಿಂದ ಗೆಣ್ಣು ಗೆಣ್ಣಿಗೂ ಹೇಗೆ ರುಚಿ ಹೆಚ್ಚುವುದೋ ಹಾಗೇ ಸಜ್ಜನರ ಸ್ನೇಹವು ದಿನಕಳೆದಂತೆಲ್ಲ ಮಧುರವಾಗುವುದು. ಆದರೆ ದುರ್ಜನರ ಸ್ನೇಹವು ದಿನೇ ದಿನೇ ಕೆಡುತ್ತಾ ಹೋಗುವುದು.' ಇದು ಸಜ್ಜನರನ್ನು ಮತ್ತು ದುರ್ಜನರನ್ನು ವಿವರಿಸುವ ಸುಭಾಷಿತ.

ಜನರಲ್ಲಿ ಸಜ್ಜನರೂ ದುರ್ಜನರೂ ಇಬ್ಬರೂ ಇರುತ್ತಾರೆ. ಸಜ್ಜನರು ಎಲ್ಲೋ ಕೆಲವರು. ದುರ್ಜನರೇ ಅಧಿಕ ಸಂಖ್ಯಾತರು. ಆದ್ದರಿಂದ ಸಜ್ಜನರ ಸಂಗವನ್ನು ಸೇರುವುದೇ ಯೋಗ್ಯವೆಂಬುದು ತಾತಯ್ಯನವರ ಕಿವಿಮಾತು.

**ಧನವಂತನಕು ದಾನ ಗುಣಮೆಂತೊ ಯಕ್ಕುವ**
**ಅನುಭವಿಂಚನಿವಾರು - ಅನೇಕುಲು ಕಲರು ।**

ಧನ ಸಂಪಾದನೆ ಮಾನವನ ಸಹಜ ಮನಃ ಪ್ರವೃತ್ತಿ. ಅದರಲ್ಲಿ ಚೆನ್ನಾಗಿ ಸಂಪಾದಿಸಿ ಶ್ರೀಮಂತರಾಗುವವರು ಕೆಲವರು ಮಾತ್ರ. ಅಂಥ ಕೆಲವರಲ್ಲಿ ದಾನ ಮಾಡಬೇಕೆಂಬ ಬುದ್ಧಿ ಇರುತ್ತದೆ. ಅವರು ಬಹು ಅಲ್ಪಸಂಖ್ಯಾತರು. ದಾನ ಬುದ್ಧಿ ಇರುವ ಧನವಂತರು ನಿಜವಾಗಿ ಭಾಗ್ಯಶಾಲಿಗಳು. ಅವರಿಗೆ ಪರೋಪಕಾರದ ಪುಣ್ಯವೂ ಲಭ್ಯ. ಅವರು ಕೀರ್ತಿಶಾಲಿಗಳೂ ಆಗುತ್ತಾರೆ. ಅವರಿಂದ ಸಹಾಯ ಪಡೆದವರ ಕೃತಜ್ಞತೆಗೂ ಪಾತ್ರರಾಗುತ್ತಾರೆ.

ಹಣ ಸಂಪಾದಿಸಿ ಶ್ರೀಮಂತರಾದವರು ಬಹು ಮಂದಿ ಲೋಭಿಗಳು. ದಾನ ಬುದ್ಧಿ ಎಂಬುದು ಅವರ ಬಳಿ ಸುಳಿಯುವುದೂ ಇಲ್ಲ. ಇಂಥ ಲೋಭಿ ಧನಿಕರು ಪೂರ್ವಜನ್ಮದ ಪಾಪದ ಫಲದವರು. ಈ ಸಂಗತಿಯನ್ನು ತಾತಯ್ಯನವರು ನಾದ ಬ್ರಹ್ಮಾನಂದ ನಾರೇಯಣ ಕವಿ ಶತಕದ 127ನೇ ಪದ್ಯದಲ್ಲಿ ಹೀಗಂದಿದ್ದಾರೆ.

**ಕಾಮಧೇನು ಪಾಲು - ಅಂದರೂ ತಾಗೇರು ।**
**ಕುಕ್ಕ ಪಾಲು ತಾಗೇವಾರೆವರು ಲೇರು ।**
**ಲೊಭಿವಾನಿ ಕಲಿಮಿ - ಕುಕ್ಕಲ ಪಾಲಾಯ ।**
**ನಾದ ಬ್ರಹ್ಮಾನಂದ-ನಾರೇಯಣ ಕವಿ ॥127॥**

ದಾನ ಮಾಡುವ ಶ್ರೀಮಂತನ ಧನ ಕಾಮಧೇನುವಿನ ಹಾಲಿನ ಹಾಗೆ. ಲೋಭಿಯಾದ ಧನಿಕನ ಹಣ ನಾಯಿಯ ಹಾಲಿನ ಹಾಗೆ ಎಂದು ಈ ಪದ್ಯದಲ್ಲಿ ಸ್ಪಷ್ಟವಾಗಿ ಹಣದ ಗುಣ ನಿರ್ಣಯ ಮಾಡಿದ್ದಾರೆ.

**ಮಾನವತಿ ಸತಿ ದೊರಕುಟದಿ ಯೆಂತೊ ಯಕ್ಕುವ**
**ಚಂಡಾಸ್ತ್ರೀಲು ಬಹು ಶಾನ ಕಲರು ॥**

ಒಬ್ಬ ಪುರುಷನಿಗೆ ಮಾನವತಿಯಾದ ಒಳ್ಳೆಯ ಹೆಂಗಸು ಹೆಂಡತಿಯಾಗಿ ಸಿಗುವುದು ಹೆಚ್ಚಿನ ಸಂಗತಿ. ಏಕೆಂದರೆ ಅಂಥವರು ಬಹು ವಿರಳ. ಅಂಥವರು ಆ ಮನೆಯ ನಂದಾ ದೀಪವಿದ್ದಂತೆ. ಅವರು ಹುಟ್ಟಿದ ಮನೆಗೂ ಮೆಟ್ಟಿದ ಮನೆಗೂ ಕೀರ್ತಿ ತರುವಂಥವರು. ಆದರೆ ದುಷ್ಟ ಸ್ವಭಾವದ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಕಾಣ ಸಿಗುತ್ತಾರೆ. ಅಂಥವರು ಪ್ರವೇಶಿಸುವ ಸಂಸಾರಗಳಲ್ಲಿ ಶಾಂತಿ, ಸಂತಸ, ಸುಖಗಳಿರುವುದಿಲ್ಲ.

**ಪೂರ್ವಜಲ್ಮಮುನಾಟಿ ಪುಣ್ಯಪಾಪಮಂತ ।**
**ಅನುಭವಿಂಚಕ ತೀರದು ಅಜುನಕೈನ ॥**

ಬೋಧೆ ಗುರು, ಸಜ್ಜನ ಸಂಗ, ದಾನ ಗುಣದ ಶ್ರೀಮಂತಿಕೆ ಹಾಗೂ ಮಾನವತಿಯಾದ ಹೆಣ್ಣು ದೊರೆಯುವುದು ಪೂರ್ವಜನ್ಮದ ಫಲ ಸ್ವರೂಪ. ಪೂರ್ವಜನ್ಮದಲ್ಲಿ ಪುಣ್ಯ ಸಂಚಯನ ಮಾಡಿದ್ದರೇನೇ ಇವು ಲಭ್ಯ. ಪಾಪ ಕರ್ಮಗಳ ಕಾರಣ ಬಾಧೆ ಗುರು, ದುರ್ಜನ ಸಂಗ, ಲೋಭಿತ್ವದ ಶ್ರೀಮಂತಿಕೆ ಮತ್ತು ಕೆಟ್ಟ ಹೆಂಡತಿ ಸಿಗುವುದು ಪ್ರಾರಬ್ಧ. ಇದು ಕರ್ಮ ಸಿದ್ಧಾಂತ. ಸೃಷ್ಟಿಕರ್ತನಾದ ಬ್ರಹ್ಮನೇ ಆಗಿರಲಿ ಮಾಡಿದ ಕರ್ಮವನ್ನು ಅನುಭವಿಸಲೇಬೇಕು. ಇದು ತಾತಯ್ಯನವರ ಹಿತೋಪದೇಶ.

**(ಮುಂದುವರಿಯುವುದು)**

**ಬ್ಯಾಂಕ್ ಮೂಲಕ ಚಂದಾ ಹಣ ಸಲ್ಲಿಸಲು ಇಚ್ಛಿಸುವವರು ಈ ಎಸ್‌ಬಿ ಅಕೌಂಟ್‌ಗೆ ಕಳುಹಿಸಬಹುದು**

For Subscription - Bank Transfer / RTGS
**Sri Yogi Nareyana Study Centre**
**SB A/c No. 141201011016824**
MSRIT Branch,
**VIJAYA BANK,** Bangalore 560 054
**IFSC Code: VIJB0001412**
**MICR Code: 560029070**
After Transfer please inform to below mentioned Mobile No. 94480 85975

ಯೋಗ ವಾಸಿಷ್ಠ ಒಂದು ಮಹಾನ್ ಅಧ್ಯಾತ್ಮ ಗ್ರಂಥ. ಬೃಹತ್ತಾದುದು ಕೂಡ. ವಸಿಷ್ಠರು ಹಾಗೂ ಶ್ರೀರಾಮನ ನಡುವಿನ ಸಂಭಾಷಣೆಯ ರೂಪದಲ್ಲಿರುವ ಈ ಗ್ರಂಥ ಅಧ್ಯಾತ್ಮ ವಿದ್ಯೆಯ ಪಠ್ಯಪುಸ್ತಕದಂತಿದೆ. ಬಹು ಪ್ರಾಚೀನವಾದ ಈ ಗ್ರಂಥದ ವೈಶಿಷ್ಟ್ಯವಿರುವುದೇ ಗಹನವಾದ ವಿಚಾರವನ್ನು ತಿಳಿಸಲು ಉಪಕಥೆಗಳನ್ನು ಬಳಸಿಕೊಂಡಿರುವುದು. ವಿದುಷಿ ನಂ. ನಾಗಲಕ್ಷ್ಮಿಯವರು ಸರಳ ಭಾಷೆಯಲ್ಲಿ ಅದರಲ್ಲಿನ ಕಥೆಗಳನ್ನು 'ಮಲ್ಲಾರ' ಓದುಗರಿಗಾಗಿ ಪ್ರತಿ ಸಂಚಿಕೆಯಲ್ಲೂ ಪ್ರಸ್ತುತಪಡಿಸುತ್ತಾರೆ.



### ಆತ್ಮ ದರ್ಶನ

**ಪ್ರಾಪಂಚಿಕವಾದ ವಸ್ತುಗಳನ್ನು ಬಯಸುವುದೂ ಇದ್ದುದನ್ನು ಕಾಪಾಡಿಕೊಳ್ಳುವುದೂ ಬೇಡವಾದುದನ್ನು ನಾಶಪಡಿಸುವುದೂ ಲೌಕಿಕ ವಿಚಾರಗಳನ್ನು ನೋಡಿ ಆಶ್ಚರ್ಯಪಡುವುದೂ ಅವುಗಳನ್ನು ವೃದ್ಧಿ ಹೊಂದಿಸುವುದೂ ಇವೆಲ್ಲವೂ ಜ್ಞಾನಕ್ಕೆ ಇರುವ ಕಳಂಕಾ, ವಿಶಂಕಾ ಎಂಬ ಎರಡು ದೋಷಗಳಿಂದಲೇ ಆಗುವುದು. ಆ ಎರಡು ದೋಷಗಳು ನಾಶವಾದ ಮೇಲೆ ಯಾವ ಗೊಂದಲವೂ ಇರುವುದಿಲ್ಲ. ಇವು ನಾಶವಾಗಬೇಕಾದರೆ ಆತ್ಮ ದರ್ಶನದಿಂದಲೇ ಸಾಧ್ಯ.**


# ಬಲಿ ವಿಜ್ಞಾನ ಪ್ರಾಪ್ತಿ

"ಈ" ಬ್ರಹ್ಮಾಂಡದ ಒಂದು ದಿಕ್ಕಿನಲ್ಲಿ ಪಾತಾಳವೆಂಬುದು ವಿಖ್ಯಾತವಾದ ಒಂದು ಲೋಕ. ಅದಿರುವುದು ಭೂಮಿಯ ಕೆಳಗೆ. ಅಲ್ಲಿ ಒಂದು ಕಡೆ ದಾನವರು, ಇನ್ನೊಂದು ಕಡೆ ಆದಿಶೇಷನೇ ಮೊದಲಾದ ನಾಗಗಳು ಇರುವರು. ಅದೇ ಪಾತಾಳದಲ್ಲಿಯೇ ದೇವತೆಗಳಿಗೆ ಸಲ್ಲಬೇಕಾದ ಯಜ್ಞದ ಹವಿಸ್ಸನ್ನೆಲ್ಲ ಕಿತ್ತುಕೊಳ್ಳುವ ದಾನವೇಂದ್ರನೂ ಇರುವರು. ಅಂತಹ ಪಾತಾಳದಲ್ಲಿ ಅಸುರ ನಾಯಕರ ಸಾಮ್ರಾಜ್ಯದ ಪ್ರಸಿದ್ಧ ರಾಜನಾಗಿದ್ದ ವಿರೋಚನನ ಮಗನಾದ ಬಲೀಂದ್ರನು ವಾಸವಾಗಿದ್ದನು. ಆ ಬಲೀಂದ್ರನು ಮಹಾಧರ್ಮಾತ್ಮನಾಗಿದ್ದು ಶ್ರೀಹರಿಯ ಪರಮಭಕ್ತನೂ ಆಗಿದ್ದುದರಿಂದ ಅವನ ಕೃಪೆಗೆ ಪಾತ್ರನಾಗಿದ್ದನು. ದೇವಾನುದೇವತೆಗಳೆಲ್ಲರೂ (ಸುರರು, ವಿದ್ಯಾಧರರು, ನಾಗರು ಮೊದಲಾಗಿ) ಅವನ ಪಾದಸೇವೆಯಲ್ಲಿಯೇ ತೊಡಗಿರಬೇಕಾಗಿತ್ತು.

ಬಲೀಂದ್ರ ಮಹಾರಾಜನು ಮಹಾ ಪರಾಕ್ರಮಶಾಲಿಯಾಗಿದ್ದನು. ಅವನ ಹೆಸರು ಕೇಳುತ್ತಿದ್ದಂತೆಯೇ ಎಲ್ಲರೂ ತಲ್ಲಣಗೊಳ್ಳುತ್ತಿದ್ದರು. ಆತನು ಅಶ್ವಮೇಧಯಾಗವನ್ನೂ ಆಚರಿಸಿದ್ದು ತನ್ನ ಪ್ರತಾಪವನ್ನು ದಶ ದಿಕ್ಕುಗಳಿಗೂ ಪಸರಿಸಿದ್ದನು. ಹೀಗೆ ಸಮಸ್ತ ರಾಜ ಮಹಾರಾಜರೆಲ್ಲರನ್ನೂ ಜಯಿಸಿದ ಆ ಮಹಾವೀರ, ದೈತ್ಯೇಂದ್ರನು ಹತ್ತು ಕೋಟಿ ವರ್ಷಗಳ ಕಾಲ ತನ್ನ ಆಡಳಿತವನ್ನು ನಡೆಸಿದನು. ಅವನ ಜೀವಿತಾವಧಿಯಲ್ಲಿ ಅದೆಷ್ಟೋ ಯುಗಗಳು ಕಳೆದುಹೋದುವು. ಅದೆಷ್ಟೋ ಸುರಾಸುರರ ಗುಂಪುಗಳು ಸಂದು ಹೋದುವು.

ಹೀಗೆ ಒಂದೇ ಸಮನಾಗಿ ಅತಿ ಭೋಗಗಳನ್ನು ಭೋಗಿಸಿ, ತ್ರಿಲೋಕಗಳಲ್ಲಿಯೂ ಅನೇಕ ಬಗೆಗಳಲ್ಲಿ ಸುಖ ಪರಂಪರೆಗಳನ್ನೇ ಅನುಭವಿಸುತ್ತ, ಅನುಭವಿಸುತ್ತ ಆ ದಾನವ ಚಕ್ರವರ್ತಿಗೆ ಅವೆಲ್ಲದರ ಬಗ್ಗೆಯೂ ವೈರಾಗ್ಯವುಂಟಾಯಿತು. ಭೋಗ ವಿಮುಖನಾದ ಬಲೀಂದ್ರನು ಒಂದು ಬಾರಿ ಮೇರು ಶಿಖರದಲ್ಲಿದ್ದ ತನ್ನ ಅರಮನೆಯಲ್ಲಿ ರತ್ನಖಚಿತವಾದ ಆಸನವೊಂದರಲ್ಲಿ ಕುಳಿತು 'ಸಂಸಾರ'ದ ಮಹತ್ತ್ವವೇನೆಂಬುದನ್ನು ಕುರಿತು ಚಿಂತಿಸತೊಡಗಿದನು.

"ನಾನು ಹೀಗೆ ನನ್ನ ಶಕ್ತಿಯು ಕ್ಷೀಣವಾಗದಂತೆ ಕಾಪಾಡಿಕೊಂಡು, ಈ ಮೂರು ಲೋಕಗಳ ಸಾಮ್ರಾಜ್ಯವನ್ನು ಎಲ್ಲಿಯವರೆಗೆ ನಿರ್ವಹಿಸಬೇಕು? ಈ ಲೋಕಗಳಲ್ಲಿಯೇ ಹೀಗೆ ಇನ್ನೆಷ್ಟು ಕಾಲ ಕಳೆಯುತ್ತಿರಬೇಕು? ನನ್ನ ರಾಜ್ಯವು ವಿಸ್ತಾರವಾಗಿರುವುದೇನೋ ನಿಜ. ಇದರಲ್ಲಿ ಬೇಕು ಬೇಕಾದ ಹಾಗೆ ಮನೋಹರವೂ ಆಕರ್ಷಕವೂ ಆದ ಭೋಗಗಳು



ತುಂಬಿರುವುದೂ ನಿಜವೆ. ಈ ಸಂಪದ್ಭರಿತವಾದ ರಾಜ್ಯವನ್ನು ನೋಡಿ ಮೂರು ಲೋಕಗಳೂ ಬೆರಗಾಗುತ್ತಿರುವುದೂ ನಿಜ. ಆದರೆ, ಇಷ್ಟೆಲ್ಲ ವೈಭವದ, ಸುಖದ ಫಲವೇನು? ಇವೆಲ್ಲ ಭೋಗಗಳೂ ಎಂದಾದರೂ ಒಂದು ದಿನ ನಾಶವಾಗುತ್ತದಲ್ಲವೆ? ಅಂದರೆ, ಈ ರಾಜ್ಯಸುಖವೆಲ್ಲ ಕೇವಲ ಭೋಗಕ್ಕೆ ಮಾತ್ರ ಸೀಮಿತವಾಗಿರುತ್ತದೆ. ಇಂತಹ ರಾಜ್ಯವನ್ನು ಅನುಭವಿಸುವುದರಿಂದ ಏನು ಪ್ರಯೋಜನ? ತೃಪ್ತಿ ಎಂಬುದು ಯಾವಾಗ ಸಿಕ್ಕುತ್ತದೆ? ಮಾಡಿದ್ದನ್ನೇ ಮತ್ತೆ ಮತ್ತೆ ಮಾಡುತ್ತಿರುವುದರಲ್ಲಿ ಯಾವ ಅರ್ಥವಿರುತ್ತದೆ? ರಾತ್ರಿ, ಹಗಲು ಪುನರಾವೃತ್ತಿಯಾಗುವಂತೆ ನಮ್ಮ ಸುಖದ ಚಟುವಟಿಕೆಗಳು ಕೂಡ ಪುನರಾವೃತ್ತಿಯಾಗುತ್ತಲೇ ಇರುತ್ತವೆ. ಇದನ್ನೇ ಬಯಸುವುದು ಜ್ಞಾನಿಯಾದವನಿಗೆ ಸರಿಯೆ? ಹಾಗೆ ಮಾಡುವುದು ಪ್ರಾಜ್ಞನಾದವನಿಗೆ ನಾಚಿಕೆ ತರುವಂತಹುದಲ್ಲವೆ? ನೀರು ಒಮ್ಮೆ ತರಂಗವಾಗಿ, ಮತ್ತೆ ಜಲವಾಗಿ, ಮತ್ತೆ ಮತ್ತೆ ತರಂಗ ಹಾಗೂ ಜಲವಾಗುವ ಪ್ರಕ್ರಿಯೆ ಮುಂದುವರಿಯುತ್ತಿರುವಂತೆ ಜನರು ಮಾಡಿದ ಕೆಲಸಗಳನ್ನೇ ಮತ್ತೆ ಮತ್ತೆ ಮಾಡುವರಲ್ಲವೆ? ಇದು ನಿಜವಾಗಿಯೂ ಮಕ್ಕಳಾಟದಂತಲ್ಲವೆ? ಮಾಡಿದ ಕೆಲಸವನ್ನೇ ಮತ್ತೆ ಮಾಡಲೇಬೇಕಾಗಿದ್ದರೆ ಹಾಗೆ ಮಾಡಿದರ ಪರಮೋದ್ದೇಶವಾದರೂ ಏನು? ಮತ್ತೆ ಆ ಕೆಲಸವನ್ನು ಇನ್ನು ಮಾಡಬೇಕಾಗಿಲ್ಲವೆಂದರೆ ಮತ್ತೇನು ಮಾಡಬೇಕು? ನಿಜವಾಗಿ ನೋಡಿದರೆ ಇದು ನಿಸ್ಸಾರವೆನಿಸುತ್ತಿದೆ. ಇದು ವ್ಯರ್ಥವಾದುದು. ಹೀಗೆ ನಶ್ವರವಾದ ಈ ಭೋಗಗಳನ್ನು ಬಿಟ್ಟರೆ ಶಾಶ್ವತವಾದ, ಭವ್ಯವಾದ ಕಾರ್ಯವೆಂದರೆ ಯಾವುದು?"

ಹೀಗೆ ಬಹುಕಾಲ ಚಿಂತಿಸುತ್ತಿದ್ದ ಬಲೀಂದ್ರನಿಗೆ ಹಿಂದೆ ಒಮ್ಮೆ ತಾನು ಅದೇ ಪ್ರಶ್ನೆಯನ್ನು ತಂದೆಯಾದ ವಿರೋಚನನಿಗೆ ಕೇಳಿದ್ದು ನೆನಪಾಯಿತು. "ಸಕಲ ದುಃಖಗಳಿಗೂ, ಸಕಲ ಸುಖಗಳಿಗೂ ಅವಧಿ ಯಾವುದು? ಈ ಸಂಸಾರದ ವ್ಯವಹಾರವೆಲ್ಲವೂ ಎಲ್ಲಿ ಮುಗಿಯುತ್ತದೆ? ಮನಸ್ಸಿನ ಆಶೆಗಳೆಲ್ಲವೂ ಯಾವಾಗ ಕೊನೆಗಾಣುತ್ತವೆ? ಶಾಶ್ವತವಾದ ಅಂದರೆ ಅಖಂಡವಾದ ವಿಶ್ರಾಂತಿಯು ಎಲ್ಲಿ ದೊರೆಯುತ್ತದೆ? ಯಾವುದನ್ನು ಹೊಂದಿದರೆ, ಎಲ್ಲದರಿಂದಲೂ ಹೊಂದಬಹುದಾದ ತೃಪ್ತಿಯೆಲ್ಲವನ್ನೂ ಪಡೆಯಲಾಗುತ್ತದೆ? ಏನನ್ನು ನೋಡಿದರೆ, ಇನ್ನು ಯಾವುದನ್ನೂ ಪಡೆಯಲಾಗುತ್ತದೆ? ಏನನ್ನು ನೋಡಿದರೆ, ಇನ್ನು ಯಾವುದನ್ನೂ ದರ್ಶನ ಮಾಡಬೇಕಾಗಿಲ್ಲ ಎನ್ನಿಸುತ್ತದೆ? ಅದನ್ನು ನನಗೆ ತಿಳಿಸು ತಂದೆ?" ಎಂದು ಕೇಳಿದ್ದನು. ಆಗ ಮಹಾಜ್ಞಾನಿಯಾಗಿದ್ದ ವಿರೋಚನನು ಹೀಗೆಂದು ಉತ್ತರಿಸಿದ್ದನು.


"ಪುತ್ರನೆ, ಸುಂದರವಾದುದೂ ಆನಂದದಾಯಕವಾದುದೂ ಆದ ಲೋಕವೊಂದಿದ್ದರೆ ಅಲ್ಲಿ ನೆಲೆಯಾಗಿ ನಿಂತು ಚಿರವಿಶ್ರಾಂತಿಯನ್ನು ಪಡೆಯುವುದಕ್ಕೆ ನೀನು ಬಯಸುತ್ತಿದ್ದೀಯಲ್ಲವೆ? ಈಗ ನಾನು ಹೇಳುವುದನ್ನು ಏಕಾಗ್ರಚಿತ್ತನಾಗಿ ಆಲಿಸು, ಬಹಳ ವಿಸ್ತಾರವಾದ ಒಂದು ದೇಶವಿರುವುದು. ಆ ದೇಶದಲ್ಲಿ ಸಮುದ್ರ, ಸಾಗರ, ಪರ್ವತ, ವನ, ನದಿ, ಸರೋವರಗಳಾವುವೂ ಇಲ್ಲ. ಭೂಮಿ, ಆಕಾಶವಿಲ್ಲ, ಸೂರ್ಯ, ಚಂದ್ರ, ಗಾಳಿ, ದೇವತೆಗಳು, ದಾನವರು, ಯಾರೂ ಇರುವುದಿಲ್ಲ. ಅಲ್ಲಿ ಮಹಾತೇಜಸ್ವಿಯಾದ ಒಬ್ಬ ವ್ಯಕ್ತಿ ಇರುವನು. ಅವನೇ ಅಲ್ಲಿನ ರಾಜ. ಅವನು ಎಲ್ಲೆಲ್ಲಿಯೂ ಇರುವನು. ಆದರೆ ಅವನೇನೂ ಮಾಡುವುದಿಲ್ಲ. ಅವನು ಸಂಕಲ್ಪಬಲದಿಂದ ಆ ಪ್ರದೇಶದಲ್ಲಿ ಒಬ್ಬ ಮಂತ್ರಿಯಿರುವನು. ಅವನೇ ಎಲ್ಲ ಕ್ರಿಯೆಗಳನ್ನೂ ಮಾಡುವವನಾಗಿರುವನು. ಅಂದರೆ ರಾಜನಿಂದ ಆಗಬೇಕಾದ ಎಲ್ಲ ಕಾರ್ಯಗಳನ್ನೂ ಆ ಮಂತ್ರಿಯೇ ಮಾಡುವನು."

ತಂದೆಯ ಮಾತುಗಳನ್ನು ಕೇಳಿ ಕುತೂಹಲ ಕೆರಳಿದ ಬಲೀಂದ್ರನು ಮತ್ತೆ ಪ್ರಶ್ನಿಸಿದ್ದನು. "ತಂದೆಯೇ ಲೌಕಿಕವಾದ ಯಾವ ಜಂಜಾಟಗಳೂ ಇಲ್ಲದ ಆ ದೇಶ ಯಾವುದು? ಅಲ್ಲಿಗೆ ಹೋಗುವುದು ಹೇಗೆ? ಇದುವರೆಗೆ ಯಾರಾದರೂ ಅಲ್ಲಿಗೆ ಹೋಗಿದ್ದುದುಂಟೆ? ಆ ಬಲಶಾಲಿಯಾದ ರಾಜನಾರು? ಅವನಿಗೆ ಆಪ್ತನಾಗಿರುವ ಆ ಮಂತ್ರಿ ಯಾರು? ತನ್ನ ಚಟುವಟಿಕೆಯಿಂದ ಜಗಜ್ಜಾಲಗಳನ್ನೆಲ್ಲ ಗೆದ್ದಿರುವ ನಮ್ಮಂತಹ ವೀರರೂ ಅವರನ್ನು ಇದುವರೆಗೆ ಗೆದ್ದಿಲ್ಲವೆಂದಮೇಲೆ ಅವನ ಬಲವೆಂತಹುದು? ನೀನು ಹೇಳುತ್ತಿರುವ ಸಂಗತಿಯು ಬಹಳ ವಿಚಿತ್ರವಾಗಿದೆ. ನನಗೆ ವಿವರವಾಗಿ ಇದನ್ನು ತಿಳಿಸು." ವಿರೋಚನನು ಉತ್ತರಿಸಿದ್ದನು, "ಮಗನೆ, ಆ ಮಂತ್ರಿಯು ಮಹಾಬಲಾಢ್ಯನು. ದೇವಾಸುರ ಗಣಗಳೆಲ್ಲವೂ ಸೇರಿ, ಲಕ್ಷಾಂತರ ಸಂಖ್ಯೆಯಲ್ಲಿ ಸೇರಿ ಹೋರಾಡಿದರೂ ಅವನನ್ನು ಯಾರೂ ಏನೂ ಮಾಡಲಾರರು. ಯಾವ ಅಸ್ತ್ರ, ಶಸ್ತ್ರಗಳೂ ಎಂತಹ ಪರಾಕ್ರಮಿಗಳೂ ಅವನಿಗೆ ಏನು ಮಾಡಲಾರರು. ಆದ್ದರಿಂದ ದೇವಾಸುರರೆಲ್ಲರೂ ಯಾವಾಗಲೂ ಅವನಿಗೆ ವಶವಾಗಿಯೇ ಇರುವರು. ಅವನೇನು ಮಹಾವಿಷ್ಣುವಲ್ಲ, ಆದರೆ ಹಿರಣ್ಯಾಕ್ಷನೇ ಮೊದಲಾದ ಸುರೇಂದ್ರರನ್ನೆಲ್ಲ ಸಂಹರಿಸಿಬಿಟ್ಟಿರುವನು, ಅಷ್ಟೇ ಅಲ್ಲ ಅವನ ಪ್ರಸಾದದಿಂದಲೇ ಮನ್ಮಥನು ಐದೇ ಬಾಣವುಳ್ಳವನಾದರೂ ಮೂರು ಲೋಕಗಳನ್ನೂ ಆಕ್ರಮಿಸಿಕೊಂಡು ಚಕ್ರವರ್ತಿಯಂತೆ ಮೆರೆಯುತ್ತಿರುವನು. ದೇವಾಸುರರ ಯುದ್ಧವು ಮತ್ತೆ ಮತ್ತೆ ನಡೆಯುತ್ತಿರುವುದರಲ್ಲಿಯೂ ಅವನ ಕೈವಾಡವೇ ಇರುತ್ತದೆ. ಅಂತಹ ಬಲಿಷ್ಠನಾದ ಮಂತ್ರಿಯನ್ನು ಅವನನ್ನು ಹುಟ್ಟಿಸಿದ ರಾಜನು ಮಾತ್ರ ಗೆಲ್ಲುವುದಕ್ಕೆ ಸಾಧ್ಯ. ಮತ್ತೆ ಯಾರಿಂದಲೂ ಸಾಧ್ಯವಿಲ್ಲ. ಅದೂ ಆ ಪ್ರಭುವಿಗೆ ತಾನಾಗಿ ಆ ಮಂತ್ರಿಯನ್ನು ಗೆಲ್ಲಬೇಕೆಂದು ಎನ್ನಿಸಿದಾಗ ಮಾತ್ರವೇ ಆ ಮಂತ್ರಿಯು ಯಾವ ವಿರೋಧವೂ ಇಲ್ಲದೆ ಪರಾಜಿತನಾಗುವನು. ನಿನ್ನನ್ನು ವ ಹಾವೀರನೆಂದುಕೊಂಡಿದ್ದೀಯಲ್ಲವೆ? ಆ ಮಂತ್ರಿಯನ್ನು ಗೆಲ್ಲಲು ನಿನಗೆ ಸಾಧ್ಯವಾದರೆ, ನಿಜವಾಗಿಯೂ ನೀನು ಪರಾಕ್ರಮಶಾಲಿಯೆನಿಸುವೆ. ಅವನೊಬ್ಬನನ್ನು ಗೆದ್ದರೂ ಈ ಲೋಕಗಳನ್ನೆಲ್ಲ ಗೆಲ್ಲದಿದ್ದರೂ ಗೆದ್ದಂತೆಯೇ. ಅವನನ್ನು ಗೆಲ್ಲದೆ ಲೋಕಗಳನ್ನೆಲ್ಲ ಗೆದ್ದರೂ ಅವು ಯಾರನ್ನೂ ಗೆಲ್ಲದಿದ್ದಂತೆಯೇ. ಅದರಿಂದ, ನೀನು ಮೋಹ ಶೂನ್ಯನಾಗಿ, ಸ್ಥಿರವಾಗಿರುವ ನಿನ್ನ ಬುದ್ಧಿಯಿಂದ ಅವನನ್ನು ಗೆಲ್ಲಬಲ್ಲೆಯಾದರೆ ಆಗ ನೀನು ಧೀರ ಎನಿಸಿಕೊಳ್ಳುವೆ. ಅನಂತವಾದ ಸಿದ್ಧಿಗಳಾಗಲೆಂದು, ಶಾಶ್ವತವಾದ ಸುಖ ಬೇಕೆಂದು ಕೇಳುತ್ತಿರುವ ನೀನು ಎಷ್ಟೇ ಕಷ್ಟವಾದರೂ ಬಿಡದೆ ಅವನನ್ನು ಜಯಿಸಲು ಪ್ರಯತ್ನ ಮಾಡು."

ಆಗ, ಮತ್ತಷ್ಟು ಉತ್ಸಾಹದಿಂದ ಬಲೀಂದ್ರನು ತಂದೆಯನ್ನು ಕೇಳಿದನು, "ತಂದೆಯೇ? ಮಹಾಬಲಶಾಲಿಯಾದ ಆ ಮಂತ್ರಿಯನ್ನು ಗೆಲ್ಲುವುದಾದರೂ ಹೇಗೆ? ಆ ಮಹಾ ಪರಾಕ್ರಮಿಯು ಯಾರು? ದಯವಿಟ್ಟು ನನಗೆ ತಿಳಿಸು."

(ಮುಂದುವರಿಯುವುದು)

ನಂ. ೨೫೮, ೧೭ನೇ 'ಬಿ' ಕ್ರಾಸ್, ೧ನೇ 'ಬಿ' ಮುಖ್ಯರಸ್ತೆ,
ಮಹಾಲಕ್ಷ್ಮಿಪುರಂ, ಬೆಂಗಳೂರು-೫೬೦ ೦೮೬.




# ಪ್ರಾಚೀನ ಭಾರತದ ಮಹರ್ಷಿಗಳು–೧೬

## ಅತ್ರಿ

ಡಾ. ಎಸ್. ಹೇಮಲತಾ.



ವೈದಿಕ ಸಾಹಿತ್ಯದಲ್ಲಿ ಅತ್ರಿ ಮಹರ್ಷಿಗಳ ಸ್ಥಾನ ಬಹಳ ಹಿರಿದಾದುದು. ಅವರು ಬ್ರಹ್ಮನ ಮಾನಸಪುತ್ರರಲ್ಲಿ ಒಬ್ಬರು. ಮೊದಲನೆಯದಾದ ಸ್ವಾಯಂಭುವ ಮನ್ವಂತರದ ಸಪ್ತರ್ಷಿಗಳಲ್ಲಿ ಇವರೂ ಒಬ್ಬರಾಗಿದ್ದಾರೆ. ಈಗ ನಡೆಯುತ್ತಿರುವ ವೈವಸ್ವತ ಮನ್ವಂತರದಲ್ಲಿಯೂ ಸಪ್ತರ್ಷಿ ಮಂಡಲದಲ್ಲಿಯೂ ಇವರಿಗೆ ಪ್ರಥಮ ಸ್ಥಾನ. ಪ್ರಜಾಪತಿಗಳ ಸಾಲಿನಲ್ಲಿಯೂ ಅತ್ರಿಗಳ ಸ್ಥಾನ ಮಹತ್ತ್ವದ್ದು. ಇವರು ಮಂತ್ರದ್ರಷ್ಟಾರರು. ಋಗ್ವೇದದ ಐದನೆಯ ಮಂಡಲದಲ್ಲಿ ಇವರ ಮಂತ್ರಗಳು ಉಕ್ತವಾಗಿವೆ. ಹತ್ತನೆಯ ಮಂಡಲದಲ್ಲಿಯೂ ಇವರ ಮತ್ತು ಇವರ ವಂಶದವರಾದ ಆತ್ರೇಯರ ಹೆಸರುಗಳು ಕಂಡುಬರುತ್ತವೆ. ಅತ್ರಿಗಳಿಂದ ಪ್ರವೃತ್ತವಾದ ಗೋತ್ರವೇ ಆತ್ರೇಯ ಗೋತ್ರ.



ಚಂದ್ರನು ಅತ್ರಿ ಮಹರ್ಷಿಗಳ ಪುತ್ರನೆಂದು ಹೇಳುತ್ತಾರೆ. ಹರಿವಂಶದಲ್ಲಿ ಈ ರೀತಿ ಹೇಳಲ್ಪಟ್ಟಿದೆ: ಪ್ರಾಚೀನ ಕಾಲದಲ್ಲಿ ಬ್ರಹ್ಮನು ಸೃಷ್ಟಿಯನ್ನು ಸಂಕಲ್ಪಿಸಿದನು. ಆಗ ಅವನ ಮನಸ್ಸಿನಿಂದ ಅತ್ರಿಯೇ ಮುಂತಾದ ಮಹರ್ಷಿಗಳ ಜನ್ಮವಾಯಿತು. ಬ್ರಹ್ಮನು ತನ್ನ ಮಾನಸಪುತ್ರರಿಗೆ ಸೃಷ್ಟಿಕಾರ್ಯದಲ್ಲಿನೆರವಾಗುವಂತೆಆಣತಿಯಿತ್ತನು. ಕಠೋರ ವ್ರತನಿಷ್ಠರೂ ಧರ್ಮಾತ್ಮರೂ ಮಹಾತೇಜಸ್ವಿಗಳೂ ಆದ ಅತ್ರಿ ಮಹರ್ಷಿಗಳು ಮೂರು ಸಾವಿರ ದೇವವರ್ಷಗಳ ಕಾಲ, ಕೈಗಳನ್ನು ಮೇಲಕ್ಕೆತ್ತಿಕೊಂಡು, ಕಲ್ಲಿನಂತೆ ನಿಶ್ಚಲರಾಗಿ ನಿಂತು, 'ಅನುತ್ತರ' ಎಂಬ ಹೆಸರಿನ ಸರ್ವೋತ್ಕೃಷ್ಟ ಮಹಾತಪಸ್ಸನ್ನು ಮಾಡಿದರು. ಅವರು ರೆಪ್ಪೆಗಳನ್ನು ಕೂಡ ಆಡಿಸದೇ ಶಾಂತಮನದಿಂದ ತಪಸ್ಸನ್ನು ಮಾಡುತ್ತಿದ್ದರು. ಶುದ್ಧಾಂತಃಕರಣರಾದ ಮುನಿಯ ಕಣ್ಣುಗಳಿಂದ ತೇಜಸ್ಸು ಜಲರೂಪದಲ್ಲಿ ಹೊಮ್ಮತೊಡಗಿತು. ಅದು ಹತ್ತು ದಿಕ್ಕುಗಳಿಗೂ ಹರಡಿತು. ಓಷಧೀಲತೆಗಳ ಮೂಲಕವಾಗಿ ಎಲ್ಲ ಜನರಿಗೂ ಪುಷ್ಟಿಯನ್ನುಂಟುಮಾಡಬಲ್ಲ ಶೀತಕಿರಣಗಳಿಂದ ಕೂಡಿದ ಈ ತೇಜಸ್ಸನ್ನು ಲೋಕಪಿತಾಮಹನಾದ ಬ್ರಹ್ಮನು ಒಂದುಗೂಡಿಸಿ ಒಂದು ರಥದಲ್ಲಿ ಕುಳ್ಳಿರಿಸಿದನು. ಈ ರಥವು ವೇದಮಯವಾಗಿದ್ದು, ಧರ್ಮಸ್ವರೂಪವೂ ಸತ್ಯದಿಂದ ನಿಯಂತ್ರಿಸಲ್ಪಡುವಂತಹುದೂ ಆಗಿದ್ದಿತು. ಬ್ರಹ್ಮನ ಮಾನಸಪುತ್ರರೂ ಭೃಗುವೇ ಮುಂತಾದ ಮಹರ್ಷಿಗಳೂ ವೇದಮಂತ್ರಗಳಿಂದ ಸೋಮನನ್ನು ಸ್ತೋತ್ರ ಮಾಡಿದರು. ಹೀಗೆ ಚಂದ್ರನು ಅತ್ರಿ ಮುನಿಗಳ ತಪಃಪ್ರಭಾವದಿಂದ ಜನಿಸಿ, ಬೀಜಗಳಿಗೂ ಔಷಧಿಗಳಿಗೂ ಬ್ರಾಹ್ಮಣರಿಗೂ ಮತ್ತು ನೀರಿಗೂ ರಾಜನಾಗಿ ಅಭಿಷಿಕ್ತನಾದನು. ಅನಂತರ ರಾಜನಾದ ಸೋಮನು ತಂದೆಯಾದ ಅತ್ರಿಯನ್ನೇ ಹೋತೃವನ್ನಾಗಿಸಿಕೊಂಡು ರಾಜಸೂಯ ಯಾಗವನ್ನು ಮಾಡಿದನು. ಚಂದ್ರನ ವಂಶವು ಮುಂದೆ ಅಭಿವೃದ್ಧಿಯನ್ನು ಪಡೆಯಿತು. ಇದರ ಮೂಲಪುರುಷರು ಅತ್ರಿ ಮಹರ್ಷಿ.

ಚಂದ್ರನ ಉತ್ಪತ್ತಿಗೆ ಕಾರಣರಾದಂತೆಯೇ ಅತ್ರಿ ಮಹರ್ಷಿಗಳು ಸೂರ್ಯನ ರಕ್ಷಣೆಗೂ ಮುಂದಾದರು. ಗ್ರಹಣಕಾಲದಲ್ಲಿ ಸೂರ್ಯನನ್ನು ರಾಹುವು ಆಕ್ರಮಿಸುತ್ತಾನೆಂಬುದು ಪೌರಾಣಿಕ ಸಂಗತಿ. ಈ ಸಂದರ್ಭದಲ್ಲಿ ಸೂರ್ಯನಿಗೆ ತನ್ನನ್ನು ರಕ್ಷಣೆ ಮಾಡಿಕೊಳ್ಳಲು ಬೇಕಾದ ಸಾಮರ್ಥ್ಯವನ್ನು ಒದಗಿಸುವುವು ವೇದಮಂತ್ರಗಳು. ಇಂತಹ ಮೂರು ಮಂತ್ರಗಳು ಋಗ್ವೇದದಲ್ಲಿದ್ದುವಂತೆ. ಅತ್ರಿ ಮಹರ್ಷಿಗಳು ಇನ್ನೂ ಶಕ್ತಿಶಾಲಿಯಾದ ನಾಲ್ಕನೆಯ ವಿಶೇಷ ಸ್ತೋತ್ರವನ್ನು ಸೂರ್ಯನಿಗಾಗಿ ರಚನೆ ಮಾಡಿದರು.

ವೇದಮಂತ್ರಗಳ ದ್ರಷ್ಟಾರರೂ ವೇದವಿದರೂ ಆದ ಅತ್ರಿ ಮಹರ್ಷಿಗಳಿಗೆ ಅಂದಿನ ಸಮಾಜದಲ್ಲಿ ವಿಶೇಷವಾದ ಗೌರವವಿತ್ತು. ಪಂಚಜನರೆಂಬ ಒಂದು ಪಂಗಡದವರಿಗೆ ಅವರು ಕುಲಪುರೋಹಿತರಾಗಿದ್ದರೆಂದು ಹೇಳುತ್ತಾರೆ. ಅಸುರರು ಇವರನ್ನು ಅನೇಕ ಸಲ ಪೀಡಿಸಿದ್ದುಂಟು. ಹೀಗೆ ಹಿಂಸೆಗೊಳಗಾದಾಗಲೆಲ್ಲ ಅಶ್ವಿನೀದೇವತೆಗಳನ್ನು ಸ್ತೋತ್ರಮಾಡಿ, ಅದರಿಂದ ಪಾರಾದರೆಂದು ಒಂದು ಕಥೆ ಹೇಳುತ್ತದೆ.

ಅತ್ರಿ ಮಹರ್ಷಿಗಳ ಮಡದಿ, ಕರ್ದಮ ಪ್ರಜಾಪತಿಯ ಮಗಳಾದ ಅನಸೂಯೆ ಎಂಬುವಳು. ಈಕೆ ಪತಿವ್ರತೆಯರಲ್ಲಿ ಅತ್ಯಂತ ಪ್ರಖ್ಯಾತಳು. ಇವರ ಸಾನ್ನಿಧ್ಯದಿಂದ ಅತ್ರಿ ಮಹರ್ಷಿಗಳ ಆಶ್ರಮ ಅತಿಥಿ ಅಭಾಗ್ಯತರಿಗೆ ನೆಲೆವೀಡಾಗಿತ್ತು. ಯಾವ ಸಮಯದಲ್ಲಿ ಬಂದರೂ ಅತಿಥಿಗಳಿಗೆ ಅವರ ಇಚ್ಛಾನುಸಾರ ಭೋಜನಾದಿಗಳು ದೊರೆಯುವುದೆಂದು ಅವರ ಆಶ್ರಮವು ಹೆಸರುವಾಸಿಯಾಗಿತ್ತು. ಅತ್ರಿಗಳ ತಪೋಶಕ್ತಿ ಮತ್ತು ಅನಸೂಯೆಯ ಪಾತಿವ್ರತ್ಯಗಳ ಸಂಮಿಲನದಿಂದ ಈ ಆಶ್ರಮವು ವಿಶೇಷ ಶೋಭೆಯನ್ನು ಪಡೆದಿತ್ತು. ದೇವತೆಗಳೂ ಕೂಡ ಇವರ ಆಜ್ಞಾನುವರ್ತಿಗಳಾಗಿದ್ದರು.

ಒಂದು ಸಲ ಬ್ರಹ್ಮ–ವಿಷ್ಣು–ಮಹೇಶ್ವರರು ಅನಸೂಯೆಯನ್ನು ಪರೀಕ್ಷಿಸಲು ಬಂದರು. ಆಗ ಅತ್ರಿಗಳು ಆಶ್ರಯದಲ್ಲಿರಲಿಲ್ಲ. ಬಂದವರನ್ನು ಅನಸೂಯೆಯೇ ಸ್ವಾಗತಿಸಿ ಅರ್ಘ್ಯಪಾದ್ಯಾದಿಗಳನ್ನು ಕೊಟ್ಟು ಭೋಜನಕ್ಕೆ ಆಹ್ವಾನಿಸಿದಳು. ಅತಿಥಿಗಳನ್ನು ತನ್ನ ಮಕ್ಕಳೆಂದು ಭಾವಿಸಿ, ಅವರಿಗೆ ಆತಿಥ್ಯವನ್ನು ನೀಡಿ, ಅವರ

ಪರೀಕ್ಷೆಯಲ್ಲಿ ಗೆದ್ದಳು. ಅವಳ ಮನಸ್ಸಿನ ಭಾವನೆಯಂತೆಯೇ ಮೂವರೂ ಅನಸೂಯೆಯ ಪುತ್ರರಾದರು. ಬ್ರಹ್ಮನ ಅಂಶದಿಂದ ಚಂದ್ರನೂ ವಿಷ್ಣುವಿನ ಅಂಶದಿಂದ ದತ್ತನೂ ಮಹೇಶ್ವರನಿಂದ ದುರ್ವಾಸರೂ ಅತ್ರಿಯ ಪುತ್ರರಾದರು. ಅನುಷ್ಠಾನವನ್ನು ಮುಗಿಸಿ ಮನೆಗೆ ಬಂದ ಮಹರ್ಷಿಗಳು, ತಮ್ಮ ತಪಃಪ್ರಭಾವದಿಂದ ಎಲ್ಲ ವಿಷಯವನ್ನೂ ತಿಳಿದು ತ್ರಿಮೂರ್ತಿಗಳನ್ನು ಮಕ್ಕಳಾಗಿ ಪಡೆದ ಅನಸೂಯೆಯನ್ನು ಅಭಿನಂದಿಸಿದರು.

ಶ್ರೀರಾಮನು ವನವಾಸದಲ್ಲಿದ್ದಾಗ ಅತ್ರಿ ಮಹರ್ಷಿಗಳ ಆಶ್ರಮವನ್ನು ಸಂದರ್ಶಿಸುತ್ತಾನೆ. ಅಷ್ಟು ಹೊತ್ತಿಗೆ ಅತ್ರಿ ದಂಪತಿ ವೃದ್ಧರಾಗಿದ್ದರು. ಅವರು ರಾಮನನ್ನು ಸ್ವಾಗತಿಸಿ, ಪೂಜಿಸಿ ಸಂತೋಷಪಟ್ಟರು. ಅನಸೂಯೆಯು ಸೀತೆಗೆ ತನ್ನ ಆಭರಣಗಳನ್ನೆಲ್ಲ ತೊಡಿಸಿ, ಅಲಂಕರಿಸಿ ಆನಂದಿಸುತ್ತಾಳೆ. ಪಾತಿವ್ರತ್ಯದ ಮಹಾತ್ಮ್ಯವನ್ನು ಸೀತೆಗೆ ತಿಳಿಸಿಕೊಡುತ್ತಾಳೆ. ಮಹಾಭಾರತದಲ್ಲಿಯೂ ಅತ್ರಿ–ನಾರದರ ಸಂವಾದವೇ ಮುಂತಾದ ಹಲವಾರು ಭಾಗಗಳಲ್ಲಿ ಇವರ ಹೆಸರು ಕಂಡುಬರುತ್ತದೆ.

ಅತ್ರಿ ಮಹರ್ಷಿಗಳು ಸ್ಮೃತಿಕಾರರೂ ಆಗಿದ್ದರು. ಅವರು ರಚಿಸಿದ 'ಆತ್ರೇಯ ಧರ್ಮಶಾಸ್ತ್ರ'ವು ಒಂಬತ್ತು ಅಧ್ಯಾಯಗಳ ಗ್ರಂಥ. ಇದರಲ್ಲಿ ದಾನ, ಜಪ ಮತ್ತು ತಪಸ್ಸುಗಳ ಪ್ರಾಶಸ್ತ್ಯವನ್ನು ವಿಶದಪಡಿಸಲಾಗಿದೆ. 'ಅತ್ರಿಸ್ಮೃತಿ'ಯೆಂಬ ಇನ್ನೊಂದು ಗ್ರಂಥಕ್ಕೆ 'ಅತ್ರಿಸಂಹಿತಾ' ಎಂಬ ಹೆಸರೂ ಉಂಟು. ಮನುಸ್ಮೃತಿಯಲ್ಲಿರುವ ವಿಷಯಗಳನ್ನೇ ನಾಲ್ಕುನೂರು ಪದ್ಯಗಳಲ್ಲಿ ವಿವರಿಸುವ ಇದು ಮನುಸ್ಮೃತಿಗಿಂತ ಹಿಂದಿನ ಕೃತಿಯಾಗಿದ್ದು, ಆ ಕಾಲಕ್ಕೆ ಜನಪ್ರಿಯವಾಗಿತ್ತು. ಮನು ಮಹರ್ಷಿಗಳು ತಮ್ಮ ಗ್ರಂಥದಲ್ಲಿ ಅಂತರ್ಜಾತೀಯ ವಿವಾಹದ ವಿಷಯದಲ್ಲಿ ಅತ್ರಿ ಮುನಿಗಳ ಅಭಿಪ್ರಾಯವನ್ನು ಉಲ್ಲೇಖಿಸಿದ್ದಾರೆ. ಅತ್ರಿ, ಭೃಗು, ವಸಿಷ್ಠ, ನಾರದ ಮೊದಲಾದ ಹದಿನೆಂಟು ಜನರು ವಾಸ್ತುಶಾಸ್ತ್ರೋಪ'ದೇಶಕರಾಗಿದ್ದರೆಂದು ಮತ್ಸ್ಯಪುರಾಣ ಹೇಳುತ್ತದೆ. ಹೀಗೆ ಅತ್ರಿ ಮಹರ್ಷಿಗಳು ತಪಸ್ವಿಗಳಾಗಿ, ಗೃಹಸ್ಥರಾಗಿ, ಶಾಸ್ತ್ರಕಾರರಾಗಿ ಸನಾತನ ಸಂಸ್ಕೃತಿಯಲ್ಲಿ ದೇದೀಪ್ಯಮಾನರಾಗಿದ್ದಾರೆ.

**ನಂ. ೧೧, ಎ.ಜಿ. ಲೇಔಟ್, ನ್ಯೂ ಬಿಇಎಲ್ ರಸ್ತೆ,**
**ಬೆಂಗಳೂರು–೫೬೦ ೦೫೪.**


## Statement About Ownership And Other Particulars of 'Mallara' Kannada Monthly. Bangalore As Required Under Rule 8 of The Registration of Newspapers (Central) Rules, 1956.

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | Dr.M.R.Jayaram |
| | Whether Citizen of India? | : | Yes |
| | | | Sri Yogi Nareyana Study Centre,<br>Gokula Education Foundation,<br>M.S.R.I.T. Post, Bangalore-54 |
| 4. | Publisher's Name | : | Dr. M.R.Jayaram |
| | Whether Citizen of India? | : | Yes<br>Sri Yogi Nareyana Study Centre,<br>Gokula Education Foundation,<br>M.S.R.I.T. Post, Bangalore-54 |
| 5. | Editor's Name | : | Dr.M.R.Jayaram |
| | Whether Citizen of India? | : | Yes<br>Sri Yogi Nareyana Study Centre,<br>Gokula Education Foundation,<br>M.S.R.I.T. Post, Bangalore-54 |
| 6. | Name & Addresses of Individuals who own the newspaper | : | Sri Yogi Nareyana Study Centre,<br>Gokula Education Foundation,<br>M.S.R.I.T. Post, Bangalore-54 |
| 7. | Shareholders holding more than one percent of the total capital | : | NA |

**I, Dr. M.R. Jayaram hereby declare that the particulars given above are true to the best of my knowledge and belief.**

Bangalore
01-03-2020

Sd/-
*PUBLISHER*



ಗುರುವಾಯೂರು ಕೃಷ್ಣನ ಮಹಾಭಕ್ತರಾದ ಮಹಾಕವಿ ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿಯವರ ಮಹಾನ್ ಭಕ್ತಿಕಾವ್ಯ 'ನಾರಾಯಣೀಯಮ್' ಈ ಸಂಚಿಕೆಯಿಂದ ಆರಂಭಿಸಿದ್ದೇವೆ. ಸ್ವತಃ ಸನಾತನ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ ಇದರ ಅನುವಾದಕರು.



# ನಾರಾಯಣೀಯಮ್

## ಸರ್ಗ: 10

## ಸೃಷ್ಟಿಯ ವಿವಿಧತೆ

**ವೈಕುಂಠ ವರ್ಧಿತ ಬಲೋಽಥ ಭವತ್ಪ್ರಸಾದಾ–**
**ದಂಭೋಜಯೋನಿರಸೃಜತ್ ಕಿಲ ಜೀವ ದೇಹಾನ್ ।**
**ಸ್ಥಾಸ್ನೂನಿ ಭೂರುಹಮಯಾಣಿ ತಥಾ ತಿರಶ್ಚಾಂ**
**ಜಾತೀರ್ಮನುಷ್ಯನಿವಹಾನಪಿ ದೇವಭೇದಾನ್ ॥ 1 ॥**

ಓ ವೈಕುಂಠನೇ ! ನಿನ್ನ ಅನುಗ್ರಹದಿಂದ ಬಲವನ್ನು ವರ್ಧಿಸಿಕೊಂಡ ಬ್ರಹ್ಮನು ಭೂಮಿಯ ಮೇಲೆ ಬೆಳೆಯುವಂತಹ ವೃಕ್ಷಾದಿ ಸ್ಥಾವರಗಳನ್ನೂ, ತಿರ್ಯಕ್ ಜಂತುಗಳನ್ನೂ, ಪಶು ಪಕ್ಷಿಗಳನ್ನೂ, ಮಾನವ ಸಮೂಹವನ್ನೂ, ಹಾಗೂ ನಾನಾ ದೇವತೆಗಳನ್ನೂ, ಎಲ್ಲ ಜೀವಗಳಿಗೂ ದೇಹಗಳಾಗುವಂತೆ ಸೃಷ್ಟಿಸಿದನೆಂದು ಹೇಳುತ್ತಾರೆ. (1)

**ಮಿಥ್ಯಾಗ್ರಹಾಸ್ಮಿ ಮತ ರಾಗ ವಿಕೋಪಭೀತಿ–**
**ರಜ್ಞಾನ ವೃತ್ತಿ ಮಿತಿ ಪಂಚವಿಧಾಂ ಸ ಸೃಷ್ಟ್ವಾ ।**
**ಉದ್ದಾಮ ತಾಮಸ ಪದಾರ್ಥ ವಿಧಾನ ದೂನ**
**ಸ್ತೇನೇ ತ್ವದೀಯ ಚರಣಸ್ಮರಣಂ ವಿಶುದ್ಧ್ಯೈ ॥ 2 ॥**

ಬ್ರಹ್ಮನು ಅಜ್ಞಾನದಿಂದ ಉಂಟಾಗುವ ಮಿಥ್ಯಾಜ್ಞಾನ, ಅಹಂಕಾರ, ರಾಗ, ಕೋಪ, ಭೀತಿ ಎಂಬೀ ಐದು ವಿಧವಾದ ಅಜ್ಞಾನ ವೃತ್ತಿಗಳನ್ನು ಸೃಷ್ಟಿಸಿ, ಅತಿಯಾದ ತಾಮಸಿಕ ಗುಣಗಳಿಂದ ಕೂಡಿದ ಈ ಪದಾರ್ಥಗಳನ್ನು ಸೃಷ್ಟಿಸಿದ್ದಕ್ಕಾಗಿ ಪರಿತಾಪ ಪಡುತ್ತಾ ಪರಿಶುದ್ಧನಾಗಲು ನಿನ್ನ ಪಾದಸ್ಮರಣೆ ಮಾಡಲು ಮುಂದಾದನು. (2)

**ತಾವತ್ ಸಸರ್ಜ ಮನಸಾ ಸನಕಂ ಸನಂದಂ**
**ಭೂಯಃ ಸನಾತನಮುನಿಂ ಚ ಸನತ್ಕುಮಾರಂ ।**
**ತೇ ಸೃಷ್ಟಿಕರ್ಮಣಿ ತು ತೇನ ನಿಯುಜ್ಯಮಾನಾ–**
**ಸ್ತ್ವತ್ಪಾದಭಕ್ತಿರಸಿಕಾ ಜಗೃಹುರ್ನ ವಾಣೀಂ ॥ 3 ॥**

ತದನಂತರ ತನ್ನ ಮನಸ್ಸಿನಿಂದ ಸನಕ ಸನಂದನ, ಸನಾತನ ಮತ್ತು ಸನತ್‌ಕುಮಾರ ಎಂಬ ಮುನಿಗಳನ್ನು ಬ್ರಹ್ಮನು ಸೃಷ್ಟಿಸಿ, ಇನ್ನು ಮುಂದೆ ಸೃಷ್ಟಿಕಾರ್ಯದಲ್ಲಿ ನಿಯುಕ್ತರಾಗಬೇಕೆಂದು ಅವನಿಂದ ಆದೇಶಿಸಲ್ಪಟ್ಟರೂ ಆ ಮುನಿಗಳು ನಿನ್ನ ಪಾದ ಭಕ್ತಿ ರಸಿಕರಾದುದರಿಂದ ಬ್ರಹ್ಮನ ಮಾತಿಗೆ ಕಿವಿಗೊಡಲಿಲ್ಲ. (3)



ಕನ್ನಡಾನುವಾದ:
ಬಿಂಡಿಗನವಿಲೆ ನಾರಾಯಣಸ್ವಾಮಿ

**ತಾವತ್ ಪ್ರಕೋಪಮುದಿತಂ ಪ್ರತಿರುಂಧತೋಽಸ್ಮ**
**ಭ್ರೂಮಧ್ಯತೋಽಜನಿ ಮೃಡೋ ಭವದೇಕದೇಶಃ ।**
**ನಾಮಾನಿ ಮೇ ಕುರು ಪದಾನಿ ಚ ಹಾ ವಿರಿಂಚೇ–**
**ತ್ಯಾದೌ ರುರೋದಕಿಲ ತೇನ ಸ ರುದ್ರನಾಮಾ ॥ 4 ॥**

ತದನಂತರ ಉಂಟಾದ ಕೋಪವನ್ನು ಬ್ರಹ್ಮನು ನಿಗ್ರಹಿಸಿಕೊಳ್ಳಲು ಅವನ ಭ್ರೂಮಧ್ಯದಿಂದ ನಿನ್ನದೇ ಅಂಶವಾದ ಮೃಡನು ಹುಟ್ಟಿದನು. ಹುಟ್ಟಿದ ಕೂಡಲೇ 'ಹಾ ಬ್ರಹ್ಮಾ! ನನಗೆ ನಾಮಕರಣ ಮಾಡು ಹಾಗೂ ಸ್ಥಾನವನ್ನು ನಿರ್ಮಿಸು' ಎಂದು ಅಳಲು ಅವನ ಹೆಸರು 'ರುದ್ರ' ಎಂದಾಯಿತು. (4)

**ಏಕಾದಶಾಹ್ವಯತಯಾ ಚ ವಿಭಿನ್ನರೂಪಂ**
**ರುದ್ರಂ ವಿಧಾಯ ದಯಿತಾ ವನಿತಾಶ್ಚ ದತ್ವಾ ।**
**ತಾವಂತ್ಯದತ್ತ ಚ ಪದಾನಿ ಭವತ್ಪ್ರಣುನ್ನಃ ।**
**ಪ್ರಾಹ ಪ್ರಜಾ ವಿರಚನಾಯ ಚ ಸಾದರಂ ತಂ ॥ 5 ॥**

ನಿನ್ನಿಂದ ಪ್ರೇರಿತನಾದ ಬ್ರಹ್ಮನು ರುದ್ರನಿಗೆ ಹನ್ನೊಂದು ಹೆಸರುಗಳನ್ನೂ, ಹಾಗೂ ಹನ್ನೊಂದು ವಿಭಿನ್ನ ರೂಪಗಳನ್ನೂ, ನೀಡಿ ಸುಂದರಿಯರಾದ ಪತ್ನಿಯರನ್ನೂ ಸಹ ಕೊಟ್ಟು ಅಷ್ಟೇ ವಾಸಸ್ಥಾನಗಳನ್ನು ಕಲ್ಪಿಸಿಕೊಟ್ಟು ಜೀವಸೃಷ್ಟಿ ಮಾಡಲು ಆ ರುದ್ರನನ್ನು ಆದರದಿಂದ ಕೋರಿದನು. (5)

**ರುದ್ರಾಭಿಸೃಷ್ಟ ಭಯದಾಕೃತಿ ರುದ್ರ ಸಂಘ–**
**ಸಂಪೂರ್ಯಮಾಣ ಭುವನತ್ರಯ ಭೀತ ಚೇತಾಃ ।**
**ಮಾ ಮಾ ಪ್ರಜಾಃ ಸೃಜ ತಪಶ್ಚರ ಮಂಗಲಾಯೇ–**
**ತ್ಯಾಚಷ್ಟ ತಂ ಕಮಲಭೂರ್ಭವದೀರಿತಾತ್ಮಾ ॥ 6 ॥**

ರುದ್ರನಿಂದ ಸೃಷ್ಟಿಯಾದ ರುದ್ರರ ಭಯಂಕರ ರೂಪಗಳು ಮೂರು ಲೋಕಗಳಲ್ಲೂ ಸಂಪೂರ್ಣವಾಗಿ ತುಂಬಿಹೋಗಲು ಅದರಿಂದ ಭಯಭೀತನಾದ ಬ್ರಹ್ಮನು, ಅವನ ಅಂತರಂಗದಲ್ಲಿದ್ದ ನಿನ್ನಿಂದ ಪ್ರೇರಿತನಾಗಿ 'ಬೇಡ ಬೇಡ, ಪ್ರಜೆಗಳ ಸೃಷ್ಟಿ ಮಾಡಬೇಡ. ವಿಶ್ವದ ಮಂಗಳಕ್ಕಾಗಿ ಮೊದಲು ತಪಸ್ಸು ಮಾಡು' ಎಂಬುದಾಗಿ ರುದ್ರನಿಗೆ ನುಡಿದನು. (6)

**ತಸ್ಥಾಯ ಸರ್ಗರಸಿಕಸ್ಯ ಮರೀಚಿರತ್ರಿ–**
**ಸ್ತತ್ರಾಂಗಿರಾಃ ಕ್ರತುಮುನಿಃ ಪುಲಹಃ ಪುಲಸ್ತ್ಯಃ ।**
**ಅಂಗಾದಜಾಯತ ಭೃಗುಶ್ಚ ವಸಿಷ್ಠ ದಕ್ಷೌ**
**ಶ್ರೀನಾರದಶ್ಚ ಭಗವಾನ್ ಭವದಂಘ್ರಿದಾಸಃ ॥ 7 ॥**



ಅನಂತರ, ಅಲ್ಲಿ ಸೃಷ್ಟಿಕಾರ್ಯದಲ್ಲಿ ರಸಿಕನಾದ ಬ್ರಹ್ಮನ ಅಂಗಗಳಿಂದ ಮರೀಚಿ, ಅತ್ರಿ, ಅಂಗಿರಾ, ಕ್ರತುಮುನಿ, ಪುಲಹ, ಪುಲಸ್ತ್ಯ, ಭೃಗು, ದಕ್ಷ ಹಾಗೂ ಹೇ ಭಗವನ್, ನಿನ್ನ ಚರಣದಾಸನಾದ ಶ್ರೀ ನಾರದರೂ ಉತ್ಪನ್ನರಾದರು.

**ಧರ್ಮಾಧಿಕಾನಭಿಸೃಜನ್ನಥ ಕರ್ದಮಂ ಚ**
**ವಾಣೀಂ ವಿಧಾಯ ವಿಧಿರಂಗಜ ಸಂಕುಲೋಭೂತ್ ।**
**ತ್ವದ್ಬೋಧಿತೈಃ ಸನಕ ದಕ್ಷ ಮುಖೈಸ್ತನೂಜೈ**
**ರುದ್ಬೋಧಿತಶ್ಚ ವಿರರಾಮ ತಮೋ ವಿಮುಂಚನ್ ॥ 8 ॥**

ಅನಂತರ ಧರ್ಮಾದಿಗಳನ್ನು ಹಾಗೂ ಕರ್ದಮ ಪ್ರಜಾಪತಿಯನ್ನು ಸೃಷ್ಟಿಸಿ, ಸರಸ್ವತಿಯನ್ನು ಸೃಷ್ಟಿಸಿ, ಬ್ರಹ್ಮನು ಅವಳಲ್ಲಿ ಅನುರಕ್ತನಾದನು. ಆಗ ನಿನ್ನಿಂದ ಪ್ರೇರಿತರಾದ ಅವನ ಮಕ್ಕಳಾದ ಸನಕ, ದಕ್ಷ ಮತ್ತಿತರರು. ಅವನನ್ನು ಎಚ್ಚರಿಸಲು ಬ್ರಹ್ಮನು ಅಜ್ಞಾನದಿಂದ ಬಿಡುಗಡೆ ಹೊಂದಿ ನಿವೃತ್ತನಾದನು.(8)

**ವೇದಾನ್ ಪುರಾಣ ನಿವಹಾನಪಿ**
**ಸರ್ವವಿದ್ಯಾಃ**
**ಕುರ್ವನ್ ನಿಜಾನನಗಣಾಚ್ಚತುರಾನನೋಽಸೌ।**
**ಪುತ್ರೇಷು ತೇಷು ವಿನಿಧಾಯ ಸ**
**ಸರ್ಗವೃದ್ಧಿ–**
**ಮಪ್ರಾಪ್ನು ವಂಸ್ತವ ಪದಾಂಬುಜ–ಮಾಶ್ರಿತೋಽಭೂತ್ ॥ 9 ॥**

ಆ ಚತುರ್ಮುಖನಾದ ಬ್ರಹ್ಮನು ಅವನ ಎಲ್ಲ ಮುಖಗಳಿಂದಲೂ ವೇದಗಳನ್ನು, ಸಮಸ್ತ ಪುರಾಣಗಳನ್ನು ಹಾಗೂ ಸರ್ವವಿದ್ಯೆಗಳನ್ನು ಪ್ರಕಟಿಸಿ ತನ್ನ ಮಕ್ಕಳಿಗೆ ಅವುಗಳನ್ನು ನೀಡಿದನು. ಅನಂತರ ಮುಂದೆ ಸೃಷ್ಟಿಕಾರ್ಯ ಮುಂದುವರಿಯುತ್ತಿಲ್ಲದಿರುವುದನ್ನು ಮನಗಂಡು ನಿನ್ನ ಪಾದಕಮಲಗಳಲ್ಲಿ ಆಶ್ರಯವನ್ನು ಪಡೆದನು. (9)

**ಜಾನನ್ನುಪಾಯಮಥ ದೇಹಮಜೋ ವಿಭಜ್ಯ**
**ಸ್ತ್ರೀಪುಂಸಭಾವ–ಮಭಜನ್ಮನುತದ್ವಧೂಭ್ಯಾಂ ।**
**ತಾಭ್ಯಾಂ ಚ ಮಾನುಷಕುಲಾನಿ ವಿವರ್ಧಯಂಸ್ತ್ವಂ**
**ಗೋವಿಂದ ಮಾರುತಪುರೇಶ ನಿರುಂಧಿ**
**ರೋಗಾನ್ ॥ 10 ॥**

ಅನಂತರ ಬ್ರಹ್ಮನು ಉಪಾಯವನ್ನರಿತು ತನ್ನ ದೇಹವನ್ನು ಎರಡಾಗಿ ವಿಭಜಿಸಿ ಮನು ಮತ್ತು ಅವನ ಪತ್ನಿಯಾದ ಶತರೂಪಾ ಎಂಬುದಾಗಿ ಸ್ತ್ರೀ–ಪುರುಷ ಭಾವವನ್ನು ಪಡೆದನು. ಹೇ ಗುರುವಾಯೂರಪ್ಪ! ಹೇ ಗೋವಿಂದ! ಅವರಿಬ್ಬರಿಂದ ಮಾನವ ಕುಲವನ್ನು ಬೆಳೆಸುತ್ತಿರುವ ಪ್ರಭುವೇ, ನೀನು ನನ್ನ ರೋಗಗಳನ್ನು ನಿವಾರಿಸು. (10)

**(ಮುಂದುವರಿಯುವುದು)**


# ೧೦೭, "ಕೇಶವ ಕೃಪ" ೧೭ನೇ
**ಕ್ರಾಸ್, ೧ನೇ ಬ್ಲಾಕ್, ರಾಜಾಜಿನಗರ,**
**ಬೆಂಗಳೂರು–೫೬೦ ೦೧೦**

# ಶಾರ್ವರಿ ಸಂವತ್ಸರ



**ಮಾರ್ಚ್ 25ರಂದು 'ಶಾರ್ವರಿ' ಸಂವತ್ಸರದ ಶುಭೋದಯವಾಗುವ 'ಯುಗಾದಿ ಹಬ್ಬ'. ಈ ಚಾಂದ್ರಮಾನ ಪ್ರತಿಪದದ ವಿಶೇಷವನ್ನು, ಆಚರಣೆಯ ಆಧ್ಯಾತ್ಮಿಕ ಮಹತ್ತ್ವವನ್ನು ಕುರಿತು ತಿಳಿಸಿಕೊಟ್ಟಿದ್ದಾರೆ ಶ್ರೀ. ಕೆ. ಭೀಮರಾವ್.**

ಚಾಂದ್ರಮಾನ ಸಂವತ್ಸರಗಳು ಅರುವತ್ತು–ಪ್ರಭವ, ವಿಭವದಿಂದ ಆರಂಭವಾಗಿ ಅಕ್ಷಯದವರೆವಿಗೆ. ಅದರಲ್ಲಿ 34ನೆಯದು 'ಶಾರ್ವರಿ' ಅರುವತ್ತು ವರ್ಷಗಳ ಅನಂತರ ಆರಂಭವಾಗುತ್ತಿದೆ ಈ ಶಾರ್ವರಿ' ಚೈತ್ರ ಶುದ್ಧ ಪ್ರತಿಪದದಂದು. ನೂತನ ವಿಕ್ರಮ ಶಕೆಯ ಸಂವತ್ಸರ ಆರಂಭವಾಗುವುದು ಕೂಡ ಆ ದಿನದಂದೆ ಯುಗವೊಂದು ಕಳೆದು ಮತ್ತೊಂದು ಯುಗ ಆರಂಭವಾದದ್ದು, ಸಂವತ್ಸರರೀತ್ಯಾ ಕಾಲಗಣನೆ ಮೊದಲಾದದ್ದು ಕೂಡ ಚೈತ್ರ ಶುದ್ಧ ಪಾಡ್ಯಮಿ ದಿನದಂದೆ. ಹೀಗಾಗಿ ಆ ದಿನವನ್ನು ಯುಗದ ಆದಿ ದಿನ ಅಥವಾ 'ಯುಗಾದಿ'ಯೆಂದು ಹೆಸರಿಸಿ ಹಬ್ಬವನ್ನು ಆಚರಿಸಿ ಸಂಭ್ರಮಿಸುವುದು ಭಾರತೀಯರ ಅದರಲ್ಲಿಯೂ ದಾಕ್ಷಿಣಾತ್ಯರ ಸಂಸ್ಕೃತಿ.

'ಯುಗಾದಿ' ಹಬ್ಬ ನಮ್ಮ ಬದುಕಿನಲ್ಲಿ, ಸಂಸ್ಕೃತಿಯಲ್ಲಿ ಒಂದು ಮಹತ್ತ್ವದ ಮೈಲಿಗಲ್ಲಿನ ದಿನ. ಅದುವರೆವಿಗೆ ನಾವು ಕ್ರಮಿಸಿ ಬಂದ ಮಾರ್ಗ, ನಮ್ಮ ಆಶೋತ್ತರಗಳು–ಅವುಗಳ ಅವಲೋಕನ, ಮುಂದೆ ಕ್ರಮಿಸಬೇಕಾದ ಮಾರ್ಗ, ಅವುಗಳ ರೂಪರೇಷೆಗಳು–ಇವೆಲ್ಲದರ ಚಿಂತನೆ ಆ ದಿನದಂದು. ಹಳೆಯದನ್ನು ಮೆಲಕು ಹಾಕುತ್ತಾ, ಸಂಭ್ರಮಿಸುತ್ತಾ, ಮರೆಯಬೇಕಾದುದನ್ನು ಮರೆಯುತ್ತಾ ಹೊಸ ಭರವಸೆ ಆಕಾಂಕ್ಷೆಗಳನ್ನು ಹೊತ್ತು ಬದುಕಿನಲ್ಲಿ ಉತ್ಸಾಹ ತುಂಬಿಕೊಳ್ಳುವ ದಿನವೇ 'ಯುಗಾದಿ.'



'ಶಾರ್ವರಿ' ಎಂದರೆ ಮುಸ್ಸಂಜೆ ಎಂದರ್ಥ. ಇದು ಸಂಜೆ ಮತ್ತು ರಾತ್ರಿಯ ನಡುವಣ ಕಾಲ. ಆ ಮುಸ್ಸಂಜೆಯ ಬೆಡಗೇ ಬೇರೆ. ಬೆಳಕು–ಕತ್ತಲು ಸಂಗಮಿಸುವ ಸಮಯ. ಸೂರ್ಯ ಮುಳುಗಿ ಚಂದ್ರ ಉದಯಿಸುವ ವೇಳೆ. ಆ ಸಮಯ ಶುಭ ಸಮಯ. ಅದೇ 'ಶಾರ್ವರಿ' ಬದುಕಿನ ಸಮತೋಲನವನ್ನು ಆಹ್ಲಾದಕರತೆಯನ್ನು ಸೂಚಿಸುವ ಸಂಕೇತ ಈ ಪದ. ಹಾಗಾಗಿ ಯುಗಾದಿ–ಅದರಲ್ಲಿಯೂ ಶಾರ್ವರಿ ಉಗಾದಿ ಎಂದಿಗೂ ಶುಭೋದಯವೇ.

ಕ್ರೈಸ್ತಮಾಸದ ಪ್ರಕಾರ ಈ ಸಲದ ಶಾರ್ವರಿ 2020ರಲ್ಲಿ. ಅಂದರೆ ಹಿಂದಿನ ಶಾರ್ವರಿ 1960ರಲ್ಲಿ. ಮನುಷ್ಯ ತನ್ನ ಜೀವಮಾನದಲ್ಲಿ ಒಂದು ಶಾರ್ವರಿ ನೋಡುವುದೇ ಭಾಗ್ಯ. ಎರಡು ಶಾರ್ವರಿ ಸಂವತ್ಸರ ನೋಡುವುದೆಂದರೆ ಅದು ಸೌಭಾಗ್ಯವೇ ಸರಿ. ಇನ್ನು ಮೂರು ಶಾರ್ವರಿ ನೋಡಬೇಕೆಂದರೆ ಅವರು ಶತಾಯುಷಿಗಳೇ ಆಗಿರಬೇಕು. ಅಂತಹ ಸುಸೌಭಾಗ್ಯ–ನಮಗೆ ತಿಳಿದ ಹಾಗೆ ಬಂದದ್ದು ಮಧ್ವಮತದ ಮೇರು ಆಚಾರ್ಯ ಶ್ರೀ ವಾದಿರಾಜ ತೀರ್ಥರಿಗೆ.



ಅವರು ಜನಿಸಿದ್ದು 1480ರಲ್ಲಿ ಬಂದ ಶಾರ್ವರಿ ಸಂವತ್ಸರ ಮಾಘಮಾಸ ಶುಕ್ಲ ಪಕ್ಷ ದ್ವಾದಶಿಯಂದು. 120 ವರ್ಷಗಳ ಕಾಲ ಬದುಕಿದ್ದ ಈ ಯತಿ ಪುಂಗಮರು ಶ್ರೀ ಹರಿಯ ಪಾದ ಸೇರಿದ್ದು ಕ್ರಿ.ಶ. 1600ರಲ್ಲಿ ಬಂದಿದ್ದ ಶಾರ್ವರಿ ಸಂವತ್ಸರ ಫಾಲ್ಗುಣಮಾಸ ಬಹುಳ ತದಿಗೆಯ ತಿಥಿಯಂದು. ಹುಟ್ಟಿದ್ದು, ವೈಕುಂಠವಾಸಿಗಳಾದದ್ದು ಶಾರ್ವರಿ ಸಂವತ್ಸರದಲ್ಲಾದುದರಿಂದ ಈ ಯೋಗ. ಈ ವರ್ಷ ಅವರ 420ನೆಯ ಪುಣ್ಯತಿಥಿ ಅದೂ ಶಾರ್ವರಿಯಲ್ಲಿ ಬಂದಿದ್ದು ಅದನ್ನು ಆಚರಿಸುವ ಪುಣ್ಯ ನಮಗೆ ಬಂದಿರುವುದು ಯೋಗಾಯೋಗವೇ ಸರಿ.

ಅರುವತ್ತರ ಸಂಖ್ಯೆಗೆ ಏಕಿಷ್ಟು ಮಹತ್ತ್ವ, ಆ ಸಂಖ್ಯೆಯ ವಿಶೇಷವಾದರೂ ಏನು ಎಂದು ಯಾರಿಗಾದರೂ ಕುತೂಹಲವಾಗದಿರದು. ಅರುವತ್ತರ ಮಹತ್ತ್ವವೆಂದರೆ ಗ್ರಹಗಳಲ್ಲಿ ಪ್ರಬಲನಾದ ಬೃಹಸ್ಪತಿಗೆ ಸೂರ್ಯನ ಸುತ್ತಲೂ ಪರಿಕ್ರಮಿಸಲು 12 ವರ್ಷಗಳು ಬೇಕು. ಆದರೆ ಶನಿಗ್ರಹದ ಪರಿಕ್ರಮಣೆ ಬಲು ನಿಧಾನ. ಶನಿಗೆ ಸೂರ್ಯನ ಸುತ್ತ ಒಂದು ಬಾರಿ ಪರಿಕ್ರಮಿಸಲು 30 ವರ್ಷಗಳು ಬೇಕು. ಅಂದರೆ ಶನಿ–ಒಂದು ಬಾರಿ ಸುತ್ತುವಷ್ಟರಲ್ಲಿ ಗುರು 2 1/2 ಸುತ್ತು ಬಂದಿರುತ್ತಾನೆ. ಅಂದರೆ ಗುರು ಮತ್ತು ಶನಿ ಸೂರ್ಯನ ಪರಿಭ್ರಮಣೆಗಾಗಿ ಒಂದೇ ರೇಖೆಯಲ್ಲಿ ಬರಲು 60 ವರ್ಷ ಕಾಯಬೇಕು. ಹೀಗಾಗಿ ಸಂವತ್ಸರದ ರೀತ್ಯಾ ಕಾಲಗಣನೆಯ ಒಂದು ಅವಧಿ 60 ಸಂವತ್ಸರವಾಯಿತು. ಅರುವತ್ತರ ಅನಂತರ ಸಂವತ್ಸರಗಳ ಪುನರಾವರ್ತನೆ.

ಗ್ರಹಗಳ ಚಲನೆ ಭೂಮಿಯ ಮೇಲಿನ ವೈಪರೀತ್ಯಗಳಿಗೆ ಕಾರಣವಷ್ಟೆ. ಹೀಗಾಗಿ ಪ್ರತಿ ಸಂವತ್ಸರಕ್ಕೂ ಅದರದೇ ಆದ ವಿಶೇಷತೆಯಿದ್ದು ನಮ್ಮ ಹಿರಿಯರು ಅದನ್ನು ಗುರುತಿಸಿ ಸಂವತ್ಸರದ ಪ್ರಾಕೃತಿಕ ಪರಿಣಾಮಗಳನ್ನು ಹಾಗೂ ಮಾನವನ ಮೇಲೆ ಅದು ಬೀರಬಹುದಾದ ಫಲಾಫಲಗಳನ್ನು ಸೂಚಿಸುತ್ತಾರೆ. ಖಗೋಳಶಾಸ್ತ್ರ ಪರಿಪೂರ್ಣ ವಿಜ್ಞಾನ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಅಂತಹ ಖಗೋಳಶಾಸ್ತ್ರದ

ನಿಯಮಗಳನ್ನು ಸೂಕ್ಷ್ಮವಾಗಿ ಗಮನಿಸಿ ನಿರ್ದಿಷ್ಟವಾಗಿ ಸಂಧಿಕಾಲಗಳನ್ನು ಪರ್ವ ಸಮಯಗಳನ್ನು ಸೂಚಿಸುವ ಜ್ಯೋತಿಷಿಗಳ ಮತ್ತೊಂದು ಅಂಗಶಾಸ್ತ್ರವಾದ ಜ್ಯೋತಿಷ್ಯಶಾಸ್ತ್ರದ ವಿಷಯದಲ್ಲಿ ಅನುಮಾನಗಳು ಮನೆಮಾಡಿವೆ. ಇದಕ್ಕೆ ಪ್ರಮುಖ ಕಾರಣ ಶಾಸ್ತ್ರವನ್ನು ಶಾಸ್ತ್ರಕ್ಕಾಗಿಯೇ ಕಲಿತು ಅಭ್ಯಸಿಸುವ ಪಂಡಿತರ ವಿರಳತೆ.

ಇನ್ನು ಶಾರ್ವರಿ ಯುಗಾದಿಯ ಶುಭೋದಯಕ್ಕೆ ನಮ್ಮ ಸಿದ್ಧತೆಗಳನ್ನು ನೋಡೋಣ.

ಸಂವತ್ಸರದ ಆರಂಭದ ಮಾಸ ಚೈತ್ರಮಾಸ. ಪ್ರಕೃತಿ ಹೊಸ ಚಿಗುರನ್ನು ಚಿಮ್ಮಿಸುವ ವಸಂತ ಋತುವಿನ ಮೊದಲ ದಿನವದು. ನಾವು ಹಳೆಯ ಕೊಳೆಯನ್ನು ತೊಳೆಯಬೇಕಷ್ಟೆ. ಅದಕ್ಕಾಗಿ ಅಭ್ಯಂಜನ ಸ್ನಾನ. ಶರೀರ ಶುದ್ಧಿ ಮನಃಶುದ್ಧಿಯ ಪ್ರಥಮ ಅಂಗ. ಭಗವಂತ ಈ ಶರೀರ ದಯಪಾಲಿಸಿರುವುದು ಆತ್ಮದ ವಿಕಾಸಕ್ಕಾಗಿ. ಹಲವಾರು ಶರೀರಗಳನ್ನು ಧರಿಸಿದ ಆತ್ಮ ಮನುಷ್ಯ ಶರೀರ ಗಳಿಸಿರುವುದು ಉನ್ನತ ಪಥದೆಡೆಗೆ ನಡೆಯುವುದಕ್ಕೆ. ಅಭ್ಯಂಗದ ಅನಂತರ ಶುಭ್ರವಾದ ನೂತನ ವಸ್ತ್ರವನ್ನು ಧರಿಸಿ ದೇವರ ದರ್ಶನ. ಯಥಾಶಕ್ತಿ ದೈವ ಸ್ತುತಿ. ಮಂತ್ರ ಪಠಣ, ಸ್ತೋತ್ರ ವಾಚನ. ದೇವರಿಗೆ ದೀಪ ಬೆಳಗುವುದು ಕತ್ತಲಿನಿಂದ ಬೆಳಕಿನೆಡೆಗೆ ನಡೆಯುವ ಸಾಂಕೇತಿಕ ಎಲ್ಲ ಬಾಹ್ಯ ಆಚರಣೆಗಳು ಮಾನಸಿಕ ಎಚ್ಚರಿಕೆಗಾಗಿ. ಅಂತಃಸತ್ತ್ವವನ್ನು ಉದ್ದೀಪನಗೊಳಿಸುವುದಕ್ಕಾಗಿ. ಹಾಗಾಗಿ ಅದನ್ನು ಪದೇ ಪದೇ ನಮಗೆ ನೆನಪು ಮಾಡಲು ಸ್ವಗತ ರೂಪದಲ್ಲಿ ಮಂತ್ರ ಉಚ್ಚಾರಣೆ. ಉದಾಹರಣೆಗೆ ಅಭ್ಯಂಜನ ಸ್ನಾನದ ಸಮಯದಲ್ಲಿ ಹೇಳಬೇಕಾದ ಮಂತ್ರ:

**ಅಶ್ವತ್ಥಾಮ ಬಲಿರ್ವ್ಯಾಸ ಹನುಮಾಂಶ್ಚ ವಿಭೀಷಣಃ**
**ಕೃಪ ಪರಶುರಾಮಶ್ಚ ಸಪ್ತೈತೇ ಚಿರಂಜೀವಿನಃ**

ಚಿರಂಜೀವಿಗಳಾಗುವ ಬಯಕೆ ಯಾರಿಗಿರುವುದಿಲ್ಲ? ಆದರೆ ಜಗತ್ತು ಗುರುತಿಸಿರುವ ಚಿರಂಜೀವರು ಸಪ್ತ ಜನ ಮಾತ್ರ. ಅವರ್‍ಯಾರೆಂದರೆ ಅಶ್ವತ್ಥಾಮ, ಬಲಿ, ವ್ಯಾಸರು, ಹನುಮಂತ, ವಿಭೀಷಣ, ಕೃಪಾಚಾರ್ಯ ಹಾಗೂ ಪರಶುರಾಮರು. ಅವರುಗಳ ನಾಮ ಮಾತ್ರ ಸ್ಮರಣೆಯಿಂದ ಚಿರಂಜೀವತ್ವವಿಲ್ಲದಿದ್ದರೂ ದೀರ್ಘಾಯುವಾದರೂ ಪ್ರದಾನವಾದೀತೆಂಬ ಬಯಕೆ ನಮ್ಮ ಪೂರ್ವಿಕರದು. ಅದಕ್ಕಾಗಿ ಈ ಸ್ತೋತ್ರ ಪಠಣ. ಅಷ್ಟೇ ಅಲ್ಲ ನಾವು ಸ್ನಾನಕ್ಕಾಗಿ ಉಪಯೋಗಿಸುವ ಜಲದಲ್ಲಿ ಸಕಲ ನದಿಗಳೂ ಅವುಗಳ ಅಧಿದೇವತೆಗಳೂ ಸುಪ್ರಸನ್ನರಿರಬೇಕು. ಅದನ್ನು ನೆನಪಿಸುವುದಕ್ಕಾಗಿ ಇನ್ನೊಂದು ಮಂತ್ರ.

**ಗಂಗೇಚ ಯಮುನೇ ಚೈವ ಗೋದಾವರೀ ಸರಸ್ವತಿ**
**ನರ್ಮದೇ ಸಿಂಧು ಕಾವೇರಿ ಜಲೇಸ್ಮಿನ್ ಸನ್ನಿಧಿಂ ಕುರು.**

ಭಗೀರಥ ತನ್ನ ಪಿತೃಗಳ ಮೋಕ್ಷಕ್ಕಾಗಿ ಹರನ ಜಟೆಯಿಂದ ಭುವಿಗೆ ಇಳಿಸಿದ ಭಾಗೀರಥಿಯೇ ಗಂಗೆ. ಗಂಗಾಸ್ನಾನ ಸಕಲ ಪಾಪ ನಿರ್ಮೂಲನ. ಅದಕ್ಕಾಗಿ ನಮ್ಮ ಸ್ನಾನದ ನೀರಿನಲ್ಲಿ ಆ ಮಾತೆಯ ಆವಾಹನೆ. ಯಮುನೆಯಲ್ಲಿ ಪಯಣ ಮಾಡಿದ ದೇವಕಿಯ ಅಷ್ಟಮ ಶಿಶುವೇ ಶ್ರೀಕೃಷ್ಣ. ಶ್ರೀಹರಿಯನ್ನೇ ಕಾಪಿಟ್ಟ ಯಮುನೆ ನಮ್ಮನ್ನು ಕಾಪಿಡಲಾರಳೆ? ಅವಳ ಅನುಗ್ರಹಕ್ಕಾಗಿ ಇಲ್ಲಿ ಯಮುನೆಯ ಪ್ರವೇಶ. ಗೌತಮ ಮುನಿಗೆ ಬಂದಿದ್ದ ಗೋಹತ್ಯಾ ದೋಷವನ್ನು ಪರಿಹರಿಸಿದವಳು ಬ್ರಹ್ಮಗಿರಿಯಿಂದ ಉದ್ಭವಿಸಿದ ಗೌತಮಿ ಅಥವಾ ಗೋದಾವರಿದೇವಿ. ಆಕೆಯ ಸ್ಮರಣೆ ಮಾತ್ರದಿಂದಲೇ ನಾವು ತಿಳಿಯದೆ ಮಾಡಿದ ಪಾಪಗಳ ಪರಿಹಾರ. ಸರಸ್ವತೀಯ ವಿಷಯವಂತೂ ಎಲ್ಲರಿಗೂ ತಿಳಿದದ್ದೇ. ವಿದ್ಯಾರ್ಥಿದೇವತೆಯಾದ ಈ ಬ್ರಹ್ಮನರಸಿ ವೇದಾಭಿಮಾನಿ, ಸಕಲ ಕಲಾವಲ್ಲಭೆ, ಸರ್ವಗುಣ ಸಂಪನ್ನೆ. ಕಾವೇರಿಯಂತೂ ಶ್ರೀರಂಗನಾಥನಭಿಮಾನಿ. ಆತನಿಗಾಗಿ ಮೂರು ದ್ವೀಪಗಳನ್ನು ಸೃಷ್ಟಿಸಿದ ದೇವಿ – ವಿಷ್ಣು ಮಾಯೆ ಅವಳ ಮತ್ತೊಂದು ಹೆಸರು. ನರ್ಮದೆ ಶಿವನಿಂದ ಜನಿಸಿದ ನದಿ ರೂಪಿ ಕುವರಿ. ಆಕೆಯ ತಟದಲ್ಲಿರುವ ಪರಿಕ್ರಮವೆಂಬ ತೀರ್ಥಕ್ಷೇತ್ರದ ಒಂದು ಪ್ರದಕ್ಷಿಣೆ ಸಕಲ ದೇಗುಲಗಳ ಪ್ರದಕ್ಷಿಣೆ ಮಾಡಿದ ಹಾಗೆ ಎಂಬ ನಂಬುಗೆ ಭಕ್ತರದು. ಸಿಂಧು ಮಾನಸ ಸರೋವರದಲ್ಲಿ ಉದ್ಭವಿಸುವವಳು. ಋಗ್ವೇದದಲ್ಲಿಯೂ ಉಲ್ಲೇಖವಾಗಿರುವವಳು. ಅವಳ ಕೃಪೆಯಿಂದಲೆ ಆಹಾರ ಧಾನ್ಯಗಳ ಬೆಳೆವಣಿಗೆ. ಶರೀರ ಸುಸ್ಥಿತಿಯಲ್ಲಿಡಲು ಆಕೆಯ ಸನ್ನಿಧಾನ ನಮ್ಮ ಮೀಯುವ ಜಲದಲ್ಲಿರಬೇಕಲ್ಲವೆ?

ಅಭ್ಯಂಜನ ಸ್ನಾನದ ಅನಂತರ ದೇವರ ಪೂಜೆ. ಅವರವರ ಕುಲದೈವವನ್ನು ನೆನೆದು ಶಕ್ತ್ಯನುಸಾರ ಪೂಜೆ. ಆಡಂಬರದ ಅದ್ದೂರಿ ಅಲಂಕಾರ ಪೂಜೆಗಿಂತ ಅಂತರಂಗದ ಮಾನಸ ಪೂಜೆ ಆತ್ಮ ವಿಕಾಸಕ್ಕೆ ಸಹಾಯಕ.

ಯುಗಾದಿ ಒಂದು ಪರ್ವ ದಿನ. ಅದುವರೆಗೆ ನಡೆದು ಬಂದ ಹಾದಿಯನ್ನು ಗುರುತಿಸಿ ಮುಂದಿನ ಮಾರ್ಗಸೂಚಿ ತಯಾರಿಸುವ ಸಮಯ. ಅಷ್ಟೇ ಅಲ್ಲ ಸುಖ–ದುಃಖಗಳನ್ನು ಸಮಾನವಾಗಿ ಸ್ವೀಕರಿಸುವ ಸಂಕಲ್ಪ ಮಾಡುವ ಶುಭ ವೇಳೆ. ಅದರ ಸಾಂಕೇತಿಕವಾಗಿ ಬೇವು–ಬೆಲ್ಲ ಸೇವನೆ ಕರ್ನಾಟಕದ ಸಂಪ್ರದಾಯವಾದರೆ ಕಹಿ–ಸಿಹಿಯೊಂದಿಗೆ ಉಪ್ಪು ಹುಳಿ ಖಾರವನ್ನು ಸೇರಿಸುವ ಬಯಕೆ ನೆರೆಯ ಆಂಧ್ರದ ವಾಡಿಕೆ. ಅದನ್ನು ತಿನ್ನುವಾಗ ಹೇಳುವ ಶ್ಲೋಕ:

**ಶತಾಯುರ್ವಜ್ರದೇಹಾಯ ಸರ್ವಸಂಪತ್ಕರಾಯಚ ।**
**ಸರ್ವಾರಿಷ್ಟ ವಿನಾಶಾಯ ನಿಂಬಕಂದಳ ಭಕ್ಷಣಂ ॥**

ನನ್ನ ದೇಹ ವಜ್ರದಷ್ಟು ಗಟ್ಟಿಯಾಗಿ ನೂರು ವರ್ಷ ಬಾಳುವಂತಾಗಲಿ. ಸರ್ವ ಸಂಪತ್ತು ನನ್ನದಾಗಲಿ, ಸಕಲ ಅರಿಷ್ಟಗಳೂ ನಿವಾರಣೆಯಾಗಲಿ. ಬೇವು–ಬೆಲ್ಲ ಸೇವನೆ ಮಾಡಿ ಪ್ರಾರ್ಥಿಸುತ್ತಿದ್ದೇನೆ.

ಸದಾ ಒಳಿತನ್ನು ಬಯಸುವ ಜೀವಕ್ಕೆ ಭವಿಷ್ಯದ ಚಿಂತೆಯಷ್ಟೆ. ಬರುವ ವರ್ಷ ಏನನ್ನು ತರುವುದೋ ಏನಾಗುವುದೋ ಎಂಬ ಆತಂಕ–ಅಷ್ಟೇ ಕುತೂಹಲ ಕೂಡ. ಅದಕ್ಕಾಗಿ ಪಂಚಾಂಗ ಶ್ರವಣ. ಋತುಮಾನದ ವೈಪರೀತ್ಯ, ಗ್ರಹ ಚಲನೆಯ ದೆಶೆ ದಿಕ್ಕುಗಳು

ಚರಾ-ಚರ ವಸ್ತುಗಳ ಮೇಲೆ ಪರಿಣಾಮ ಬೀರುವುದೆಂಬ ನಂಬಿಕೆ ನಮ್ಮದು. ಜ್ಯೋತಿಷ್ಯಶಾಸ್ತ್ರ ಬಾಳಿನ ಕೈಪಿಡಿಯಷ್ಟೆ.

ಪ್ರತಿಯೊಂದು ಸಂವತ್ಸರಕ್ಕೂ ವಿಶೇಷ ಫಲಗಳುಂಟು. ಶಾರ್ವರಿ ಸಂವತ್ಸರದಲ್ಲಿ ಜನಿಸಿದವರು ವಿಶೇಷವಾಗಿ ಧರ್ಮಶ್ರೀಗಳು, ದಾಸಶ್ರೀಗಳು, ಧನಶ್ರೀಗಳೂ ಆಗಿರುವರೆಂದು ಪ್ರತೀತಿ. ಇದನ್ನು ಆ ಸಂವತ್ಸರದಲ್ಲಿ ಜನಿಸಿದ ಹಿರಿಯರ ಚರಿತ್ರೆಯಿಂದ ತೆಗೆಯಬೇಕಷ್ಟೆ. ಋಗ್ವೇದದಲ್ಲಿಯೂ ಇದರ ಉಲ್ಲೇಖವಿದ್ದು ಶಾರ್ವರಿ ಎಂದರೆ ನಕ್ಷತ್ರ ತುಂಬಿದ ರಾತ್ರಿ ಎಂಬರ್ಥದಲ್ಲಿದೆ. ಭಾಗವತ ಪುರಾಣದಲ್ಲಿ ಬರುವ ಶಿಶುಮಾರನ ಮಾತೆ ಶಾರ್ವರಿ-ಅರ್ಥಾತ್ ದೋಷನ ಪತ್ನಿ. ಶಾರ್ವರಿಯ ಅರ್ಥ ಜಿಜ್ಞಾಸೆ ಏನೇ ಇರಲಿ-ನಾವು ಬಯಸುವುದು ಬೆಳದಿಂಗಳು. ತುಂಬು ಚಂದಿರ ಪ್ರತಿಫಲಿಸುವ ತಂಪಾದ ಆಹ್ಲಾದಕರ ಬೆಳದಿಂಗಳು. ಸುಡುವ ಬಿಸಿಲು ತರವಲ್ಲ ನಮಗೆ. ಅಂತೆಯೆ ಕಡುಗತ್ತಲನ್ನೂ ಒಲ್ಲೆವು ನಾವು.



ಸೌರಮಾನದ ಗಣನೆಯ ಪ್ರಕಾರ ಸಂವತ್ಸರದ ಪ್ರಥಮ ದಿನ ಮೇಘಮಾಸದ ಪಾಡ್ಯದಂದು ಬರುವುದರಿಂದ ಆ ಪಂಚಾಂಗವನ್ನು ಅನುಸರಿಸುವವರು ಅಂದು 'ಯುಗಾದಿ' ಹಬ್ಬವನ್ನು ಆಚರಿಸುತ್ತಾರೆ. ಹೀಗಾಗಿ ತಮಿಳುನಾಡಿನಲ್ಲಿ-ಅದರಲ್ಲಿಯೂ ಶ್ರೀವೈಷ್ಣವ ಸಂಪ್ರದಾಯಸ್ಥರು ಆ ದಿನದಿಂದ ಆರಂಭಿಸಿ ನವಮಿಯ ದಿನದವರೆವಿಗೆ 'ಕಂಬ ರಾಮಾಯಣ' ಪಠನ ಮಾಡುವುದು ವಾಡಿಕೆಯಾಗಿದೆ. ಅವರ ಪ್ರಕಾರ ಶ್ರೀರಾಮನಿಗೆ ಸಂಬಂಧಿಸಿದ ಉತ್ಸವಗಳು ಜರುಗುವುದು ಅಂದಿನ ದಿನವೆ.

ಮಹಾರಾಷ್ಟ್ರ ಮತ್ತು ಗೋವೆಯ ಕೊಂಕಣಸ್ಥರು-ಕನ್ನಡಿಗರ ಹಾಗೆಯೇ ಚೈತ್ರ ಶುದ್ಧ ಪಾಡ್ಯದಂದೆ ಯುಗಾದಿ ಹಬ್ಬವನ್ನು 'ಗುಡಿ ಪಾಡ್ವ' ಎಂಬ ಹೆಸರಿನಲ್ಲಿ ಆಚರಿಸುತ್ತಾರೆ. ಅವರ ನಂಬಿಕೆಯಂತೆ ಆ ದಿನ ಶ್ರೀರಾಮ ರಾವಣನನ್ನು ಸಂಹರಿಸಿ ಅಯೋಧ್ಯೆಗೆ ಹಿಂತಿರುಗಿದ ದಿನ. ವಿಜಯ ಪತಾಕೆ ಮನೆಯ ಮುಂದೆ ಹಾರಿಸುವುದು ರೂಢಿ. ಯುಗಾದಿಯ ದಿನದಿಂದ ಆರಂಭವಾಗುವುದು ಹೊಸ ವರ್ಷದ



ಪ್ರಥಮ ಋತು-ವಸಂತ. ನವ ಉಲ್ಲಾಸವನ್ನು ತರುವ ಈ ಋತುರಾಜನ ಸಂಭ್ರಮ ಹೇಳತೀರದು. ಚಳಿಗಾಲ ಮುಗಿದು ಬೇಸಿಗೆ ಆರಂಭವಾಗುವ ಈ ಸಮಯ ಆಹ್ಲಾದಕರ. ಈ ಋತುವಿನ ಮಾಸಗಳು ಚೈತ್ರ-ವೈಶಾಖ. ಚೈತ್ರ ಶುದ್ಧ ಪಾಡ್ಯ ಯುಗಾದಿಯಾದರೆ ಮರುದಿನ ಅಂದರೆ ಬಿದಿಗೆಯೇ 'ವರ್ಷದ ತೊಡಕು'. ಸಂಪ್ರದಾಯಸ್ಥರ ನಂಬಿಕೆಯಂತೆ ಆ ದಿನ ನಾವು ನಡೆದ ಹಾಗೆ ವರ್ಷವೆಲ್ಲ ಇರುತ್ತದೆ ಎಂಬ ಭಾವನೆ. ಹೀಗಾಗಿ ಅಂದು ಎಲ್ಲರೂ ಪರಸ್ಪರರಿಗೆ ಶುಭ ಹಾರೈಸುತ್ತಾ ಜೊತೆ ಜೊತೆಗೆ ಗಾಳೀಪಟ ಹಾರಿಸುತ್ತಾ ಸುಖ ಸಂತೋಷದಿಂದ ಕಾಲ ಕಳೆಯಬಯಸುತ್ತಾರೆ. ಅಹಿತಕರ ಪ್ರಸಂಗಗಳು, ಮನಸ್ತಾಪಗಳಿಗೆ ಅವಕಾಶಕೊಡದೆ ಪ್ರಸನ್ನಚಿತ್ತರಾಗಿರುವ ದಿನ ಅದು. ಒಳ್ಳೆಯ ಭಾವನೆಗಳ ಅನುಸಂಧಾನಕ್ಕಾಗಿ ಶಾಂತಿ ಸಂದೇಶಕ್ಕಾಗಿ ಮೀಸಲಾಗಿರುವ ಈ ದಿನವೆಂದರೆ ತಪ್ಪಾಗಲಾರದು.

ದಕ್ಷಿಣ ಭಾರತೀಯರಂತೆ ಉತ್ತರ ಭಾರತೀಯರು ಯುಗಾದಿ ಹಬ್ಬವನ್ನು ಆಚರಿಸುವುದಿಲ್ಲ. ಅದಕ್ಕೆ ಬದಲಾಗಿ ಅವರು ವಸಂತ ಋತುವಿನ ಪ್ರಥಮ ಒಂಬತ್ತು ರಾತ್ರಿಗಳನ್ನು ನವರಾತ್ರಿಯ ಹಬ್ಬವಾಗಿ ಆಚರಿಸಿ ಸಂಭ್ರಮಿಸುತ್ತಾರೆ. 'ವಸಂತ ನವರಾತ್ರಿ'ಯೆಂದು ಕರೆಯಲ್ಪಡುವ ಈ ದಿನಗಳು ದಾಕ್ಷಿಣಾತ್ಯರ ಶರದೃತುವಿನ 'ಶರನ್ನವರಾತ್ರಿ'ಯ ಹಾಗೆ ಶಕ್ತಿ ಆರಾಧನೆಯ ದಿನಗಳೆ. ಅದರಲ್ಲಿಯೂ ಚೈತ್ರ ಪಂಚಮಿ ವಿದ್ಯಾಧಿದೇವತೆ ಸರಸ್ವತಿಯ ಜನ್ಮದಿನವೆಂದೇ ಪ್ರತೀತಿ. ಹೀಗಾಗಿ ಆ ದಿನ ಆಕೆಯ ಆರಾಧನೆಗೆ ಮೀಸಲು.

ಯುಗಾದಿ ಹಬ್ಬ ಕೇವಲ ಪಂಚಾಂಗ ಶ್ರವಣಕ್ಕಷ್ಟೇ ಮೀಸಲಿಲ್ಲ. ಈ ಹೊಸ ವರುಷವನ್ನು ಸ್ವಾಗತಿಸುವುದರಲ್ಲಿ ನಮ್ಮ ಕವಿಗಳೂ ಹಿಂದೆ ಬಿದ್ದಿಲ್ಲ. ಸಾಂಸ್ಕೃತಿಕ ನಗರಗಳಲ್ಲಿ ಆ ದಿನ ವಿಶೇಷ ಕವಿಗೋಷ್ಠಿಗಳೂ ನಡೆಯುವುದುಂಟು. ಆ ಗೋಷ್ಠಿಗಳಲ್ಲಿ ಅನೇಕ ಹಿರಿಯ-ಕಿರಿಯ ಕವಿಗಳು ತಮ್ಮ ನೂತನ ವರ್ಷದ ಆಶೋತ್ತರಗಳನ್ನು ಹಂಚಿಕೊಳ್ಳುವುದುಂಟು. ಆ ಪದ್ಯಗಳ ವಾಚನದಿಂದ ನಮ್ಮ ಮನಸ್ಸು ಪ್ರಫುಲ್ಲಗೊಳ್ಳುವುದಲ್ಲದೆ ಚೇತೋಹಾರಿಯಾಗುವುದು. ಅದರಲ್ಲಿ ಉಲ್ಲೇಖಿಸಲೇಬೇಕಾದ ಕವಿತೆಯೆಂದರೆ ಕರ್ನಾಟಕದ ಕಣ್ಮಣಿ, ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ದ.ರಾ. ಬೇಂದ್ರೆಯವರ ಪ್ರಸಿದ್ಧ ಗೀತೆ 'ಯುಗ ಯುಗಾದಿ ಕಳೆದರೂ.....' ಮೇಲ್ನೋಟಕ್ಕೆ ಇದೊಂದು ಸರಳ ಕವಿತೆಯೆನಿಸಿದರೂ ಓದಿದ ಹಾಗೆಲ್ಲಾ, ಮತ್ತೆ ಮತ್ತೆ ಹೊಸ ಅನುಭವ-ಅನುಭಾವ ಎರಡನ್ನೂ ನೀಡುವ ವೇದಾಂತ ಗೀತೆಯಾಗಿದೆ. ಲಯ ಬದ್ಧ-ಛಂದೋಬದ್ಧ ಜನಪದದ ಒಗರು ಸೊಗಡುಗಳನ್ನು ಸೂಸುವ ಈ ಪದ್ಯದ ಸಾಲುಗಳು ಹೀಗಿವೆ:

**ಯುಗ ಯುಗಾದಿ ಕಳೆದರೂ**
**ಯುಗಾದಿ ಮರಳಿ ಬರುತಿದೆ**
**ಹೊಸ ವರುಷಕೆ ಹೊಸ ಹರುಷವ**
**ಹೊಸತು ಹೊಸತು ತರುತಿದೆ**
**ಹೊಂಗೆ ಹೂವ ತೊಂಗಲಲ್ಲಿ**

**ಬೃಂಗದ ಸಂಗೀತ ಕೇಳಿ**
**ಮತ್ತೆ ಕೇಳ ಬರುತಿದೆ**
**ಬೇವಿನ ಕಹಿ ಬಾಳಿನಲಿ**
**ಹೂವಿನ ನಸುಗಂಪು ಸೂಸಿ**
**ಜೀವಕಳೆಯ ತರುತಿದೆ**
**ವರುಷಕೊಂದು ಹೊಸತು ಜನ್ಮ**
**ಹರುಷಕೊಂದು ಹೊಸತು ನೆಲೆಯು**
**ಅಖಿಲ ಜೀವ ಜಾತಕೆ**
**ಒಂದೇ ಒಂದು ಜನ್ಮದಲಿ**
**ಒಂದೇ ಬಾಲ್ಯ ಒಂದೆ ಹರೆಯ**
**ನಮಗದಷ್ಟೇ ಏತಕೋ**

ಪ್ರತಿ ಯುಗಾದಿಯೂ ನಮಗೆ ಹೊಸ ಜನ್ಮದಂತಾಗಲಿ. ಬದುಕಿನಲ್ಲಿ ಬಾಲ್ಯ, ಹರಯಗಳು ಮತ್ತೆ ಮತ್ತೆ ಬರಲಿ ಎಂದು ಆಶಿಸುವ ಕವಿ ಕೊನೆಗೆ ಆಧ್ಯಾತ್ಮಿಕತೆಯ ಉತ್ತುಂಗ ಶಿಖರದೆಡೆಗೆ ನಮ್ಮನ್ನು ಕರೆದೊಯ್ಯುತ್ತಾರೆ. ನಾವು ಸಾವಿಗಾಗಿ ಎಂದೂ ಅಂಜಬೇಕಿಲ್ಲ. ಅನುದಿನವೂ ನಾವು ಸತ್ತು ಪುನಃ ಬದುಕುತ್ತಿದ್ದೇವೆ. ನಿದ್ದೆ ಎಂಬುದಾದರೂ ಏನು? ಅದು ತಾತ್ಕಾಲಿಕ ಮರಣವಷ್ಟೆ. ನಿದ್ದೆ ಬರುವುದು ನಮಗೆ ಗೊತ್ತಾಗುವುದೇನು? ಎಂದಿಗೂ ಇಲ್ಲ. ನಿದ್ದೆಯಾದ ಅನಂತರ ನಾವು ಎದ್ದೇ ಏಳುತ್ತೇವೆಂಬ ಖಾತ್ರಿ ಏನಾದರೂ ಇದೆಯೆ? ಖಂಡಿತಾ ಇಲ್ಲ. ಆದರೂ ನಾವು ಚಿರಂಜೀವಿಗಳೆಂದು ಭಾವಿಸಿ ಪರಮ ಸತ್ಯವನ್ನು ಮರೆಯುತ್ತೇವೆ. ಬಾಳಿನ ಕ್ಷಣಿಕತೆ ಅರಿವಾದರೆ ಅದಕ್ಕಿಂತ ಮಿಗಿಲಾದ ಜ್ಞಾನ ಮತ್ತೊಂದಿಲ್ಲ. ಅಂಬಿಕಾತನಯದತ್ತರಾದ ದ.ರಾ. ಬೇಂದ್ರೆ ಉಸುರುತ್ತಾರೆ:

**ನಿದ್ದೆಗೊಮ್ಮೆ ನಿತ್ಯ ಮರಣ**
**ಎದ್ದ ಸಲ ನವೀನ ಜೀವನ**
**ನಮಗೆ ಏಕೆ ಬಾರದು?**
**ಎಲೆ ಸನತ್ಕುಮಾರ ದೇವ**
**ಎಲೆ ಸಾಹಸಿ ಚಿರಂಜೀವ**
**ನಿನಗೆ ಲೀಲೆ ಸೇರದೋ**

ಮೇಲಿನ ಪದ್ಯ 'ಯುಗಾದಿ' ಹಬ್ಬವನ್ನು ಆಚರಿಸುವುದರ ಔಚಿತ್ಯವನ್ನು ಸೂಕ್ಷ್ಮವಾಗಿ ಅರ್ಥೈಸುತ್ತದೆ. ಬದುಕಿನಲ್ಲಿ ಯಾರೂ ಚಿರಂಜೀವಿಗಳಲ್ಲ. ಚಿರಂಜೀವತ್ವವನ್ನು ಪಡೆದ ವಸ್ತುಗಳೂ ಯಾವುದೂ ಇಲ್ಲ. 'ಜಾತಸ್ಯ ಮರಣಂ ಧ್ರುವಂ' ಎಂಬ ಮಾತಿನಂತೆ ಹುಟ್ಟಿದವರೆಲ್ಲರೂ ಸಾಯಲೇಬೇಕು. ಚಿರಂತನವಾಗಿರುವ ಏಕೈಕ ವಸ್ತುವೆಂದರೆ ಆ ಪರಬ್ರಹ್ಮ. ಕಾಲರೂಪಿ ಪರಬ್ರಹ್ಮ. ಭೂಮಿ, ಸೂರ್ಯ, ಚಂದ್ರರ ಚಲನೆಯ ಗಣನೆಯೇ ಕಾಲ. ಆದಿ-ಅಂತ್ಯವಿಲ್ಲದ ಆ ಕಾಲವೆಂಬುದು ಸತ್ಯ. ಅದನ್ನು ನಿಯಂತ್ರಿಸುವ ಪರಬ್ರಹ್ಮ ಸತ್ಯ. ಉಳಿದುದೆಲ್ಲವೂ ಮಿಥ್ಯ. ಮಿಥ್ಯ ಎಂದರೆ ಸುಳ್ಳು ಎಂದಲ್ಲ. 'ಕ್ಷಣಿಕ' ಎಂಬರ್ಥದಲ್ಲಿ. ಈ ಸತ್ಯವನ್ನು ಅರಿತವನಿಗೆ ಸಾವಿನ ಭಯವಿಲ್ಲ. ಅವನಿಗೆ ಪ್ರತಿದಿನವೂ ಹೊಸ ಜನ್ಮವೆ. ಪ್ರತಿ ದಿನವೂ ಹುಟ್ಟುಹಬ್ಬವೆ. ಲೌಕಿಕ ಬದುಕಿನಲ್ಲಿ, ಶರೀರಧಾರಿಯಾಗಿರುವ ಅಮರನಾದ ಆತ್ಮ ಈ 'ಮಿಥ್ಯ'ವೆಂಬ 'ಸತ್ಯ'ವನ್ನರಿತು ಸುಖಕ್ಕೆ ಹಿಗ್ಗದೆ, ದುಃಖ ಬಂದಾಗ ಕುಗ್ಗದೆ, ಸಮಚಿತ್ತದಿಂದ ಎರಡನ್ನೂ ಸ್ವೀಕರಿಸಿ ಬಾಳನ್ನು ನಡೆಯಿಸಬೇಕು. ಇದರ ಅರಿವನ್ನು ಮೂಡಿಸುವುದಕ್ಕಾಗಿಯೇ ಈ ಹಬ್ಬದ ಆಚರಣೆ. ಅದ್ವೈತ ತತ್ತ್ವವನ್ನು ಅದರ ಅರಿವನ್ನು ಮೂಡಿಸುವುದಕ್ಕಾಗಿ ಯುಗಾದಿ-ಅಂತ್ಯವಿಲ್ಲದ ಆದಿ, ಕೊನೆಯಿಲ್ಲದ ಪ್ರತಿಪಾದ್ಯ. ಅದೇ ವೇದಪ್ರತಿಪಾದ್ಯ. ಈ ಮಾತನ್ನೆ ಸಂತ ಜ್ಞಾನೇಶ್ವರರು ತಮ್ಮ ಮರಾಠಿ ಕಾವ್ಯ ಗೀತೆಯ ಸಾರಸರ್ವಸ್ವ ಗ್ರಂಥ 'ಜ್ಞಾನೇಶ್ವರಿ'ಯಲ್ಲಿ ಹೇಳಿರುವುದು. ಅವರ ಜ್ಞಾನೇಶ್ವರಿಯ ಪ್ರಥಮ ಶ್ಲೋಕವೇ ಅದಾಗಿದ್ದು ಅದರ ಉಲ್ಲೇಖನ ಇಲ್ಲಿ ಉಚಿತವಾಗಿದೆ:

**ಓಂ ನಮೋ ಆದ್ಯಾ । ವೇದ ಪ್ರತಿಪಾದ್ಯಾ**
**ಜಯ ಸ್ವಂ ಸವೇದ್ಯಾ । ಆತ್ಮರೂಪಾ**

ಸೃಷ್ಟಿಯ ಆದಿಯಲ್ಲಿದ್ದ, ವೇದಗಳು ಪ್ರತಿಪಾದಿಸುವ 'ಓಂ' ಕಾರಕ್ಕೆ ನನ್ನ ನಮನಗಳು. ಆತ್ಮದ ರೂಪಿನಲ್ಲಿ ಸ್ವಯಂ ತಿಳಿದುಕೊಳ್ಳಬೇಕಾದವನಿಗೆ ಜಯವಾಗಲಿ. ಈ ಶ್ಲೋಕದಿಂದ ಆರಂಭವಾಗುವ ಮರಾಠಿ ಗೀತೆ ಮುಕ್ತಾಯಗೊಂಡದ್ದು ಶಾಲಿವಾಹನ ಶಕೆ 1212ರ ಯುಗಾದಿ ಪಾಡ್ಯದಂದು. ಯುಗಾದಿ ದಿನ ಪಠಿಸಬೇಕಾದ ಪವಿತ್ರ ಶ್ಲೋಕವಿದು.

ಈ ಕಾಲನು ಬೇರೆ ಯಾರೂ ಅಲ್ಲ-ಅದು ತಾನೇ ಎಂದು ಸ್ವಯಂ ಶ್ರೀಕೃಷ್ಣನೆ ಪ್ರಚುರಪಡಿಸಿದ್ದಾನೆ ಭಗವದ್ಗೀತೆಯಲ್ಲಿ. ಅಧ್ಯಾಯ 10ರ ಶ್ಲೋಕ 33 ಹೀಗಿದೆ:

**ಅಕ್ಷರಾಣಾಮಕಾರೋಸ್ಮಿ ದ್ವಂದ್ವಃ ಸಾಮಾಸಿಕಸ್ಯ ಚ ।**
**ಅಹಮೇವಾಕ್ಷಯಃ ಕಾಲೋಧಾತಾಹಂ ವಿಶ್ವತೋಮುಖಃ ॥**

ಅಕ್ಷರಗಳಲ್ಲಿ 'ಅ'ಕಾರನಾದ ನಾನು 'ದ್ವಂದ್ವ' ಸಮಾಸಿ. ಕೊನೆಯಿಲ್ಲದ ಕಾಲನು ನಾನು. ಏನೆಲ್ಲ ಕಡೆಗೆ ಮುಖವಿರುವ ನಾನು ಸೃಷ್ಟಿಕರ್ತನು.

ಯುಗಾದಿ ಹಬ್ಬ ಕೊಡುವ ಸಂದೇಶವಾದರೂ ಏನು? ವರುಷ ಕಳೆಯಿತೆಂದು ಚಿಂತಿಸಬೇಕೆ ಅಥವಾ ಹೊಸ ವರ್ಷ ಆರಂಭವಾಯಿತೆಂದು ಸಂಭ್ರಮಿಸಬೇಕೆ? ಡಿ.ವಿ. ಗುಂಡಪ್ಪನವರ **ಮಂಕುತಿಮ್ಮನ ಬಾಯಿಯಲ್ಲಿ ಕೇಳೋಣ:**

**ಹೊಸತನವೆ ಬಾಳು; ಹಳಸಿಕೆಯೆಲ್ಲ ಸಾವು ಬಿಡು ।**
**ರಸವು ನವನವತೆಯಿಂದನುದಿನವು ಹೊಮ್ಮಿ ॥**
**ಹಸನೊಂದು ನುಡಿಯಲ್ಲಿ ನಡೆಯಲ್ಲಿ ನೋಟದಲಿ ।**
**ಪಸರುತಿರೆ ಬಾಳ್ ಚೆಲುವು-ಮಂಕುತಿಮ್ಮ ॥**

**೪೨೨, 'ಚಂದ್ರಿಕ' ೫ನೇ ರಸ್ತೆ, ಹೆಚ್.ಬಿ.ಆರ್. ಲೇಔಟ್,**
**ಬೆಂಗಳೂರು-೫೬೦ ೦೪೩.**



ಈ ಸಂಚಿಕೆಯಿಂದ ಸಂಸ್ಕೃತ ವಿದುಷಿ, ಪ್ರಾಧ್ಯಾಪಕಿ, ಮಾಜಿ ವಿಧಾನ ಪರಿಷತ್ ಸದಸ್ಯೆ, ಲೇಖಕಿ ಹಾಗೂ ಸಾಮಾಜಿಕ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿರುವ ಡಾ. ಎಸ್.ಆರ್. ಲೀಲಾ ಅವರು ಸಂಸ್ಕೃತದ ಮಹತ್‌ಗ್ರಂಥ ಕಥಾಸರಿತ್ಸಾಗರದಿಂದ ಕೆಲವು ಉತ್ತಮ ಕಥೆಗಳನ್ನು ಆಯ್ದು ಮಲ್ಲಾರ ಓದುಗರಿಗೆ ನೀಡಲಿದ್ದಾರೆ.

–ಸಂ.

# ದೇವಸ್ಮಿತೆ

ತಾಮ್ರಲಿಪ್ತಿ ಎಂಬುದೊಂದು ಪ್ರಸಿದ್ಧ ನಗರ. ನಗರದ ಶ್ರೀಮಂತ ವ್ಯಾಪಾರಿ ಧನದತ್ತ. ಅವನ ಪ್ರೀತಿಯ ಪುತ್ರ ಗುಹಸೇನ. ಅನೇಕ ಮಕ್ಕಳಿದ್ದರೂ ಗುಹಸೇನನ ಮೇಲೆ ವ್ಯಾಪಾರಿಗೆ ಬಲು ಮೋಹ. ವಯಸ್ಸಿಗೆ ಬಂದ ಅವನಿಗೆ ತಕ್ಕ ಹೆಂಡತಿಯನ್ನು ಹುಡುಕಲು ಗುಹಸೇನನ್ನೂ ಕರೆದುಕೊಂಡು ಧನದತ್ತ ಹೊಸದೊಂದು ದ್ವೀಪಕ್ಕೆ ಹೊರಟ. ಆ ದ್ವೀಪದಲ್ಲಿ ಧರ್ಮಗುಪ್ತ ದೊಡ್ಡ ವಣಿಕ. ಅವನ ಮಗಳು ದೇವಸ್ಮಿತೆ. ಧನದತ್ತನಿಗೆ ಮಗನ ಮೇಲೆ ಹೇಗೋ ಹಾಗೆ ಧರ್ಮಗುಪ್ತನಿಗೆ ಮಗಳ ಮೇಲೆ ಅಪಾರ ಪ್ರೀತಿ. ದೇವಸ್ಮಿತೆಯು ತನ್ನ ಪುತ್ರನಿಗೆ ಸರಿಯಾದ ವಧುವೆಂದುಕೊಂಡು ಧನದತ್ತ ಕನ್ಯೆಯನ್ನು ಬೇಡಿದ. ಆದರೆ ಧರ್ಮಗುಪ್ತ ಇವನ ಊರು ತಾಮ್ರಲಿಪ್ತಿ ತುಂಬ ದೂರದಲ್ಲಿದೆ, ಮಗಳನ್ನು ಬಿಟ್ಟಿರಲು ಕಷ್ಟ ಎಂದು ಮದುವೆಗೆ ಒಪ್ಪಲಿಲ್ಲ. ಆದರೆ ತಂದೆಯೊಡನೆ ಬಂದಿದ್ದ ವರ ಗುಹಸೇನನ್ನು ದೇವಸ್ಮಿತೆ ನೋಡಿದ್ದಳು. ಅವನ ಭದ್ರಾಕಾರ ಆಗಲೆ ಅವಳನ್ನು ಆಕರ್ಷಿಸಿತ್ತು. ಇವನೇ ನನ್ನ ಪತಿ ಎಂದು ಮನದಲ್ಲಿ ನಿಶ್ಚಯಿಸಿಕೊಂಡುಬಿಟ್ಟಿದ್ದಳು. ತಂದೆ ಮದುವೆಗೆ ಒಪ್ಪದೆ ಇರುವುದನ್ನು ನೋಡಿ ತಾನೇ ಮುಂದುವರಿದಳು. ಆಪ್ತಸಖಿಯ ಮೂಲಕ ಗುಹಸೇನನಿಗೆ ತನ್ನ ಮನದಿಂಗಿತವನ್ನು ತಿಳಿಯಪಡಿಸಿದಳು. ಅವನೂ ತುಂಬ ಸಂತೋಷದಿಂದ ತಂದೆಗೆ ವಿಚಾರ ಮುಟ್ಟಿಸಿದ. ಧನದತ್ತನಿಗೂ ಬಹು ಆನಂದವಾಯಿತು. ಬಳಿಕ ಗುಹಸೇನನೊಡನೆ ಊರು ಬಿಟ್ಟು ಹೋಗಲು ಒಪ್ಪಂದ ಮಾಡಿಕೊಂಡಳು. ಅವಳ ಆಪ್ತಳಾದ ಸಖಿಯೂ ಒಬ್ಬ ದಾಸಿಯೂ ನೆರವು ನೀಡಿದರು. ಅದೇ ರಾತ್ರಿ ಹೋಗುವುದೆಂದಾಯಿತು. ಗುಹಸೇನ ತನ್ನ ತಂದೆಯೊಡನೆ ದೇವಸ್ಮಿತೆಯನ್ನು ಕರೆದುಕೊಂಡು ಹೊರಟು ಕೆಲವು ದಿನಗಳ ಅನಂತರ ತಾಮ್ರಲಿಪ್ತಿಯನ್ನು ತಲಪಿದ. ತಂದೆಯ ಆಸೆಯಂತೆ ತನ್ನ ಮನಮೆಚ್ಚಿದ ದೇವಸ್ಮಿತೆಯನ್ನು ಮದುವೆಯಾದ. ಪತಿಪತ್ನಿಯರು ತುಂಬ ಪ್ರೇಮದಿಂದ ಬಾಳುವೆ ನಡೆಸಿದರು. ಅವರು ಒಬ್ಬರನ್ನೊಬ್ಬರು ಅಗಲಿರಲು ಸಾಧ್ಯವೆ ಇಲ್ಲವೆಂಬಷ್ಟು ಆತ್ಮೀಯರಾಗಿ ದಾಂಪತ್ಯ ಸುಖದಲ್ಲಿ ತೇಲಿದರು.

ಕೆಲವು ವರ್ಷಗಳ ಅನಂತರ ಗುಹಸೇನನ ತಂದೆ ಧನದತ್ತ ತೀರಿಕೊಂಡ. ಅವನ ಕೆಲವು ಹತ್ತಿರದ ಬಂಧುಗಳು ಕಟಾಹ ದ್ವೀಪದಲ್ಲಿ ವ್ಯಾಪಾರ ಮಾಡಿಕೊಂಡಿದ್ದರು. ಅಲ್ಲಿಗೆ ಬರಬೇಕೆಂದೂ, ಎಲ್ಲ ವಿಧದ ವ್ಯವಸ್ಥೆ ಇದೆಯೆಂದೂ ಗುಹಸೇನನ್ನು ಪ್ರೇರಿಸಿದರು. ಆದರೆ ದೇವಸ್ಮಿತೆ ಪತಿಯ ಪರದೇಶ ಪ್ರಯಾಣಕ್ಕೆ ಒಪ್ಪಲಿಲ್ಲ. ಅವಳಿಗೆ ಪತಿಯ ಮೇಲೆ ಅತಿಯಾದ ಪ್ರೀತಿ. ಅದರಿಂದಲೆ ಅವನು ಮತ್ತೋರ್ವಳನ್ನು ಎಲ್ಲಿ ಕಟ್ಟಿಕೊಂಡು ಬಿಡುತ್ತಾನೋ ಎಂಬ ಆತಂಕವೂ ಇತ್ತು. ಅವಳು ತನ್ನ ಭ್ರಮಾಲೋಕದಲ್ಲಿ ಗುಹಸೇನನ ಪ್ರೀತಿಗೆ ಪಾತ್ರಳಾದ ಹೆಂಗಸಿನ ಮೇಲೆ ಈರ್ಷ್ಯೆ ಪಡುತ್ತಿದ್ದಳು! ಆದರೆ ಗುಹಸೇನನಿಗೆ ಹೊಸ ಊರಿಗೆ ಹೋಗಿ ಹೊಸ ವ್ಯಾಪಾರ ಮಾಡಿ ಅಭಿವೃದ್ಧಿ ಹೊಂದಬೇಕೆಂಬಾಸೆ. ಅವನು ಒಂದು ಉಪಾಯ ಹೇಳಿದ. ನಾನು ದೇವಾಲಯದಲ್ಲಿ ಕುಳಿತು ಒಂದು ವ್ರತ ಆಚರಿಸುತ್ತೇನೆ. ದೈವ ತೋರಿದಂತೆ ಮಾಡುತ್ತೇನೆ ಎಂದ. ಅದಕ್ಕೆ ಪತ್ನಿಯೂ ಒಪ್ಪಿದಳು. ಇಬ್ಬರೂ ವ್ರತಾಚರಣೆ



ಮಾಡಿದರು. ಅವರ ಇಷ್ಟದೈವ ಶಿವನು ಸ್ವಪ್ನದಲ್ಲಿ ಕಾಣಿಸಿಕೊಂಡು, ಎರಡು ಕಮಲಗಳನ್ನು ಕೊಟ್ಟು, ನೀವಿಬ್ಬರೂ ಒಂದೊಂದನ್ನು ಹಿಡಿಯಿರಿ. ಯಾರು ಶೀಲಗೆಟ್ಟರೂ ಇನ್ನೊಬ್ಬರ ಕೈಯ ಕಮಲ ಬಾಡುತ್ತದೆ. ಇಲ್ಲದಿದ್ದರೆ ಹಾಗೇ ಇರುತ್ತದೆ. ಇದರಿಂದ ನಿಮ್ಮ ನಡತೆಯಲ್ಲಿ ಎಚ್ಚರವಾಗಿರಲು ಸಹಾಯಕವಾಗುತ್ತದೆ. ಎಂದು ಹೇಳಿದನು. ಇಬ್ಬರಿಗೂ ಕನಸೊಡೆಯಿತು. ಇಬ್ಬರೂ ಅಂದಿನಿಂದ ಕಮಲಗಳನ್ನು ಕೈಯಲ್ಲಿ ಹಿಡಿದರು. ಒಬ್ಬರು ಇನ್ನೊಬ್ಬರ ಹೃದಯಕಮಲವನ್ನೇ ಹಿಡಿದಂತೆ ಆಗಿತ್ತು. ಗುಹಸೇನನು ಪದ್ಮಪಾಣಿಯಾಗಿ ಕಟಾಹ ದ್ವೀಪಕ್ಕೆ ಹೊರಟುನಿಂತ. ಅಲ್ಲಿ ಸೇರಿದ ಮೇಲೆ ಅವನ ರತ್ನವ್ಯಾಪಾರ ಜೋರಾಯಿತು. ಉತ್ತಮ ನಡತೆಯ ಗುಹಸೇನನ ಕೈಯಲ್ಲಿ ಕಮಲವಿದ್ದು ಅದು ಎಂದೂ ಹೊಚ್ಚಹೊಸದಾಗಿಯೇ ಇರುತ್ತಿದ್ದುದನ್ನು ಕಂಡು ಜನರು ಚಕಿತರಾದರು. ಕೆಲವು ವ್ಯಾಪಾರಿಗಳು ಬಂದು ಕುತೂಹಲದಿಂದ ಅದರ ವೃತ್ತಾಂತವನ್ನು ಕೇಳಿದರು. ಅವನು ಒಮ್ಮೆಲೆ ಹೇಳಲಿಲ್ಲವಾಗಿ ಅವನನ್ನು ಮನೆಗೆ ಕರೆದೊಯ್ದು ಪಾನಮತ್ತನಾಗುವಂತೆ ಪ್ರಚೋದಿಸಿದರು. ಅಮಲಿನಲ್ಲಿ ಕಮಲದ ಕಾರಣವನ್ನೆಲ್ಲ ಕಾರಿಬಿಟ್ಟ ಗುಹಸೇನ. ಇದನ್ನೆಲ್ಲ ನಾಲ್ವರು ಯುವವ್ಯಾಪಾರಿ ಪುತ್ರರು ಕುತೂಹಲದಿಂದ ಕೇಳಿಕೊಂಡರು. ಮನುಷ್ಯನಿಗೆ ದುಷ್ಟತನ ತಾನೇತಾನಾಗಿ ಬರುತ್ತದೆ. ಯಾರಿಂದಲೂ ಹೇಳಿಸಿಕೊಳ್ಳಬೇಕಾಗಿಲ್ಲವಷ್ಟೆ. ಸದ್‌ಭಾವನೆ ಮೂಡಲು ಸತ್‌ಪ್ರೇರಣೆ ಬೇಕಾಗುತ್ತದೆ! ಯೌವನ, ಧನಮದದಿಂದ ಗರ್ವಿತರಾದ ಆ ವ್ಯಾಪಾರಿ ಪುತ್ರರು ತಾಮ್ರಲಿಪ್ತಿಗೆ ಹೊರಟು ನಿಂತರು. ಅವರ ಘನೋದ್ದೇಶ ದೇವಸ್ಮಿತೆಯ ಶೀಲವನ್ನು ಕೆಡಿಸುವುದು!! ಗುಹಸೇನನು ತನ್ನ ವ್ಯಾಪಾರದಲ್ಲಿ ಪೂರ್ಣಮಗ್ನನಾಗಿದ್ದ. ಕೈಯ ಕಮಲ ನಳನಳಿಸುತ್ತಿತ್ತು. ಹೆಂಡತಿಯ ಗುಣ ಅವನಿಗೆ ಒತ್ತಾಸೆಯಾಗಿತ್ತು.

ಇತ್ತ ತಾಮ್ರಲಿಪ್ತಿಗೆ ಬಂದ ಧೂರ್ತರು ತಮ್ಮ ಕಾರ್ಯಸಾಧಿಸಲು ಉಪಾಯವನ್ನು ಹುಡುಕುತ್ತಾ ಒಂದು ಬೌದ್ಧ ಆಲಯಕ್ಕೆ ಬಂದರು. ಅಲ್ಲಿ ಒಬ್ಬ ಸಂನ್ಯಾಸಿನಿಯನ್ನು ಕಂಡು, "ನಮಗೆ ನಿನ್ನಿಂದ ಒಂದು ಸಹಾಯವಾಗಬೇಕಾಗಿದೆ" ಎಂದರು. ಅವಳಿಗೆ ಧೂರ್ತರಿಗೆ ಸಹಾಯ ಮಾಡುವ ಸದ್ಬುದ್ಧಿ! ಇವರ ರೊಟ್ಟಿ ಜಾರಿ ತುಪ್ಪದಲ್ಲೆ ಬಿದ್ದಿತ್ತು. ಅವಳು, "ಸಂತೋಷದಿಂದ ನಿಮಗೆ ನೆರವಾಗುತ್ತೇನೆ. ನನಗೇನೂ ಹಣ ಬೇಡ. ನನ್ನ ಶಿಷ್ಯೆ ಸಿದ್ಧಿಕರಿ ಬೇಕಾದಷ್ಟು ಆಸ್ತಿ ಮಾಡಿಟ್ಟಿದ್ದಾಳೆ. ಹೇಳಿ, ನಿಮಗೆ ಯಾವ ಹೆಂಗಸು ಬೇಕಾಗಿದ್ದಾಳೆ?" ಎಂದಳು. ವಣಿಕಪುತ್ರರು, "ಗುಹಸೇನನ ಹೆಂಡತಿ ದೇವಸ್ಮಿತೆಯನ್ನು ಅರಸಿ ಬಂದಿದ್ದೇವೆ. ಅವಳೊಡನೆ ನಮಗೆ ಸಮಾಗಮ ಮಾಡಿಸು" ಎಂದರು. ಸಂನ್ಯಾಸಿನಿ ಅವರಿಗೆ ಆಸೆ ಈಡೇರಿಸುವುದಾಗಿ ಮಾತುಕೊಟ್ಟಳು. ಅವರ ವಾಸಕ್ಕೆ ತನ್ನ ಮನೆಯನ್ನೇ ಬಿಟ್ಟುಕೊಟ್ಟಳು.

ಬಳಿಕ ಗುಹಸೇನನ ಮನೆಗೆ ಹೋದಳು. ಅದೊಂದು ಅರಮನೆಯಂಥ ದೊಡ್ಡ ಮನೆ. ಆಳುಕಾಳು ಸಾಕುಬೇಕಾದಷ್ಟು ಜನ. ನಾಲ್ಕಾರು ಹಂತಗಳನ್ನು ದಾಟಿದರೆ ಒಳಮನೆ ಪ್ರವೇಶ ಸಾಧ್ಯ. ಸಂನ್ಯಾಸಿನಿ ಹೊರ ವಲಯದ ಕೆಲಸದಾಳುಗಳಿಗೆ ತಿಂಡಿತೀರ್ಥಗಳನ್ನು, ಸಣ್ಣಪುಟ್ಟ ವಸ್ತ್ರಗಳನ್ನೂ ಕೊಟ್ಟು ಸಂತೋಷಪಡಿಸಿದಳು. ಅವರೆಲ್ಲ ಇವಳು ಯಾರೋ ಪುಣ್ಯಾತ್ಮಳು. ನಮಗೆ ಕಾಣಿಕೆ ಕೊಡುತ್ತಿದ್ದಾಳೆ ಅಂದುಕೊಂಡು ಒಳಹೋಗಲು ದಾರಿ ಮಾಡಿಕೊಟ್ಟರು. ಕ್ರಮೇಣ ಅವಳು ದೇವಸ್ಮಿತೆಯ ವಾಸದ ಕೋಣೆಯವರೆಗೂ ಬಂದಳು. ಅಲ್ಲಿ ಬಾಗಿಲಲ್ಲಿ ಅವಳ ಮುದ್ದಿನ ನಾಯಿಯೊಂದಿತ್ತು. ಸರಪಳಿಯಿಂದ ಬಿಗಿಯಲಾಗಿದ್ದ ಆ ನಾಯಿ ಹೊಸಬಳನ್ನು ಕಂಡು ದೊಡ್ಡ ದನಿಯಲ್ಲಿ ಬೊಗಳಿತು. ಅದೆಷ್ಟು ಎಂದರೆ, ದೇವಸ್ಮಿತೆ ಹಿಂದೆಂದೂ ತನ್ನ ನಾಯಿ ಹೀಗೆ ಬೊಗಳಿರಲಿಲ್ಲ ಎಂದುಕೊಂಡಳು. ನಾಯಿ ಸಂನ್ಯಾಸಿನಿಯನ್ನು ಮುಂದೆ ಹೋಗಲು ಬಿಡದೆ ಅಡ್ಡಗಟ್ಟಿತು. ದಾಸಿ ಬಂದು ನಾಯಿಯನ್ನು ಹಿಡಿದುಕೊಂಡು ಸಂನ್ಯಾಸಿನಿಯನ್ನು ಒಳಕ್ಕೆ ಕಳುಹಿಸಿದಳು. ಒಳಹೋದ ಅವಳು ದೇವಸ್ಮಿತೆಯ ಮನೋಹರ ರೂಪ ಕಂಡು ವಿಸ್ಮಿತಳಾದಳು. ತನ್ನ ವೇಷಕ್ಕೆ ತಕ್ಕಂತೆ ಆಶೀರ್ವಾದ ಮಾಡಿದಳು. ಕಪಟವನ್ನರಿಯದ ಆ ಸಾಧ್ವಿ ಇವಳನ್ನು ಆದರಿಸಿದಳು. ಸಂನ್ಯಾಸಿನಿ ತನ್ನ ಕುಹಕಕ್ಕೆ ಶುರುವಿಟ್ಟುಕೊಂಡಳು. "ವತ್ಸೆ, ದೇವಸ್ಮಿತೆ, ನಿನ್ನ ರೂಪಗುಣಶೀಲಗಳನ್ನು ನಾನು ಕೇಳಿಬಲ್ಲೆ. ಬಂದು ನೋಡಬೇಕೆಂಬ ಇಚ್ಛೆ ಬಹುದಿನಗಳಿಂದ ಇತ್ತು. ಇಂದು ಬಂದೇ ಬಿಟ್ಟೆ. ಕಾರಣ ನಿನ್ನೆ ನನ್ನ ಸ್ವಪ್ನದಲ್ಲಿ ಕಾಣಿಸಿಕೊಂಡಿದ್ದೆ! ನೀನು ಎಂಥ ರೂಪವತಿ, ಏನು ಹರಯ. ನೀನು ಗಂಡನಿಂದ ದೂರಾಗಿರುವುದನ್ನು ಕಂಡು ನನ್ನ ಮನಸ್ಸು ನೊಂದುಕೊಳ್ಳುತ್ತಿದೆ. ರೂಪ ಯೌವನಗಳೆಲ್ಲ ವ್ಯರ್ಥವಲ್ಲವೆ?" ಎಂದೆಲ್ಲ ಹೇಳಿ ದೇವಸ್ಮಿತೆಯನ್ನು ವಶಕ್ಕೆ ಪಡೆಯುತ್ತಿದ್ದೇನೆ ಎಂದುಕೊಂಡು ಹಿಂತಿರುಗಿದಳು. ಇನ್ನೊಂದು ದಿನ ಹುಚ್ಚುಕಾರ ಹಾಕಿದ್ದ ಮಾಂಸದ ತುಂಡನ್ನು ತೆಗೆದುಕೊಂಡು ದೇವಸ್ಮಿತೆಯ ಮನೆಗೆ ಬಂದು ಬಾಗಿಲಿನಲ್ಲಿದ್ದ ನಾಯಿಗೆ ತಿನ್ನಲು ಕೊಟ್ಟಳು. ಮೆಣಸು ತುಂಬಿದ್ದ ಮಾಂಸವನ್ನು ಗಬಗಬನೆ ತಿಂದ ನಾಯಿಯ ಕಣ್ಣು, ಮೂಗುಗಳಿಂದ ಬಳಬಳನೆ ನೀರು ಸುರಿಯಲಾರಂಭಿಸಿತು. ಕಪಟಿ ಸಂನ್ಯಾಸಿನಿ ಒಳಹೋಗಿ ದೇವಸ್ಮಿತೆಯನ್ನು ಆಶೀರ್ವದಿಸಿ, ಅವಳ ಆತಿಥ್ಯ ಸ್ವೀಕರಿಸಿ, ತಾನೂ ಅಳುವುದಕ್ಕಾರಂಭಿಸಿದಳು. ಕಾರಣ ಕೇಳಿದ ದೇವಸ್ಮಿತೆಗೆ, "ಮಗಳೆ, ಏನು ಹೇಳಲಿ! ಹೊರಗೆ ನಿನ್ನ ನಾಯಿಯು ಅಳುತ್ತಿರುವುದನ್ನು ನೋಡು. ನಾಯಿಗೆ ಪೂರ್ವಜನ್ಮ ಸ್ಮರಣೆ ಬಂದಂತಿದೆ. ಹಿಂದೆ ನಾನೂ, ನಿನ್ನ ನಾಯಿಯೂ ಒಟ್ಟಿಗೆ ಬಾಳಿದವರು. ಅದು ಕಣ್ಣೀರು ಹಾಕಲಾಗಿ ನನಗೂ ಮರುಕದಿಂದ ಕಂಬನಿ ಬರುತ್ತಿದೆ." ನಾಯಿಯ ಕಣ್ಣಲ್ಲೂ ನೀರುಕ್ಕುತ್ತಿದ್ದುದನ್ನು ಕಂಡ ದೇವಸ್ಮಿತೆ ಚಿಂತೆಗೀಡಾದಳು. ಸುಮ್ಮನಿದ್ದ ಅವಳನ್ನೇ ನೋಡುತ್ತ ಮೊಸಳೆ ಕಣ್ಣೀರು ಸುರಿಸುತ್ತ, ಸಂನ್ಯಾಸಿನಿ ತನ್ನ ಕಥೆ ಹೇಳಿದಳು. "ಹಿಂದಿನ ಜನ್ಮದಲ್ಲಿ ನಾನೂ, ನಾಯಿಯೂ ಒಬ್ಬ ಬ್ರಾಹ್ಮಣನ ಹೆಂಡಂದಿರಾಗಿದ್ದೆವು. ಆ ನಮ್ಮ ಗಂಡನದೋ ಯಾವಾಗಲೂ ರಾಜಕಾರ್ಯ. ರಾಜನ ಆದೇಶ ಹೊತ್ತು ದೂತನಾಗಿ ದೇಶದೇಶಾಂತರ ಸುತ್ತುತ್ತಿದ್ದ. ಅವನು ಪ್ರವಾಸಕ್ಕೆ ಹೋದಾಗ ನಾನು ನನ್ನ ಯೌವನವನ್ನು ವ್ಯರ್ಥಗೊಳಿಸದೆ ಅನೇಕ ಪುರುಷರೊಡನೆ ಸಮಾಗಮ ಹೊಂದುತ್ತಿದ್ದೆ. ಇಂದ್ರಿಯ ವಂಚನೆ ಏಕೆ ಮಾಡಬೇಕು? ಹೀಗೆ ಸರಳ ಸದ್‌ಭಾವದಿಂದ ಬದುಕಿದ ನನಗೆ ಪೂರ್ವ ಜನ್ಮಸ್ಮರಣೆ ಇದೆ. ನನ್ನ ಸವತಿಗೆ ಶೀಲ ಕಾಪಾಡಿಕೊಳ್ಳುವ ತವಕ. ಸಹಜ ಸುಂದರ ಬದುಕಿನಿಂದ ವಂಚಿತಳಾದಳು. ನೋಡು, ಅದಕ್ಕೆ ನಾಯಿಯ ಹೊಟ್ಟೆಯಲ್ಲಿ

ಹುಟ್ಟಿದ್ದಾಳೆ. ಅವಳಿಗೂ ಹಿಂದಿನ ಜನ್ಮದ ನೆನಪಿದೆ." ಬುದ್ಧಿಮತಿಯಾದ ದೇವಸ್ಮಿತೆಗೆ ಇವಳು ಬಂದ ಉದ್ದೇಶದ ಅರಿವಾಗತೊಡಗಿತು. ಅವಳು ಹೇಳಿದಳು, "ಭಗವತಿ, ಈ ಹೊಸಧರ್ಮದ

ಪರಿಚಯ ನನಗಿಲ್ಲ. ನಾನೂ ಮತ್ತೆ ಮನುಷ್ಯಳಾಗಿಯೇ ಹುಟ್ಟಬೇಕೆಂದುಕೊಂಡಿದ್ದೇನೆ. ಸುಂದರಾಂಗನಾದ ಪುರುಷನೊಡನೆ ನನಗೆ ಸಂಗಮ ಮಾಡಿಸು." ತನ್ನ ಉಪಾಯ ಇಷ್ಟು ಸುಲಭವಾಗಿ ಫಲಿಸಿದ್ದಕ್ಕಾಗಿ ಸಂನ್ಯಾಸಿನಿಗೆ ಬಲು ಸಂತೋಷ. ತತ್‌ಕ್ಷಣವೆ, "ಬೇರೆ ದ್ವೀಪದಿಂದ ಕೆಲವು ವಣಿಕಪುತ್ರರು ಬಂದಿದ್ದಾರೆ, ಎಲ್ಲ ಯೌವನಶಾಲಿಗಳು, ಅವರನ್ನು ಕರೆತರುತ್ತೇನೆ" ಎಂದು ಎದ್ದು ಹೋದಳು.

ಸ್ವಲ್ಪ ಆಲೋಚಿಸಿದ ದೇವಸ್ಮಿತೆಗೆ ಏನಾಗಿರಬಹುದೆಂಬುದು ಹೊಳೆಯಿತು. ದಾಸಿಯರನ್ನು ಕರೆದು, "ನನ್ನ ಗಂಡನ ಕೈಯ ಕಮಲದ ಗುಟ್ಟನ್ನು ಅರಿತ ಇವರು, ನನ್ನ ಶೀಲಕೆಡಿಸಲು ಸಂಚು ಮಾಡುತ್ತಿದ್ದಾರೆ.

ಕಪಟಕ್ಕೆ ಪ್ರತಿಯಾಗಿ ಕಪಟ ತೋರಬೇಕು. ಇಲ್ಲದಿದ್ದರೆ, ವಂಚಕರನ್ನು ಸೋಲಿಸಲಾಗುವುದಿಲ್ಲ. ಹೋಗಿ ಮದ್ಯಕ್ಕೆ ದತ್ತೂರ ಬೆರೆಸಿ, ಸಿದ್ಧಪಡಿಸಿ. ಲೋಹಕಾರನ ಬಳಿ ಕಬ್ಬಿಣದಿಂದ ನಾಯಿಯಕಾಲು ಮಾಡಿಸಿ ತನ್ನಿರಿ" ಎಂದು ಆಜ್ಞಾಪಿಸಿದಳು. ಮಾರನೆಯ ದಿನ ಸಂನ್ಯಾಸಿನಿಯ ಶಿಷ್ಯನಂತೆ ಮಾರುವೇಷದಲ್ಲಿದ್ದ ಯುವಕನೊಬ್ಬ ಬಂದ. ಒಳಗೆ ಬಂದು ತನ್ನ ನಿಜರೂಪ ತೋರಿದ. ದಾಸಿಯೊಬ್ಬಳು ದೇವಸ್ಮಿತೆಯಂತೆ ಅಲಂಕಾರ ಮಾಡಿಕೊಂಡು ಸಜ್ಜಾಗಿದ್ದಳು. ಅವನನ್ನು ಪ್ರೀತಿಯಿಂದ ಬರಮಾಡಿಕೊಂಡು ಒತ್ತಾಯದಿಂದ ದತ್ತೂರ ಮಿಶ್ರಿತ ಮದ್ಯವನ್ನು ಚೆನ್ನಾಗಿ ಕುಡಿಸಿದಳು. ಅಮಲು ಅತಿಯಾಗಿ ಅವನ ಸಂಜ್ಞೆ ಹಾರಿಹೋಯಿತು. ಒಡನೆಯೆ ಇಬ್ಬರು ದಾಸಿಯರು ಅವನ ಆಭರಣಗಳನ್ನೂ ಬಟ್ಟೆಗಳನ್ನೂ ಕಳಚಿ, ಬೆತ್ತಲೆ ಮಾಡಿ, ನಾಯಿಕಾಲಿನ ಕಬ್ಬಿಣ ಕಾಯಿಸಿ, ಅವನ ಹಣೆಯ ಮೇಲೆ ಇಟ್ಟರು.

ತಪ್ತಮುದ್ರಾಧಾರಣವಾದ ಮೇಲೆ ಅವನನ್ನು ಮನೆಯ ಹಿಂದಿನ ತಿಪ್ಪೆಯಲ್ಲಿ ಎಳೆದು ಹಾಕಿದರು! ಸರಿ ರಾತ್ರಿ ಕಳೆದ ಮೇಲೆ ದತ್ತೂರದ ಅಮಲು ಇಳಿದ ವಣಿಕಪುತ್ರನಿಗೆ ತಾನೆಲ್ಲಿದ್ದೇನೆ, ಹೇಗಿದ್ದೇನೆ, ಯಾಕಿದ್ದೇನೆ ಎಂಬ ಅರಿವಾಯಿತು! ಅಂತೂ ಹೇಗೋ ಎದ್ದು, ಕಳ್ಳನಂತೆ ಸಂನ್ಯಾಸಿನಿಯ ಮನೆ ಸೇರಿ, ಹಣೆ ಕಾಣದಂತೆ ತಲೆಗೆ ಮುಂಡಾಸು ಬಿಗಿದು ಬಟ್ಟೆತೊಟ್ಟ. ತಾನೊಬ್ಬನಿಗೇ ಈ ಅವಸ್ಥೆ ಏಕೆ ಅವರೂ ಅನುಭವಿಸಲಿ ಎಂದುಕೊಂಡು, "ನಾನು ಬರುವಾಗ ಕಳ್ಳರು ದೋಚಿದರು. ರಾತ್ರಿಯೆಲ್ಲ ನಿದ್ದೆಯಿಲ್ಲ ನಾನು ಮಲಗುತ್ತೇನೆ" ಎಂದು ಮುದುಡಿಕೊಂಡ. ಎರಡನೆಯವನೂ ಸಂಜೆ ದೇವಸ್ಮಿತೆಯ ಮನೆಯ ಕಡೆಗೆ ಉತ್ಸಾಹದಿಂದ ಹೆಜ್ಜೆಹಾಕಿದ. ಅವನಿಗೂ ಅದೇ ಅಪಮಾನ ಕಾದಿತ್ತು. ಮೊದಲಿನ ತನ್ನ ಗೆಳೆಯನಂತೆ ಇಲ್ಲದ್ದನ್ನೆಲ್ಲ ಹೇಳಿ ಮಾನವಂತನಾಗಲು ನೋಡಿದ. ಮೂರನೆಯವನಿಗೂ ಅದೇ ಶಿಕ್ಷೆಯಾಯಿತು. ಇವರ ಸ್ನೇಹಿತನಲ್ಲವೆ? ನಾಲ್ಕನೆಯವನಿಗೆ ಈ ಮಧುರಾನುಭವವನ್ನು ಮಾಡಿಸದೆ ಹೋಗುವರೆ ಉಳಿದ ಸ್ನೇಹಿತರು? ಅವನೂ ಅದೇ ರೀತಿ ಹೋಗಿಬಂದ. ಮಾನ, ಮರ್ಯಾದೆ, ಹಣ ಎಲ್ಲ ಕಳೆದುಕೊಂಡ ನಾಲ್ವರೂ ಖದೀಮರು ಹಣೆಯ ಗುರುತು ಕಾಣದಂತೆ ತಲೆಗೆ ದಪ್ಪಬಟ್ಟೆ ಬಿಗಿದುಕೊಂಡು ತಮ್ಮೂರಿಗೆ ಕಾಲ್ಕಿತ್ತರು.

ಇತ್ತ ದೇವಸ್ಮಿತೆ ತನ್ನ ಗಂಡನಿಗೆ ಈ ವಂಚಕರು ಹಾನಿ ಮಾಡಬಹುದು ಎಂದು ಊಹಿಸಿದಳು. ನಡೆದಿದ್ದನ್ನೆಲ್ಲ ತನ್ನ ಅತ್ತೆಗೆ ಹೇಳಿ, ಕೆಲವು ದಾಸಿಯರೊಡನೆ ಕಟಾಹ ದ್ವೀಪಕ್ಕೆ ಹೊರಟಳು. ತಾನು ಗಂಡು ವೇಷಧರಿಸಿದಳು. ಹಡಗನ್ನೇರಿ ವ್ಯಾಪಾರಿಯೆಂದು ಹೇಳಿಕೊಂಡು ಗಂಡನಿದ್ದ ಕಟಾಹ ದ್ವೀಪಕ್ಕೆ ಬಂದಳು. ವರ್ತಕರಿದ್ದ ಬೀದಿಗೆ ಬಂದು ತನ್ನ ಪತಿಯಾದ ಗುಹಸೇನನನ್ನು ನೋಡಿದಳು. ಅವನೂ ಇವಳನ್ನು ನೋಡಿದ. ಕಣ್ಣು ಅಲ್ಲೇ ನೆಟ್ಟಿತು. ಗಂಡಸಾದರೂ ಇದೇನು ನನ್ನ ಮೇಲೆ ಮೋಡಿ ಮಾಡುತ್ತಿದ್ದಾನೆ, ಯಾರಿವನು? ಎಂದುಕೊಂಡ ಗುಹಸೇನ.

ದೇವಸ್ಮಿತೆ ದ್ವೀಪದ ರಾಜನ ಬಳಿಗೆ ಹೋಗಿ, "ಎಲ್ಲ ಪ್ರಜೆಗಳನ್ನು ಸೇರಿಸಿ, ನನ್ನದೊಂದು ವಿಜ್ಞಾಪನೆಯಿದೆ" ಎಂದು ಕೋರಿದಳು. ರಾಜನು ಕುತೂಹಲದಿಂದ ಪೌರರನ್ನೆಲ್ಲ ಸೇರಿಸಿ, "ಏನದು ನಿನ್ನ ಕೋರಿಕೆ?" ಎಂದ. "ರಾಜನೆ, ನನ್ನ ನಾಲ್ವರು ದಾಸರು ಇಲ್ಲಿಗೆ ಓಡಿ ಬಂದಿದ್ದಾರೆ. ಅವರನ್ನು ನನ್ನ ವಶಕ್ಕೆ ಕೊಡಬೇಕು" ಎಂದಳು. "ಇವರಲ್ಲಿ ಯಾರು ನಿನ್ನ ದಾಸರು– ಗುರುತು ಹಿಡಿ" ಎಂದ. ಮುಂಡಾಸು ಸುತ್ತಿದ್ದ ನಾಲ್ವರು ಯುವಕರನ್ನು ಗುರುತಿಸಿದಳು. ಅಲ್ಲಿದ್ದ ವ್ಯಾಪಾರಿಗಳು, "ಆಹಾ! ಏನು ಪೊಗರು ಇವನಿಗೆ, ಇವರೆಲ್ಲ ಸಮುದ್ರ ವ್ಯಾಪಾರಿಗಳ ಪುತ್ರರು, ಧನವಂತರು ನಿನ್ನ ದಾಸರು ಹೇಗಾದಾರು?" ಎಂದರು. "ನಂಬಿಕೆ ಬರಬೇಕಾದರೆ ಇವರ ಹಣೆಯಲ್ಲಿ ನಾಯಿಕಾಲಿನ ಗುರುತಿದೆಯಾ ನೋಡಿ. ನಾನೇ ಇವರಿಗೆಲ್ಲ ಮುದ್ರೆಯೊತ್ತಿ ಕಳಿಸಿದ್ದೇನೆ. ಧನವಂತರೆಲ್ಲ ಮಾನವಂತರೇ ಆಗಬೇಕೆಂಬ ನಿಯಮವೇನೂ ಇಲ್ಲವಲ್ಲ," ಎಂದಳು. ಮುಂಡಾಸು ತೆಗೆದು ನೋಡಿದರೆ, ಹಣೆಯ ಮೇಲೆ ನಾಯಿಕಾಲಿನ ಮುದ್ರೆ ! ಯುವಕರ ಪರವಾಗಿದ್ದವರಿಗೆಲ್ಲ ನಾಚಿಕೆಯಾಯಿತು. ರಾಜನು ಮಾತ್ರ ಆದೇಶ ನೀಡಿದ. "ನಿನ್ನ ದಾಸರನ್ನು ಕರೆದೊಯ್ಯಿ" ಎಂದನು. ಅಪ್ಪಂದಿರು ಪುತ್ರರ ದಾಸ್ಯವನ್ನು ಬಿಡಿಸಲು ಅಪಾರ ಪ್ರಮಾಣದ ಹಣವನ್ನು ದೇವಸ್ಮಿತೆಗೆ ಕೊಟ್ಟರು. ರಾಜನಿಗೂ ದಂಡ ತೆತ್ತರು. ಧನಿಕರಾದವರು ಹಣದಿಂದ ತಮಗಾದ ಅಪಮಾನದ ತೀವ್ರತೆಯನ್ನು ತಗ್ಗಿಸಿಕೊಳ್ಳಬಹುದೆಂಬುದು ಸಾರ್ವಕಾಲಿಕ ನಿಯಮವೆ ಸರಿ!

ದೇವಸ್ಮಿತೆ ತನ್ನ ಪುರುಷ ವೇಷವನ್ನು ಕಳಚಿದಳು. ರಾಜನಿಗೆ ಆಶ್ಚರ್ಯ. ಹೆಣ್ಣಿನ ಮನಸ್ಥೈರ್ಯ, ಜಾಣ್ಮೆ, ಅವನನ್ನು ದಂಗುಬಡಿಸಿತು. ಗುಹಸೇನ ತನ್ನ ಪತ್ನಿಯ ಕೌಶಲ ಕಂಡು ಹೆಮ್ಮೆಯಿಂದ ಬೀಗಿದ. ಇಂಥ ಸತೀರತ್ನವನ್ನು ಬಿಟ್ಟು ರತ್ನವ್ಯಾಪಾರ ಮಾಡಲು ಪರವೂರಿಗೆ ಬಂದೆನಲ್ಲ ಎಂಥ ಮೂಢನೆಂದುಕೊಂಡ. ಗುಹಸೇನ ದೇವಸ್ಮಿತೆಯ ಜೊತೆಯಲ್ಲಿ ಅಪಾರ ಧನರಾಶಿಯನ್ನೂ ತೆಗೆದುಕೊಂಡು ತಾಮ್ರಲಿಪ್ತಿಗೆ ಬಂದು ನೆಮ್ಮದಿಯ ಬದುಕು ಸಾಗಿಸಿದ. ಸೊಸೆಯ ಸೌಭಾಗ್ಯವನ್ನು ಕಂಡು ಅತ್ತೆ ಆನಂದ ಪುಳಕಿತಳಾದಳು. ●

13ನೇ ಪುಟದಿಂದ

ಸೂತ್ರಗಳನ್ನು ತಮ್ಮ ನಂಬಿಕಸ್ಥ ಪ್ರಧಾನಾಮಾತ್ಯರಿಗೆ ವಹಿಸಿದ್ದರು. ಚೇಳಿಗೆ ಅಧಿಕಾರ ಕೊಟ್ಟಂತಾಗಿತ್ತು. ಶೈವ ಮತಾನುಯಾಯಿಯಾಗಿದ್ದ ಅವರು ವೈಷ್ಣವ ಮತದ ಪರಮ ದ್ವೇಷಿಯಾಗಿದ್ದರು. ಅವರ ಧರ್ಮ ಗುರುಗಳೂ ಅಂಥವರೇ. ಅವರು ಆಡಳಿತ ನಡೆಸಲು ಆರಿಸಿಕೊಂಡಿದ್ದ, ಎಲ್ಲ ಹಂತದ ಸಿಬ್ಬಂದಿಯೂ ಧೂರ್ತ ಶೈವರೇ. ರಾಜ್ಯದಲ್ಲಿ ಅಧಿಕಾರ ಸ್ಥಾನದಲ್ಲಿ ಇದ್ದಂತಹ ಎಲ್ಲ ವೈಷ್ಣವರನ್ನು ಏನೋ ಒಂದು ನೆವ ಹೂಡಿ ಓಡಿಸಿಬಿಟ್ಟಿದ್ದರು. ಹೀಗೆ ಧೂರ್ತ, ದುಷ್ಟ, ಅಧಿಕಾರ ಮದದಿಂದ ಅಂಥ ಘೋರ ಅನಾಹುತ ನಡೆದುಹೋಯಿತು."

"ಎಲ್ಲ ಶ್ರೀಹರಿಯ ಲೀಲೆ! ನಮ್ಮಿಂದ ಹೊಯ್ಸಳ ರಾಜ್ಯದಲ್ಲಿ ತನ್ನ ಕೆಲಸ ಮಾಡಿಸಿಕೊಳ್ಳಬೇಕೆಂದು ಅವನೇ ಈ ನಾಟಕ ಆಡಿಸಿದ್ದಾನೆ. ಅವನು ಕಪಟ ನಾಟಕ ಸೂತ್ರಧಾರಿ ಎಂದು ಭಕ್ತರಿಂದ ಕರೆಸಿಕೊಂಡವನಲ್ಲವೇ? ಇಲ್ಲಿ ನಮಗೆ ವಿಷ್ಣುವರ್ಧನರನ್ನು ಜೊತೆ ಮಾಡಿಕೊಟ್ಟು ಈ ಪ್ರದೇಶದಲ್ಲಿ ಅದ್ಭುತವನ್ನು ಮೆರೆದಿದ್ದಾನೆ. ಈಗಾಗಲೇ ತೊಣ್ಣೂರು ಮೇಲುಕೋಟೆ, ವೇಲಾಪುರಿಗಳಲ್ಲಿ ಅವನ ಭವ್ಯ ವಿಶಾಲ ಸುಂದರ ಆಲಯಗಳನ್ನು ನಿರ್ಮಿಸಿಕೊಂಡು ಭಕ್ತರನ್ನು ಆಕರ್ಷಿಸುತ್ತಿದ್ದಾನೆ. ವಿಷ್ಣುವರ್ಧನರನ್ನು ತನ್ನ ಕಾರ್ಯಕ್ಕೆ ಹಚ್ಚಿದ್ದು ಅವನೇ! ವಿಷ್ಣುವರ್ಧನರು ಇನ್ನು ಎರಡು ವಿಷ್ಣು ದೇವಾಲಯಗಳನ್ನು ನಿರ್ಮಿಸಬೇಕೆಂದು ಅವರಿಗೆ ತಿಳಿಸಿದ್ದೇವೆ. ಅವರು ಒಪ್ಪಿದ್ದಾರೆ. ಇದೆಲ್ಲ ಶ್ರೀಹರಿಯ ಲೀಲಾ ವಿನೋದ. ಅವನೇ ಸೂತ್ರಧಾರಿ. ನಾವು ಪಾತ್ರಧಾರಿಗಳು! ನಿಮಿತ್ತ ಮಾತ್ರರು!"

"ಹೌದು ಮಹಾಸ್ವಾಮಿ."

"ಈಗ ನಮಗೆ ಇಲ್ಲಿನ ಕಾರ್ಯ ಮುಗಿಯಿತೆಂದು ಭಾಸವಾಗುತ್ತಿದೆ. ಶ್ರೀರಂಗವನ್ನು, ರಂಗನಾಥಸ್ವಾಮಿಯನ್ನು ಬಿಟ್ಟು ಬಂದು ಹತ್ತಿರ ಹತ್ತಿರ ಎರಡು ದಶಕಗಳಾಗುತ್ತಿವೆ. ರಂಗನಾಥ ಸ್ವಾಮಿಯ ದರ್ಶನ ಮಾಡಬೇಕೆಂಬ ಒತ್ತಡ ಹೆಚ್ಚುತ್ತಿದೆ. ನಾವು ಶ್ರೀರಂಗಂಗೆ ಹಿಂದಿರುಗಿದರೆ ಹೇಗೆ?"

"ನನ್ನ ಪ್ರಕಾರ ಅಲ್ಲೀಗ ನಿಮಗೇನೂ ಅಪಾಯವಿರುವುದಿಲ್ಲ. ರಾಜನ ಊಳಿಗದಲ್ಲಿದ್ದ ಪ್ರಧಾನಾಮಾತ್ಯ ಮತ್ತು ಇತರ ದುಷ್ಟ ಶೈವರು ಅಳಿದುಹೋಗಿದ್ದಾರೆ. ಸರ್ವಧರ್ಮ ಸಮಭಾವದ ಅಧಿಕಾರಿ ವರ್ಗ ರಾಜರಿಗೆ ಅಧಿಕಾರ ನಡೆಸಲು ನೆರವಾಗುತ್ತಿದೆ. ನೀವೀಗ ಅಲ್ಲಿಗೆ ತೆರಳಬಹುದು ಎಂದು ನನ್ನ ಅಭಿಪ್ರಾಯ."

"ಸರಿ ಹಾಗಾದರೆ... ಈ ಕುರಿತು ಮಹಾರಾಜ ವಿಷ್ಣುವರ್ಧನರ ಬಳಿ ಪ್ರಸ್ತಾವಿಸುತ್ತೇವೆ..."

ರಾಮಾನುಜರು ವಿಷ್ಣುವರ್ಧನರಿಗೆ ಅವರ ತುರ್ತು ಭೇಟಿ ಮಾಡಬೇಕಾಗಿದೆಯೆಂದು ವಿನಂತಿ ಕಳಿಸಿದರು. ಮಹಾರಾಜ ಶ್ರೀಮಠಕ್ಕೇ ಆಗಮಿಸಿದ.

"ಮಹಾರಾಜ ಇತ್ತೀಚೆಗೆ ನಮ್ಮ ಮನಸ್ಸಿನಲ್ಲಿ ಬಲವಾದ ಆಶಯ ಒಂದು ಮೂಡುತ್ತಿದೆ. ನಾವು ಶ್ರೀರಂಗಂಗೆ ಹಿಂದಿರಗಬೇಕೆಂಬ ಮಾನಸಿಕ ಒತ್ತಡ ಹೆಚ್ಚುತ್ತಿದೆ."

"ಇದೇನು ಸ್ವಾಮಿ! ಹೀಗನ್ನುತ್ತಿರುವಿರಿ. ನಮ್ಮಿಂದೇನಾದರೂ ಅಪಚಾರವಾಯಿತೇ?"

"ಛೆ ಛೆ! ಯಾವ ಬಾಯಿಂದ ಹಾಗೆ ಹೇಳಲಿ ಮಹಾರಾಜ? ನೀವು ನಮಗೆ ರಾಜಾಶ್ರಯವನ್ನು ನೀಡಿ ಶ್ರೀಮನ್ನಾರಾಯಣನ ಸೇವೆಯನ್ನು ಮಾಡಲು ಎಲ್ಲ ಬಗೆಯ ಸಹಾಯವನ್ನು ಮಾಡಿದ್ದೀರಿ. ನನ್ನ ಪ್ರಾರ್ಥನೆಯಂತೆ ವಿಷ್ಣು ದೇವಾಲಯಗಳನ್ನು ನಿರ್ಮಿಸಿದ್ದೀರಿ. ನಾವು ನಿಮ್ಮ ರಾಜ್ಯದಲ್ಲಿದ್ದಷ್ಟು ಕಾಲ ನಮಗೂ ವೈಷ್ಣವ ಮತಕ್ಕೂ ಸ್ವರ್ಣಯುಗ ಎಂದರೂ ಉತ್ಪ್ರೇಕ್ಷೆಯಾಗದು. ಕಿರಂಗೂರಿನ ಬಳಿ ಶ್ರೀವೈಷ್ಣವ ಪಂಡಿತರಿಗಾಗಿಯೇ ಅಷ್ಟ ಗ್ರಾಮಗಳನ್ನು ನಿರ್ಮಿಸಿಕೊಟ್ಟಿದ್ದೀರಿ. ನಿಮ್ಮಷ್ಟು ಶ್ರೀಹರಿಯ ಸೇವೆಯನ್ನು ಮಾಡಿದ ಇನ್ನೊಬ್ಬ ಮಹಾರಾಜ ಈ ಭೂಲೋಕದಲ್ಲಿ ಇರಲಿಕ್ಕಿಲ್ಲ."

"ನಾನು ಏನು ಶ್ರೀಹರಿಯ ಸೇವೆ ಮಾಡಿದ್ದರೂ ಅದೆಲ್ಲಕ್ಕೂ ತಾವೇ ಕಾರಣಕರ್ತರು. ತಮ್ಮದೇ ಪ್ರೇರಣೆ, ಮಾರ್ಗದರ್ಶನ. ನೀವು ಹೇಳಿದಿರಿ ನಾನು ಮಾಡಿದೆ ಅಷ್ಟೆ. ತಮ್ಮ ಮೂಲಕ ನಮ್ಮ ರಾಜ್ಯದಲ್ಲಿ ಉಂಟಾದ ಧಾರ್ಮಿಕ ವಾತಾವರಣದಿಂದ ಪ್ರಜೆಗಳಲ್ಲಿ ಶಾಂತಿ ಸಮಾಧಾನಗಳು ನೆಲೆಸಿದವು. ಅವರಲ್ಲಿ ಮೂಡಿದ ಭಕ್ತಿಭಾವ ಅವರಲ್ಲಿ ಕ್ರೋಧ, ಆಕ್ರೋಶಗಳನ್ನು ಮರೆಸಿ ವಿನಮ್ರ ಶಿಸ್ತುಬದ್ಧ ಪ್ರಜೆಗಳನ್ನಾಗಿ ಮಾಡಿದವು. ನನ್ನ ಆಡಳಿತ ಕಾರ್ಯವೂ ಸುಗಮಗೊಂಡಿತು."

"ನಿಜವೇ. ಭಕ್ತಿ ಪ್ರಪತ್ತಿಗಳು ಮನುಷ್ಯನ ಸ್ವಾರ್ಥ ಪಿಪಾಸೆ, ಆಕ್ರಮಣಶೀಲ ಮನೋಭಾವನೆ, ಪರರ ದ್ವೇಷ ಮುಂತಾದ ಕೆಟ್ಟ ಗುಣಗಳನ್ನು ಹೋಗಲಾಡಿಸಿ ಅವರನ್ನು ಸಾತ್ತ್ವಿಕರನ್ನಾಗಿ ಮಾಡುತ್ತದೆ. ಸಾತ್ತ್ವಿಕ ಪ್ರಜೆಗಳಿದ್ದ ಕಡೆ ರಾಜ್ಯಾಡಳಿತವೂ ಸುಗಮವಾಗಿರುತ್ತದೆ. ಈ ರಹಸ್ಯವನ್ನು ಅರಿತುಕೊಳ್ಳದ ರಾಜರು ಜನರ ಅಶಾಂತಿ, ಅಸಮಾಧಾನಗಳಿಗೆ ಎಡೆಮಾಡಿಕೊಟ್ಟು ಪ್ರಜೆಗಳು ಪ್ರತಿಭಟಿಸಿದಾಗ ದೌರ್ಜನ್ಯಕ್ಕೆ ಕೈಹಾಕುತ್ತಾರೆ...ನೀವು ನಿಜವಾದ ಆಡಳಿತ ರಹಸ್ಯವನ್ನು ಅರಿತು ರಾಜ್ಯಭಾರ ನಡೆಸುತ್ತಿರುವಿರಿ."

"ಅದಕ್ಕೂ ನೀವೇ ಕಾರಣರು ಮಹಾಸ್ವಾಮಿ...ಇರಲಿ... ಇದೇನು ಇದ್ದಕ್ಕಿದ್ದಂತೆ ಚೋಳ ದೇಶಕ್ಕೆ ಹಿಂದಿರುಗುವ ನಿರ್ಧಾರ ತಳೆದಿದ್ದೀರಿ?"

"ಶ್ರೀರಂಗಂನಿಂದ ಬಂದಿರುವ ಅರ್ಚಕ ರಂಗರಾಜ ಭಟ್ಟರ್ ಚೋಳ ರಾಜ್ಯದಲ್ಲಿ ಬದಲಾಗಿರುವ ಪರಿಸ್ಥಿತಿಯನ್ನು ವಿವರಿಸಿದರು. ದುಷ್ಟ ಆಡಳಿತಗಾರರು ಹೋಗಿ ಸುಸಂಸ್ಕೃತರು ಅಧಿಕಾರ ಸ್ಥಾನಗಳಲ್ಲಿದ್ದಾರೆ ಎಂದು ತಿಳಿಸಿದರು. ಜೊತೆಗೆ ಶ್ರೀರಂಗನಾಥ ಸ್ವಾಮಿ ನಮ್ಮನ್ನು ಕರೆಯುತ್ತಿದ್ದಾನೆ.... ಎಷ್ಟಾದರೂ ನಮ್ಮ ಮೂಲ ಮಠ ಇರುವುದು ಶ್ರೀರಂಗಂನಲ್ಲಿಯೇ ಅಲ್ಲವೇ! ನೀನು ಹೊಯ್ಸಳ ರಾಜ್ಯದಲ್ಲಿ ಮಾಡಿರುವ ಸೇವೆ ಸಾಕು. ನಿನ್ನ ಉಳಿದ ಆಯಸ್ಸನ್ನು ಶ್ರೀರಂಗಂನಲ್ಲಿಯೇ ಕಳಿ ಎಂದು ರಂಗನಾಥಸ್ವಾಮಿ ಹೇಳುತ್ತಿದ್ದಾನೆ..."

"ಹೌದು. ನಿಮ್ಮ ಮಾಹಿತಿಯಲ್ಲಿ ಸತ್ಯಾಂಶವಿದೆ. ಕುಲೋತ್ತುಂಗ ಮಹಾರಾಜ ಧಾರ್ಮಿಕವಾಗಿ ಮತಾಂಧನೂ ಅಲ್ಲ ಪ್ರಜಾಪೀಡಕನೂ ಅಲ್ಲ. ಈಗಾಗಲೇ ಶ್ರೀರಂಗಂನಿಂದ ಅರ್ಚಕರನ್ನೂ ಯಾದವಾದ್ರಿಗೆ ಕಳಿಸಿ ಅದನ್ನು ನಿರೂಪಿಸಿದ್ದಾನೆ. ತ್ರಿಭುವನಮಲ್ಲ ವಿಕ್ರಮಾದಿತ್ಯರಂಥ ಜನ್ಮಜಾತ ವೈರಿಗೆ ರಂಗನಾಥಸ್ವಾಮಿ ದೇವಾಲಯಕ್ಕೆ ಹೋಗಲು ಸಂಧಿ ವಿಗ್ರಹಿಯ ಮೂಲಕ ಅನುಮತಿಸಿದ್ದು ಆತನ ವಿಶಾಲ ಮನೋಧರ್ಮಕ್ಕೆ ಇನ್ನೊಂದು ಉದಾಹರಣೆ."


"ಇದರಿಂದಾಗಿ ನಾವು ಶ್ರೀರಂಗಕ್ಕೆ ಹಿಂದಿರುಗಲು ಮನಸ್ಸು ಮಾಡಿದೆವು."

"ನಿಮ್ಮನ್ನು ಇಲ್ಲಿಂದ ಕಳಿಸಿಕೊಡಲು ನಮ್ಮ ಮನಸ್ಸು ಒಪ್ಪುತ್ತಿಲ್ಲ ಮಹಾಸ್ವಾಮಿ. ಮನಸ್ಸು ದುಃಖಭರಿತವಾಗುತ್ತದೆ ಮಹಾಸ್ವಾಮಿ" ಹೀಗನ್ನುವಾಗಲೇ ವಿಷ್ಣುವರ್ಧನನ ಕಣ್ಣಾಲಿಗಳು ತುಂಬಿ ಬಂದಿದ್ದವು.

ಆದರೆ ಆ ವೇಳೆಗಾಗಲೇ ಶತಾಯುಷಿಗಳಾಗಿದ್ದ ವೃದ್ಧ ಸಂನ್ಯಾಸಿಯ ಬೇಡಿಕೆಯನ್ನು ತಿರಸ್ಕರಿಸುವ ಮನಸ್ಸು ಅವನದಾಗಿರಲಿಲ್ಲ. ಮೌನವಾಗಿಯೇ ಸಮ್ಮತಿಯ ಮುದ್ರೆಯನ್ನು ಒತ್ತಿದ.

ರಾಮಾನುಜರು ಮೇಲುಕೋಟೆಗೆ, ಹೊಯ್ಸಳ ರಾಜ್ಯಕ್ಕೆ ವಿದಾಯ ಹೇಳುವ ಮುಹೂರ್ತವನ್ನು ನಿಶ್ಚಯಿಸಿದರು.

**(ಮುಂದುವರಿಯುವುದು)**



# ಗೀತಾ ಪ್ರವಚನ

■ ಸಂತ ವಿನೋಬಾ ಬಾವೆ.
■ ಕನ್ನಡ ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮಾ

## ಭಕ್ತಿಯಿಂದ ವಿಶುದ್ಧ ಆನಂದದ ಲಾಭ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

12. ಒಂದು ಸಲ ರೈಲಿನಲ್ಲಿ ಹೊರಟಿದ್ದೆ. ಗಾಡಿ ಯಮುನೆಯ ಸೇತುವೆಯ ಮೇಲೆ ಬಂತು. ಹತ್ತಿರ ಇದ್ದ ಮನುಷ್ಯನೊಬ್ಬ ಪುಲಕಿತ ಹೃದಯದಿಂದ ನದಿಯೊಳಗೆ ಕಾಸನ್ನೆಸೆದ. ಪಕ್ಕದಲ್ಲಿ ಇನ್ನೊಬ್ಬ ವಿಮರ್ಶಕ ವೃತ್ತಿಯವ ಇದ್ದ. 'ಮೊದಲೇ ದರಿದ್ರ ದೇಶ. ಆದರೂ ಜನ ಹೀಗೆ ವ್ಯರ್ಥವಾಗಿ ಹಣ ಹಾಳು ಮಾಡುತ್ತಾರೆ' ಎಂದ. ನಾನು 'ನೀವು ಆತನ ಉದ್ದೇಶವನ್ನು ಅರಿತುಕೊಳ್ಳಲಿಲ್ಲ. ಯಾವ ಭಾವನೆಯಿಂದ ಆತ ಎರಡು ಕಾಸನ್ನು ನದಿಗೆ ಎಸೆದನೋ, ಆ ಭಾವದ  ಬೆಲೆ ಎರಡು ಮೂರು ದುಡ್ಡೂ ಆಗಲಾರದೆ? ಅದೇ ದುಡ್ಡನ್ನು ಯಾವ ಸತ್ಕಾರ್ಯಕ್ಕೆ ಕೊಟ್ಟಿದ್ದರೂ ಇನ್ನೂ ಒಳ್ಳೆಯ ದಾನವಾಗುತ್ತಿತ್ತೆಂಬುದಿರಲಿ. ಆದರೆ ಈ ನದಿ ಎಂದರೆ ಹರಿಯುತ್ತಿರುವ ದೇವರ ಕರುಣೆ ಎಂಬ ಭಾವನೆ ಆ ಹಳ್ಳಿಗನ ಮನಸ್ಸಿನಲ್ಲಿ ಹುಟ್ಟಿ ಆತ ಈ ರೀತಿ ತ್ಯಾಗ ಮಾಡಿದ. ನಿಮ್ಮ ಅರ್ಥಶಾಸ್ತ್ರದಲ್ಲಿ ಆ ಭಾವನೆಗೆ ಸ್ಥಾನವಿದೆಯೇ? ದೇಶದಲ್ಲಿನ ಹೊಳೆಯೊಂದನ್ನು ಕಂಡು ಅವನ ಅಂತಃಕರಣ ಕರಗಿತು. ಈ ಭಾವನೆ ನಿಮಗೆ ಅರ್ಥವಾದಲ್ಲಿ ನಾನು ನಿಮ್ಮ ದೇಶಭಕ್ತಿಯನ್ನು ಮೆಚ್ಚಿಕೊಂಡೆನು' ಎಂದೆ. ದೇಶಭಕ್ತಿ ಎಂದರೇನು ರೊಟ್ಟಿಯೆ? ದೇಶದಲ್ಲಿನ ಮಹಾನದಿಯನ್ನು ಕಂಡೊಡನೆ ಸರ್ವಸಂಪತ್ತನ್ನೂ ಅದರಲ್ಲಿ ಮುಳುಗಿಸೋಣ, ಅದರ ಚರಣದಲ್ಲಿ ಅರ್ಪಿಸೋಣ ಎಂದು ಮನಸ್ಸಿನಲ್ಲಿ ಬರುವುದು ಎಂಥ ದೇಶಭಕ್ತಿ! ಆ ಎಲ್ಲ ಹಣ, ಆ ಬಿಳಿ ಹಳದಿ ಕಂದು ಕಲ್ಲು, ಹುಳುಗಳ ಹೊಲಸಿನಿಂದಾದ ಮುತ್ತು, ಇದ್ದಲಿನ ರತ್ನ, ಇವುಗಳ ಯೋಗ್ಯತೆಯೂ ಅಷ್ಟೇ. ನೀರಿನಲ್ಲಿ ಮುಳುಗುವಷ್ಟೇ. ಪರಮೇಶ್ವರನ ಪಾದಗಳೆದುರಿಗೆ ಈ ಎಲ್ಲ ಧೂಳಿ ತುಚ್ಛ. ಹೊಳೆಗೂ ಪರಮೇಶ್ವರನ ಪಾದಕ್ಕೂ ಯಾವ ಸಂಬಂಧ ಎಂದೀರಿ. ನಿಮ್ಮ ಸೃಷ್ಟಿಯಲ್ಲಿ ದೇವರ ಸಂಬಂಧ ಎಲ್ಲಾದರೂ ಇದೆಯೇ? ಹೊಳೆ ಎಂದರೆ ಆಕ್ಸಿಜನ್ ಮತ್ತು ಹೈಡ್ರೋಜನ್. ಸೂರ್ಯ ಎಂದರೆ ಗ್ಯಾಸ್‌ಲೈಟಿನ ಭಾರಿ ಪ್ರಕಾಶ. ದೊಡ್ಡದೊಂದು ಬೆಂಕಿ ಪೊಟ್ಟಣ ಸೂರ್ಯ. ಅವನಿಗೇಕೆ ನಮಸ್ಕಾರ? ಹೌದು ನಿಮ್ಮ ರೊಟ್ಟಿಗೆ ಮಾತ್ರವೇ ನಮಸ್ಕಾರ! ಆ ರೊಟ್ಟಿಯಲ್ಲಾದರೂ ಇರುವುದೇನು? ಅದೂ ಒಂದು ಬಿಳಿಯ ಮಣ್ಣೆ. ಅದನ್ನು ಕಂಡು ಆನಂದವೇಕೆ? ಸೂರ್ಯನುದಯಿಸಿದ. ಸುಂದರ ನದಿ ಕಾಣಿಸಿತು. ಆಗ ಪರಮಾತ್ಮನ ಅನುಭವವಾಗದಿದ್ದರೆ ಇನ್ನಾವಾಗ ಆಗಬೇಕು? ಆಂಗ್ಲ ಕವಿ ವರ್ಡ್ಸ್‌ವರ್ತ್ ಅಳುತ್ತಾ ಹೇಳುತ್ತಾನೆ: "ಹಿಂದೆ ಕಾಮನ ಬಿಲ್ಲನ್ನು ಕಂಡಾಗ ನಾ ನೆಗೆಯುತ್ತಿದ್ದೆ, ಕುಣಿಯುತ್ತಿದ್ದೆ, ಎದೆ ತುಂಬಿಬರುತ್ತಿತ್ತು. ಇಂದೇಕೆ ಹಾಗಾಗುತ್ತಿಲ್ಲ? ಹಿಂದಣ ಬಾಳ ಸವಿಯನ್ನು ಕಳೆದುಕೊಂಡು ಕಲ್ಲಾದೆನೇನೋ ನಾನು!"

ಸಾರಾಂಶವಿಷ್ಟೆ: ಸಕಾಮ ಭಕ್ತಿಗೂ ಅಜ್ಞಾನಿಯ ಭಾವನೆಗೂ ತುಂಬ ಮಹತ್ತ್ವವುಂಟು. ಅವುಗಳ ಸಾಮರ್ಥ್ಯವೂ ದೊಡ್ಡದು. ಜೀವ ಯಾವುದೇ ಇರಲಿ, ಎಂಥದೇ ಇರಲಿ. ಒಮ್ಮೆ ಪರಮಾತ್ಮನ ದರಬಾರಿನಲ್ಲಿ ಬಂದು ಬಿಟ್ಟರೆ ಅದು ಮಾನ್ಯ. ಬೆಂಕಿಗೆ ಎಂಥ ಕಟ್ಟಿಗೆ ಹಾಕಿದರೂ ಅದು ಉರಿಯುತ್ತದೆ. ಪರಮಾತ್ಮನ ಭಕ್ತಿ ಒಂದು ಅಪೂರ್ವ ಸಾಧನೆ, ಸಕಾಮ ಭಕ್ತಿಯನ್ನು ಕಂಡು ಪರಮೇಶ್ವರ ಅಭಿಮಾನ ಪಡುತ್ತಾನೆ. ಮುಂದೆ ಆ ಭಕ್ತಿ ನಿಷ್ಕಾಮವಾಗಿ ಪೂರ್ಣತೆಯ ಕಡೆ ನಡೆದೀತು.

### ನಿಷ್ಕಾಮ ಭಕ್ತಿಯ ಪ್ರಕಾರಗಳು–ಪೂರ್ಣತ್ವ

13. ಸಕಾಮ ಭಕ್ತ ಒಂದು ರೀತಿಯವನು. ನಿಷ್ಕಾಮ ಭಕ್ತರನ್ನು ಇನ್ನು ನೋಡೋಣ. ಅದರಲ್ಲಿ ಎರಡು ಬಗೆ: ಏಕಾಂಗಿ, ಪೂರ್ಣ. ಏಕಾಂಗಿ ಭಕ್ತರು ಮೂರು ಬಗೆ. ಮೊದಲು ಆರ್ತ ಭಕ್ತರದು. ಆರ್ತ ಎಂದರೆ ದೇವರಿಗಾಗಿ ಅಳುವವ, ಹಂಬಲಿಸುವವ; ನಾಮದೇವನಂತೆ. ದೇವರ ಪ್ರೀತಿ ಎಂದಿಗೆ ಸಿಕ್ಕೀತು, ಆತ ನನ್ನನ್ನೆಂದು ಅಪ್ಪಿಕೊಂಡಾನು, ಎಂದು ಅವನ ಕಾಲಿಗೆ ನಾ ಬಿದ್ದೇನು, ಹೀಗೆ ತಳಮಳಿಸುವವ. ಈ ಭಕ್ತ ಪ್ರತಿಯೊಂದು ಕಾರ್ಯವನ್ನೂ ಹಾರ್ದಿಕತೆಯುಂಟೋ ಇಲ್ಲವೋ ಪ್ರೀತಿಯುಂಟೋ ಇಲ್ಲವೊ ಎಂಬ ಭಾವನೆಯಿಂದ ನೋಡುತ್ತಾನೆ.

14. ಜಿಜ್ಞಾಸುಗಳದು ಎರಡನೆಯ ಬಗೆ. ಈಗಿನ ನಮ್ಮ ದೇಶದಲ್ಲಿ ಇವರು ವಿರಳ. ಗೌರೀಶಂಕರವನ್ನು ಯಾರೋ ಮತ್ತೆ ಮತ್ತೆ ಹತ್ತಿಯಾರು, ಸತ್ತು ಹೋದಾರು. ಇನ್ನು ಯಾರೋ ಉತ್ತರ ಧ್ರುವವನ್ನು ಶೋಧಿಸುತ್ತ ಹೊರಟು, ತಮ್ಮ ಶೋಧದ ವಿಚಾರವನ್ನು ಕಾಗದದಲ್ಲಿ ಗುರುತಿಸಿ, ಸೀಸೆಯಲ್ಲಿ ಹಾಕಿ, ಅದನ್ನು ನೀರಿನಲ್ಲಿ ಬಿಟ್ಟು ಸತ್ತುಹೋದಾರು. ಇನ್ನು ಕೆಲವರು ಜ್ವಾಲಾಮುಖಿಯೊಳಗೂ ಪ್ರವೇಶಿಸಿಯಾರು. ಹಿಂದೂಸ್ಥಾನದ ಜನರಿಗೆ ಸಾವು ಎಂದರೆ ಅಂಜಿಕೆ. ಮದುವೆಯಾಗುವುದು. ಮಕ್ಕಳಾಗುವುದು–ಇದನ್ನು ಬಿಟ್ಟರೆ ಅವರಿಗೆ ಬೇರೆ ಪುರುಷಾರ್ಥವೇ ಉಳಿದಿಲ್ಲ. ಜಿಜ್ಞಾಸು ಭಕ್ತನಿಗೆ ಅದಮ್ಯವಾದ ಜಿಜ್ಞಾಸೆ, ಪ್ರತಿಯೊಂದು ವಸ್ತುವಿನ ಗುಣಧರ್ಮವನ್ನು ಆತ ಶೋಧಿಸುತ್ತಾನೆ, ನದಿಯ ಮುಖದಿಂದ ಮನುಷ್ಯ ಸಮುದ್ರಕ್ಕೆ ಸೇರುತ್ತಾನೆ. ಹಾಗೇ ಈ ಜಿಜ್ಞಾಸುವೂ ಕೊನೆಗೆ ಪರಮಾತ್ಮನನ್ನು



ಸಂತ ನಾಮದೇವ

ಸೇರುತ್ತಾನೆ.

15. ಇನ್ನು ಅರ್ಥಾರ್ಥಿಯ ಮೂರನೆಯ ಬಗೆ. ಪ್ರತಿಯೊಂದು ವಿಷಯದಲ್ಲಿ ಅರ್ಥ ಕಾಣುವವ ಅರ್ಥಾರ್ಥಿ. ಅರ್ಥವೆಂದರೆ ಹಣವಲ್ಲ; ಹಿತ–ಕಲ್ಯಾಣ. ಯಾವ ವಿಷಯವನ್ನು ಪರೀಕ್ಷೆ ಮಾಡಿದರೂ ಅದರಿಂದ ಸಮಾಜಕ್ಕೆ ಏನು ಕಲ್ಯಾಣವಾದೀತು ಎಂಬ ಒರೆಗೆ ಹಚ್ಚಿಯಾನು. ತನ್ನ ಲೇಖನ, ಭಾಷಣ, ಸರ್ವಕರ್ಮವೂ ಜಗತ್ತಿನ ಮಂಗಳಕ್ಕಾಗಿ ಇದೆಯೊ ಇಲ್ಲವೊ ಎಂದು ಆತ ನೋಡಿಯಾನು. ನಿರುಪಯೋಗಿ, ಅಹಿತಕಾರಿ ಕ್ರಿಯೆ ಅವನಿಗೆ ಒಪ್ಪಿಗೆಯಿಲ್ಲ. ಜಗದ ಹಿತಚಿಂತನೆ ಮಾಡುವ ಈ ಮಹಾತ್ಮನೆಂಥವ! ಜಗತ್ತಿನ ಕಲ್ಯಾಣವೇ ಅವನ ಆನಂದ. ಎಲ್ಲ ಕ್ರಿಯೆಗಳನ್ನು ಪ್ರೇಮದೃಷ್ಟಿಯಿಂದ ನೋಡುವವನು ಆರ್ತ. ಜ್ಞಾನದೃಷ್ಟಿಯಿಂದ ನೋಡುವವನೇ ಜಿಜ್ಞಾಸು. ಸರ್ವಕಲ್ಯಾಣ ದೃಷ್ಟಿಯಿಂದ ನೋಡುವವನು ಅರ್ಥಾರ್ಥಿ.

16. ಈ ಮೂವರು ಭಕ್ತರೂ ನಿಷ್ಕಾಮರೇ. ಆದರೂ ಏಕಾಂಗಿಗಳು. ಕರ್ಮದ ದ್ವಾರಾ ಒಬ್ಬ, ಹೃದಯ ದ್ವಾರಾ ಇನ್ನೊಬ್ಬ, ಬುದ್ಧಿ ದ್ವಾರಾ ಮತ್ತೊಬ್ಬ, ದೇವರ ಕಡೆ ಧಾವಿಸುತ್ತಾರೆ. ಇನ್ನುಳಿದಾತ ಪೂರ್ಣ ಭಕ್ತ. ಜ್ಞಾನಿ–ಭಕ್ತ ಎನ್ನುವುದು ಇವನನ್ನೇ. ಕಣ್ಣಿಗೆ ಕಾಣುವುವೆಲ್ಲವೂ ಇವನಿಗೆ ದೈವಸ್ವರೂಪ. ಕುರೂಪಿ–ಸುರೂಪಿ, ಶ್ರೀಮಂತ, ದರಿದ್ರ, ಸ್ತ್ರೀ–ಪುರುಷ, ಪಶು–ಪಕ್ಷಿ ಎಲ್ಲೆಲ್ಲೂ ಪರಮಾತ್ಮನ ಪಾವನ ದರ್ಶನ.

**ನರನಾರಿ ಬಾಲರೆಲ್ಲ ನಾರಾಯಣ । ಅರಿವಂತೆ ನೀನೆಸಗೈ ಮನವನೆನ್ನ ।**

ಹೀಗಿದೆ ತುಕಾರಾಮ ಮಹಾರಾಜರ ಪ್ರಾರ್ಥನೆ.

ನಾಗಪೂಜೆ, ಆನೆ ಸೊಂಡಿಲಿನ ದೇವರ ಪೂಜೆ, ಗಿಡದ ಪೂಜೆಯೇ ಮೊದಲಾದ ಹುಚ್ಚುತನದ ಮಾದರಿಗಳೂ ಹಿಂದೂ ಧರ್ಮದಲ್ಲಿವೆಯಲ್ಲ. ಅವೆಲ್ಲಕ್ಕಿಂತಲೂ ಜ್ಞಾನಿ ಭಕ್ತನ ಸ್ಥಿತಿ ಹುಚ್ಚುತನದ್ದು. ಅವನಿಗೆ ಏನೇ ಭೆಟ್ಟಿಯಾಗಲಿ, ಹುಳುಹುಪ್ಪಡಿಗಳಿಂದ ಚಂದ್ರ ಸೂರ್ಯರವರೆಗೆ, ಎಲ್ಲೆಲ್ಲೂ ಪರಮಾತ್ಮ ಒಬ್ಬನೇ ಕಾಣಿಸುತ್ತಾನೆ. ಅವನ ಹೃದಯ ಉಕ್ಕಿಬರುತ್ತದೆ.

**ಕಡೆ ಕೊನೆಯೀ ಸುಖಕಿಲ್ಲ, ಕಡುಲುಕ್ಕಿ ತುಳುಕಿತಲ್ಲ ॥**

ಇಂಥ ಈ ದಿವ್ಯ ಭವ್ಯ ದರ್ಶನವನ್ನು ನೀವು ಭ್ರಾಂತಿ ಎಂದು ಕರೆದರೂ ಚಿಂತೆಯಿಲ್ಲ. ಆ ಭ್ರಾಂತಿಯೇ ಸೌಖ್ಯದ ರಾಶಿ, ಆನಂದದ ಸಾರಸಂಗ್ರಹ, ಗಂಭೀರ ಸಾಗರದಲ್ಲಿ ಆತನಿಗೆ ದೇವರ ವಿಲಾಸ ಕಾಣುತ್ತದೆ. ಹಸುವಿನಲ್ಲಿ ದೇವರ ವಾತ್ಸಲ್ಯ, ಪೃಥ್ವಿಯಲ್ಲಿ ಆತನ ಕ್ಷಮತೆ, ನಿರಭ್ರ ಆಕಾಶದಲ್ಲಿ ಆತನ ನಿರ್ಮಲತೆ, ರವಿ ಚಂದ್ರ ತಾರೆಗಳಲ್ಲಿ ಆತನ ತೇಜಸ್ಸು, ಭವ್ಯತೆ–ಕಾಣುತ್ತದೆ. ಹೂವಿನಲ್ಲಿ ಆತನ ಕೋಮಲತೆ–ಸುಗಂಧ ಕಾಣುತ್ತದೆ. ದುರ್ಜನರಲ್ಲಿ ತನ್ನ ಪರೀಕ್ಷೆ ಮಾಡುವ ಪರಮೇಶ್ವರ ಕಾಣುತ್ತಾನೆ. ಈ ರೀತಿಯಲ್ಲಿ ಎಲ್ಲೆಲ್ಲೂ ಒಬ್ಬನೇ ದೇವರು ನಟಿಸುತ್ತಿರುವುದನ್ನು ನೋಡುವ ಅಭ್ಯಾಸವನ್ನು ಜ್ಞಾನಿ–ಭಕ್ತ ಮುಂಬರಿಸುತ್ತಾನೆ. ಕೊನೆಗೆ ಒಂದು ದಿನ ಈಶ್ವರನಲ್ಲಿ ಲೀನನಾಗುತ್ತಾನೆ.

## ಪ್ರಯಾಣ ಸಾಧನೆ: ಸಾತತ್ಯ ಯೋಗ

### ೩೬. ಶುಭ ಸಂಸ್ಕಾರಗಳ ಸಂಚಯ

1. ಮನುಷ್ಯನ ಬಾಳು ಅನೇಕ ಸಂಸ್ಕಾರಗಳಿಂದ ಕೂಡಿದುದು. ನಮ್ಮಿಂದ ನಡೆಯುವ ಕ್ರಿಯೆ ಅಗಣಿತ. ಅವುಗಳ ಲೆಕ್ಕಕ್ಕೆ ತೊಡಗಿದರೆ ಕೊನೆಯೆ ಇಲ್ಲವಾದೀತು. ಇಪ್ಪತ್ತನಾಲ್ಕು ಗಂಟೆಗಳಲ್ಲಿ ನಡೆವ ಕ್ರಿಯೆಗಳನ್ನೇ ಸ್ಥೂಲವಾಗಿ ನೋಡಿದರೆ ಕಾಣುತ್ತದೆ. ನೂರಾರು–ಉಣ್ಣುವುದು, ತಿನ್ನುವುದು, ಕುಡಿಯುವುದು, ಕೆಲಸ ಮಾಡುವುದು, ಬರೆಯುವುದು, ಮಾತನಾಡುವುದು, ಓದುವುದು, ಅಲ್ಲದೆ ಬಗೆಬಗೆಯ ಕನಸು ರಾಗದ್ವೇಷ ಮಾನಾಪಮಾನ, ಸುಖದುಃಖ, ಹೀಗೆ ಎಷ್ಟೋ ಪ್ರಕಾರ ಕಂಡುಬರುತ್ತವೆ. ಇವುಗಳಿಂದ ನಮ್ಮ ಮನಸ್ಸಿನ ಮೇಲೆ ಸಂಸ್ಕಾರವಾಗುತ್ತದೆ. ಆದುದರಿಂದ ಬಾಳು ಎಂದರೇನೆಂದು ಯಾರಾದರೂ ಕೇಳಿದಲ್ಲಿ–ಸಂಸ್ಕಾರ ಸಂಚಯವೆ ಬಾಳು ಎಂದು ನಾನು ವ್ಯಾಖ್ಯೆ ಕೊಟ್ಟೇನು.

2. ಒಳ್ಳೆಯ ಸಂಸ್ಕಾರ, ಹಾಗೇ ಕೆಟ್ಟ ಸಂಸ್ಕಾರ; ಮನುಷ್ಯನ ಬಾಳಿನ ಮೇಲೆ ಇವೆರಡರಿಂದಲೂ ಪರಿಣಾಮವಾಗುತ್ತದೆ. ಬಾಲ್ಯದ ಕ್ರಿಯೆಗಳಂತೂ ನೆನಪಿನಲ್ಲಿ ಉಳಿಯುವುದೇ ಇಲ್ಲ. ಹಲಗೆಯ ಮೇಲೆ ಬರೆದುದನ್ನಳಿಸಿದ ಹಾಗೆ ಅವು ಅಳಿಸಿ ಹೋಗಿರುತ್ತವೆ. ಪೂರ್ವಜನ್ಮದ ಸಂಸ್ಕಾರಗಳಂತೂ ಪೂರ್ಣವಾಗಿ ಅಳಿಸಿಹೋದಂತಿರುತ್ತವೆ. ಪೂರ್ವಜನ್ಮ ಇತ್ತೋ ಇಲ್ಲವೋ ಎಂದು ಸಂಶಯ ಬರುವಷ್ಟು ಮಟ್ಟಿಗೆ ಈ ಜನ್ಮದಲ್ಲಿನ ಬಾಲ್ಯಕಾಲದ ಸ್ಮರಣೆಯು ಇಲ್ಲ. ಪೂರ್ವಜನ್ಮದ ಮಾತಾದರೂ ಏಕೆ? ಅದರ ವಿಚಾರ ಇರಲಿ, ಈ ಜನ್ಮದ ಬಗೆಗೇ ಯೋಚಿಸೋಣ. ನಮ್ಮ ಗಮನದಲ್ಲಿರುವಷ್ಟೇ ಕ್ರಿಯೆ ನಡೆದವೆಂದಲ್ಲ, ನಡೆದ ಕ್ರಿಯೆ ನೂರಾರು, ಉಂಟಾದ ಜ್ಞಾನ ಅಪಾರ, ಕೊನೆಗೆ ಈ ಕ್ರಿಯೆ, ಜ್ಞಾನ ಎಲ್ಲ ನಾಶವಾಗಿ ಕೆಲವು ಸಂಸ್ಕಾರ ಮಾತ್ರ ಉಳಿಯುತ್ತವೆ. ಹಗಲು ನಡೆದ ಕ್ರಿಯೆಗಳನ್ನೆಲ್ಲ ರಾತ್ರಿ ಮಲಗುವಾಗ ಜ್ಞಾಪಿಸಿಕೊಳ್ಳತೊಡಗಿದರೆ ಎಲ್ಲವೂ ನೆನಪಿಗೆ ಬರುವುದಿಲ್ಲ. ನೆನಪಾಗುವಂಥವು ಯಾವುವು? ಹೆಚ್ಚು ಸ್ಪಷ್ಟವಾಗುವಂಥವು ತಾನೆ. ತುಂಬ ಜಗಳ ನಡೆದಿದ್ದರೆ ಅದೇ ನೆನಪಾಗುತ್ತದೆ. ಅದೇ ಆ ದಿನದ ಮುಖ್ಯ ಕೃತಿ. ಸ್ಪಷ್ಟ ವಿಷಯಗಳ ಸಂಸ್ಕಾರ ಮನಸ್ಸಿನ ಮೇಲೂ ಸ್ಫುಟವಾಗಿಯೇ ಮೂಡುತ್ತದೆ. ಮುಖ್ಯ ಕ್ರಿಯೆ ನೆನಪಾಗುತ್ತದೆ. ಇನ್ನುಳಿದವು ಬಾಡುತ್ತವೆ.

**(ಮುಂದುವರಿಯುವುದು)**



**ಸ್ವಾಮಿ ನಿಮಿಷಾನಂದಜೀಯವರ ಲೇಖನ ಮಾಲೆ ನಮ್ಮ ದೈನಂದಿನ ಜೀವನಗಳನ್ನು, ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧರಿಸಿ, ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಯಪಡಿಸುವಂತಹವು. ಮರೀಚಿ ಮಹರ್ಷಿಗಳ ಮಕ್ಕಳಾದ ಕಶ್ಯಪರು ಮಾನವ ಧರ್ಮದ ಮೂಲಭೂತ ರಹಸ್ಯ ತತ್ತ್ವಗಳನ್ನು ಕಶ್ಯಪ ಸೂತ್ರಗಳಲ್ಲಿ ವಿವರಿಸಿದ್ದಾರೆ.**

# ಜ್ಞಾನಾಜ್ಞಾನ ದ್ವಂದ್ವಜಂ ಕೋಲಾಹಲಂ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ಇನ್ನೂ ಕೆಲವು ಬಾರಿ ನಮ್ಮ ಜೀವನದಲ್ಲಿ ಬರುವಂತಹ ಸಂದರ್ಭಗಳ ಮೇಲೆ ನಮಗೆ ಯಾವ ಹತೋಟಿಯೂ ಇರುವುದಿಲ್ಲ. ಉದಾಹರಣೆಗೆ ನಾವು ಯಾವುದಾದರೊಂದು ಕಾರ್ಯಕ್ರಮಕ್ಕೆ ಒಂದು ನಿಗದಿತ ವೇಳೆಗೆ ಸೇರಬೇಕೆಂದು ಮನೆಯಿಂದ ಹೊರಡುತ್ತೇವೆ. ರಸ್ತೆಯಲ್ಲಿ ವಾಹನಗಳ ಸಂಚಾರ ಹೆಚ್ಚಾಗಬಹುದು ಎಂದು ಹದಿನೈದು ನಿಮಿಷ ಮುಂಚಿತವಾಗಿಯೇ ಹೊರಡುತ್ತೇವೆ. ಆದರೂ ದಾರಿಯಲ್ಲಿ ವಾಹನ ದಟ್ಟಣೆಯಿಂದ ಒಂದು ಘಂಟೆ ತಡವಾಗಿಯೇ ಹೋಗುವ ಪರಿಸ್ಥಿತಿ ಬಂದಾಗ, ನಾವು ಈ ರೀತಿ ಯೋಚಿಸಬೇಕು, 'ಸಮಯಕ್ಕೆ ಸರಿಯಾಗಿ ತಲಪಬೇಕೆಂದು ನಾವು ಮುಂಚಿತವಾಗಿ ಹೊರಟಿದ್ದೇನೋ ನಿಜ. ಆದರೆ ಈ ವಾಹನ ದಟ್ಟಣೆಯಿಂದ ನನಗೆ ತಡವಾಗಿದೆ, ಇದು ನನ್ನ ಹತೋಟಿಯಲಿಲ್ಲ. ಇದರಿಂದ ನಾನು ವಿಚಲಿತನಾಗಿ ಮನಶ್ಶಾಂತಿಯನ್ನು ಕಳೆದುಕೊಳ್ಳುವುದಿಲ್ಲ.' ಈ ರೀತಿ ಜೀವನದಲ್ಲಿ ಬರುವ ಸಂದರ್ಭಗಳು ನಮ್ಮ ಹತೋಟಿಗೆ ಬರಬಹುದು ಅಥವಾ ಮೀರಿರಲೂಬಹುದು. ಆದರೆ ನಮ್ಮ ಮನಸ್ಸನ್ನು ಮಾತ್ರ ಸದಾ ನಮ್ಮ ಹತೋಟಿಯಲ್ಲೇ ಇಟ್ಟುಕೊಳ್ಳಬೇಕು. ಏನೇ ಬರಲಿ ನಮ್ಮ ಮನಶ್ಶಾಂತಿಯನ್ನು ಎಂದೂ ಕಳೆದುಕೊಳ್ಳಬಾರದು. ಇದು ನಮ್ಮ ಅರಿವಿನಲ್ಲಿ ಸದಾ ಇರಬೇಕೆಂದು ಕಶ್ಯಪರು ಒತ್ತಿ ಹೇಳುತ್ತಾರೆ.

ಜೀವನದಲ್ಲಿ ನಾವೆಲ್ಲರೂ ಅಭಿವೃದ್ಧಿ ಹಾಗೂ ಯಶಸ್ಸನ್ನು ಬಯಸುತ್ತೇವೆ. ಇದಕ್ಕಾಗಿ ಅನೇಕ ಅವಕಾಶಗಳನ್ನು ಹುಡುಕುತ್ತಲೇ ಇರುತ್ತೇವೆ. ನಮಗೆ ದೊರೆತಂತಹ ಸುವರ್ಣ ಅವಕಾಶಗಳು ಯಶಸ್ವಿ ಆಗದಿದ್ದಾಗ ಬಹಳ ನಿರಾಸೆಗೆ ಒಳಗಾಗುತ್ತೇವೆ. ನಮ್ಮ ಆಸೆ ಆಕಾಂಕ್ಷೆಗಳು ಈಡೇರಬೇಕಾದರೆ ಅದು ನಮ್ಮ ಹಣೆಬರಹದಲ್ಲಿ ಮೊದಲೇ ಬರೆದಿರಬೇಕು. ನಾವು ಈಗಾಗಲೇ ಜಿಜ್ಞಾಸೆ ಮಾಡಿದಹಾಗೆ ನಮ್ಮ ಕರ್ಮವೇ ನಮ್ಮ ಜೀವನವನ್ನು ರೂಪಿಸುವುದು. ಆದ್ದರಿಂದ ನಮ್ಮ ಹಣೆಬರಹದಲ್ಲಿ ಇಲ್ಲದಿರುವುದನ್ನು ಬಯಸಿ ಅನಾವಶ್ಯಕವಾಗಿ ನಮ್ಮ ಮನಸ್ಸನ್ನು ಕೋಲಾಹಲಕ್ಕೆ ತಳ್ಳುವುದು ತಪ್ಪೆಂದು ಕಶ್ಯಪರು ತಿಳಿಸುತ್ತಿದ್ದಾರೆ. ಭಗವಂತ ಪ್ರತಿಯೊಬ್ಬರಿಗೂ ಅನೇಕ ಅವಕಾಶಗಳನ್ನು ತಾನೇ ಕಲ್ಪಿಸಿಕೊಡುತ್ತಾನೆ. ಆದ್ದರಿಂದ ಸೂಕ್ತವಾದ ಅವಕಾಶ ಬರುವವರೆಗೂ ನಾವು ಕಾಯುವುದು ಉಚಿತ. ಇಲ್ಲಿ ನಾವು ಏನನ್ನು ಸೂಕ್ಷ್ಮವಾಗಿ ಗಮನಿಸಬೇಕೆಂದರೆ ಇದು ಆಲಸ್ಯಕ್ಕಾಗಲಿ, ಅಥವಾ ತನ್ನ ನಂಬಿಕೆ ಕಳೆದುಕೊಳ್ಳುವುದಕ್ಕಾಗಲಿ ಕಾರಣವಾಗಬಾರದು. ಇಲ್ಲಿ ನಮಗೆ ಬೇಕಾದದ್ದು ಸಹನೆ ಮತ್ತು ತಾಳ್ಮೆ. ಸಹನೆ ಮತ್ತು ತಾಳ್ಮೆಗಳನ್ನು ಪಡೆಯುವುದು ಹೇಗೆ? ನಾವು ಅಧ್ಯಾತ್ಮ ಸಾಧನೆ ಮತ್ತು ಪೂಜೆಗಳಲ್ಲಿ ತೊಡಗಿದಾಗ ನಮ್ಮಲ್ಲಿ ಸಹನೆ, ತಾಳ್ಮೆ ಮತ್ತು ಮನಶ್ಶಾಂತಿ ಉದ್ಭವವಾಗುತ್ತದೆ. ಇದಕ್ಕಾಗಿಯೇ ಋಷಿಮುನಿಗಳು ನಮಗೆ ಸಾಧನೆಗಳನ್ನು ಹಾಗೂ ಪೂಜೆಗಳನ್ನು ಎಡೆಬಿಡದೆ ಮಾಡಿ ಎಂದು ಹೇಳಿದ್ದು. ಸಹನೆ, ತಾಳ್ಮೆಗಳನ್ನು ಕಳೆದುಕೊಂಡಾಗ ಅತಿಯಾದ ಮಾನಸಿಕ ಒತ್ತಡವನ್ನು ನಾವು ಅನುಭವಿಸುತ್ತೇವೆ. ಕೋಲಾಹಲಕ್ಕೆ ಇನ್ನೊಂದು ಹೆಸರೇ ಮಾನಸಿಕ ಒತ್ತಡ. ದ್ವಂದ್ವ ಹಾಗೂ ಒತ್ತಡ ನಮ್ಮ ಮನಸ್ಸನ್ನು ಛಿದ್ರ ಛಿದ್ರ ಮಾಡುತ್ತದೆ. ಆಗ ನಮ್ಮ ಮನಸ್ಸಿನಲ್ಲಿ ಕಸ ತುಂಬಿ ರಸವೆಲ್ಲ ಸೋರಿಹೋಗುತ್ತದೆ. ಸಾಧನೆ ಮತ್ತು ಆರಾಧನೆ ಈ ಕಸವನ್ನು ತೆಗೆದು ನಮ್ಮ ಮನಸ್ಸಿನಲ್ಲಿ ಶಾಂತಿ ಮತ್ತು ಸಂತೃಪ್ತಿಯ ರಸವನ್ನು ತುಂಬುತ್ತದೆ.

ಈ ಸೂತ್ರಕ್ಕೆ ಮತ್ತೊಂದು ಅರ್ಥವೂ ಇದೆ. ನಾವು ಅಧ್ಯಾತ್ಮ ಸಿದ್ಧಿಗಳಿಗಾಗಿ ಪರಮಾತ್ಮನ ದರ್ಶನಕ್ಕಾಗಿ ಅಥವಾ ಆತ್ಮ ಸಾಕ್ಷಾತ್ಕಾರಕ್ಕಾಗಿ ಸಾಧನೆಯನ್ನು ಮಾಡುವುದೂ ಕೂಡ ಮೋಹ, ವ್ಯಾಮೋಹವಾಗುವುದು ಎಂದು ಕಶ್ಯಪರು ಹೇಳುತ್ತಾರೆ. ಏನೇ ಬರಲಿ ನಾನು ಸಾಧನೆಯಲ್ಲಿ ಖಂಡಿತ ಯಶಸ್ಸನ್ನು ಪಡೆದೇ ಪಡೆಯುತ್ತೇನೆ, ಎಂದುಕೊಳ್ಳುವುದು ಕೂಡ ರಜೋ ಸಂಕಲ್ಪವಾಗುತ್ತದೆ. ನಾವು ಮೋಹ

ವ್ಯಾಮೋಹಗಳಿಂದ ಪರಮಾತ್ಮನನ್ನು ಪಡೆಯಲು ಸಾಧ್ಯವೇ ಇಲ್ಲ.

ನಾವು ಸಾಧನೆಯನ್ನು ಶ್ರದ್ಧೆ, ಭಕ್ತಿ, ಅಕ್ಕರೆಗಳಿಂದ ಮಾಡುತ್ತಾ ಹೋದಲ್ಲಿ ನಮ್ಮ ಆತ್ಮವು ತನ್ನಷ್ಟಕ್ಕೇ ತಾನೇ ಪರಮಾತ್ಮನನ್ನು ಅರಸಿ ಹೋಗುತ್ತದೆ. ಅಸುರನು ತನ್ನ ಛಾಯೆಯನ್ನು ಕಂಡು ಅದನ್ನೇ ಪರಮಾತ್ಮವೆಂದು ನಂಬಿ ತನ್ನ ಬಿಂಬವನ್ನು ತಾನು ಮೋಹಿಸಿದ. ಅಂದರೆ ತನ್ನನ್ನೇ ತಾನು ಮೋಹಿಸಿದ. ಬಾಹ್ಯ ಕಣ್ಣುಗಳಿಂದ ಎಲ್ಲಾದರೂ ಭಗವಂತನನ್ನು ಕಾಣಲು ಸಾಧ್ಯವೇ? ಹಾಗೆಯೇ ಉದಾಹರಣೆಗೆ ಸಕ್ಕರೆಯನ್ನು ನಮ್ಮ ಕಣ್ಣುಗಳಿಂದ ನೋಡಿದರೆ ಅದರ ಸಿಹಿಯನ್ನು ಸವಿಯಲು ಸಾಧ್ಯವಿಲ್ಲ. ಅದನ್ನು ತಿಂದಾಗ ಮಾತ್ರ ನಾವು ಅದರ ಸಿಹಿಯನ್ನು ಅನುಭವಿಸುತ್ತೇವೆ. ಹಾಗೆಯೇ ನೋಡಲಿಕ್ಕೆ ಸಿಗದಂತಹ, ಗ್ರಹಿಸಲಾಗದಂತಹ ದಿವ್ಯಶಕ್ತಿ ಪರಮಾತ್ಮ. ಪರಮಾತ್ಮ ಒಂದು ಅನುಭವ. ಅವನು ಭಕ್ತಿಗೆ ಹಾಗೂ ಅನುಭವಕ್ಕೆ ಮಾತ್ರ ಎಟುಕುವಂತಹ ನಿರ್ಗುಣ ಚೈತನ್ಯ. ಜ್ಞಾನ, ಅಜ್ಞಾನಗಳ ನಡುವೆ ಸಿಲುಕಿಕೊಂಡಾಗ ನಾವು ಕೂಡ ಅಸುರನ ರೀತಿಯಲ್ಲಿ ಭ್ರಮೆಗೆ ಒಳಗಾಗುತ್ತೇವೆ.

ನಮ್ಮೆಲ್ಲರಲ್ಲೂ ಜ್ಞಾನ ಹಾಗೂ ಅಜ್ಞಾನ ಎರಡೂ ಇವೆ. ಆದರೆ ನಾನು ಅಜ್ಞಾನಿ ಎಂದು ಒಪ್ಪಿಕೊಳ್ಳಲು ಯಾರೂ ಸಿದ್ಧರಿಲ್ಲ. ಬೇಕಾದರೆ ನಮ್ರತೆಯಿಂದ ನಾವು ನನಗೆ ಈ ವಿಷಯದಲ್ಲಿ ಸ್ವಲ್ಪ ಮಾತ್ರ ಜ್ಞಾನವಿದೆ ಎಂದು ಒಪ್ಪಿಕೊಳ್ಳುತ್ತೇವೆ. ನಮ್ಮ ಮನಸ್ಸಿನಲ್ಲಿ ಇರುವುದು ಜ್ಞಾನವೋ ಅಥವಾ ಅಜ್ಞಾನವೋ ಎನ್ನುವುದು ನಮಗೇ ಗೊತ್ತಾಗುವುದಿಲ್ಲ.

ಸಂದರ್ಭಗಳು ಅನೇಕ ಬಾರಿ ಇದನ್ನು ನಮಗೆ ತೋರಿಸಿಕೊಡುತ್ತವೆ ಅಥವಾ ನಮ್ಮ ಸಂಪರ್ಕದಲ್ಲಿರುವ ವ್ಯಕ್ತಿಗಳು ನಮಗೆ ಇದನ್ನು ತಿಳಿಸಿಕೊಡುತ್ತಾರೆ. ಜ್ಞಾನ ಮತ್ತು ಅಜ್ಞಾನಗಳು ನಮ್ಮ ಮನಸ್ಸಿನಲ್ಲೇ ಇರುವಂತಹ ಭಾವಚಿತ್ರಗಳು. ನಮ್ಮ ಜೀವನದ ಘಟನೆಗಳ ಮೂಲಕ ಅವು ಮೂಡಿ ಬರುತ್ತವೆ. ಉದಾಹರಣೆಗೆ ಒಬ್ಬ ಚಿತ್ರಕಾರ ಒಂದು ಬಿಳಿ ಹಾಳೆಯ ಮೇಲೆ ಬ್ರಷ್ ಮತ್ತು ಬಣ್ಣಗಳನ್ನು ಬಳಸಿ ತನ್ನ ಮನಸ್ಸಿನಲ್ಲಿ ಹಾಗೂ ಕಲ್ಪನೆಯಲ್ಲಿ ಇರುವಂತಹ ಭಾವಚಿತ್ರಗಳನ್ನು ಬಿಡಿಸುತ್ತಾನೆ. ಚಿತ್ರವನ್ನು ಬಿಡಿಸಿದ ಅನಂತರವೇ ಅವನಿಗೂ ಕೂಡ ತನ್ನೊಳಗೇ ಅಡಗಿದಂತಹ ಸುಪ್ತ ಭಾವನೆಗಳ ಅರಿವಾಗುತ್ತದೆ. ಹಾಗೆಯೇ ಜೀವನದ ಸಂದರ್ಭಗಳೆಂಬ ಬಾಹ್ಯ ಕನ್ನಡಿಯ ಮೂಲಕವೇ ನಮ್ಮ ಮನಸ್ಸಿನಲ್ಲಿ ಅಡಗಿರುವ ಜ್ಞಾನ ಅಜ್ಞಾನದ ಪ್ರತಿಬಿಂಬವನ್ನು ನಾವು ಗುರುತಿಸಿ ಅರಿಯಲು ಸಾಧ್ಯ. ಆದರೆ ನಮ್ಮೊಳಗಿರುವ ಆತ್ಮ ಹಾಗಲ್ಲ. ಆತ್ಮವನ್ನು ಬಾಹ್ಯ ಸಂದರ್ಭಗಳಿಂದಾಗಲೀ ಮತ್ತೊಬ್ಬರ ಮೂಲಕ ಶ್ರವಣದಿಂದಾಗಲೀ ಅರಿಯಲು ಆಗುವುದಿಲ್ಲ. ಇದನ್ನು ನಮ್ಮ ಅಂತರಂಗದ ಅನುಭವದಿಂದ ಮಾತ್ರ ಸವಿಯಬಹುದು. ಆತ್ಮವನ್ನು ಬೇರೆ ಯಾವ ಮಾರ್ಗದಿಂದಲೂ ಅರ್ಥಮಾಡಿಕೊಳ್ಳುವುದು ಅಸಾಧ್ಯ.

ನಾವು ಅಸುರನ ಅನುಭವವನ್ನು ಜಿಜ್ಞಾಸೆ ಮಾಡಿದೆವು. ಈಗ ಇಂದ್ರನ ಪ್ರತಿಕ್ರಿಯೆಯನ್ನು ಇನ್ನಷ್ಟು ಆಳವಾಗಿ



ನೋಡೋಣ. ಇಂದ್ರ ಯಾರು? ಅವನೇ ನಮ್ಮ ಇಂದ್ರಿಯಗಳಿಗೆಲ್ಲ ಅಧಿಪತಿ. ಪಂಚೇಂದ್ರಿಯಗಳನ್ನು ಪ್ರಚೋದಿಸುವವನೂ ಅವನೇ ಹಾಗೂ ನಾವು ತೀವ್ರ ಸಾಧನೆ ಕೈಗೊಂಡಾಗ ಪ್ರತಿಫಲವಾಗಿ ಇಂದ್ರಿಯ ನಿಗ್ರಹವನ್ನು ಕರುಣಿಸುವವನೂ ಅವನೇ. ಇಂದ್ರನು ಇಂದ್ರಿಯಾತೀತ. ಅವನಿಗೆ ಇಂದ್ರಿಯಗಳ ಮೂಲಕ ನೋಡಿದಾಗ ಈ ಜಗತ್ತು ಹೇಗೆ ಕಾಣುವುದು ಎಂದು ಚೆನ್ನಾಗಿ ಗೊತ್ತಿದೆ. ಆದರೆ ಅಸುರನಿಗೆ ಇದರ ಅರಿವಿರಲಿಲ್ಲ. ಇಂದ್ರನು ತನ್ನ ಪ್ರತಿಬಿಂಬವನ್ನು ನೀರಿನಲ್ಲಿ ಕಂಡಾಗ ಇದು ನನ್ನ ದೇಹದ ಛಾಯೆ ಮಾತ್ರ, ನನ್ನ ಆತ್ಮವಲ್ಲ. ಎಂಬುದು ಅವನಿಗೆ ತತ್‌ಕ್ಷಣ ತಿಳಿಯಿತು. ಇನ್ನೂ ತನ್ನ ಇಂದ್ರಿಯಗಳ ವಶದಲ್ಲಿ ಇದ್ದಂತಹ ಅಸುರನು ತನ್ನ ದೇಹದ ಛಾಯೆಯೇ ಆತ್ಮವೆಂದು ನಂಬಿದ. ಅಧ್ಯಾತ್ಮ ಜೀವನದಲ್ಲಿ ಹಲವಾರು ಹಂತಗಳಿವೆ. ಇಂದ್ರನ ಪರಿಜ್ಞಾನ ಒಂದು ಮಟ್ಟವನ್ನು ಸೂಚಿಸುತ್ತದೆ. ಹಾಗೂ ಅಸುರನ ಅಜ್ಞಾನವು ಮತ್ತೊಂದು ಮಟ್ಟವನ್ನು ಸೂಚಿಸುತ್ತದೆ. ಇನ್ನೂ ಬುದ್ಧಿಶಕ್ತಿ ಹೆಚ್ಚು ಬೆಳೆಯದ ಸಣ್ಣ ಹಸುಳೆಗೆ ನಾವು ಸೂರ್ಯನನ್ನು ನೀಲಿಯ ಗಾಜಿನ ಮೂಲಕ ತೋರಿಸಿದರೆ ಅದರ ಬುದ್ಧಿ ಸ್ವಲ್ಪ ಬೆಳೆಯುವವರೆಗೂ ಅದು ಸೂರ್ಯ ನೀಲಿಯಾಗಿದ್ದಾನೆಂದೇ ನಂಬಿರುತ್ತದೆ. ಹಾಗೆಯೇ, ನಾವೂ ಕೂಡ ಜೀವನದಲ್ಲಿ ಕಷ್ಟಕರವಾದ ಅನುಭವಗಳು

47ನೇ ಪುಟಕ್ಕೆ

# ಕೈವಾರ ತಾತಯ್ಯ ದೃಷ್ಟಿಯಲ್ಲಿ ಸ್ತ್ರೀ

ಮಾರ್ಚ್ 8ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ. ಸ್ತ್ರೀಯರನ್ನು ಕುರಿತು ಮಹಾನ್ ಸತ್ಪುರುಷ ಸಂತರಾದ ಶ್ರೀ 'ಕೈವಾರ ನಾರೇಯಣರು' ನುಡಿದಂತಹ ತತ್ತ್ವಗಳನ್ನು ಕುರಿತು ತಿಳಿಸಿಕೊಟ್ಟಿದ್ದಾರೆ ಶ್ರೀ 'ತಾತಯ್ಯ'ನವರ ಪಾದಪದ್ಮಗಳ ದಾಸಾನುಭಕ್ತ ಹಾಗೂ ಕೀರ್ತನಾ ಭಕ್ತ

ಶ್ರೀ ಜಿ.ಸಿ.ಎಸ್.



ಪ್ರತಿ ಹೆಂಗಸಿಗೆ ಬಳೆ ತೊಡಸುತ್ತಿರುವಾಗ ಅವರಲ್ಲಿ ಲಕ್ಷ್ಮಿಯನ್ನು ಕಾಣುತ್ತಿರುವ ನಾರೇಯಣರು

ನಮ್ಮ ಹಿಂದೂ ಧರ್ಮದಲ್ಲಿ ಸ್ತ್ರೀಗೆ ಗೌರವದ ಸ್ಥಾನವಿದೆ. ಸ್ತ್ರೀಯು ಆದಿಶಕ್ತಿಯ ಅಂಶವೆಂದೂ ಲಕ್ಷ್ಮಿಯೆಂದೂ ನಂಬಿಕೆ ಇದೆ.

**ಕಾರ್ಯೇಷು ದಾಸಿ ಕರುಣೇಷು ಮಂತ್ರಿ**
**ರೂಪೇಚ ಲಕ್ಷ್ಮೀ ಕ್ಷಮಯಾ ಧರಿತ್ರೀ ।**
**ಭೋಜ್ಯೇಷು ಮಾತಾ ಶಯನೇಷು ರಂಭಾ**
**ಷಟ್ಕರ್ಮ ಯುಕ್ತಾ ಕುಲಧರ್ಮಪತ್ನೀ ॥**

ಈ ಮೇಲ್ಕಂಡ ಸಂಸ್ಕೃತ ಶ್ಲೋಕವು ಕುಟುಂಬದಲ್ಲಿ ಕುಲಭೂಷಣಳಾದ ಪತ್ನಿಯು ನಿರ್ವಹಿಸುವ ಆರು ಪ್ರಮುಖ ಪಾತ್ರಗಳನ್ನು ಕುರಿತು ತಿಳಿಸಿಕೊಡುತ್ತದೆ.

ಮನೆಗೆಲಸ ಮಾಡುವ ಆಳುಗಳಿಗೆ ಬೆಲೆ ಕಟ್ಟಬಹುದು. ಆದರೆ ಅವರಿಂತ ಹೆಚ್ಚಾಗಿ ದುಡಿದು ಬೆಲೆ ಕಟ್ಟಲಾಗದ ದುಡಿಮೆ ಮನೆಯಲ್ಲಿರುವ ಗೃಹಿಣಿಯರದು. ಮನೆಕೆಲಸಗಳಲ್ಲದೇ, ಹೊರಗಡೆ ಪತಿಗೆ ಸಮಾನವಾಗಿ ದುಡಿದು ಬಂದು ಕುಟುಂಬದ ಸುಖಕ್ಕಾಗಿ, ತನ್ನ ಸುಖವನ್ನು ತ್ಯಾಗ ಮಾಡುತ್ತಾಳೆ ಕಾರ್ಯೇಷು ದಾಸಿಯಾದ ಈ ಹೆಣ್ಣು. ಅದೇ ರೀತಿ ಕುಟುಂಬದ ಪ್ರಗತಿಗಾಗಿ, ಶ್ರೇಯಸ್ಸಿಗಾಗಿ ಅವಳು ನೀಡುವ ಸಲಹೆಗಳು ರಾಜನಿಗೆ ಮಂತ್ರಿ ನೀಡುವ ಸಲಹೆಗಳಿಗಿಂತ ಮಿಗಿಲಾದದ್ದು. ಸ್ತ್ರೀಯ ರೂಪವಂತೂ ಅದೃಷ್ಟವನ್ನು ತಂದುಕೊಡಬಲ್ಲ ಲಕ್ಷ್ಮಿಯೇ. ಕ್ಷಮೆಯಲ್ಲಿ ಭೂಮಿಗಿಂತ ಅಧಿಕವಾದವಳು. ಅವಳು ಮಾತೃವಾಗಿ ಮಕ್ಕಳನ್ನು ನೋಡಿಕೊಳ್ಳುವ ಕೆಲಸವಂತೂ ಅದ್ವಿತೀಯವಾದುದು. ಇನ್ನು ಸಂತಾನಕ್ಕಾಗಿ ದೇಹವನ್ನು ಸಂಪೂರ್ಣವಾಗಿ ಗಂಡನಿಗೆ ಅರ್ಪಿಸಿ ಗಂಡನನ್ನು ಸಂತೃಪ್ತಿಪಡಿಸುವುದರಲ್ಲಿ ರಂಭೆಯೇ ಸರಿ.

ಎಲ್ಲ ಸ್ತ್ರೀಯರಲ್ಲಿಯೂ ಮಾತೃವನ್ನು ಕಂಡಂತಹ ಸ್ವಾಮಿ ವಿವೇಕಾನಂದರು ಸ್ತ್ರೀಯರನ್ನು ಕುರಿತು ಹೀಗೆಂದಿದ್ದಾರೆ, "ಯಾವ ದೇಶವು ಸ್ತ್ರೀಯರನ್ನು ಗೌರವದಿಂದ ಕಾಣುತ್ತಾ, ಸಮಾನತೆ, ಸ್ವಾತಂತ್ರ್ಯವನ್ನು ಕೊಟ್ಟಿರುತ್ತದೋ ಅಂತಹ ದೇಶವೇ ನಿಜವಾಗಿಯೂ ಅಭಿವೃದ್ಧಿ ಹೊಂದಿದೆ" ಎಂದು.

ಒಬ್ಬ ವ್ಯಕ್ತಿ ಯಾರೇ ಆಗಿರಲಿ, ಎಷ್ಟೋ ಉನ್ನತ ಸ್ಥಾನದಲ್ಲಿರುವವನಾಗಿರಲಿ, ಸ್ತ್ರೀಯನ್ನು ಗೌರವದಿಂದ ಕಾಣದೇ, ಕೀಳುಮಟ್ಟದಿಂದ ನೋಡಿ, ಸ್ತ್ರೀಯರ ಮಾತಿಗೆ ಬೆಲೆ ಕೊಡುವವನಾಗಿರದೇ ಹೋದಲ್ಲಿ ಅಂತಹವರು ನಿಜವಾಗಿಯೂ ಚಿತ್ತಶುದ್ಧಿಯುಳ್ಳವರಲ್ಲ ಎಂಬರ್ಥ. ಏಕೆಂದರೆ ಚಿತ್ತಶುದ್ಧಿಯುಳ್ಳವರು ಎಲ್ಲವನ್ನೂ ಸಮಾನವಾಗಿ ನೋಡುವವರಾಗಿರುತ್ತಾರೆ. ಚಿತ್ತಶುದ್ಧಿಯಿಲ್ಲದ ಮನುಷ್ಯರೂ ಮೋಕ್ಷಕ್ಕೆ ಅರ್ಹರಲ್ಲ.

ಮಹಾನ್ ಸಂತರೂ ಮಹಾನ್ ಯೋಗಿಗಳೂ ಸಮಾಜ ಸುಧಾರಕರೂ ಆಗಿದ್ದ ಕೈವಾರ ತಾತಯ್ಯನವರು ಸಮದರ್ಶಿಗಳು.

ಸಮದರ್ಶಿಗಳೆಂದರೆ, ಸಕಲ ಜೀವರಾಶಿಗಳಲ್ಲಿ ಯಾವುದೇ ಭೇದಭಾವವನ್ನು ಎಣಿಸದೆ, ಸಮಾನವಾದ ಪ್ರೀತಿಯನ್ನಿಟ್ಟಿರುವಂತಹವರು. ಇಂತಹ ದೃಷ್ಟಿಯುಳ್ಳ ನಾರೇಯಣರು ನಮ್ಮೆಲ್ಲರಂತೆ ಸಾಮಾನ್ಯ ಗೃಹಸ್ಥ ಜೀವನವನ್ನು ನಡೆಸಿ, ತದನಂತರ ವೈರಾಗ್ಯವನ್ನು ತಾಳಿದವರು.

ಕೈವಾರ ತಾತಯ್ಯನವರ ಕುಲವೃತ್ತಿ ಬಳೇ ವ್ಯಾಪಾರ. ಕುಟುಂಬದ ನಿರ್ವಹಣೆಗಾಗಿ ಮಲ್ಲಾರವನ್ನು ಕಂಕುಳಿಗೇರಿಸಿಕೊಂಡು, ಮನೆ ಬಿಟ್ಟು ಕೈವಾರದ ಸುತ್ತಮುತ್ತಲಿನ ಹಳ್ಳಿಗಳಿಗೆ ಹೊರಟರೆಂದರೆ, ಮಲ್ಲಾರ ಖಾಲಿಯಾಗುವವರೆಗೂ ಬಳೆಯನ್ನು ತೊಡಿಸುತ್ತಿದ್ದಂತಹವರು. ಕೈಚಾಚಿದ ಪ್ರತಿ ಹೆಂಗಸಿಗೆ ಕೈತುಂಬ ಬಳೆ ತೊಡಿಸುತ್ತಿರುವಾಗ ಅವರಲ್ಲಿ ಲಕ್ಷ್ಮಿಯನ್ನು ಕಾಣುತ್ತಿದ್ದರು. ಒಮ್ಮೆ ಜಗನ್ಮಾತೆ ಲಕ್ಷ್ಮಿಯೇ ಮಾರುವೇಷದಲ್ಲಿ ಬಂದು 'ನಾರೇಯಣ'ರ ಬಳಿ ಬಳೆ ತೊಡಿಸಿಕೊಂಡರು ಎಂಬ ಪ್ರತೀತಿ ಇದೆ.

**ಹೆಣ್ಣೇ ಭೂಷಣ**

**ಕಂ॥ ಮೂಲ ಬ್ರಹ್ಮಮು ತನಯುಲು**
**ಹರಿಹರ ಅಜುಡನುಚು ವಾರಿ ನಾಮಾಂಕಿತಮುಲ್ ।**
**ವನಿತಾಭರಣುಲು ಮುಗ್ಗುರು**
**ನಾದ ಬ್ರಹ್ಮಾನಂದ–ನಾರೇಯಣ ಕವಿ ॥38॥**

ಬ್ರಹ್ಮಾಂಡಗಳ ಸೃಷ್ಟಿಗೆ ಮೂಲ ಕಾರಣನೆನಿಸಿರುವ ಪರಮಾತ್ಮನಿಗೆ ಮೂವರು ಪುತ್ರರು ಅವರೆಂದರೆ ಹರಿ–ಹರ–ಬ್ರಹ್ಮರೆಂಬ ತ್ರಿಮೂರ್ತಿಗಳು. ಇವರು ಲಕ್ಷ್ಮೀ–ಪಾರ್ವತಿ–ಸರಸ್ವತಿಯೆಂಬ ವನಿತೆಯರನ್ನು ಆಭರಣವಾಗಿ ಪಡೆದಿದ್ದಾರೆ.

ಇಲ್ಲಿ ಆಭರಣವೆಂದರೆ ಸ್ತ್ರೀ. ಸ್ತ್ರೀ ಎಂಬ ಆಭರಣ ಗೃಹದಲ್ಲಿ

ಇಲ್ಲದೇ ಹೋದರೆ, ಆ ಗೃಹಕ್ಕೆ ಶೋಭೆಯೇ ಇಲ್ಲ. ಹೆಣ್ಣಿಲ್ಲದ ಗೃಹ, ಗೃಹವಲ್ಲ ಅದೊಂದು ಕೊಂಪೆ. ತ್ರಿಮೂರ್ತಿಗಳೇ ಆಗಿರಬಹುದು ಆದರೆ ಅವರಿಗೆ ಲಕ್ಷ್ಮೀ-ಪಾರ್ವತಿ-ಸರಸ್ವತಿಯ ಜೊತೆಯಿಲ್ಲದಿದ್ದರೆ ಅವರೂ ಅರ್ಧಪೂರ್ಣರೇ ಹೊರತು, ಪೂರ್ಣರಲ್ಲ. ಅವರೆಲ್ಲರ ಅರ್ಧ ಶಕ್ತಿ ಈ ವನಿತೆಯಲ್ಲಿರುವುದು.

**ವಾರಕಾಂತೆ: ದುರ್ವ್ಯಸನ**

**ಪಂಟ ಚೇನಿ ವಿಧಮು – ಪಣತಿ ಇಂಟನು ವುಂಡಿ ।**
**ವಾರಕಾಂತಲ ಮೀದ – ವಲಪು ಯಾಲ ।**
**ಚೇತಿ ಕಾಸು ಪೋಯಿ – ಚೆಡು ವ್ಯಾಧಿ ವಚ್ಚುರಾ**
**ನಾದ ಬ್ರಹ್ಮಾನಂದ-ನಾರೇಯಣ ಕವಿ ॥48॥**

ಇಷ್ಟವಾದ ಫಸಲನ್ನು ಕೊಡುವ ಫಲವತ್ತಾದ ಹೊಲದ ಹಾಗೆ ಮನೆಯಲ್ಲಿ ಮಡದಿ ಇದ್ದುಕೊಂಡು, ವಾರಕಾಂತೆಯರ ಮೇಲೆ ಮೋಹವೇಕೆ? ಇದರಿಂದ ಕೈಯಲ್ಲಿದ್ದ ಹಣವೂ ಹೋಗುವುದಲ್ಲದೆ ಕೆಟ್ಟ ವ್ಯಾಧಿಯೂ ಬರುತ್ತದೆ.

ಒಬ್ಬ ಪುರುಷನಿಗೆ ದಾರಿದ್ರ್ಯ ಯಾವಾಗ ಅಂಟಿಕೊಳ್ಳುವುದೆಂದರೆ, ಆತನು ತನ್ನ ಪತ್ನಿಯನ್ನಲ್ಲದೆ ಪರಸ್ತ್ರೀಯೊಡನೆ ಅಕ್ರಮವಾದ ಸಂಬಂಧವನ್ನಿಟುಕೊಂಡಾಗ. ಆ ಕ್ಷಣದಿಂದಲೇ ಅವನಲ್ಲಿರುವ ಅದೃಷ್ಟಮಾತೆ ಅವನನ್ನು ಬಿಟ್ಟು ಹೊರಟು ಹೋಗುವುದು. ಇದು ಅಕ್ಷರಶಃ ಸತ್ಯ. ಪತಿಯೇ ಪರದೈವವೆಂದು ನಂಬಿ, ಪತಿಗೆ ಇಷ್ಟವಾದ ರೀತಿಯಲ್ಲಿ ಸುಖ, ಸಂತೋಷವನ್ನು ನೀಡುವ ಪತಿವ್ರತೆಯಾದ ಹೆಂಡತಿಯನ್ನು ಬಿಟ್ಟು, ಪರಸಂಗ ಮಾಡುವುದರಿಂದ ಅವನ ಮನಸ್ಸು, ದೇಹ, ಆತ್ಮವೆಲ್ಲವೂ ಕೆಡುವುದಲ್ಲದೇ, ಹಣವನ್ನೂ ಕಳೆದುಕೊಂಡು, ಕೆಟ್ಟ ರೋಗವನ್ನು ತರಿಸಿಕೊಂಡು ಅಧಃಪತನಕ್ಕೊಳಗಾಗುತ್ತಾನೆ. ಆದ್ದರಿಂದ ಪುರುಷನೇ ನೀನು ಪರಕಾಂತೆಯ ಸಹವಾಸ ಮಾಡಬೇಡವೆಂದು ಎಚ್ಚರಿಸಿದ್ದಾರೆ ಕೈವಾರ ತಾತಯ್ಯನವರು.

**ಹೆಣ್ಣಿನಿಂದ ಬಂಧುಗಳು-ಪತಿವ್ರತೆಯೇ ಅದ್ವಿತೀಯ ರತ್ನ**

**ಆಡದಾನಿವಲ್ಲ – ಅಂದರೂ ಚುಟ್ಟಾಲು ।**
**ಆಡದಿ ಲೇಕುಂಟೆ – ಯೆವರು ಲೇರು ।**
**ಪತಿವ್ರತಲೈತೆ – ಪ್ರತಿ ಲೇನಿ ರತ್ನ ಮದಿ ।**
**ನಾದ ಬ್ರಹ್ಮಾನಂದ-ನಾರೇಯಣ ಕವಿ ॥169॥**

ಹೆಣ್ಣಿನ ಮೂಲಕವೇ ಎಲ್ಲರೂ ಬಂಧುಗಳಾಗುತ್ತಾರೆ; ಮಹಿಳೆ ಇಲ್ಲದಿದ್ದರೆ ಲೋಕದಲ್ಲಿ ಮಾನವರಾರೂ ಇಲ್ಲ. ಗೃಹಿಣಿಯಂತೂ ಪತಿವ್ರತೆಯಾಗಿದ್ದರೆ ಸಾಟಿಯಿಲ್ಲದ ಅದ್ವಿತೀಯ ರತ್ನ.

ಮನೆಯಲ್ಲಿ ಒಂದು ಹೆಣ್ಣಿದ್ದರೆ, ಆ ಹೆಣ್ಣಿನಿಂದ ಮಕ್ಕಳಿಗೆ ವಿವಾಹವಾದರೆ, ಅವರಿಂದ ಹೊಸ ಸಂಬಂಧಗಳು ವೃದ್ಧಿಯಾಗುತ್ತವೆ. ಮೊಮ್ಮಕ್ಕಳು, ಮರಿ ಮಕ್ಕಳು ಹೀಗೆ ಬೆಳೆಯುತ್ತಾ ಕುಟುಂಬಗಳೇ ಒಂದು ಗ್ರಾಮವಾಗಿ, ಆ ಗ್ರಾಮಗಳಿಂದ ಇಡೀ ಸಮಾಜವೇ ನಿರ್ಮಾಣವಾಗುತ್ತದೆ. ಅದೇ ಸ್ತ್ರೀ ಇಲ್ಲ ಎಂದ ಪಕ್ಷದಲ್ಲಿ ಕುಟುಂಬವೂ ಇಲ್ಲ, ಗ್ರಾಮ, ಸಮಾಜಗಳೂ ಯಾವುದೂ ಇಲ್ಲ. ಇನ್ನೂ ಆ ಗೃಹಿಣಿಯು ಪತಿವ್ರತಾ ಧರ್ಮವನ್ನು ಅನುಸರಿಸುವಳಾಗಿದ್ದರೆ ಅದಕ್ಕಿಂತ ಮಿಗಿಲಾದ ರತ್ನ ಮತ್ತೊಂದಿಲ್ಲ. ಅಂದರೆ, ಪಾತಿವ್ರತ್ಯಕ್ಕೆ ನಮ್ಮ ಸಮಾಜದಲ್ಲಿ ಅಷ್ಟೊಂದು ಗೌರವವಿದೆ.

ಪಾತಿವ್ರತ್ಯವನ್ನು ಕುರಿತು ಜಗನ್ಮಾತೆಯಾದ ಆದಿಪರಾಶಕ್ತಿಯು ಹೀಗೆಂದಿರುವಳು; "ಯಾವ ಸ್ತ್ರೀಯು ತನ್ನ ಶರೀರ ಮತ್ತು ಮನಸ್ಸನ್ನು ಶುದ್ಧವಾಗಿ ಕಾಪಾಡಿಕೊಂಡು, ಪಾತಿವ್ರತ್ಯವನ್ನು ಹೊಂದಿರುತ್ತಾಳೋ, ಅವಳಲ್ಲಿ ನಾನು ನೆಲೆಸಿರುತ್ತೇನೆ."

**ಆಡದಿ ಮಗವಾಡಂದುರು**
**ಆಡದಿ ಲೇಕುನ್ನ ಸೃಷ್ಟಿ ಅವತಾರಮು ಪೂಜ್ಯಂ ।**
**ಆಡದಿ ದೀಪಮು ಯಿಂಟಿಕಿ**
**ಆಡದಿ ಯೆಟುವಂಟಿದೈನ ಆಡದಿ ಮುಖ್ಯಂ ॥111 ॥**

**ಸ್ತ್ರೀಲಂದುರು ಪುರುಷಲಂದುರು**
**ಪರಮಾತ್ಮುಡು ಲೆಸ್ಸವುಂಡು ವುಭಯತ್ರುಲಲೋ ।**
**ಯೆಕ್ಕುವ ತಕ್ಕುವ ಜೂಚಿನ**
**ಮನುಜುಡು ಸುಜ್ಞಾನಿ ಕಾಡು ಅಜ್ಞಾನುಂಡು ॥112 ॥**

ಹೆಣ್ಣು-ಗಂಡು ಎಂದು ಹೇಳುವಾಗ ಅನೇಕರು ಹೆಣ್ಣಿನ ಬಗ್ಗೆ ತಾತ್ಸಾರ ಭಾವನೆಯನ್ನು ವ್ಯಕ್ತಪಡಿಸುವರು. ಆದರೆ ಹೆಣ್ಣು ಇಲ್ಲದಿದ್ದರೆ ಪ್ರಪಂಚದ ಸೃಷ್ಟಿಯೇ ಇಲ್ಲ. ಮನುಜರ ಅವತಾರವೇ ಇಲ್ಲವಾದುದುರಿಂದ ಹೆಣ್ಣು ಪೂಜ್ಯಳು. ಹೆಣ್ಣೇ ಮನೆಗೆ ದೀಪ. ಮನೆಯೆನಿಸಿಕೊಳ್ಳಬೇಕಾದರೆ ಎಂತಹವಳೇ ಆಗಿದ್ದರೂ ಒಬ್ಬ ಹೆಂಗಸು ಮನೆಯಲ್ಲಿ ಮುಖ್ಯವಾಗಿ ಇರಬೇಕು.

ಸ್ತ್ರೀಯರೆಂದೂ ಪುರುಷರೆಂದೂ ಮೇಲು ಕೀಳುಗಳನ್ನೆಣಿಸ ಬಾರದು. ಪರಮಾತ್ಮನು ಈ ಇಬ್ಬರಲ್ಲೂ ಪರಿಪೂರ್ಣನಾಗಿದ್ದಾನೆ. ಹೀಗಿರುವಾಗ ಹೆಚ್ಚು-ಕಡಮೆಯೆಂಬ ಭಾವನೆಯಿಂದ ಕಾಣುವ ಮನುಜನು ಸುಜ್ಞಾನಿಯಲ್ಲ; ಅವನು ಅಜ್ಞಾನಿ.

"ತಾಯಿಯೇ ಪ್ರತ್ಯಕ್ಷ ದೈವ." ಏಕೆಂದರೆ ನಾವು ಕಣ್ಣಾರೆ ದೇವರನ್ನು ನೋಡಿಲ್ಲ, ದೇವರು ಕಣ್ಣಿಗೆ ಕಾಣದ ಅಮೂರ್ತ ರೂಪದಲ್ಲಿದ್ದಾರೆ. ಆದರೆ ತಾಯಿ ನಮಗೆ ಪ್ರತ್ಯಕ್ಷವಾಗಿ ಕಾಣುವ ಸೃಷ್ಟಿಕರ್ತೆ. ಅಂತಹ ಸೃಷ್ಟಿಕರ್ತೆಯನ್ನು ಕುರಿತು ಭೇದಭಾವ ಎಣಿಸುವುದು ಅಜ್ಞಾನದ ಪರಮಾವಧಿ. ಮನೆಯಲ್ಲಿ ಎಷ್ಟೇ ಸಿರಿ ಸಂಪತ್ತಿದ್ದರೂ ಮನೆಯ ವೈಭವವನ್ನು ಮೆರೆಸುವ ದೀಪಗಳಿದ್ದರೂ ಹೆಣ್ಣೆಂಬ ಚೈತನ್ಯ ದೀಪ ವಿಲ್ಲದಿದ್ದರೆ ಅದು ಮನೆಯೇ ಅಲ್ಲ. ತಪ್ಪುಗಳನ್ನು ಮಾಡುವುದೂ ಮಾನವನ ಸಹಜ ಗುಣ, ಗಂಡಸರೇನೂ ತಪ್ಪುಗಳನ್ನು ಮಾಡುವುದರಲ್ಲಿ ಕಡಮೆಯಲ್ಲ. ಆದರೆ ಆ ತಪ್ಪುಗಳನ್ನು ಮುಚ್ಚುವುದಕ್ಕಾಗಿ, ಸ್ತ್ರೀಯನ್ನು ನಿಂದಿಸುತ್ತಾರೆ. ಅದು ದೊಡ್ಡ ತಪ್ಪು. ಸ್ತ್ರೀಯೂ ಸಾಮಾನ್ಯವಾಗಿ ತಪ್ಪು ಮಾಡುವುದಿಲ್ಲ, ಮಾಡಿದರೂ ತನ್ನ ಸ್ವಾರ್ಥಕ್ಕಾಗಿ ಅಂತೂ ಖಂಡಿತವಾಗಿರುವುದಿಲ್ಲ. ನಿಸ್ವಾರ್ಥದಿಂದ ತನ್ನ ಕುಟುಂಬದ ಶ್ರೇಯಸ್ಸಿಗಾಗಿ ಮಾಡಿದರೂ ಮಾಡಬಹುದು ಅಷ್ಟೇ. ಅದು ಸಂದಿಗ್ಧ ಕಾಲವಾದರೆ ಮಾತ್ರ.

ಪರಮಾತ್ಮನ ದೃಷ್ಟಿ ಸಮದರ್ಶಿತ್ವವುಳ್ಳದ್ದು ಅಂದರೆ ಪ್ರಕೃತಿಯಲ್ಲಿ ಎಲ್ಲವೂ ಸಮಾನವೇ. ಆದರೆ ಪುರುಷನು ಸ್ತ್ರೀಯನ್ನು ಹೀನಾಯವಾಗಿ ನೋಡುವುದು ಮೂರ್ಖತನ.

**ಪತಿಭಕ್ತಿ, ಸತಿ ಗುಟ್ಟು – ಪರಮೇಶ್ವರುಂಡೆರುಗು**
**ನರುಲೇ ಮೆರುಂಗುದುರು – ನಾಣ್ಯವತಿನಿ ।**

ಪತಿಭಕ್ತಿಯುಳ್ಳ ಸಾಧ್ವಿಯಾದ ಸತಿಯ ಪಾತಿವ್ರತ್ಯದ ಮಹಿಮೆಯ ಬಗ್ಗೆ ಮತ್ತು ಪತಿವ್ರತೆಯ ಆಚಾರ ವಿಚಾರಗಳ ಆಂತರ್ಯವನ್ನು ಸರ್ವಜ್ಞನಾದ ಪರಮೇಶ್ವರನು ಅರಿಯಬಲ್ಲನೇ ಹೊರತು ಮಾನವ ಮಾತ್ರರು ಶೀಲವತಿಯನ್ನು ಹೇಗೆ ತಾನೇ ಗುರ್ತಿಸಬಲ್ಲರು?

ಪಾತಿವ್ರತ್ಯ ಧರ್ಮವೆಂಬುದು ಸ್ತ್ರೀಯ ಅಂತರಂಗದ ವಿಷಯ. ಸ್ತ್ರೀ ತನ್ನ ಶೀಲವನ್ನು ಕಾಪಾಡಿಕೊಂಡಿರುವುದು, ಬಿಟ್ಟಿರುವುದು ಅವರಿಗೆ ಮತ್ತು ಪರಮಾತ್ಮನಿಗೆ ತಿಳಿದಿರುತ್ತದೆ. ಅದನ್ನು ಬಿಟ್ಟು, ಲೌಕಿಕರಾದ ಅಜ್ಞಾನದ ಜನರು ಸ್ತ್ರೀಯರ ಶೀಲವನ್ನು ಕುರಿತು ಅನುಮಾನದ ಮಾತುಗಳನ್ನಾಡುವುದು ಶುದ್ಧ ತಪ್ಪು. ತ್ರಿಕಾಲಜ್ಞಾನಿಗಳಾದ ಶ್ರೀ ತಾತಯ್ಯನವರು ಇಂದು ಕಂಡುಬರುವಂತಹ ಕಾಲದ ಗತಿಯನ್ನು ಅಂದೇ ತಿಳಿದು ಕಾಲಜ್ಞಾನದಲ್ಲಿ ಬರೆದಿರುವರು.

**ಮುತ್ತೈದೆಗೆ ಬಳೆ: ಮುಕ್ತಿಗೆ ಜ್ಞಾನ**

**ಮೊಂಟಿ ಗಾಜುವಲ್ಲ-ಮಗುವ ಮುತ್ತೈದಾಯ ।**
**ಎನ್ನಿ ಸೊಮ್ಮುಲುಂಡಿ – ಯೇಮಿ ಫಲಮು?**
**ಮುಖ್ಯಮೈನ ಸೊಮ್ಮು – ಮುಂಡಲಕು ಲೇದುರಾ ।**
**ನಾದ ಬ್ರಹ್ಮಾನಂದ-ನಾರೇಯಣ ಕವಿ ॥117॥**

ಮಣ್ಣಿನ ಬಳೆಯಿಂದ ಹೆಣ್ಣು ಮುತ್ತೈದೆಯೆಂದು ಗುರುತಿಸ



## ಕೈವಾರ ದೇವಸ್ಥಾನದಲ್ಲಿ ಬಳೇ ಸೇವೆ

**ಶ್ರೀ 'ನಾರೇಯಣರು' ಮುತ್ತೈದೆಯರಿಗೆ ಬಳೆಯೆ ಮಾಣಿಕ್ಯ ವೆಂದು ತಿಳಿದಿದ್ದರಿಂದ, ಶ್ರೀ ಯೋಗಿನಾರೇಯಣ ದೇವಸ್ಥಾನಕ್ಕೆ ಬಂದು, ಬಳೆಯನ್ನು ಧರಿಸಲು ಅಪೇಕ್ಷೆಪಟ್ಟಂತಹ ಎಲ್ಲರಿಗೂ ಉಚಿತವಾಗಿ ಬಳೆಯನ್ನು ತೊಡುವುದಕ್ಕೆ 'ಬಳೇ ಸೇವೆ'ಯೆಂಬ ಪ್ರತ್ಯೇಕ ಕೌಂಟರ್‌ನ್ನು ತೆರೆಯಲಾಗಿದೆ.**

ಲ್ಪಟ್ಟಳು. ಇದು ಇರಬೇಕಾದ ಒಡವೆಗಳಲ್ಲಿ ಮುಖ್ಯವಾದುದು. ವಿಧವೆಯರಿಗೆ ಈ ಮುಖ್ಯವಾದ ಒಡವೆಯಿಲ್ಲ. ಅಮುಖ್ಯವಾದ ಇತರ ಎಷ್ಟೆಷ್ಟೋ ಒಡವೆಗಳು ಇದ್ದರೂ ಪ್ರಯೋಜನವೇನು?

ನಮ್ಮ ಹಿಂದೂ ಸಂಪ್ರದಾಯದಲ್ಲಿ ಹೆಣ್ಣಿಗೆ ಕೈ ತುಂಬ ಬಳೆ ಇದ್ದರೇನೆ ಅವಳನ್ನು ಮುತ್ತೈದೆಯೆಂದು ಕಾಣುತ್ತಾರೆ, ಬಳೆ ಧರಿಸಿದರೇನೆ ಗೌರವ ಮತ್ತು ಚೆಂದ. ಪುರುಷರಂತೆ ಬಳೆ ಇಲ್ಲದ ಬೋಳು ಕೈಗಳಿದ್ದು ಮೈ ತುಂಬ ಚಿನ್ನ, ವಜ್ರ, ವೈಢೂರ್ಯದಿಂದ ಎಷ್ಟೇ ಅಲಂಕೃತವಾದ ಆಭರಣಗಳನ್ನು ಧರಿಸಿಕೊಂಡರೂ ವಿಧವೆಯಂತೆಯೇ ಸರಿ.

**ಕೊಟ್ಟಕುಮೀ ಪಶುಬಾಲುಲ**
**ಕೊಟ್ಟಕುಮೀ ಸ್ತ್ರೀಲ ನಶ್ವಪುಲಿವರ್ಗಂಬುಲ್ ।**
**ಕೊಟ್ಟಕುಮೀ ದೀನಾತ್ಮುಲ**
**ಕೊಟ್ಟಕುಮೀ ಸಂನ್ಯಾಸಿ ಕವುಲ ನಾರೇಯಣಕವಿ ॥ 7 ॥**

**(ತಾರಕ ಬ್ರಹ್ಮಾನಂದ ದ್ವಯಕಂದ ಶತಕದ ಪೂರ್ವಭಾಗ)**

ಅಯ್ಯಾ, ಹಸುವೇ ಮೊದಲಾದ ಪಶುಗಳನ್ನೂ ಚಿಕ್ಕಮಕ್ಕಳನ್ನೂ ಹೊಡೆಯಬೇಡ. ಸ್ತ್ರೀಯನ್ನು ಹೊಡೆಯಬೇಡ. ಕುದುರೆಗಳನ್ನೂ ಹುಲಿಯೇ ಮೊದಲಾದ ಮೃಗವರ್ಗಗಳನ್ನೂ ಹೊಡೆದು ಹಿಂಸಿಸಬೇಡ. ದೀನದಲಿತರನ್ನು ಹೊಡೆಯಬೇಡ. ಸಂನ್ಯಾಸಿಗಳನ್ನೂ ಕವಿಗಳನ್ನೂ ಹೊಡೆದು ಹಿಂಸಿಸಬೇಡ. ಈ ಪದ್ಯದಲ್ಲಿ ಮನುಷ್ಯನು ಮಾಡಲೇಬಾರದಂತಹ ಮಹಾಪಾಪಗಳನ್ನು ಶ್ರೀ ತಾತಯ್ಯನವರು ತಿಳಿಸಿದ್ದಾರೆ. ಇದರಲ್ಲಿ 'ಕೊಟ್ಟಕುಮೀ ಸ್ತ್ರೀಲ' ಎಂದಿರುವರು. ಅಂದರೆ ಸ್ತ್ರೀಯರನ್ನು ಹಿಂಸಿಸಬೇಡ. ವಿನಾಕಾರಣ ಹಿಂಸಿಸಿದರೆ ಆದಿಶಕ್ತಿಯ ಕೋಪಕ್ಕೆ ಗುರಿಯಾಗಿ, ಅಂತಹವರಿಗೆ ನರಕ ತಪ್ಪಿದ್ದಲ್ಲ. ಹೀಗೆ ಶ್ರೀ ನಾರೇಯಣರು ಕಂಡಂತಹ ಸ್ತ್ರೀಯರನ್ನು ಕುರಿತ ಹಲವು ನುಡಿಮುತ್ತುಗಳನ್ನು ತಿಳಿಸುತ್ತಾ ಲೇಖನವನ್ನು ಮುಕ್ತಾಯಗೊಳಿಸುತ್ತಿದ್ದೇನೆ.●

▶▶ 5ನೇ ಪುಟದಿಂದ

ಮೂಲಕ ಸೃಷ್ಟಿ ಕ್ರಿಯೆಗೆ ಸಹಾಯ ಮಾಡುವುದು. ಮನ್ಮಥ ರತಿದೇವಿ ಎಂಬ ಅಪ್ಸರಾ ಸುಂದರಿಯನ್ನು ವರಿಸಿದನಂತೆ.

ಅತ್ತ ತಾರಕಾಸುರ ಸ್ವರ್ಗವನ್ನು ಆಕ್ರಮಿಸಿ ದೇವತೆಗಳನ್ನೇ ಸ್ವರ್ಗಲೋಕದಿಂದ ಹೊರಗಟ್ಟಿದ. ದೇವತೆಗಳ ಪರಿಸ್ಥಿತಿ ಶೋಚನೀಯವಾಯಿತು. ಅದೇ ವೇಳೆ ಇಂದ್ರನಿಂದ ಆಜ್ಞಾಪಿತಗೊಂಡ ಮನ್ಮಥ ತನ್ನ ಹೂಬಿಲ್ಲು ಬಾಣಗಳನ್ನು ಹಿಡಿದು ಶಿವ ತಪಸ್ಸಿನಲ್ಲಿ ತಲ್ಲೀನನಾಗಿದ್ದ ಸ್ಥಳವನ್ನು ತಲಪಿದ.

ಅಲ್ಲಿ ಪಾರ್ವತಿ ಶಿವನ ಸೇವೆಯಲ್ಲಿ ತೊಡಗಿ ತಪಸ್ಸು ಮಾಡುತ್ತಿದ್ದಳು. ಅವಳೊಮ್ಮೆ ಶಿವನ ಬಳಿ ಇದ್ದಾಗ ಅದೇ ಸುಸಮಯವೆಂದು ನಿರ್ಧರಿಸಿ ಮನ್ಮಥ ತನ್ನ ಪುಷ್ಪ ಬಾಣಗಳನ್ನು ಶಿವನ ಮೇಲೆ ಪ್ರಯೋಗಿಸಿದ. ಶಿವ ಕಣ್ಣು ಬಿಟ್ಟ ನೋಡಿದಾಗ ಎದುರಿಗೆ ಪಾರ್ವತಿ ಕಂಡಳು. ಅವಳಲ್ಲಿ ಶಿವನಿಗೆ ಮೋಹ ಉಂಟಾಯಿತು. ಆದರೆ ಅದೇ ವೇಳೆ ತನ್ನ ತಪೋಭಂಗ ಮಾಡಿದ ಮನ್ಮಥನೂ ಕಣ್ಣಿಗೆ ಕಂಡ. ಶಿವನ ಕೋಪ ತಾರಕಕ್ಕೆ ಹೋಯಿತು. ಕೋಪ ತಡೆಯಲಾರದೆ ಶಿವ ತನ್ನ ಮೂರನೆಯ ಕಣ್ಣು ತೆರೆದ. ಅದರಿಂದ ಹೊರ ಹೊರಟ ಅಗ್ನಿ ಜ್ವಾಲೆಗಳು ಮನ್ಮಥನನ್ನು ಸುಟ್ಟು ಭಸ್ಮ ಮಾಡಿದವು. ಶಿವ ಪಾರ್ವತಿಯರ ವಿವಾಹಕ್ಕೆ ಇದು ದಾರಿ ಮಾಡಿಕೊಟ್ಟಿತು. ಮನ್ಮಥ ಲೋಕ ಕಲ್ಯಾಣಕ್ಕಾಗಿ ತನ್ನನ್ನೇ ಆಹುತಿ ಮಾಡಿಕೊಂಡು ಕೀರ್ತಿಶಾಲಿಯಾದ.

ಅನಂತರ ಶಿವ ಪಾರ್ವತಿಯರ ವಿವಾಹದ ಪರಿಣಾಮ ಜನಿಸಿದ ಮಗನೇ ಕಾರ್ತಿಕೇಯ.

ಶಿವನಿಗೆ ಪುತ್ರೋತ್ಸವವಾದ ಸುದ್ದಿ ಕೇಳಿ ದೇವತೆಗಳು ತಾರಕಾಸುರನ ಮೇಲೆ ಆಕ್ರಮಣ ಮಾಡಲು ಸೈನ್ಯ ಕೂಡಿಸಿಕೊಂಡು ಹೊರಟರು. ಆಗ ಒಂದು ಅಶರೀರವಾಣಿಯು ಕಾರ್ತಿಕೇಯನ ನಾಯಕತ್ವದಲ್ಲಿ ದೇವತೆಗಳ ಸೈನ್ಯ ಸೆಣಸಿದರೆ ಮಾತ್ರ ದೇವತೆಗಳಿಗೆ ಗೆಲುವು ಸಾಧ್ಯವೆಂದು ನುಡಿಯಿತು. ಕಾರ್ತಿಕೇಯ ದೇವತೆಗಳ ಪಕ್ಷದಿಂದ ಹೋರಾಡಲು ಮುಂದೆ ಬಂದು ತಾರಕಾಸುರನನ್ನು ಯುದ್ಧಕ್ಕೆ ಆಹ್ವಾನಿಸಿದ. ಇಬ್ಬರ ನಡುವೆ ಹಣಾ ಹಣಿ ಯುದ್ಧ ನಡೆಯಿತು.

ಶಕ್ತಿ ಎಂಬ ಅಸ್ತ್ರದಿಂದ ಕಾರ್ತಿಕೇಯ ತಾರಕಾಸುರನನ್ನು ಸಂಹರಿಸಿದ.

ಹೀಗೆ ತಾರಕಾಸುರನೆಂಬ ಲೋಕ ಕಂಟಕನ ಸಂಹಾರ ಕಥೆಯ ಹಿಂದೆ ಇಷ್ಟೆಲ್ಲ ಹಿನ್ನೆಲೆ ಇದೆ.

ನಾವು ಕಾಮ ಅಥವಾ ಮನ್ಮಥನ ಹಬ್ಬ ಎಂದು ಆಚರಿಸುವ ಹೋಳಿ ಹಬ್ಬದ ಹಿನ್ನೆಲೆಯಲ್ಲಿರುವ ಕಥೆಗಳಲ್ಲಿ ಇದೂ ಒಂದು.

ಹೋಳಿಕಾ ಎಂಬ ರಾಕ್ಷಸಿಯ ಹೋಳಿ ಹಬ್ಬದ ಹಿನ್ನೆಲೆಯಲ್ಲಿರುವುದುಂಟು! ಪ್ರಹ್ಲಾದನ ತಂದೆ ಹಿರಣ್ಯಕಶಿಪುವಿನ ಸೋದರಿ ಹೋಳಿಕಾ. ಪ್ರಹ್ಲಾದ ವಿಷ್ಣುವಿನ ಪರಮಭಕ್ತನಾದರೆ ಹಿರಣ್ಯಕಶಿಪು ವಿಷ್ಣುವಿನ ಪರಮಶತ್ರು. ತನ್ನ ಮಗ ಪ್ರಹ್ಲಾದನನ್ನೇ, ಅವನು ವಿಷ್ಣು ಭಕ್ತ ಎಂಬ ಕಾರಣಕ್ಕಾಗಿ, ಕೊಲ್ಲಲು ಅನೇಕ ವಿಧಗಳಲ್ಲಿ ಪ್ರಯತ್ನಿಸಿ ವಿಫಲನಾಗಿದ್ದ ಹಿರಣ್ಯಕಶಿಪು ಕೊನೆಗೆ ತನ್ನ ತಂಗಿ ಹೋಳಿಕಾಳನ್ನು ಸಹಾಯಕ್ಕೆ ಕರೆದ. ಹೋಳಿಕಾಗೆ ಬೆಂಕಿಯು ಸುಡದಂತೆ ಒಂದು ವರವಿತ್ತು. ಪ್ರಹ್ಲಾದನನ್ನು ಎತ್ತಿಕೊಂಡು ಹೋಳಿಕಾ ಅಗ್ನಿಕುಂಡವನ್ನು ಪ್ರವೇಶಿಸಿದರೆ ಪ್ರಹ್ಲಾದ ಸುಟ್ಟು ಭಸ್ಮವಾಗುತ್ತಿದ್ದ. ಹೋಳಿಕಾಗೆ ಯಾವ ಅಪಾಯವೂ ಇರಲಿಲ್ಲ. ಹೀಗೆ ಯೋಚಿಸಿ ಪ್ರಹ್ಲಾದನನ್ನು ಎತ್ತಿಕೊಂಡು ಅಗ್ನಿಪ್ರವೇಶ ಮಾಡುವಂತೆ ತಂಗಿಗೆ ಸೂಚಿಸಿದ. ಆದರೆ ಇಲ್ಲಿಯೂ ಹಿರಣ್ಯ ಕಶಿಪುನ ಎಣಿಕೆ ತಪ್ಪಾಯಿತು. ವಿಷ್ಣುವೇ ಬಂದ ಪ್ರಹ್ಲಾದನನ್ನು ರಕ್ಷಿಸಿದ. ಹೋಳಿಕಾಳು ಕೂಡ ಸುಟ್ಟು ಭಸ್ಮವಾದಳು. ಏಕೆಂದರೆ ಅವಳೊಬ್ಬಳೆ ಇದ್ದರೆ ಮಾತ್ರ ಬೆಂಕಿ ಅವಳನ್ನೇನೂ ಮಾಡದಂತೆ ವರ ನೀಡಲಾಗಿತ್ತಂತೆ. ಅದರೆ ಜೊತೆಯಲ್ಲಿ ಪ್ರಹ್ಲಾದನಿದ್ದ. ಆದ್ದರಿಂದ ಅವಳೂ ಭಸ್ಮೀಭೂತಳಾದಳು. ವಿಷ್ಣು ಪ್ರಹ್ಲಾದನನ್ನು ಎತ್ತಿಕೊಂಡು ಸಂರಕ್ಷಿಸಿದ.

ದುಷ್ಟ ಶಕ್ತಿಯ ವಿರುದ್ಧ ದೈವೀ ಶಕ್ತಿಯ ಗೆಲುವಿನ ಸಂಕೇತವೆಂದು ಹೋಳಿ ಆಚರಿಸಲು ಈ ಪೌರಾಣಿಕ ಕಥೆಯೂ ಒಂದು ಕಾರಣ.

●

▶▶ 9ನೇ ಪುಟದಿಂದ

ವಿಶೇಷ ಪೂಜೆ ಉತ್ಸವಗಳನ್ನು ಸಕ್ರಮಗೊಳಿಸಿದರು. ಅದುವರೆಗಿನ ಎರಡು ತಿಂಗಳ ಪರ್ಯಾಯ ಕ್ರಮವನ್ನು ಬದಲಿಸಿ ಎರಡು ವರ್ಷಕ್ಕೊಮ್ಮೆ ಪರ್ಯಾಯವೆಂದು ಪುನರ್ ಕಲ್ಪಿಸಿಕೊಟ್ಟರು. ಅಷ್ಟ ಮಠಗಳ ಯತಿಗಳೂ ಆವರೆಗೆ ಕೃಷ್ಣ ಮಠದಲ್ಲಿಯೇ ವಾಸ್ತವ್ಯವಿರುವ ಕ್ರಮವನ್ನು ಬದಲಿಸಿ ವಾದಿರಾಜರು ರಥ ಬೀದಿಯ ನಾಲ್ಕು ಕಡೆಗಳಲ್ಲಿಯೇ ಎಂಟು ಪ್ರತ್ಯೇಕ ಮಠಗಳ ಮಂದಿರಗಳನ್ನು ನಿರ್ಮಾಣ ಮಾಡಿಕೊಟು ಪ್ರತ್ಯೇಕ ವಾಸ ಸ್ಥಾನವನ್ನು ವ್ಯವಸ್ಥೆ ಮಾಡಿಕೊಟ್ಟರು.

ಉಡುಪಿಗೆ ಹತ್ತಿರವಿರುವ ಧರ್ಮಸ್ಥಳದಲ್ಲಿ ಮಂಜುನಾಥೇಶ್ವರನನ್ನು ಪ್ರತಿಷ್ಠಾಪನೆ ಮಾಡಿದವರು ವಾದಿರಾಜರೇ. ಜಾತಿ ಮತ ಭೇದವಿಲ್ಲದೆ ದಿನ ನಿತ್ಯವೂ ಅಲ್ಲಿ ಇಂದಿಗೂ ನಡೆಯುತ್ತಿರುವ ಅನ್ನದಾನದ ಮೂಲ ವ್ಯವಸ್ಥೆಯನ್ನು ಮಾಡಿದವರೂ ವಾದಿರಾಜರೇ. (ಈ ಕುರಿತಾದ ಸಂಶೋಧನಾತ್ಮಕ ವಿವರಗಳು ಸಾಕಷ್ಟು ದೊರೆತಿವೆ)

ಧರ್ಮಸ್ಥಳದಲ್ಲಿ ಆದಿದೈವವು ಮಂಜುನಾಥ; ಕ್ಷೇತ್ರಪಾಲಕ ಅಣ್ಣಪ್ಪ ಭೂತ. ಸೋದಾ ಕ್ಷೇತ್ರದಲ್ಲಿ ಆದಿದೈವವು ತ್ರಿವಿಕ್ರಮ; ಕ್ಷೇತ್ರಪಾಲಕ ಭೂತರಾಜ.

ಕೃಷ್ಣ ದೇವಾಲಯದ ಆವರಣದಲ್ಲಿ ಸುಬ್ರಹ್ಮಣ್ಯನನ್ನೂ, ಪಾಜಕ ಹಾಗೂ ಉಡುಪಿ ಕ್ಷೇತ್ರಗಳಲ್ಲಿ ಮಧ್ವಾಚಾರ್ಯರ ವಿಗ್ರಹಗಳನ್ನು ಪ್ರತಿಷ್ಠಾಪಿಸಿದವರು ವಾದಿರಾಜರು. ಬದರಿಕಾಶ್ರಮಕ್ಕೆ ಪಯಣಿಸಿ ಅಲ್ಲಿಂದ ತ್ರಿವಿಕ್ರಮ ಮೂರ್ತಿಯನ್ನು ಸ್ವತಃ ತಂದು ಸೋದೆ (ಆಗಿನ ಹೆಸರು ಸ್ವಾದೀಗ್ರಾಮ)ಯಲ್ಲಿ ಪ್ರತಿಷ್ಠಾಪನೆ ಮಾಡಿದರು. 'ಧವಳಗಂಗೆ' ಸರೋವರ (ತ್ರಿವಿಕ್ರಮ ದೇವಾಲಯದ ಬಳಿ) ನಿರ್ಮಾಣವೂ ಅವರಿಂದಲೇ ಸಾಧ್ಯವಾಯಿತು.



ಉಡುಪಿಯ ಸುತ್ತಮುತ್ತಣ ಗ್ರಾಮಗಳಾದ ಮಟ್ಟಿ, ಕೋಟ, ಕೋಟೇಶ್ವರ ಮುಂತಾದೆಡೆಗಳಲ್ಲಿ ಅಂದು ಬ್ರಾಹ್ಮಣರ ಒಳಪಂಗಡಗಳೇ ವೈಷಮ್ಯ, ಒಳಜಗಳ, ಬಹಿಷ್ಕಾರಗಳಲ್ಲಿ ಪರಸ್ಪರ ತೊಡಗಿಕೊಂಡಿದ್ದವು. ವಾದಿರಾಜರು ಅವರ ಒಳ ಜಗಳಗಳನ್ನೆಲ್ಲ ಪರಿಹರಿಸಿ ವೈಷ್ಣವ ದೀಕ್ಷೆಯಿತ್ತು ಸೋದೆ ಮಠದ ಶಿಷ್ಯರುಗಳನ್ನಾಗಿಸಿಕೊಂಡರು. ದೀನ ದಲಿತರನ್ನೂ ತಾವೇ ಹೋಗಿ ವಿಚಾರಿಸಿಕೊಂಡು ಅವರಿಗಾಗಿ ಅವರದೇ ತುಳು ಭಾಷೆಯಲ್ಲಿ ಪಾಡ್ದನಗಳನ್ನು ರಚಿಸಿಕೊಟ್ಟು ಹರಿಪ್ರೀತಿಯನ್ನು ಅವರಲ್ಲಿ ಬೆಳೆಸಿದರು. ಹೀಗೆ ಬಡತನದಲ್ಲಿದ್ದವರಿಗೆ ಮಠದಿಂದ ನೆರವು ನೀಡುತ್ತಿದ್ದರು. ಕೆರೆ ನೀರಿನ ನಿರ್ಮಾಣ ಮಾಡುತ್ತ ದೀನಾನು ಕಂಪಿತ ಹೃದಯವಂತಿಕೆಯಿಂದ ಅನೇಕ ರೀತಿಯಲ್ಲಿ ಸಮಾಜ ಸೇವೆಯನ್ನು ಮುಂದುವರಿಸಿಕೊಂಡು ಹೋದುದರ ಬಗ್ಗೆ ಶಿಲಾಶಾಸನಗಳು ಕೆಲವು ಸಿಕ್ಕಿವೆ. ಮಟ್ಟಿ ಗ್ರಾಮದವರಿಗೆ ಅಂದು ತಾವೇ ವಿಶೇಷ ರೀತಿಯ ಬದನೆಕಾಯಿ ಬೀಜವನ್ನು ಹಂಚಿ ಬೆಳೆಯಲು ಪ್ರೋತ್ಸಾಹಿಸಿದರು. ಇಂದಿಗೂ ಆ "ಮಟ್ಟಿಗುಳ್ಳ" ಎಂಬ ಹೆಸರಿನಿಂದ ಆ ಬದನೆಕಾಯಿ ಬೆಳೆಯುತ್ತ ಜನಪ್ರಿಯತೆಯಲ್ಲಿದೆ.

ಕನಕದಾಸರು, ಪುರಂದರದಾಸರು ಇವರೆಲ್ಲ ಉಡುಪಿಗೆ ಬಂದು ದೀರ್ಘಕಾಲ ನೆಲೆಸಿದ್ದು ವಾದಿರಾಜರೊಂದಿಗೆ ಶ್ರೀಕೃಷ್ಣ ಭಕ್ತಿಯ ಒಡನಾಟವನ್ನು ಸವಿದವರೇ ಆಗಿದ್ದಾರೆ. ಕೆಲವು ಕಾಲ ತಮ್ಮ ಮಠಕ್ಕೆ ಬಂದು ಒಡನಾಡಿಯಾಗಿದ್ದ ಬೇಲೂರು ವೆಂಕಟದಾಸರನ್ನು ಕುರಿತು "ದಾಸೋತ್ತಮ ನೀನೆ । ವೈಕುಂಠದಾಸೋತ್ತಮ ನೀನೆ" ಎಂದು ಸ್ತುತಿಸುವ ಕೃತಿ ರಚಿಸಿದರು. ಬೇಲೂರಿನ ಚೆನ್ನಕೇಶವದೇವರ ಮೇಲೆ ವಾದಿರಾಜರು ರಚಿಸಿರುವ "ಆನಂದಮಯಗೆ ಚಿನ್ಮಯಗೆ । ಶ್ರೀಮನ್ನಾರಾಯಣಗೆ" ಎಂಬ ಆರತಿ ಹಾಡು ಇಂದಿಗೂ ಜನಪ್ರಿಯವಾಗಿದೆ. ವಾದಿರಾಜರ ಆಮಂತ್ರಣದ ಮೇರೆಗೆ ಗುರುಗಳಾದ ಶ್ರೀ ವ್ಯಾಸತೀರ್ಥರೂ ಆಗ ಆಳುತ್ತಿದ್ದ ಅಚ್ಯುತರಾಯ ದೊರೆಯೂ ಉಡುಪಿಯ ಪರ್ಯಾಯ ಕಾಲದಲ್ಲಿ ಆಗಮಿಸಿದ್ದು ಕೆಲಕಾಲ ತಂಗಿದ್ದರು.

**ವಾದಿರಾಜರು ಉಡುಪಿಯಲ್ಲಿ ನಡೆಸಿದ ಮಹಾ ವೈಭವಯುಕ್ತ ಪರ್ಯಾಯ ಕಾಲಗಳು ಹೀಗಿವೆ:**

1. ಕ್ರಿ.ಶ. 1532ರಿಂದ 33ನೇ ಇಸವಿ.
2. ಕ್ರಿ.ಶ. 1548ರಿಂದ 49ನೇ ಇಸವಿ.
3. ಕ್ರಿ.ಶ. 1564ರಿಂದ 65ನೇ ಇಸವಿ.
4. ಕ್ರಿ.ಶ. 1580ರಿಂದ 81ನೇ ಇಸವಿ.
5. ಕ್ರಿ.ಶ. 1596ರಿಂದ 97ನೇ ಇಸವಿ.

ಈ ಅವಧಿಯಲ್ಲಿ ತಮ್ಮ ಉತ್ತರಾಧಿಕಾರಿ ಯತಿ ವೇದವೇದ್ಯ ತೀರ್ಥರಿಗೆ ಉಡುಪಿಯ ಪರ್ಯಾಯ ವಹಿಸಿಕೊಟ್ಟು ತಾವು ಸೋದೆಗೆ ತೆರಳಿ ಅಲ್ಲಿ ಪರ್ಯಾಯವನ್ನು ನಡೆಸಿದರು.

ಸೋದೆಯಲ್ಲಿ ತ್ರಿವಿಕ್ರಮದೇವರ ಗುಡಿ ಕಟ್ಟಿಸಿದ ಮೇಲೆ ವಾದಿರಾಜರು ತಮ್ಮನ್ನು "ತ್ರಿವಿಕ್ರಮ ದಾಸ" ಎಂತಲೇ ಕರೆದುಕೊಂಡಿದ್ದರು. ವಾದಿರಾಜರಲ್ಲಿ ಕನಕದಾಸರು ಶಿಷ್ಯತ್ವ ತಾಳಿಕೊಂಡಿದ್ದವರು. ತಮ್ಮ "ಮೋಹನ ತರಂಗಿಣಿ" ಕಾವ್ಯದಲ್ಲಿ ಕನಕದಾಸರು ತಮ್ಮನ್ನು ತಾವು "ತ್ರಿವಿಕ್ರಮದಾಸರ ದಾಸ" ಎಂದು ಕರೆದುಕೊಂಡಿದ್ದಾರೆ. ಇದು ಇವರಿಬ್ಬರ ನಡುವಿನ ಗುರು ಶಿಷ್ಯ ಸಂಬಂಧದ ಆತ್ಮೀಯತೆಗೆ ಸಂಕೇತವಾಗಿದೆ.

ತಮ್ಮ ವೃದ್ಧಾಪ್ಯದ ದಿನಗಳನ್ನು ವಾದಿರಾಜರು ಸೋದೆಯಲ್ಲಿಯೇ ಕಳೆದರು. ಒಟ್ಟು 120 ವರ್ಷಗಳ ಕಾಲ ಬದುಕಿದ್ದವರು ವಾದಿರಾಜರು. ಕ್ರಿ.ಶ. 1600ರಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿದರು. (ಶಾರ್ವರಿ ಸಂವತ್ಸರದ ಫಾಲ್ಗುಣ ಬಹುಳ ತದಿಗೆ ಸ್ವಾತೀ ನಕ್ಷತ್ರದಿಂದ ಕೂಡಿದ ಬುಧವಾರದಂದು ಅವರು ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿದ್ದು) ಭಾರತದ ಯತಿಗಳಲ್ಲಿ ಸಶರೀರವಾಗಿ ಬೃಂದಾವನ ಪ್ರವೇಶ ಮಾಡಿದವರಲ್ಲಿ ವಾದಿರಾಜರೇ ಮೊದಲಿಗರು. ಅನಂತರದ ಶತಮಾನಗಳು ಕಳೆದ ಮೇಲೆ ಬಂದ ಮಂತ್ರಾಲಯದ ರಾಘವೇಂದ್ರಸ್ವಾಮಿ ಯತಿಗಳು ಎರಡನೆಯವರು. ಮತ್ತಾವ ಯತಿಗಳೂ ಹೀಗೆ ಸಶರೀರ ಬೃಂದಾವನಸ್ಥರಾಗಿರುವ ದಾಖಲೆ ಇಲ್ಲ.

**ಶ್ರೀ ವಾದಿರಾಜಂ ಚ ಗುರುಂ ಭಜದ್ವಂ ।**
**ದೇವಸ್ಯ ಕಾರುಣ್ಯ ನಿಧಿಂ ಲಭದ್ವಂ ।**
**ತತಃ ಸುವಿಜ್ಞಾನ ಫಲಂ ಲಭದ್ವಂ ।**
**ತತಃ ಸದಾನಂದ ಪದಂ ಲಭದ್ವಂ ॥**

**ನಂ. ಬಿ-೭೦೨, ೭ನೇ ಮಹಡಿ, ಪ್ರಿಮಸ್ ರಿಫ್ಲೆಕ್ಷನ್, ಕನಕಪುರ ಮುಖ್ಯರಸ್ತೆ, ಕಗ್ಗಲಿಪುರ, ಬೆಂಗಳೂರು-೫೬೦ ೦೮೨.**



**ಶ್ರೀ ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರು** ಇತ್ತೀಚಿನ ವರೆಗೂ ಜೀವಿಸಿದ್ದು ಪಾದಚಾರಿಗಳಾಗಿಯೇ ದೇಶ ಸಂಚಾರ ಮಾಡುತ್ತಾ **ಕರತಲ ಭಿಕ್ಷಾ ತರುತಲ ವಾಸಃ** ಎಂಬಂತೆ ಪರಿಶುದ್ಧ ಸಂನ್ಯಾಸ ಜೀವನ ನಡೆಸಿ ಶತಾಯುಷಿಗಳಾಗಿ ಬ್ರಹ್ಮೈಕ್ಯರಾದರು. ಅವರು ಸನಾತನ ಧರ್ಮದ ಸಾರಸರ್ವಸ್ವವನ್ನೂ ಆಧುನಿಕ ಪರಿಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಮುಂಬಯಿ ಭಕ್ತರು ಒಂದೂಗೂಡಿ **'ಶ್ರೀ ಕಂಚಿ ಮಹಾಸ್ವಾಮಿ ಪೀಠಾರೋಹಣ ಶತಾಬ್ದಿ ಮಹೋತ್ಸವ ಟ್ರಸ್ಟ್' (ಮುಂಬೈ–400 002)** ರಚಿಸಿಕೊಂಡು ಪರಮಾಚಾರ್ಯರ ಅತ್ಯಂತ ಅಮೂಲ್ಯವಾದ ವಿಚಾರಗಳನ್ನೆಲ್ಲ 'ದೈವವಾಣಿ' ಎಂಬ ಹೆಸರಿನಲ್ಲಿ 7 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ. ಈ ಬರಹವನ್ನು ಎರಡನೆ ಸಂಪುಟದಿಂದ ಆಯ್ಕೆ ಮಾಡಿ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ.

# ನಾದ ಮತ್ತು ಸೃಷ್ಟಿ

ಶಬ್ದ ಎಂದರೇನು? ಆಧುನಿಕ ವಿಜ್ಞಾನದ ಪ್ರಕಾರ ಅದೊಂದು ಕಂಪನ. 'ಅಣುವೊಂದರ ತಿರುಳನ್ನು ಪರೀಕ್ಷೆ ಮಾಡಿದ್ದಾದರೆ ಎಲ್ಲ ಭೌತವಸ್ತುಗಳೂ ಒಂದೇ ಎಂಬುದನ್ನು ಅರಿಯುತ್ತೇವೆ.' ಅಣುವಿಜ್ಞಾನವೂ ಐನ್‌ಸ್ಟೈನನ ಚಿಂತನೆಯೂ ತಲಪಿರುವ ಅದ್ವೈತಾತ್ಮಕ ನಿಲುವು ಇದು. ಈ ಬ್ರಹ್ಮಾಂಡವೆಲ್ಲವೂ ಒಂದು ಶಕ್ತಿ ಪ್ರವಾಹ (Energy); ಎಲ್ಲವೂ ಒಂದು ವಿದ್ಯುತ್‌ಕಾಂತೀಯ (Electromagnetic) ಹರಿವು. ಆದರೆ ಭಿನ್ನಭಿನ್ನವಾದ ವಸ್ತುಗಳ ಆವಿರ್ಭಾವವನ್ನು ವಿವರಿಸುವ ಬಗೆ ಹೇಗೆ? ಅದು ವಿವಿಧ ರೀತಿಯ ಕಂಪನಗಳಿಂದಾದುದು ಎನ್ನಬೇಕು.

ಎಲ್ಲಿ ಕಂಪನವಿದೆಯೋ ಅಲ್ಲಿ ಶಬ್ದವಿದೆ. ಅಂದರೆ, ವಿಪರ್ಯಯವಾಗಿ, ಶಬ್ದವೊಂದನ್ನು ಉಂಟುಮಾಡಲು, ಅದಕ್ಕೆ ತಕ್ಕ ಕಂಪನವನ್ನುಂಟುಮಾಡಬೇಕು. ಒಂದೇ ಶಕ್ತಿಯ ವಿವಿಧ ರೀತಿಯ ಕಂಪನದಿಂದ ಸೃಷ್ಟಿಯಾಗಿದೆ ಎಂಬ ವಿಜ್ಞಾನದ ಚಿಂತನ ರೀತಿಯು, ಪರಮಾತ್ಮನ ಶ್ವಾಸವು ವೇದನಾದವಾಗಿ ಗೋಚರಿಸಿ ಜಗತ್ತಿನ ಸೃಷ್ಟಿಯಾಗಿದೆ ಎಂಬ ನಂಬಿಕೆಯಂತೆಯೇ ಇದೆ.

ಮಾನವ ಜೀವಿಗಳನ್ನೂ ಇತರ ವಸ್ತುಗಳನ್ನೂ ನೋಡಿ ಅವುಗಳ ಆರೋಗ್ಯವನ್ನೂ ಭಾವನೆಗಳನ್ನೂ ನಿರ್ಧರಿಸತಕ್ಕದ್ದು ಯಾವುದು? ಉಸಿರಾಟದ ಸಂದರ್ಭದಲ್ಲಿ ನಾಡಿಗಳ, ರಕ್ತನಾಳಗಳ ಮೂಲಕ ಚಲಿಸುವ ಶ್ವಾಸವು ಕಂಪನಗಳನ್ನುಂಟುಮಾಡುತ್ತದೆ; ಅದರ ಮೇಲೆ ನಮ್ಮ ಆರೋಗ್ಯದ ಸ್ಥಿತಿಯು ಅವಲಂಬಿತವಾಗಿರುತ್ತದೆ. ಯೋಗಾಭ್ಯಾಸದ ಮೂಲಕ ತಮ್ಮ ಶ್ವಾಸವನ್ನು ನಿಯಂತ್ರಿಸುವವರ ಆರೋಗ್ಯವು ಬೆರಗುಗೊಳಿಸುವಷ್ಟು ಚೆನ್ನಾಗಿರುತ್ತದೆ. ಅವರ ರಕ್ತನಾಳವನ್ನು ಕತ್ತರಿಸಿದರೂ ರಕ್ತಸ್ರಾವವಾಗುವುದಿಲ್ಲ. ಅವರು ತಮ್ಮ ನಾಡಿಯನ್ನು ಮತ್ತು ಹೃದಯ ಬಡಿತವನ್ನು ಸ್ಥಗಿತಗೊಳಿಸಿ ಭೂಮಿಯಲ್ಲಿ ಹುಗಿದು ಸಮಾಧಿ ಸ್ಥಿತಿಯಲ್ಲಿರಬಲ್ಲರು. ಹಾವೋ ಚೇಳೋ ಕಡಿದರೂ ಅವರಿಗೆ ವಿಷ ಏರುವುದಿಲ್ಲ. ಕಾರಣವೇನೆಂದರೆ, ಅವರು ಉಸಿರಾಡುವಾಗ ತಮ್ಮ ನಾಡಿಗಳ ಕಂಪನವನ್ನು ಹತೋಟಿಯಲ್ಲಿಟ್ಟುಕೊಳ್ಳುತ್ತಾರೆ.

ಶ್ವಾಸವು ಕೇವಲ ದೇಹಕ್ಕಲ್ಲ, ಮನಸ್ಸಿಗೂ ಅವಶ್ಯವಾದುದು. ಚಿಂತನಶಕ್ತಿಯ ಆಕರವಾದ ಮನಸ್ಸು ಮತ್ತು ಶ್ವಾಸದ ಆಕರವಾದ ಪ್ರಾಣಶಕ್ತಿ ಎರಡೂ ಒಂದೇ ಆಗಿವೆ. ಸತ್ ಚಿಂತನೆಗಳು ಮತ್ತು ಅಸತ್ ಚಿಂತನೆಗಳು ನಾಡಿಗಳ ಭಿನ್ನ ರೀತಿಯ ಕಂಪನಗಳಿಂದಲೇ ಉಂಟಾಗುತ್ತವೆ. ನಾವೇ ಇದನ್ನು ಪರೀಕ್ಷೆ ಮಾಡಿಕೊಳ್ಳಬಹುದು. ನಾವು ದೇವರ ಮುಂದೆ ಪವಿತ್ರ ಆವರಣದಲ್ಲಿ ಶಾಂತವಾಗಿ ಕುಳಿತಿರುವಾಗ ಅಥವಾ ಶ್ರೇಷ್ಠರೂ ವಿದ್ವಾಂಸರೂ ಆದವರ ಮುಂದೆ ಇದ್ದಾಗ ಹೇಗೆ ಉಸಿರಾಟವಿರುತ್ತದೆ ನೋಡಿಕೊಳ್ಳೋಣ; ಹಾಗೆಯೇ ಕಾಮ ಕ್ರೋಧಗಳಿಗೆ ಬಲಿಯಾದಾಗ ಹೇಗೆ ಉಸಿರಾಡುತ್ತೇವೆ ಎಂಬುದನ್ನೂ ನೋಡಿಕೊಳ್ಳೋಣ. ಭಜನೆ ಅಥವಾ ದೇವಸ್ಥಾನದ ಉತ್ಸವದಂಥ ದಿವ್ಯವಾದ ಕೆಲಸದಲ್ಲಿ ಭಾಗಿಗಳಾದಾಗ ಆಗುವ ಸಂತೋಷಕ್ಕೂ ಇಂದ್ರಿಯಸುಖಗಳಲ್ಲಿ ಆಗುವ ಸಂತೋಷಕ್ಕೂ ವ್ಯತ್ಯಾಸವಿರುತ್ತದೆ: ಸಂಬಂಧಿಸಿದ ನಾಡಿಗಳ ಕಂಪನದಲ್ಲಿನ ಭಿನ್ನತೆಯೂ ಅವಕ್ಕೆ ಅನುಗುಣವಾಗಿರುತ್ತದೆ. ಮೇಲುಸ್ತರದ ಸಂತೋಷದಲ್ಲಿರುವಾಗ ಬಲ ಹೊಳ್ಳೆಯಲ್ಲಿ ಶ್ವಾಸ ಸಂಚಾರವಾಗುತ್ತದೆ, ಇಂದ್ರಿಯ ಸುಖದಲ್ಲಿರುವಾಗ ಬಲ ಹೊಳ್ಳೆಯಲ್ಲಿ ಎಡ ಹೊಳ್ಳೆಯಲ್ಲಿ ಆಗುತ್ತದೆ. ಧ್ಯಾನವು ತೀವ್ರವಾಗುತ್ತಿರುವ ಹೊತ್ತಿನಲ್ಲಿ, ನಮ್ಮೆಲ್ಲ ಪ್ರಚೋದನೆಗಳಿಗೂ ಭಾವನೆಗಳಿಗೂ ಆಕರವಾದ ಅನುದ್ವಿಗ್ನ ಸ್ಥಿತಿಯಲ್ಲಿ ಶ್ವಾಸವು ಎರಡೂ ಹೊಳ್ಳೆಗಳಲ್ಲಿ ನಿಧಾನವಾಗಿ, ಸಮವಾಗಿ ಮತ್ತು ಲಯಬದ್ಧವಾಗಿ ಆಡುತ್ತದೆ. ಧ್ಯಾನಸ್ಥ ವಿಷಯದಲ್ಲಿ ಲೀನವಾದ ಸ್ಥಿತಿಯಲ್ಲಿ ಶ್ವಾಸವೇ ಸ್ಥಗಿತವಾಗುತ್ತದೆ, ಆದರೂ

ಜೀವ ಇದ್ದೇ ಇರುತ್ತದೆ. ಜ್ಞಾನವೆಂದು ಕರೆಯಲಾಗುವ ಆ ಪರಮಜಾಗೃತಿಯು ಮೊದಲಿನಂತೆಯೇ ಅರಳಿನಿಲ್ಲುತ್ತದೆ.

ಮಾನವನ ಜಡದೇಹ ಮತ್ತು ಅವನ ಜೀವಂತಿಕೆಯ ತಿರುಳಾದ ಜಾಗೃತಿ ಇವೆರಡೂ ಅವನ ಶ್ವಾಸದ ಗತಿಯ ಮೇಲೆ ನಿಂತಿರುತ್ತವೆ. ಅದಕ್ಕನುಸಾರವಾಗಿ ಅವು ವೃದ್ಧಿಸುತ್ತವೆ ಇಲ್ಲವೆ ಕ್ಷಯಿಸುತ್ತವೆ. ಮನುಷ್ಯನ ಶ್ವಾಸದ ಗತಿಯು ಅವನ ಆಂತರಿಕ ಕಂಪನವನ್ನು ಕ್ರಮವಾಗಿ ಇಡುತ್ತದೆ.

ಅಸಂಖ್ಯಾತ ಜಡವಸ್ತುಗಳೂ ಕೋಟ್ಯನುಕೋಟಿ ಜೀವಿಗಳೂ ಪರಮಾತ್ಮನಿಂದಲೇ ತಾನೆ ಮೂಡಿ ಬೆಳೆದಿರುವುದು? ಇವುಗಳಿಗೆ ಯುಕ್ತವಾದ ಚಲನೆಯೂ ಪರಮಾತ್ಮನಿಂದಲೇ ಒಳಗೊಂಡುದಾಗಿರಬೇಕು.

ಪರಮ ಅಚಲನೂ ಸರ್ವತಂತ್ರಸ್ವತಂತ್ರನೂ ನಿರ್ಗುಣನೂ ಆದ ಬ್ರಹ್ಮನು ಈ ಬ್ರಹ್ಮಾಂಡದ ಅಸಂಖ್ಯಾತರೂಪಗಳಲ್ಲಿ ಗೋಚರಿಸಿಕೊಳ್ಳುವುದು, ಇಂತೆಂದು ವಿವರಿಸಲಾಗದ ಮಾಯೆಯ ಶಕ್ತಿಯಿಂದ ಎಂದೆನ್ನುತ್ತದೆ ಅದ್ವೈತ ಕೂಡ. ಅದು ನಿಜರೂಪವೋ ತಪ್ಪುತೋರಿಕೆಯೋ ಏನಾದರೂ ಆಗಿರಲಿ, ನಾವು ಈ ಜಡಜಗತ್ತು ಮತ್ತು ಜೀವಜಗತ್ತಿನ ಅಸ್ತಿತ್ವವನ್ನು ನಮ್ಮ ಐಹಿಕ ಗ್ರಹಿಕೆಯ ಚೌಕಟ್ಟಿನಲ್ಲಿ ಒಪ್ಪಲೇಬೇಕಾಗುತ್ತದೆ. ಆದರೆ ಮಾಯೆಯ ಉಗಮವೂ 'ಮಾಯಿನ್' ಆದ ಈಶ್ವರನಲ್ಲಿ ಎಂಬುದನ್ನು ನಾವು ಸ್ಮರಣೆಯಲ್ಲಿಡಬೇಕು. ಆದರೆ ನಾವು ಕಾಣುವ ಈ ಎಲ್ಲ ಮಾಯೆಯ ಶಕ್ತಿಯೂ ಪರಬ್ರಹ್ಮನಲ್ಲಾದ ಕಂಪನದಿಂದಾಗಿ ಉಂಟಾದುದಾಗಿದೆ. ಅದೇ ಹೊತ್ತಿನಲ್ಲಿ ಈ ಎಲ್ಲ ಕಂಪನಗಳ ನಡುವೆಯೂ ಪರಬ್ರಹ್ಮವು ತಾನು ಮಾತ್ರ ಅಚಲವಾಗಿಯೂ ಶಾಂತವಾಗಿಯೂ ಉಳಿದಿರುತ್ತದೆ. ಈ ಅಚಲತೆ ಹೀಗಿದ್ದರೂ ಚಲನೆಗಳು ಸ್ಪಷ್ಟವಾಗಿ ನಮ್ಮ ಗ್ರಹಿಕೆಗೆ ಸಿಗುತ್ತವೆ. ಇವೇನೂ ಕ್ರಮವಿಲ್ಲದ ಚಲನೆಗಳಲ್ಲ, ಒಂದು ತುದಿಯಲ್ಲಿ ಸೂರ್ಯನಂಥ ಅಗಾಧ ಆಕಾಶಕಾಯಗಳನ್ನೂ ಇನ್ನೊಂದೆಡೆ ಸೂಕ್ಷ್ಮಾತಿಸೂಕ್ಷ್ಮ ಕೀಟಗಳನ್ನು ಅಥವಾ ಹುಲ್ಲಿನ ಗರಿಕೆಯಂಥ ಗೌಣವಸ್ತುಗಳನ್ನೂ ಉಳ್ಳ ಒಂದು ಮಹಾವ್ಯವಸ್ಥೆ ಇದಾಗಿದೆ.

ಈ ಐಹಿಕ ಜೀವನವನ್ನು ಸುಖಮಯಗೊಳಿಸಿರುವುದು ಈ ಸುವ್ಯವಸ್ಥೆಯೇ ಆಗಿದೆ. ಎಲ್ಲ ನಿಸರ್ಗಶಕ್ತಿಗಳನ್ನೂ ಕ್ರಮಬದ್ಧಗೊಳಿಸಿ ಪರಮಾತ್ಮನು ಇದನ್ನು ರೂಪಿಸಿದ್ದಾನೆ. ಅದರಲ್ಲಿ ಯಾವುದಾದರೂ ಕುಂದುಕೊರತೆಗಳು ಆಗೀಗ ಕಂಡದ್ದಾದರೆ ಮತ್ತು ನೈಸರ್ಗಿಕಶಕ್ತಿಗಳು ನಮ್ಮ ಹಿತಕ್ಕೆ ವಿರುದ್ಧವಾಗಿ ವರ್ತಿಸಿದರೆ, ಅದಕ್ಕೆ ಪರಮಾತ್ಮನ ಲೀಲೆಯೇ ಕಾರಣವಾಗಿದೆ.

ಮನುಷ್ಯನ ಮನಸ್ಸು ದಾರಿ ತಪ್ಪುವುದಕ್ಕೆ ಮಿತಿಯಿಲ್ಲ. ವಾಸ್ತವವಾಗಿ ಅದು ಮರ್ಕಟದಂತೆ ಗೊತ್ತುಗುರಿ ಇಲ್ಲದೆ ಅಲೆಯುತ್ತಲೇ ಇರುತ್ತದೆ. ಬ್ರಹ್ಮಾಂಡವು ಎಷ್ಟೇ ಸುವ್ಯವಸ್ಥಿತವಾಗಿ ಅಣಿಗೊಂಡಿರಲಿ, ಮನುಷ್ಯನ ಮನಸ್ಸು ಮಾತ್ರ ಈ ಎಲ್ಲ ಹತೋಟಿಯನ್ನೂ ಮೀರಿ ಹುಚ್ಚುನಾಯಿಯಂತೆ ಓಡುತ್ತಲೇ ಇರುತ್ತದೆ.

ನಿಸರ್ಗಶಕ್ತಿಗಳು ನಮಗೆ ಅನುಕೂಲವಾಗಿಲ್ಲದಾಗ ಅವುಗಳ ವರ್ತನೆಯನ್ನು ಬದಲಿಸಿ ನಮಗೆ ಅನುಕೂಲವಾಗಿ ಮಾಡಿಕೊಳ್ಳುವ ಮಾರ್ಗವುಂಟೆ? ನಮ್ಮ ಮನಸ್ಸು ಅಸ್ತವ್ಯಸ್ತವಾದಾಗ ಅದನ್ನು ಹತೋಟಿಗೆ ತಂದುಕೊಳ್ಳಬಹುದಾದ ಮಾರ್ಗ ಉಂಟೆ? ಎಲ್ಲವೂ ಕಂಪನದಿಂದಲೂ ನಾದದಿಂದಲೂ ಹೀಗಾಗಿದೆ ಎಂದಮೇಲೆ ನಿಸರ್ಗಶಕ್ತಿಗಳನ್ನು ನಮಗೆ ಅನುಕೂಲಕರವಾಗಿ ಮಾಡಿಕೊಳ್ಳುವುದು ಮತ್ತು ಮನಸ್ಸನ್ನು ಶುದ್ಧಿಗೊಳಿಸಿ ಹತೋಟಿಗೆ ತಂದುಕೊಳ್ಳುವುದೂ ಈ ನಾದತರಂಗದಿಂದಲೇ ಸಾಧ್ಯವೆನ್ನಬೇಕು. ವೇದಗಳಲ್ಲಿ ಅಂಥ ನಾದವಿದೆ.

ಯೋಗಾಭ್ಯಾಸದ ಮೂಲಕ ನಮ್ಮ ಶ್ವಾಸವನ್ನು ನಿಯಂತ್ರಿಸಿ ಪರಮಾತ್ಮನ ಶ್ವಾಸಕ್ಕೆ ಸಂಪರ್ಕ ಕಲ್ಪಿಸಿಕೊಳ್ಳುವುದು ಸಾಧ್ಯ; ಅದರ ಮೂಲಕವೇ ಆತ್ಮೋದ್ಧಾರ ಹಾಗೂ ಮಾನವ ಕಲ್ಯಾಣವನ್ನು ಸಾಧಿಸುವ ಕೆಲಸಗಳಲ್ಲಿ ತೊಡಗಿಕೊಳ್ಳುವುದೂ ಸಾಧ್ಯ. ಇಲ್ಲಿ, ನಾಡಿಗಳ ಕಂಪನವು ನಮ್ಮ ಕಿವಿಗೆ ಕೇಳುವಂತೆ ಶಬ್ದವನ್ನು ಹೊರಡಿಸುವುದಿಲ್ಲ. ಮಾನವನ ಕಣ್ಣಿಗೆ ಗೋಚರವಾಗದ ಬೆಳಕಿರುವಂತೆಯೇ ಮಾನವನ ಶ್ರವಣಶಕ್ತಿಗೆ ಅತೀತವಾದ ನಾದಗಳೂ ಉಂಟು ಎನ್ನುತ್ತದೆ ವಿಜ್ಞಾನ.

ಹೀಗಿದ್ದಾಗ್ಯೂ, ನಮ್ಮ ಶಕ್ತಿಗೆ ಅತೀತವಾದ ಇವನ್ನೆಲ್ಲ ಅದರ ಪರಿಧಿಗೆ ತೆಗೆದುಕೊಳ್ಳುವುದು ಸಾಧ್ಯ. ರೇಡಿಯೋ ಸ್ಟುಡಿಯೋದಲ್ಲಿ ಸಂಗೀತಗಾರನೊಬ್ಬನು ಹಾಡಿದಾಗ ಆ ಶಬ್ದವು ವಿದ್ಯುತ್ಕಾಂತೀಯ ಅಲೆಗಳಾಗಿ (Electromagnetic Waves) ಪರಿವರ್ತನೆಗೊಂಡು ಆಕಾಶದಲ್ಲಿ ಚಲಿಸುತ್ತದೆ. ಆದರೆ ನಮಗೆ ಸಂಗೀತ ಕೇಳುತ್ತದೆ ಹೇಗೆ? ನಮ್ಮ ರೇಡಿಯೋ ಉಪಕರಣದಲ್ಲಿ ಆ ವಿದ್ಯುತ್ಕಾಂತೀಯ ಅಲೆಗಳು ಶಬ್ದತರಂಗಗಳಾಗಿ ಮತ್ತೆ ಪರಿವರ್ತನೆಗೊಳ್ಳುತ್ತವೆ.

(ವಿಜ್ಞಾನವು ಧರ್ಮಕ್ಕೆ ವಿರುದ್ಧವಾದುದಲ್ಲ. ಅದು ಧರ್ಮದ ಬೆಳವಣಿಗೆಗೆ ನೆರವಾಗುತ್ತದೆಂದೇ ನನಗೆ ಕಾಣುತ್ತದೆ. ಒಂದು ಶತಮಾನದ ಹಿಂದೆ, ರೇಡಿಯೋ ಮತ್ತು ಟೆಲಿಫೋನ್‌ಗಳ ಅನ್ವೇಷಣೆ ಆಗದಿದ್ದಾಗ, ವೇದಗಳ ನಾದದ ಬಗೆಗಿನ ಮಾತನ್ನು ನಾಸ್ತಿಕನೊಬ್ಬನು ತಿರಸ್ಕರಿಸಿದರೆ ಅದನ್ನು ಸಾಧಿಸಿ ತೋರಿಸುವುದು ನಮಗೆ ಕಷ್ಟವಾಗುತ್ತಿತ್ತು. ಈಗ ವೈಜ್ಞಾನಿಕ ಸಂಶೋಧನೆಗಳು ನಮ್ಮ ನೆರವಿಗೆ ಬಂದಿವೆ.)

ರೇಡಿಯೋ ಉಪಕರಣದಂಥ ಜಡವಸ್ತುವಿಗೆ ಇರುವಂಥ ಆ ಶಕ್ತಿಯನ್ನು ಮನುಷ್ಯರೂ ಹೊಂದುವುದು ಸಾಧ್ಯ. ಖಂಡಿತವಾಗಿ ನಾವು ಇನ್ನೂ ಹೆಚ್ಚು ಪಡೆಯಬಹುದು, ಇನ್ನೂ ಹೆಚ್ಚು ಸಾಧಿಸಬಹುದು. ತಪಸ್ಸು ಮಾಡಿದರೆ, ದೇಹವನ್ನು ದಂಡಿಸಿ ಪ್ರಯತ್ನ ಮಾಡಿದರೆ ಆ ಶಕ್ತಿ ನಮಗೆ ದೊರೆಯುತ್ತದೆ. ತಪಸ್ಸು ಎಂದರೇನು? ಅದು ಸತ್ಯವನ್ನು ಕಾಣುವ ಸಂಕಲ್ಪ; ಅದರ ಹುಡುಕಾಟಕ್ಕಾಗಿ ಮನಸ್ಸನ್ನು ಕೇಂದ್ರೀಕರಿಸುವುದು, ಆಹಾರ, ನಿದ್ದೆ, ಮನೆ ಎಲ್ಲವನ್ನೂ ತೊರೆದು ಯತ್ನಿಸುವುದು. ಆದರೆ ಇಂಥ ಸಾಧಕನು ವಿನೀತನಾಗಿರಬೇಕು, ಅಹಂಕಾರದ ಲವಲೇಶವನ್ನೂ ತೊಡೆದುಹಾಕಿಬಿಡಬೇಕು. ಈಶ್ವರನ ಅನುಗ್ರಹದಿಂದ ಮಾತ್ರ ಸತ್ಯಸಾಕ್ಷಾತ್ಕಾರವಾಗುತ್ತದೆಂಬ ಅರಿವು ಇರಬೇಕು. ಋಷಿಗಳು ಇಂಥ ಕಠಿಣವ್ರತಗಳನ್ನಾಚರಿಸಿ ಯೋಗದ ತುಟ್ಟ ತುದಿಯನ್ನು ಮುಟ್ಟಿದರು. ಅವರು ಸೃಷ್ಟಿಕ್ರಿಯೆಯಲ್ಲಿನ ಕಂಪನವನ್ನು ಅಂದರೆ ಪರಮಾತ್ಮನ ಶ್ವಾಸದ ಅನುಕ್ರಮಣಿಕೆಯನ್ನು ಗ್ರಹಿಸಬಲ್ಲವರಾದರು. ವಿದ್ಯುತ್ಕಾಂತೀಯ ಅಲೆಗಳನ್ನು ರೇಡಿಯೋ ಉಪಕರಣವು ಶಬ್ದತರಂಗಗಳಾಗಿ ಪರಿವರ್ತಿಸಿಕೊಳ್ಳುವಂತೆ ಅವರು ಆ ಕಂಪನಧ್ವನಿಯನ್ನು ಕೇಳಬಲ್ಲವರಾಗಿದ್ದರು. ಆ ನಾದತರಂಗಗಳನ್ನೇ ವೇದಮಂತ್ರಗಳ ರೂಪದಲ್ಲಿ ಅವರು ನಮಗೆ ಕೊಟ್ಟಿರುವಂಥದು.

ವೇದಗಳನ್ನು 'ಶ್ರುತಿ' ಎನ್ನುತ್ತಾರೆ. ಯಾವುದು ಕೇಳುತ್ತದೋ ಅದು 'ಶ್ರುತಿ'. 'ಶ್ರೋತ್ರಮ್' ಎಂದರೆ ಕಿವಿ. ವೇದಗಳನ್ನು ಮೌಖಿಕವಾಗಿ ತಲೆತಲಾಂತರದಿಂದ ಉಳಿಸಿಕೊಂಡು ಬರಲಾಗಿದೆ; ಅವನ್ನು ಯಾವ ಲಿಖಿತ ಗ್ರಂಥಗಳ ಆಧಾರದಿಂದಲೂ ಕಲಿಯಲಾಗುತ್ತಿಲ್ಲ ಅಥವಾ ಕಲಿಸಲಾಗುತ್ತಿಲ್ಲ. ಅವಕ್ಕೆ 'ಶ್ರುತಿ' ಎಂಬ ಹೆಸರು ಬಂದುದು ಹೀಗೆ. ಈ

ಪವಿತ್ರ ಗ್ರಂಥಗಳನ್ನು ಬರೆಯಗೊಡಲಿಲ್ಲ ಏಕೆ? ಏಕೆಂದರೆ ವೇದನಾದವನ್ನು ಸರಿಯಾಗಿ ಲಿಖಿಸುವುದು ಸಾಧ್ಯವಾಗದು. ಅನೇಕ ಧ್ವನಿಗಳನ್ನು ನಿಖರವಾಗಿ ಅಕ್ಷರ ರೂಪದಲ್ಲಿ ಹಿಡಿದಿಡುವುದು ಸಾಧ್ಯವಿಲ್ಲ. ಉದಾಹರಣೆಗೆ 'ಟ' ಮತ್ತು 'ಲ' ನಡುವಿನ ಧ್ವನಿ. ಅಂಥ ಧ್ವನಿಗಳನ್ನು ಕೇಳಿಯೇ ಕಲಿಯಬೇಕು. ಅಲ್ಲದೆ ವೇದಮಂತ್ರಗಳಿಗೆ ಸ್ವರಗಳಿವೆ: ಉದಾತ್ತ (ಎತ್ತರಿಸಿದ ಉಚ್ಚಾರಾಂಶ), ಅನುದಾತ್ತ (ಇಳಿಸಿದ ಉಚ್ಚಾರಾಂಶ). ಸ್ವರಿತ (ಉರುಳು ಉಚ್ಚಾರಾಂಶ) ಮುದ್ರಣ ಮಾಡುವಾಗ ಅವಕ್ಕೆ ಯಾವ ಚಿಹ್ನೆಗಳನ್ನು ಬಳಸಿದರೂ ನಿರೂಪಣೆಯಲ್ಲಿ ತಪ್ಪಾಗುವ ಸಾಧ್ಯತೆ ಉಂಟು. ತಪ್ಪು ಉಚ್ಚಾರದಿಂದಾಗಿ, ಅಪೇಕ್ಷಿತ ಫಲ ಸಿಗದಾಗುತ್ತದೆ. ಉಚ್ಚಾರಾಂಶದ ಮೇಲೆ ಒತ್ತುಕೊಟ್ಟೋ ಕೊಡದೆಯೋ ಉಚ್ಚರಿಸಿದಾಗ ಉಂಟಾಗುವ ಕಂಪನದಲ್ಲಿ ಬಹಳ ವ್ಯತ್ಯಾಸವಿದೆ. ಅನುಗುಣವಾಗಿ ನಮ್ಮ ಭಾವಗಳಲ್ಲೂ ಪ್ರಚೋದನೆಗಳಲ್ಲೂ ನಿಸರ್ಗವನ್ನಾಳುವ ದೈವ ಶಕ್ತಿಯಲ್ಲೂ ವ್ಯತ್ಯಯಗಳಾಗುತ್ತವೆ. ವೇದಗಳ ತೈತ್ತಿರೀಯ ಸಂಹಿತೆಯಲ್ಲಿ ಒಂದು ಕಥೆ ಇದೆ; ತಪ್ಪು ಉಚ್ಚಾರದಿಂದಾಗಿ ಅಪೇಕ್ಷಿತ ಫಲಕ್ಕೆ ವಿರುದ್ಧವಾದ ಫಲವನ್ನೇ ಹೇಗೆ ಪಡೆಯುತ್ತೇವೆ ಎಂದು ಅದರಲ್ಲಿ ಹೇಳಿದೆ. ತ್ವಷ್ಟ್ರ ಎಂಬುವವನೊಬ್ಬನಿದ್ದ; ಅವನು ದೇವಲೋಕದ ಬಡಗಿ. ಅವನಿಗೆ ಇಂದ್ರನನ್ನು ಸಂಹರಿಸುವ ಮಗನೊಬ್ಬನನ್ನು ಪಡೆಯುವ ಬಯಕೆಯಾಯಿತು; ಆ ಉದ್ದೇಶಕ್ಕಾಗಿ ಒಂದು ಮಂತ್ರ ಹೇಳಿದ. ಆದರೆ ಯಾವುದೋ ಉಚ್ಚಾರಾಂಶದಲ್ಲಿ ಸ್ವರವು ವ್ಯತ್ಯಾಸವಾಯಿತು. ಅವನಿಗೇ ಗೊತ್ತಿಲ್ಲದ ಹಾಗೆ, ಇಂದ್ರನನ್ನು ಕೊಲ್ಲುವ ಮಗನ ಬದಲು ಇಂದ್ರನಿಂದ ಹತನಾಗುವ ಮಗನಿಗಾಗಿ ಪ್ರಾರ್ಥಿಸಿದ್ದ. ಅವನ ತಪ್ಪು ಉಚ್ಚಾರದ ಆ ಪ್ರಾರ್ಥನೆ ಫಲಿಸಿತು. ನಮ್ಮ ರೇಡಿಯೋ ಉಪಕರಣದಲ್ಲಿ ತರಂಗಾಂತರದಲ್ಲಿ ತುಸು ವ್ಯತ್ಯಾಸವಾದರೂ (Wave length) ನಾವು ಅನ್ಯ ಬಾನುಲಿಕೇಂದ್ರವೊಂದರ ಕಾರ್ಯಕ್ರಮವನ್ನೇ ಪಡೆಯುತ್ತೇವೆ. ನಮಗೆ ಬೇಕಾದ ಕೇಂದ್ರದ ಕಾರ್ಯಕ್ರಮವೇ ಬೇಕಾದಲ್ಲಿ ಸೂಕ್ಷ್ಮವಾಗಿ ತರಂಗಾಂತರವನ್ನು ಹೊಂದಿಸಬೇಕು (Fine-tuning) ವೇದಮಂತ್ರಗಳ ಸ್ವರಾಲಾಪದ ವಿಷಯವೂ ಇಂಥದೇ. ಸ್ವರಾಲಾಪದಲ್ಲಿ ಅತಿ ಸಣ್ಣ ತಪ್ಪೂ ಆಗಕೂಡದು. ತರಂಗಾತರದಲ್ಲಿ ವ್ಯತ್ಯಾಸವಾದಾಗ ಬೇರೆ ಕೇಂದ್ರದ ಕಾರ್ಯಕ್ರಮವೇ ರೇಡಿಯೋದಲ್ಲಿ ಬರುವಂತೆ, ಸ್ವರಾಲಾಪದಲ್ಲಿ ಆಗುವ ವ್ಯತ್ಯಾಸದಿಂದ ನಾವು ಹೊಂದುವ ಫಲದಲ್ಲಿಯೂ ವ್ಯತ್ಯಾಸವಾಗುತ್ತದೆ.

ಆದ್ದರಿಂದಲೇ, ವೇದಗಳನ್ನು ಕೇಳಿಯೇ ಕಲಿಯಬೇಕು ಎನ್ನುವುದಕ್ಕೆ ಅಷ್ಟು ಪ್ರಾಮುಖ್ಯ ಬಂದಿರುವುದು; ಅದಕ್ಕೇ 'ಶ್ರುತಿ' ಎನ್ನುವುದು ಅದನ್ನು; ತಮಿಳಿನಲ್ಲಿ ಅದನ್ನು 'ಎಳುತಕ್ಕಿಳವಿ' (ಬರೆಯುವ ಪ್ರಾಚೀನ ಗ್ರಂಥ) ಎನ್ನುತ್ತಾರೆ. 'ಶ್ರುತಿ' ಎಂಬುದಕ್ಕೆ ಇನ್ನೊಂದು ಅರ್ಥವೂ ಇದೆ ಎನಿಸುತ್ತದೆ ನನಗೆ. ಸಾಮಾನ್ಯ ಮನುಷ್ಯರಿಂದ ಗ್ರಹಿಸುವುದು ಅಸಾಧ್ಯವಾದ ದೈವಿಕ ನಾದಕಂಪನವನ್ನು ಋಷಿಗಳು ಕೇಳಿದರಲ್ಲವೆ? ಅವರೇನಾದರೂ ವೇದಗಳನ್ನು ಯಾವುದಾದರೂ ಗ್ರಂಥವನ್ನೋದಿ ಕಲಿತರೆ ಅಥವಾ ತಾವೇ ಅದನ್ನು ರಚಿಸಿದರೆ? ಮೊದಲು ಋಷಿಗಳು ಅವನ್ನು ಕೇಳಿಸಿಕೊಂಡು ಪ್ರಪಂಚಕ್ಕೆ ತಿಳಿಯಪಡಿಸಿದ್ದರಿಂದ ವೇದಗಳಿಗೆ 'ಶ್ರುತಿ' ಎನ್ನುವುದು ಯುಕ್ತವಾಗಿ ಹೊಂದುವ ಹೆಸರಾಗಿದೆ.

ವೇದಋಷಿಗಳಿಗೆ 'ಮಂತ್ರದ್ರಷ್ಟಾ'ರು ಎಂಬ ಹೆಸರಿದೆ; 'ದ್ರಷ್ಟಾ' ಎಂದರೆ 'ನೋಡಿದವನು' ಎಂದು ಅರ್ಥ. ತಮಿಳಿನಲ್ಲಿ 'ಪಾರ್ಪವನ್' ಎನ್ನುತ್ತಾರೆ; 'ಪಾರ್ಪಾನ್' ಎಂದರೂ ಅದೇ ಅರ್ಥ. ಋಷಿಗಳು ಮಂತ್ರಗಳನ್ನು 'ನೋಡಿದರು' ಎಂದರೆ ಅವರು ಅದನ್ನು 'ಕೇಳಲಿಲ್ಲ' ಎಂದು ಅರ್ಥವಾಗುತ್ತದೆ. ಇವೆರಡು ಹೇಳಿಕೆಗಳಲ್ಲಿ ಯಾವುದು ಸರಿ? ಋಷಿಗಳು ಮಂತ್ರಗಳನ್ನು ನೋಡಿದರೋ ಕೇಳಿದರೋ? ಅವರು ನೋಡಿದರು ಎಂದಾದರೆ ಯಾವ ಲಿಪಿಯಲ್ಲಿ ನೋಡಿದರು? ಆ ಕಾಲಕ್ಕೆ ಎಲ್ಲ ಲಿಪಿಗಳಿಗೂ ಆಧಾರವಾದ ದೇವನಾಗರಿಯಾಗಲಿ ಗ್ರಂಥವಾಗಲಿ ಬ್ರಾಹ್ಮಿಯಾಗಲಿ ಇರಲಿಲ್ಲ. ಹಾಗಿದ್ದರೆ ವೇದನಾದವಾಗಲಿ ಅವುಗಳ ಸ್ವರವಾಗಲಿ ಯಾವ ಲಿಪಿಯಲ್ಲೂ ನಿಜವಾಗಿಯೂ ಬರೆದಿಟ್ಟಿದ್ದಾಗಿರಲಾರದು.

ಈ ಸಮಸ್ಯೆಗೆ ಉತ್ತರವಿದೆ: ಋಷಿಗಳು ಧ್ಯಾನಸ್ಥರಾಗಿದ್ದಾಗ ವೇದಮಂತ್ರಗಳು ಅವರ ಎದೆಯಾಳದಲ್ಲಿ ಮಿಂಚಿನಂತೆ ಗೋಚರಿಸಿದವು. ಪ್ರಾಯಃ ಅವರ ಆ ಅವಸ್ಥೆಯಲ್ಲಿ ಅವರು ಯಾವುದನ್ನಾದರೂ ಕೇಳಿಯೂ ಇರಲಾರರು, ನೋಡಿಯೋ ಇರಲಾರರು. ಅವರ ಮನದಾಳದಲ್ಲಿ ಮಂತ್ರಗಳು ಮಿಂಚಿನಂತೆ ಸ್ಫುರಿಸಿದ್ದಿರಬೇಕು.

'ನೋಡುವುದು' ಅಥವಾ 'ಕಾಣುವುದು' ಎಂಬುದು ಕೇವಲ ಕಣ್ಣಿಗೆ ಗೋಚರಿಸುವುದು ಎಂದು ಸೂಚಿಸಲಾರದು. ವೈವಿಧ್ಯಪೂರ್ಣವಾದ ಗ್ರಹಿಕೆಗಳನ್ನೂ ಅನುಭವಗಳನ್ನೂ ಒಳಗೊಂಡ ಪದ ಅದು. ಒಬ್ಬ ಮನುಷ್ಯ ತನ್ನ ಜೀವನದಲ್ಲಿ ಎಲ್ಲ ದುಃಖಗಳನ್ನೂ 'ಕಂಡಿದ್ದಾನೆ' ಎಂದರೆ ಅವನ ಕಣ್ಣುಗಳಿಂದ ಕಂಡದ್ದನ್ನು ಮಾತ್ರ ಆ ಪದ ಸೂಚಿಸುತ್ತದೆಯೆ? ಅವನು 'ಅನುಭವಿಸಿದ್ದು' ಎಂದು ಅರ್ಥವಾಗದೆ? 'ಮಂತ್ರ-ದ್ರಷ್ಟ' ಎಂಬುದರ ಅರ್ಥವೂ ಹಾಗೆಯೇ ಅವನ ಅನುಭವದಿಂದ ಗ್ರಹಿಸಿದ್ದು ಎಂಬ ಅರ್ಥವನ್ನು ಕೊಡುತ್ತದೆನ್ನಬಹುದು. ಇನ್ನೂ ಹೇಳುವುದಾದರೆ, ಋಷಿಗಳು ತಮ್ಮ ದಿವ್ಯವಾದ ಶ್ರವಣೇಂದ್ರಿಯಗಳ ಮೂಲಕ ವೇದಗಳನ್ನು ಕೇಳಬಲ್ಲವರಾಗಿದ್ದರು ಎನ್ನಬಹುದು.

ಅರ್ಜುನನಿಗೆ ಪರಮಾತ್ಮನ ವಿಶ್ವರೂಪದರ್ಶನ ಮಾಡುವ ಅಪೇಕ್ಷೆಯಾಯಿತು. ಗೀತೆಯಲ್ಲಿ ಹೀಗಿದೆ: ಕೃಷ್ಣ ಪರಮಾತ್ಮನು ಅರ್ಜುನನಿಗೆ, 'ಈ ನಿನ್ನ ಕಣ್ಣುಗಳಿಂದ ನನ್ನ ವಿಶ್ವರೂಪವನ್ನು ನೀನು ನೋಡಲಾರೆ; ನಿನಗೆ ದಿವ್ಯಚಕ್ಷುಗಳನ್ನು ಪ್ರದಾನ ಮಾಡುತ್ತೇನೆ' ಎಂದು ಹೇಳಿದ.

ಅರ್ಜುನನು ಪರಮಾತ್ಮನಿಂದ ದಿವ್ಯಚಕ್ಷುಗಳನ್ನು ಪಡೆದಂತೆಯೇ, ಪರಮಾತ್ಮನಿಂದ ಹೊರಟು ವಿಶಾಲವಾದ ಆಕಾಶವನ್ನೆಲ್ಲ ತುಂಬಿದ ನಾದವನ್ನು ಗ್ರಹಿಸಲು ಋಷಿಗಳಿಗೆ ದಿವ್ಯಕರ್ಣಗಳು ಧಾರ್ಯವಾದುವೆನ್ನಬೇಕು.

ವೇದನಾದದ ಕಂಪನದ ಉದ್ದೇಶವು ಜೀವಸೃಷ್ಟಿ ಮತ್ತು ಪಾಲನೆಯ ಕೆಲಸವನ್ನಷ್ಟೇ ಮಾಡುವುದಿಲ್ಲ. ಖಂಡಿತವಾಗಿಯೂ ಈ ಜೀವವನ್ನು ಅತೀತಗೊಳಿಸಿ ಪರಮಸತ್ಯದೊಂದಿಗೆ ಒಂದಾಗಲು ನೆರವಾಗುವಂಥ ವೇದಮಂತ್ರಗಳಿವೆ. ಹೋದ ದಾರಿಯಲ್ಲೇ ಮರಳುವವನು ಹೊರಟ ಜಾಗವನ್ನು ಸೇರಿದಂತೆಯೇ ಅಲ್ಲವೆ? ಹಾಗೆಯೇ, ಹೇಗೆ ಸೃಷ್ಟಿಕಾರ್ಯ ನಡೆಯಿತು ಎಂದು ನೋಡಹೊರಟಾಗ ಕಂಪನವಿಲ್ಲದ, ಚಲನೆ ಇಲ್ಲದ, ಪರಮ ಶಾಂತಿ ಇರುವ ತಾವನ್ನು ಮುಟ್ಟುತ್ತೇವೆ. ನಮ್ಮ ನಾಡಿಗಳಲ್ಲಿ ಕಂಪನವನ್ನುಂಟುಮಾಡುವ ಕೆಲವು ಮಂತ್ರಗಳು ಅಂಥ ಗುರಿಗೆ ನಮ್ಮನ್ನು ಒಯ್ಯುವ ಘನ ಉದ್ದೇಶವನ್ನೇ ಈಡೇರಿಸುತ್ತವೆ. ಉಪನಿಷತ್ತಿನ ಮಹಾವಾಕ್ಯಗಳೂ ಪ್ರಣವವೂ ಅಂಥವು. ಒಟ್ಟಿನಲ್ಲಿ ವೇದಗಳು ಯಾರೊಬ್ಬರಿಂದಲೂ ಆದ ರಚನೆಗಳಲ್ಲ. ಋಷಿಗಳು ಅವನ್ನು ಸೃಷ್ಟಿಸಲಿಲ್ಲ ಅಥವಾ ಪರಮಾತ್ಮನು ಅವುಗಳನ್ನು ತಾಳೆಯೋಲೆಗಳ ಮೇಲೆ ಕೆತ್ತಲೂ ಇಲ್ಲ. ●

ಶ್ರೀಕೃಷ್ಣ ಕರ್ಣಾಮೃತ



# ರಾಮಾವತಾರವನ್ನು ನೆನೆದ ಶ್ರೀಕೃಷ್ಣ

ಭಕ್ತಕವಿ ವಿದ್ವಾನ್ ಕೆ.ವಿ. ವರದರಾಜಯ್ಯಂಗಾರ್



**ಶ್ಲೋಕ–18**

*ರಾಮೋ ನಾಮ ಬಭೂವ ಹುಂ ತದಬಲಾ ಸೀತೇತಿ ಹುಂ ತೌ ಪಿತುಃ*
*ವಾಚಾ ಪಂಚವಟೀವನೇ ವಿಹರತಸ್ತಾಮಾಹರದ್ರಾವಣಃ*
*ನಿದ್ರಾರ್ಥಂ ಜನನೀಂ ಕಥಾಮಿತಿ ಹರೇರ್ಹುಂಕಾರತಃ ಶೃಣ್ವತಃ*
*ಸೌಮಿತ್ರೇ ಕ್ವ ಧನುರ್ಧನುರ್ಧನುರಿತಿ ವ್ಯಗ್ರಾಗಿರಃ ಪಾತು ನಃ*
*(II–72)*

**ರಾಮನೆಂಬುವನೊಬ್ಬನಿದ್ದನು, "ಹುಂ",**
**ಸೀತೆಯವನ ಸತಿಯು, "ಹುಂ"**
**ತಂದೆ ಮಾತಿಗೆ ಪಂಚವಟಿಯಲ್ಲಿ ವಸಿಸೆ,**
**ರಾವಣನು ಅವಳ ಸೆಳೆಯೆ–**
**ಮಗುವ ಮಲಗಿಸೆ ತಾಯಿ ಕಥೆಯ**
**ಪೇಳುತಲಿರಲು ಹುಮ್ಮೆಂದು ಹರಿ ಕೇಳುತಾ**
**ಲಕ್ಷ್ಮಣ! ಧನುವೆಲ್ಲಿ? ಧನುವೆಲ್ಲಿ? ಧನುವೆಲ್ಲಿ?**
**ಎಂಬ ಬಿರುನುಡಿ ಪೊರೆಯಲೆಮ್ಮ**

ಮಗು ಕೃಷ್ಣನನ್ನು ಮಲಗಿಸಲು ತಾಯಿ ಯಶೋದೆ ಪ್ರಯತ್ನಿಸುತ್ತಿದ್ದಳು. ದಿನವೂ ಯಾವುದಾದರೂ ಕಥೆ ಹೇಳಬೇಕು, ಲಾಲಿ ಹಾಡಬೇಕು, ಹಿರಿಯರ, ಭಗವಂತನ ವಿಷಯವಾಗಿ ಹೇಳುತ್ತಿರಬೇಕು. ಇದರ ಮಧ್ಯೆ ಬಾಲಕೃಷ್ಣನು ತನ್ನದೇ ಆದ ಪ್ರಶ್ನೆ, ಪರಿಪ್ರಶ್ನೆಗಳನ್ನು ಕೇಳುತ್ತಾ ಕುತೂಹಲವನ್ನು ವ್ಯಕ್ತಪಡಿಸುತ್ತಾ ಸದಾ ಎಚ್ಚರದಿಂದಿರಲು ಯತ್ನಿಸುತ್ತಾನೆ. ಇಷ್ಟರ ನಡುವೆ ಅವನನ್ನು ನಿದ್ರೆ ಮಾಡಿಸಲು ಯಶೋದೆ ಪಡದ ಪಾಡಿಲ್ಲ.

ಹೀಗೆಯೇ ಒಮ್ಮೆ ತಾಯಿ ಯಶೋದೆಯು ಮುದ್ದುಕೃಷ್ಣನಿಗೆ ಕಥೆಯೊಂದನ್ನು ಹೇಳಲು ಪ್ರಾರಂಭಿಸಿದಳು. ತ್ರೇತಾಯುಗದ ಯುಗಪುರುಷನಾದ ಶ್ರೀರಾಮನ ಕಥೆಯನ್ನು ಚಿಕ್ಕದಾಗಿ ಚೊಕ್ಕವಾಗಿ ಹೇಳಲು ಯತ್ನಿಸಿದಳು. ಅವಳು ಕತೆ ಹೇಳಿದಂತೆಲ್ಲ ಮಗುವೂ "ಹುಂ" ಎಂದು ಮುಂದಕ್ಕೆ ಕಥೆ ಹೇಳಲು ತಾಯಿಯನ್ನು ಎಚ್ಚರಿಸುತ್ತಿತ್ತು.

ಯಶೋದೆ: ಹಿಂದೆ ತ್ರೇತಾಯುಗದಲ್ಲಿ ಶ್ರೀರಾಮನೆಂಬುವನೊಬ್ಬನಿದ್ದನು.

ಕೃಷ್ಣಃ "ಹುಂ"

ಯಶೋದೆ: ರಾಮನ ಹೆಂಡತಿಯ ಹೆಸರು "ಸೀತೆ."

ಕೃಷ್ಣ: "ಹುಂ"

ಯಶೋದೆ: ಸೀತಾರಾಮರು ತಂದೆಯಾದ ದಶರಥನ ವಚನವನ್ನು ನೆರವೇರಿಸಲು ಕಾಡಿಗೆ ಹೋಗಿ ಪಂಚವಟಿಯಲ್ಲಿ ವಾಸಿಸುತ್ತಿದ್ದರು.

ಕೃಷ್ಣ: "ಹುಂ"

ಯಶೋದೆ: ರಾವಣನು ಕಳ್ಳ ಸಂನ್ಯಾಸಿಯ ವೇಷದಲ್ಲಿ ಬಂದು ಸೀತೆಯನ್ನು ಅಪಹರಿಸಿ ಕೊಂಡೊಯ್ದನು.

ಕೃಷ್ಣ ತತ್‌ಕ್ಷಣವೇ ಕೋಪಾವಿಷ್ಟನಾಗಿ: "ಲಕ್ಷ್ಮಣ, ನನ್ನ ಧನುಸ್ಸೆಲ್ಲಿ ಧನುಸ್ಸೆಲ್ಲಿ? ಧನುಸ್ಸೆಲ್ಲಿ? ನಾನು ರಾವಣನನ್ನು ಕೊಂದು ಸೀತೆಯನ್ನು ಕರೆತರುತ್ತೇನೆ" ಎಂದು ಕೂಗಿದನು.



ಶ್ರೀಕೃಷ್ಣನಿಗೆ ಹಿಂದಿನ ಅವತಾರದ ಸ್ಮರಣೆ ತಪ್ಪಿರಲಿಲ್ಲ. ಸೀತಾಪಹರಣದ ಮಾತು ಬಂದೊಡನೆ ತನ್ನ ರಾಮಾವತಾರದ ರೋಷಾವೇಶಗಳನ್ನು ತಂದುಕೊಂಡು ರಾಮನಂತೆಯೇ ಮಗು ಕೃಷ್ಣನೂ ಕೂಗಾಡಿದ. ಆದರೆ ತಾಯಿ ಯಶೋದೆಗೆ ಇದೆಲ್ಲ ಅರ್ಥವೇ ಆಗದು. ತನ್ನ ಮುದ್ದು ಕಂದ ಏಕೆ ಹೀಗೆ ಕೂಗಾಡುತ್ತಿದ್ದಾನೆ ಎಂಬ ಕಾತರದ ಯೋಚನೆ ಅವಳಿಗೆ. ಹೀಗೆ ತನ್ನ ಅಸಲು ರೂಪವನ್ನು ತಿಳಿಯಗೊಡದೆ ಮಗುವಂತೆಯೇ ಇದ್ದರೂ ತನ್ನ ಪ್ರಿಯತಮೆಯ ವಿಷಯಬಂದಾಗ, ತನ್ನ ಅವತಾರ ರಹಸ್ಯವನ್ನು ಬಾಯಿತಪ್ಪಿ ಹೊರಗೆಡಹಿದ್ದಾನೆ ಭಗವಂತ.

ಆದರೆ ತಾಯಿ ಯಶೋದೆಯ ಚಿಂತೆಯೇ ಬೇರೆ. ಮಗು ಮಲಗಿ ನಿದ್ದೆ ಮಾಡುವುದನ್ನು ಬಿಟ್ಟು ಏನೋ ಬಡಬಡಿಸುತ್ತಿದ್ದಾನಲ್ಲ ಎಂಬ ಕಳವಳ, ಆತಂಕ. ಅದನ್ನು ಪರಿಹರಿಸಲೆಂದೇ ಅವಳು ವಿಧ ವಿಧದ ದೃಷ್ಟಿ ಪರಿಹಾರ ಕಾರ್ಯಗಳಲ್ಲಿ ನಿರತಳಾದಳು.

ಇಂತಹ ಭಗವಂತನು ನಮ್ಮನ್ನು ಪ್ರತಿಕ್ಷಣವೂ ಎಲ್ಲ ವಿಪತ್ತುಗಳಿಂದಲೂ ಕಾಪಾಡುತ್ತಿರಲಿ ಎಂದು ಪ್ರಾರ್ಥಿಸೋಣ.

(ಮುಂದುವರಿಯುವುದು)



ತಿರುಮಲೆಯ ಚರಿತಾಮೃತ

# ಸೈನಿಕ ರಾಜಕೀಯ ಕೇಂದ್ರವಾದ ತಿರುಪತಿ

ತೆಲುಗು ಮೂಲ:
■ ಪಿ.ವಿ.ಆರ್.ಕೆ. ಪ್ರಸಾದ್
(ನಿವೃತ್ತ ಐ.ಎ.ಎಸ್. ಅಧಿಕಾರಿ)

■ ಕನ್ನಡಕ್ಕೆ: ಸೂರ್ಯವಂಶಿ

ಕರ್ನಾಟಕ ಪ್ರಾಂತ್ಯವು ಗೋಲ್ಕೊಂಡ ನವಾಬರ ಪಾಲನೆಯಲ್ಲಿದ್ದಾಗ, ತಿರುಪತಿ ಕೇಂದ್ರ ಸ್ಥಾನವಾಗಿ ಅವರ ಪರಿಪಾಲನೆ ನಡೆಯುತ್ತಿತ್ತು. ಮೊದಲು ತಿರುಪತಿಯಲ್ಲಿ ಚಿನ್ನಪಲ್ಲಿ ಮಿರ್ಜಾ ಎಂಬುವವನು ಡೆಕ್ಕನ್ ನವಾಬನ ಪರವಾಗಿ ಅಧಿಕಾರ ಚಲಾಯಿಸುತ್ತಿದ್ದ, ಅವನ ಬಳಿ ಆ ಕಾಲದಲ್ಲಿ, ಡೆಕ್ಕನ್ ನವಾಬನಿಗೆ ನಿಕಟರಾಗಿದ್ದ, ಅಕ್ಕಣ್ಣ, ಮಾದಣ್ಣ ಎಂಬ ಅಧಿಕಾರಿಗಳು ಗೋಲ್ಕೊಂಡದಲ್ಲಿದ್ದರು.

ತಿರುಪತಿಯನ್ನು ಸಾಮಂತ ರಾಜಧಾನಿಯಾಗಿ ಮಾಡಿ, ಈ ತೀರಪ್ರಾಂತ್ಯಗಳ ಅಧಿಕಾರಿಗಳೆಲ್ಲರೂ ಈ ತಿರುಪತಿಯ ಅಧಿಕಾರಿಯಾಗಿದ್ದ ಮಿರ್ಜಾನ ಕೈಕೆಳಗಿದ್ದು ಕೆಲಸ ಮಾಡುವಂತೆ ಏರ್ಪಾಟು ನಡೆದಿತ್ತು. ಮಿರ್ಜಾನನ್ನು ಈ ಪ್ರಾಂತ್ಯದ 'ಗವರ್ನರ್' ಎಂದು ಭಾವಿಸಬಹುದು.

ಈ ಕಾಲದಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ಮದ್ರಾಸಿನಲ್ಲಿ ಅವರ ಕಾರ್ಯಕ್ರಮಗಳನ್ನು ವೇಗವಾಗಿಸಿ, ದಕ್ಷಿಣದಲ್ಲಿ ವ್ಯಾಪಾರವನ್ನು ವಿಸ್ತರಿಸಬೇಕೆಂಬ ಯೋಚನೆಯಿಂದ, ತಮ್ಮ ಪ್ರತಿನಿಧಿಯಾಗಿದ್ದ ಚಿನ್ನಪಲ್ಲಿ ಮಿರ್ಜಾನನ್ನು ಭೇಟಿಯಾಗುವುದಕ್ಕೆ ಕಳುಹಿಸಿದ...

ಈ ವಿಷಯಗಳಲ್ಲಿ ಅಷ್ಟೊಂದು ಅಧಿಕಾರವಿಲ್ಲದ ಮಿರ್ಜಾ, ಆ ಪ್ರತಿನಿಧಿಯನ್ನು ಗೋಲ್ಕೊಂಡಕ್ಕೆ ಹೋಗಿ ನವಾಬನಾದ ನೆಕ್ಕಾಮ್ ಖಾನನನ್ನು ಭೇಟಿಯಾಗಬೇಕೆಂದು ಆದೇಶಿಸಿದ. ನೆಕ್ಕಾಮ್ ಖಾನನನ್ನು ಭೇಟಿಯಾಗಿ ತಿರುಪತಿಗೆ ಹಿಂದಿರುಗುವಷ್ಟರಲ್ಲಿ ತಿರುಪತಿಯಲ್ಲಿ ಅಕ್ಕಣ್ಣ ಅಧಿಕಾರಿಕ ಪರ್ಯಟನೆಯಲ್ಲಿದ್ದ.

ಈ ಅಕ್ಕಣ್ಣನನ್ನು ಆ ಆಂಗ್ಲ ಅಧಿಕಾರಿ ಭೇಟಿಯಾಗಿ ವ್ಯವಹಾರ ಮಾಡಿರುವಂತೆ ರಿಕಾರ್ಡ್‌ಗಳಿವೆ.

ಅಕ್ಕಣ್ಣ ಒಂದು ವಾರ ಕಾಲ ಬೆಟ್ಟದ ಮೇಲೆ ಇದ್ದಂತೆ, ದೇವರ ಸೇವೆ ಮಾಡಿರುವಂತೆ, ಕೆಲವು ದೇವಾದಾಯಗಳನ್ನು ಮಾಡಿರುವಂತೆ ಶಾಸನಗಳಿವೆ.

ಅನಂತರ ಕ್ರಿ.ಶ. 1681ರಲ್ಲಿ ಅಕ್ಕಣ್ಣ ಮಾದಣ್ಣರಿಬ್ಬರೂ ತಿರುಪತಿಗೆ ಬಂದು ಅನೇಕ ದಿನಗಳ ಕಾಲ ಇದ್ದಂತೆ, ಆಗ ದೇವರ ದರ್ಶನಕ್ಕೆಂದು ಬೆಟ್ಟಕ್ಕೆ ಹೋಗಿ ಕೆಲವು ದೇವಾದಾಯಗಳನ್ನು ಮಾಡಿರುವಂತೆ ಶಾಸನಗಳಿವೆ. ಆ ಕಾಲದಲ್ಲಿ ಈ ಶಾಸನಗಳು ತೆಲುಗು ಭಾಷೆಯಲ್ಲಿ ಅದರಲ್ಲೂ ಗ್ರಾಮೀಣ ಭಾಷೆಯಲ್ಲಿ ಇರುವುದು ವಿಶೇಷವಾಗಿದೆ. ಇತರ ಶಾಸನಗಳಲ್ಲಿರುವಂತೆ ರಾಜನ ಪ್ರಸಕ್ತಿಯಾಗಲೀ, ಪ್ರಶಸ್ತಿಗಳಾಗಲೀ ಇದರಲ್ಲಿ ಇಲ್ಲ. ಏಕೆಂದರೆ ಆ ಪ್ರಾಂತ್ಯಕ್ಕೆ ನಿಜವಾದ ರಾಜ ಯಾರೋ ತಿಳಿದಿಲ್ಲ. ಆ ಪ್ರಾಂತ್ಯ ಗೋಲ್ಕೊಂಡ ನವಾಬನ ಅಧೀನದಲ್ಲಿದ್ದರೂ ಗೋಲ್ಕೊಂಡ ಡಿಲ್ಲಿ ಸಂಬಂಧಗಳಿಂದಾಗಿ ರಾಜನ ಚರ್ಚೆ ಇದರಲ್ಲಿ ಬಂದಿಲ್ಲ.

ಮಾಡಿರುವ ದೇವಾದಾಯ ಶುದ್ಧಾನ್ನ ಅಲಂಕಾರಕ್ಕಾಗಿ ಅಂದರೆ, ಅನ್ನ, ಹೆಸರುಬೇಳೆ, ಮೊಸರು ಶ್ರೀನಿವಾಸನಿಗೆ, ಅಮ್ಮನವರಿಗೆ ಪಾಯಸ, ಚಟ್ನಿ, ದೋಸೆ. ಈ ಶಾಸನದಲ್ಲಿ ಪ್ರಸಾದಗಳನ್ನು ಯಾರು ಯಾರಿಗೆ ಪಾಲನ್ನು ನೀಡಬೇಕೆಂದು ಸ್ಪಷ್ಟವಾಗಿ ದೇವಾದಾಯ ಮಾಡಿದ ದಾತರೇ ನಿರ್ಧರಿಸಿದ್ದರು. ಅಲ್ಲಿಯವರೆಗಿನಂತೆ ಸ್ಥಾನತ್ತಾರರಿಗೆ, ದೊಡ್ಡ ದೊಡ್ಡ ಅಧಿಕಾರಿಗಳಿಗೆ ಹೆಚ್ಚಿನ ಪಾಲನ್ನು ನೀಡುವುದನ್ನು ನಿಲ್ಲಿಸಿದರು. ಆಲಯದಲ್ಲಿ ನಿಜವಾಗಿಯೂ ಕಷ್ಟಪಟ್ಟು ಕೆಲಸ ಮಾಡುವವರಿಗೆ ನೈವೇದ್ಯದಲ್ಲಿ ಭಾಗವನ್ನು ನೀಡಿದರು. ಅಡುಗೆಗಾಗಿ, ಕಟ್ಟಿಗೆ ತರುವವರಿಗೆ (ಸಿಂಗಮೂರ್ತಿ) ಪನಿಮೂರ್ತಿ (ಆಲಯದ ಪೂಜಾ ಕೆಲಸಗಳು) ಇಬ್ಬರು ಜೀಯ್ಯಂಗಾರರು ಸ್ಥಾನದವರು, ಪಾರುಪತ್ತೇದಾರರು, ಅಧ್ಯಾಪಕರು, ದೇಸಾಯಿಗಳಿಗೆ ನೀಡಿ ಗೋಷ್ಠಿಗೆ ಬಂದ ಯಾತ್ರಿಕರಿಗೆ ವಿನಿಯೋಗಿಸುವುದಕ್ಕೆ, ಇವರೊಂದಿಗೆ ಸ್ಥಾನಿಕ ಶ್ರೀವೈಷ್ಣವರಿಗೆ ಸ್ವಲ್ಪ ಭಾಗವನ್ನು ನೀಡಿದ.

ಪ್ರಸಾದದ ವಿತರಣೆಯಲ್ಲಿ ಹಳೆಯ ಪದ್ಧತಿಗಳ ಸ್ಥಾನದಲ್ಲಿ, ಈ ಹೊಸ ಪದ್ಧತಿಯನ್ನು ಈ ಅಕ್ಕಣ್ಣ ಮಾದಣ್ಣರ ಶುದ್ಧಾನ್ನ ಸಂಧಿಯಿಂದ ಪ್ರಾರಂಭವಾಯಿತು. ಈ ದೇವಾದಾಯವನ್ನು ಸ್ಥಾನತ್ತಾರರಿಗೆ ನೀಡದೆ, ಹೊಸದಾಗಿ ದೇವಸ್ಥಾನದಲ್ಲಿ ನೇಮಿಸಲ್ಪಟ್ಟವರಿಗೆ ನೀಡಿದರು. ಈ ದೇವಾದಾಯವನ್ನು ಧನರೂಪದಲ್ಲಿ ಅಲ್ಲದೇ, ಬಂಗಾರದ ಹಾರದ ರೂಪದಲ್ಲಿ ಅವನ್ನೂ ಆಲಯದಲ್ಲಿನ ಅಧಿಕಾರಿಗಳಿಗೆ ನೀಡದೇ, 'ಕುನ್ರಪಾಕಂ ತಿಮ್ಮಣ್ಣ ಅಯ್ಯ' ಎಂಬುವವರ ಅಧೀನದಲ್ಲಿ ಇರಿಸಿ, ಅವರು ಈ ನೈವೇದ್ಯಗಳನ್ನು ಮಾಡುವುದಕ್ಕೆ ಬೇಕಾದ ಸಾಮಾನುಗಳನ್ನು ದೇವಸ್ಥಾನಕ್ಕೆ ನೀಡುವ ಏರ್ಪಾಟು ಮಾಡಿದರು. ನೀಡಿದ ಸಾಮಾನುಗಳೊಂದಿಗೆ ದೇವಾದಾಯ ಸೇವೆ ಮಾಡುವಂತಹ ಕರ್ತವ್ಯ ಸ್ಥಾನದವರದ್ದಾಗಿತ್ತು. ಆ ರೀತಿ ವರ್ಷದಲ್ಲಿ ಪ್ರತೀ ದಿನ ನೈವೇದ್ಯ ಮಾಡುವ ಸೇವೆ ದೇವಾದಾಯವಾಗಿತ್ತು.

ಈ ಕಂಠಹಾರ 25 ವರಹಗಳ ಭಾರವಿತ್ತು–525

ಶ್ರೀರಂಗರಾಜನಗದ ಬೆಲೆ ಬಾಳುತ್ತಿತ್ತಂತೆ. ದಾನಿಯ ಹೆಸರು, 'ರಾಜಶ್ರೀ ಶಿವರಾಜ ರಾಮಚಂದ್ರ ಎಡಮಲೇರು ದಬಿರ್ಷಾ, ಶ್ರೀವತ್ಸಗೋತ್ರ, ಆಶ್ವಲಾಯನ ಸೂತ್ರ, ಋಕ್ ಶಾಖೆಯವರು.

ಈ ನೈವೇದ್ಯ ಪ್ರಸಾದ, ಮಹಾರಾಜ ಶ್ರೀ ಶುದ್ಧಭಾಮಾಜಿಪಂತುಲುರವರು ಮಾಡಿದ ದೇವಾದಾಯದ ನೈವೇದ್ಯ ಆಗುತ್ತಲೇ ಮಾಡಬೇಕೆಂದು ಶಾಸನದಲ್ಲಿದೆ. ಈ ಶಾಸನವನ್ನು ನೋಡಿದಾಗ, ಹಿಂದಿನ ಕಾಲದಲ್ಲಿನ ಸ್ಥಾನತ್ತಾರರು, ಸ್ಥಾನಾರವರಾದರೆಂದೂ ಆ ಹನ್ನೆರಡು ಜನ, ಕೆಲ ವರ್ಷಗಳ ಹಿಂದೆ ಆರು ಜನರಾಗಿ, ಈ ಶಾಸನದ ಹೊತ್ತಿಗೆ ನಾಲ್ವರಾದರೆಂದೂ ತಿಳಿದುಬರುತ್ತದೆ. ಈ ಹೊಸ ಸ್ಥಾನಾರವರೆಲ್ಲರೂ ತೆಲುಗಿನವರೇ! ನಾಲ್ವರಾದರೆಂದು ತಿಳಿದುಬರುತ್ತದೆ. ಈ ಹೊಸ ಸ್ಥಾನಾರವರೆಲ್ಲರೂ ತೆಲುಗಿನವರೇ!

ಈ ಕಾಲದ ಶಾಸನಗಳಲ್ಲಿ ದೇವಾಲಯದಲ್ಲಿ ತೆಲುಗಿನವರ ಪ್ರಾಬಲ್ಯ ಹೆಚ್ಚಾಗಿರುವಂತೆ ತಿಳಿದುಬರುತ್ತಿದೆ. 'ಸ್ವಸ್ತಿಶ್ರೀ' ಎಂದಿರದೆ– 'ಶ್ರೀ ವೇಂಕಟೇಶ ಶುಭಮಸ್ತು' ಎಂದು ಶಾಸನ ಪ್ರಾರಂಭವಾಗಿದ್ದು, ನಿರ್ದೇಶಕರು ಅಂದರೆ–ಸ್ಥಾನತ್ತಾರರಲ್ಲದೇ, ದಾನಿಗಳೇ ಪ್ರಸಾದದ ವಿತರಣೆಯ ಜವಾಬ್ದಾರಿಯನ್ನೂ ತೆಗೆದುಕೊಂಡು, ದೇವಸ್ಥಾನದಲ್ಲಿ ಕಷ್ಟಪಟ್ಟು ಕೆಲಸ ಮಾಡುವವರಿಗೆ ನೈವೇದ್ಯದಲ್ಲಿ ಭಾಗವನ್ನು ಕಲ್ಪಿಸುವುದು, ದೇಶಾಂತರರಿಗೆ ಪ್ರಸಾದದಲ್ಲಿ ಭಾಗವನ್ನು ಲಭಿಸುವುದು, 'ಪೆರಿಯಕೋಯಿಲ್ ಕೆಳ್ವಿ ಇಲಮೇಕೊಯಲ್ ಕೆಳ್ವಿ' ಎಂದು ಕರೆಯಲ್ಪಡುವ ಜೀಯ್ಯರುಗಳು, ದೊಡ್ಡ ಜೀಯ್ಯರ, ಚಿಕ್ಕ ಜೀಯ್ಯರು ಎಂದು ಕರೆಯಲ್ಪಡುತ್ತಿರುವುದು, ಉತ್ತರ ಪಾರುಪತ್ತೇದಾರ ಎಂದು ಹೊಸ ಅಧಿಕಾರಿ ಆಲಯದಲ್ಲಿ ನೇಮಿಸಲ್ಪಡುವುದು ದಾನಿಗಳಿಗೆ ನೀಡುತ್ತಿದ್ದ ನಾಲ್ಕನೆಯ ಭಾಗ ಹೋಗಿ, ನಾಮಮಾತ್ರದ ಪಾಲು ದಾನಿಗೆ ಬಂದಿದ್ದು, ಆಲಯದಲ್ಲಿ ಕೆಲಸ ಮಾಡುವ 'ಅಧ್ಯಾಪಕಂ' ಅವರಿಗೆ, ಶ್ರೀವೈಷ್ಣವರಿಗೆ ಪ್ರಸಾದದಲ್ಲಿ ಭಾಗವನ್ನು ಹಂಚುವುದು; ಹಿಂದಿನ ಕಾಲದಲ್ಲಿದ್ದ ತಿರುನಿನ್ರ ಉಡಯಾರ್ಲರಿಗೆ (ಆಲಯದ ಲೇಖಕರು) ಪ್ರಸಾದದ ಭಾಗವನ್ನಾಗಲೀ, 'ಸ್ಥಾನಾಲರವರಂತೆಯೂ ಇಲ್ಲದಿರುವಂತಹ ಅನೇಕ ಬದಲಾವಣೆಗಳು ಪ್ರಸಾದದ ವಿತರಣೆಯಲ್ಲಿ ನಡೆದುವು.

ನೈವೇದ್ಯವನ್ನು ಆ ಹೆಸರಿನಿಂದ ಕರೆಯುವ ವಿಧಾನವೇ ಬದಲಾಯ್ತು. ಪುರಾತನ ಕಾಲದಿಂದಲೂ ಅನ್ನ ನೈವೇದ್ಯಗಳಿಗೆ 'ತಿರುಪ್ಪಾನಕಂ' ಎಂದು, 'ಸಂಧಿ ತಿರುಪ್ಪಾನಕಂ' ಎಂದು ಹೆಸರು. ಕಳೆದ ಆರು ಶತಮಾನಗಳಿಂದ ಬಳಸುತ್ತಿದ್ದ ಪದಗಳನ್ನು ಬದಲಿಸಿ, ಆ ಶಾಸನದಲ್ಲಿ 'ಅವಸರಂ' ಎಂಬ ಪದವನ್ನು ಬಳಸಿದರು. 'ಅವಸು' ಎಂದರೆ ಸಂಸ್ಕೃತದಲ್ಲಿ 'ಅನ್ನ' ಎಂದರ್ಥ. ತೆಲುಗಿನಲ್ಲಿ ಅದೇ ಪದ 'ಅನ್ನ' ಎಂದಾಯ್ತು.

ಅಳಿಯ ರಾಮರಾಜನ ಕಾಲದಲ್ಲಿ ಮಾಡಿದ ನೈವೇದ್ಯದ ದೇವಾದಾಯಗಳು ಈ ಕಾಲಕ್ಕೆ ನಿಂತುಹೋಗಿ, ದೇವಸ್ಥಾನದಲ್ಲಿ ಕೆಲಸ ಮಾಡುವ ಅನೇಕರಿಗೆ ಊಟಕ್ಕೇ ಕಷ್ಟವಾದ್ದರಿಂದ, ಆ ಅಗತ್ಯವನ್ನು ಸರಿದೂಗಿಸುವುದಕ್ಕೆ ಈ ಅವಸರಂ ನೈವೇದ್ಯಗಳನ್ನು ಪ್ರಾರಂಭಿಸಿ, ದೇವಸ್ಥಾನದಲ್ಲಿ ಕೆಲಸ ಮಾಡುವ ಎಲ್ಲರಿಗೂ ಅವರವರ ಅನುಕೂಲಕ್ಕೆ ತಕ್ಕಂತೆ ಪ್ರಸಾದಗಳು ತಲಪುವಂತೆ ಮಾಡಲಾಯಿತು.

* * *

ಆ ರೀತಿ ಗೋಲ್ಕೊಂಡ ನವಾಬರು ತಿರುಪತಿ ಕೇಂದ್ರವಾಗಿ ಕ್ರಿ.ಶ. 1688ರವರೆಗೂ ಪರಿಪಾಲಿಸಿದರು. ಔರಂಗಜೇಬನು ಅವರನ್ನು ಸೋಲಿಸಿ, ಅವರ ರಾಜ್ಯವನ್ನು ನಾಶ ಮಾಡುವವರೆಗೂ ಅವರು ತಿರುಪತಿಯಲ್ಲಿ ಪಾಲನೆ ನಡೆಸಿದರು.

ಅದೇ ದಿನಗಳಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರು ಮದ್ರಾಸಿನಿಂದ ಒಬ್ಬ ದೂತನನ್ನು ತಿರುಪತಿಯಲ್ಲಿರುವ ಗೋಲ್ಕೊಂಡ ವೈಸ್ರಾಯನ್ ಬಳಿಗೆ ಕಳಿಸಿದರು. ಅವನಲ್ಲಿ ಸಂದರ್ಶನದ ಅನಂತರ ಗೋಲ್ಕೊಂಡದಲ್ಲಿ ನೆಕ್ನಾಮ್ ಖಾನ್‌ನೊಂದಿಗೆ, ಮಂತ್ರಿ ಮಾದಣ್ಣನೊಂದಿಗೆ ಮಾತನಾಡಿದ. ಎಲ್ಲ ನಡೆದ ಅನಂತರ ನೆಕ್ನಾಮ್‌ಖಾನ್ ಈಸ್ಟ್ ಇಂಡಿಯಾ ಪ್ರತಿನಿಧಿಯನ್ನು,

"ಹೋಗಿ ಅಕ್ಕಣ್ಣನೊಂದಿಗೂ ಚರ್ಚಿಸಿ" ಎಂದು ಕಳುಹಿಸಿದ. ಆ ಪ್ರತಿನಿಧಿ ತಿರುಪತಿಗೆ ಬಂದು ಮೊಕ್ಕಾಂ ಹೂಡಿದ.

ಅಕ್ಕಣ್ಣನೊಂದಿಗೆ, ಈಸ್ಟ್ ಇಂಡಿಯಾ ಪ್ರತಿನಿಧಿ ತಮ್ಮ ವ್ಯಾಪಾರದ ಅಗತ್ಯತೆಯ ಬಗೆಗೆ ತಿಳಿಸಿದ. ಗೋಲ್ಕೊಂಡ ನವಾಬನಿಂದು ತಾವು ಎಂತಹ ಸಹಕಾರವನ್ನು ಆಶಿಸುತ್ತಿದ್ದಾರೆ ತಿಳಿಸಿದ.

ಈ ಪ್ರತಿನಿಧಿಯ ಅಭ್ಯರ್ಥನೆಯಲ್ಲಿರುವ ಒಳ್ಳೆಯದು, ಕೆಟ್ಟದ್ದು, ಲಾಭನಷ್ಟಗಳನ್ನು ಅಕ್ಕಣ್ಣ ಅಂದಾಜು ಮಾಡುವವರೆಗೂ ಆ ಪ್ರತಿನಿಧಿ ತಿರುಪತಿಯಲ್ಲೇ ಇದ್ದುಕೊಂಡು, ಅಕ್ಕಣ್ಣನಿಗೆ ವಿವರಣೆಗಳನ್ನು ನೀಡುತ್ತಾ ಬಂದ.

ಕೇವಲ ಈಸ್ಟ್ ಇಂಡಿಯಾ ಕಂಪೆನಿಯ ಪ್ರತಿನಿಧಿಯಷ್ಟೇ ಅಲ್ಲದೇ, ಅಕ್ಕಪಕ್ಕದ ರಾಜ್ಯಗಳಿಂದ, ಗೋಲ್ಕೊಂಡ ನವಾಬನೊಂದಿಗೆ ರಾಜಕೀಯ ವ್ಯಾಪಾರ ಲೇವಾದೇವಿಗಳನ್ನು



ತಿರುಮಲೆಯ ಚರಿತಾಮೃತ ಗ್ರಂಥ ಬರೆದಿರುವ **ಶ್ರೀ ಪಿ.ವಿ.ಆರ್.ಕೆ. ಪ್ರಸಾದ್**ರವರು ತಿರುಮಲೆಯ ಶ್ರೀನಿವಾಸ ದೇವರ ಮಹಾಭಕ್ತರು. ಉತ್ತಮ ಐಎಎಸ್ ಅಧಿಕಾರಿ ಎಂದು ಕೀರ್ತಿ ಗಳಿಸಿರುವವರು. ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೀಯುತರು ಪ್ರಧಾನಮಂತ್ರಿ ದಿವಂಗತ ಪಿ.ವಿ. ನರಸಿಂಹರಾಯರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದವರು. ಅಂತೆಯೇ ತಿರುಮಲೆ ತಿರುಪತಿ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳಾಗಿ ಅಪೂರ್ವ ಸೇವೆ ಸಲ್ಲಿಸಿರುವ ಶ್ರೀಯುತರು ತಮ್ಮನ್ನು 'ಶ್ರೀನಿವಾಸದಾಸ' ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುವ ಭಾಗವತರು. 'ತಿರುಮಲೆಯ ಚರಿತಾಮೃತ'ವನ್ನು ಕನ್ನಡಕ್ಕೆ ತಂದಿರುವ



**ಶ್ರೀಮತಿ ಸೂರ್ಯವಂಶಿ** ಉತ್ತಮ ಅನುವಾದಕಿ. ತೆಲುಗಿನಿಂದ ಹಲವಾರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿರುವವರು. ಟಿಟಿಡಿ ನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆ ಪತ್ರಾಗಾರದಲ್ಲಿ ದೊರೆತ ಅನೇಕ ದಸ್ತಾವೇಜುಗಳನ್ನು, ಪ್ರಾಚೀನ ದಾಖಲೆಗಳನ್ನು, ಹಳೆಯ ರೆಕಾರ್ಡ್‌ಗಳನ್ನು, ಶಿಲಾಶಾಸನಗಳನ್ನು ಅಧ್ಯಯನ ಮಾಡಿ ರಚಿಸಿರುವ 'ತಿರುಮಲೆಯ ಚರಿತಾಮೃತ' ಒಂದು ಅಧಿಕೃತ ಗ್ರಂಥ. ಈ ಇಬ್ಬರು ದೈವಭಕ್ತರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತಾ 'ತಿರುಮಲೆಯ ಚರಿತಾಮೃತ'ವನ್ನು ಓದುಗರಿಗೆ ನೀಡುತ್ತಿದ್ದೇವೆ

–ಸಂ.

ನಡೆಸಬೇಕಾದರೆ ಎಲ್ಲರೂ ತಿರುಪತಿಗೆ ಬಂದು ಅಕ್ಕಣ್ಣನೊಂದಿಗೆ ಚರ್ಚಿಸುತ್ತಿದ್ದರಂತೆ. ಒಂದೇ ಮಾತಲ್ಲಿ ಹೇಳಬೇಕೆಂದರೆ ಆ ಕಾಲದಲ್ಲಿ ತಿರುಪತಿ ಕೇವಲ ಆಧ್ಯಾತ್ಮಿಕ ಕೇಂದ್ರವಾಗೇ ಅಲ್ಲದೇ, ಸೈನಿಕ ರಾಜಕೀಯ ಕೇಂದ್ರವಾಗಿಯೂ ಪ್ರಕಾಶಿಸಿತು.

ಅದೇ ಕಾಲದಲ್ಲಿ ಪಶ್ಚಿಮ ಭಾಗದ ಮಹಾರಾಷ್ಟ್ರದಲ್ಲಿ ಹೊಸ ಹಿಂದೂ ರಾಜ್ಯದ ಸ್ಥಾಪನೆಗೆ ಬುನಾದಿ ಪ್ರಾರಂಭವಾಯಿತು. ತಂದೆ ಷಾಜಿ ಭೋಂಸ್ಲೇಯಿಂದ ಸಂಸ್ಥಾನವನ್ನು ಪಡೆದುಕೊಂಡ ಶಿವಾಜಿ, ಬಿಜಾಪುರ, ಸುಲ್ತಾನರ ಪ್ರಾಂತ್ಯದಲ್ಲಿನ ಕೆಲ ಭಾಗಗಳ ಮೇಲೆ ದಾಳಿ ಪ್ರಾರಂಭಿಸಿ ಕ್ರಿ.ಶ. 1674ರ ವೇಳೆಗೆ ತಾನೊಬ್ಬ ಸ್ವತಂತ್ರ ರಾಜನೆಂದು ಪ್ರಕಟಿಸಿಕೊಂಡ.

ಗೋಲ್ಕೊಂಡ ನವಾಬನೊಂದಿಗೆ ಸೇರಿ ಶಿವಾಜಿ, ಬಿಜಾಪುರದ ದಕ್ಷಿಣ ಮಂಡಲಗಳನ್ನು ಜಯಿಸುತ್ತೇನೆಂದು ಒಪ್ಪಂದ ಮಾಡಿಕೊಂಡು ಬಿಜಾಪುರದ ಮೇಲೆ ದಾಳಿ ಮಾಡಿದ, ಆ ರೀತಿ ಶಿವಾಜಿಯು ಚಿತ್ತೂರು ಪ್ರಾಂತ್ಯದ ಮೇಲೆ ದಂಡಯಾತ್ರೆಗೆ ಬಂದ. 'ಕಲ್ಲೂರುಕೋನ'ದ ಮೂಲಕ ತಿರುಪತಿ, ಕಾಳಹಸ್ತಿ, ಕಾಂಚೀಪುರಗಳನ್ನು ಆಕ್ರಮಿಸುತ್ತಾ ವೆಲ್ಲೂರು ಕೋಟೆಯನ್ನು ಮುಟ್ಟುಗೋಲು ಹಾಕಿ, ವೆಲ್ಲೂರು, ಆರ್ನಿ, ಜಿಂಜೀ ಪ್ರಾಂತ್ಯವನ್ನು ಗೆದ್ದುಕೊಂಡ.



ಗೋಲ್ಕೊಂಡದ ನವಾಬನ ಆಹ್ವಾನವನ್ನು ಮನ್ನಿಸಿ ಹಿಂದಿರುಗಿದ. ಆ ರೀತಿ ಪ್ರಯಾಣಿಸುತ್ತಾ ಸೈನ್ಯದೊಂದಿಗೆ ಶಾಂತಾಜಿಯನ್ನು ಬಿಟ್ಟು ಹೋದ. ತಂಜಾವೂರಿನ ವೆಂಕಾಜಿ, ಈ ಶಾಂತಾಜಿಯನ್ನು ಸೋಲಿಸಿ, ಅನಂತರ ಶಿವಾಜಿಯೊಂದಿಗೆ ಒಪ್ಪಂದಕ್ಕೆ ಬಂದ. ಈ ಕಾಲದಲ್ಲಿ ವೆಂಕಾಜಿ ತಿರುಮಲೆಯ ಬೆಟ್ಟದ ಮೇಲೆ ಹೋಗಿದ್ದನೇ? ದೇವಾಲಯವನ್ನು ಕೊಳ್ಳೆ ಹೊಡೆದನೇ? ಎಂಬ ವಿಷಯದ ಬಗೆಗೆ ಎಂತಹ ಆಧಾರಗಳೂ ಇಲ್ಲ. ಶಿವಾಜಿಯ ಮರಣದ ಅನಂತರ ಶಿವಾಜಿಯ ಮಗ ಶಂಭಾಜಿ ರಾಜ್ಯಕ್ಕೆ ಅಧಿಪತಿಯಾದ. ಅಂದಿನಿಂದಲೂ ಅನೇಕ ನಾಟಕೀಯ, ರಾಜಕೀಯ ಪರಿಣಾಮಗಳಿಂದಾಗಿ ಶಂಭಾಜಿಯ ಮಗ ಸೋಮಾಂಜಿ, ತಂಜಾವೂರು, ಮೈಸೂರ್, ತಿರುಚಿರಾಪಲ್ಲಿಗೆ ರಾಜನಾದ. ಆರ್ಕಾಟು ನವಾಬನ ರಾಜ್ಯವೂ ಡೆಕ್ಕನ್ ಸುಬೇದಾರಿಯ ಕಾಲದಲ್ಲಿ ಬಂತು.

ಕ್ರಿ.ಶ. 1740ರಲ್ಲಿ ರಘೋಜಿ ಭೋನ್ಸ್ಲೇ ತಿರುಪತಿಗೆ ಬಂದು ಶ್ರೀ ವೇಂಕಟೇಶ್ವರನನ್ನು ದರ್ಶಿಸಿಕೊಂಡು ದೇವರಿಗೆ ಕಾಣಿಕೆಗಳನ್ನು ಸಮರ್ಪಿಸಿಕೊಂಡ.

1. ರೂ. 33,000 ಬೆಲೆಬಾಳುವಂತಹ ಮುತ್ತಿನಹಾರ ರೂಬಿಯ ಪದಕದೊಂದಿಗೆ!
2. ಪಚ್ಚೆಯ ಪದಕವಿರುವ ಮುತ್ತಿನಹಾರ–ರೂ. 28,000 ಬೆಲೆಬಾಳುವಂತದ್ದು!
3. ರೂ. 28,000 ಬೆಲೆ ಬಾಳುವ 17 ಎಳೆಗಳ ಮುತ್ತಿನಹಾರ. ಪ್ರತೀ ಎಳೆಗೂ ಇಪ್ಪತ್ತು ಮುತ್ತುಗಳಿದ್ದುವು.
4. ಒಂದು ಕಲಿಕಿ ತುರಾಯಿ, ಕಿರೀಟವನ್ನು ಅಲಂಕರಿಸುವುದಕ್ಕೆ ನೀಡಿದ. ಅದರಲ್ಲಿ ನವರತ್ನಗಳು ಹುದುಗಿದ್ದುವು.
5. ಐದು ಎಳೆಗಳ ಮುತ್ತಿನಹಾರ–ಪ್ರತೀ ಎಳೆಗೂ 20 ಮುತ್ತುಗಳು–ರೂಬಿಗಳು ರೂ. 45,000 ಬೆಲೆ ಬಾಳುವಂತಿದ್ದು, ವಜ್ರವನ್ನು ಹುದುಗಿಸಲಾಗಿತ್ತು.

ಇವಕ್ಕೆಲ್ಲ ಬೆಲೆಯನ್ನು ನಿರ್ಧರಿಸಿದ್ದು, ಇಪ್ಪತ್ತನೆಯ ಶತಮಾನದ ಮೊದಲ ಭಾಗದಲ್ಲಿ. ಈ ಆಭರಣಗಳನ್ನೆಲ್ಲ 'ರಘೋಜಿಯವರ ಪೆಟ್ಟಿಗೆ' ಎಂಬ ಪೆಟ್ಟಿಗೆಯಲ್ಲಿ ಭದ್ರವಾಗಿರಿಸಿದ್ದಾರೆ. ಅದೂ ಆಲಯದಲ್ಲೇ ಇದೆ. ಅವನ್ನು ದೇವರಿಗೆ ಪ್ರತ್ಯೇಕವಾದ ಉತ್ಸವಗಳಲ್ಲಿ ಬಳಸುತ್ತಿರುತ್ತಾರೆ.

ಈ ಕಾಲದಲ್ಲಿ ಡೆಕ್ಕನ್ ಕರ್ನಾಟಕದಲ್ಲಿ ಅನೇಕ ಯುದ್ಧಗಳು, ರಾಜಕೀಯ ಸ್ಪರ್ಧೆಗಳು ಹತ್ಯೆಗಳೂ ನಡೆದುವು. ಹೈದರಾಬಾದ್ ನಿಜಾಮ, ಕರ್ನಾಟಕದ ನವಾಬರರ ನಡುವೆ ಯಾವಾಗಲೂ ಯುದ್ಧವೇ! ಈ ಯುದ್ಧಗಳಲ್ಲಿ ಇಂಗ್ಲಿಷಿನವರು, ಫ್ರೆಂಚಿನವರು ಇವರಿಗೆ ಬಲವನ್ನು ನೀಡಿ ರೊಚ್ಚಿಗೆಬ್ಬಿಸುವುದು, ಪುನಃ ಇಂಗ್ಲಿಷರಿಗೂ ಹೈದರ್ ಆಲಿ ಮತ್ತವನ ಮಗ ಟಿಪ್ಪುಸುಲ್ತಾನನಿಗೂ ನಡುವೆ ಗಲಾಟೆಗಳು–ಇವೆಲ್ಲಕ್ಕೂ ನಡುವೆ ಮರಾಠಿಗಳ ಮಿಂಚಿನ ದಾಳಿಗಳು....

ಈ ರೀತಿ ಅನಿಶ್ಚಿತ ಪರಿಸ್ಥಿತಿಗಳು ಕ್ರಿ.ಶ. 1800ರವರೆಗೂ ಮುಂದುವರಿಯುತ್ತಲೇ ಇದ್ದವು.

* * *

ಆಸಕ್ತಿಕರವಾದ ವಿಷಯವೇನೆಂದರೆ, ಕ್ರಿ.ಶ. 1740ರಲ್ಲಿ ರಘೋಜಿ ಭೋಂಸ್ಲೆ ಬಂದಾಗಿನಿಂದಲೂ ಆಲಯದಲ್ಲಿ ಮರಾಠರ ಪ್ರಭಾವ ಚೆನ್ನಾಗಿ ಹೆಚ್ಚಾಗಿತ್ತು. ದೇವಸ್ಥಾನದ ನಿರ್ವಹಣೆಯಲ್ಲಿ ಈತನು ಪಾಲನೆಯಲ್ಲಿ ಕೆಲವು ಬದಲಾವಣೆಗಳನ್ನು ತಂದ. ಅಂದಿನಿಂದಲೂ ತಿರುಮಲೆಯ ಆಲಯದಲ್ಲಿ ರಿಕಾರ್ಡುಗಳೆಲ್ಲ 'ಮೋಡಿ' (ದೇಶಸ್ಥ ಮರಾಠಿ) ಭಾಷೆಯಲ್ಲಿ ಬದಲಿಸಲಾರಂಭವಾಯ್ತು. 'ಪೇಷ್ಕಾರ್' ಪಾರುಪತ್ತೇದಾರರು ಎಂಬ ಪದಪ್ರಯೋಗಗಳೆಲ್ಲವೂ ಮೋಡಿ ಭಾಷೆಯಲ್ಲಿ ಬಂದಿರುವುದೇ!

ಅಂದಿನಿಂದಲೂ ಕೆಲವು ದಶಕಗಳ ಕಾಲ ದೇವಸ್ಥಾನದ ಪರವಾಗಿ ಉತ್ತರ ಪ್ರತ್ಯುತ್ತರಗಳೂ 'ಮೋಡಿ' ಭಾಷೆಯಲ್ಲೇ ನಡೆಯುತ್ತಿದ್ದುವು. ಆದರೆ ಈ 'ಮೋಡಿ' ಲಿಪಿ ಈಗ ಬಳಕೆಯಿಲ್ಲ. ಆದ್ದರಿಂದ ಅಂದಿನ ತಿರುಮಲೆಯ ಚರಿತ್ರೆಯನ್ನು ಅನಂತರ ಇತಿಹಾಸಕಾರರು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವ ಅವಕಾಶ ಇಲ್ಲದಂತಾಯ್ತು.

ಕ್ರಿ.ಶ. 1980ರಲ್ಲಿ ನಾನು ಟಿ.ಟಿ.ಡಿ. ಕಾರ್ಯನಿರ್ವಹಣ ಅಧಿಕಾರಿಯಾಗಿದ್ದಾಗ ಈ ಅಂಶ ನನ್ನ ದೃಷ್ಟಿಗೆ ಬಂತು. ಆಗ ನಾನು ಅತೀಕಷ್ಟದಿಂದ 'ಮೋಡಿ' ಲಿಪಿ ತಿಳಿದಿರುವಂತ ಒಬ್ಬ ನಿವೃತ್ತ ಸರ್ಕಾರೀ ಉದ್ಯೋಗಿಯನ್ನು ಮದ್ರಾಸಿನಿಂದ ಕರೆತಂದು, ಆತನಿಗೆ ವಸತಿಯನ್ನು ಕಲ್ಪಿಸಿ ದೇವಸ್ಥಾನದಲ್ಲಿನ 'ಮೋಡಿ' ಭಾಷೆಯ ರಿಕಾರ್ಡುಗಳನ್ನೆಲ್ಲ ಆಂಗ್ಲಕ್ಕೆ ತರ್ಜುಮೆ ಮಾಡಿಸುವಂತಹ ಕೆಲಸ ಪ್ರಾರಂಭಿಸಿದೆ. ಆ ರೀತಿ 'ಮೋಡಿ' ರಿಕಾರ್ಡುಗಳ ತರ್ಜುಮೆ ಕ್ರಿ.ಶ. 1989ರವರೆಗೂ ನಡೆಯಿತು. ಈ ಕಾರ್ಯಕ್ರಮವನ್ನು ಈಗಲಾದರೂ ತಿ.ತಿ.ದೇ. ಅವರು ಕೈಗೊಂಡರೆ ಚೆನ್ನಾಗಿರುತ್ತದೆ.

**(ಮುಂದುವರಿಯುವುದು)**

35ನೇ ಪುಟದಿಂದ

ಬಂದಾಗ ಜೀವನವೇ ಕಷ್ಟ ಎಂದುಕೊಳ್ಳುತ್ತೇವೆ. ಸಂತೋಷದ ಘಟನೆಗಳು ನಡೆದಾಗ ಜೀವನ ಎಷ್ಟೊಂದು ಉಲ್ಲಾಸಕರ ಎಂದುಕೊಳ್ಳುತ್ತೇವೆ. ಜೀವನದಲ್ಲಿ ಬೇಸರ ಮೂಡಿಬಂದಾಗ ಜೀವನವೆಲ್ಲ ಬೇಸರದಿಂದ ತುಂಬಿದೆ ಎಂದು ಭಾವಿಸುತ್ತೇವೆ. ಇದು ಕೂಡ ಸೂರ್ಯನನ್ನು ಬೇರೆ ಬೇರೆ ಬಣ್ಣದ ಗಾಜಿನಿಂದ ನೋಡಿದಂತಾಯಿತು. ಇದರಲ್ಲಿ ಯಾವುದು ಕೂಡ ಜೀವನದ ನಿಜವಾದ ಅನುಭವವಲ್ಲ.

ಯಾವ ಅನುಭವ ನಮ್ಮಲ್ಲಿ ದುಃಖವನ್ನು ತರುವುದೋ ಅದು ನಿಜವಾಗಲೂ ದುಃಖಕರವಲ್ಲ. ಸುಖ ದುಃಖ ಅನ್ನುವುದು ಅವರವರ ವೈಯಕ್ತಿಕ ಅನುಭವ. ಉದಾಹರಣೆಗೆ ಯಾರಾದರೂ ನಮ್ಮನ್ನು ದೊಡ್ಡ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ ಎಂದು ಆಮಂತ್ರಿಸಿದಾಗ ನಮಗೆ ವೇದಿಕೆಯಲ್ಲಿ ಮಾತನಾಡುವುದು ಅಭ್ಯಾಸವಿದ್ದಲ್ಲಿ ಇದೊಂದು ಸಂತಸದ ಅನುಭವವಾಗುತ್ತದೆ. ನಮಗೇನಾದರೂ ಸಭೆ ಭೀತಿ ಇದ್ದಲ್ಲಿ ಈ ಅನುಭವ ಒಂದು ನರಕವೇ ಆಗುತ್ತದೆ. ಅನುಭವ ಒಂದೇ ಆದರೂ ಅನುಭವಿಸುವವರ ಭಾವನೆಗಳು ನೂರಾರು. ಇದರಿಂದಲೇ ಕಶ್ಯಪ ಹೇಳುವುದು–ಯಾವ ಅನುಭವವೂ ಕೂಡ ನಿಜವಾಗಲೂ ದುಃಖಕರ ಅಥವಾ ಸುಖಕರವಾಗಿರುವುದಿಲ್ಲ. ಸುಖ–ದುಃಖಗಳು ಇರುವುದು ನಮ್ಮ ಮನಸ್ಸಿನಲ್ಲಿ ಮಾತ್ರ. ನಮ್ಮ ಆತ್ಮ ಗುಣಾತೀತ ಆದ್ದರಿಂದ ನಮ್ಮ ಆತ್ಮದ ಮೇಲೆ ಜೀವನದ ಅನುಭವಗಳು ಯಾವ ಪರಿಣಾಮವನ್ನೂ ಬೀರುವುದಿಲ್ಲ, ಅದು ಸದಾ ನಿಷ್ಕಳಂಕವಾಗೇ ಇರುತ್ತದೆ.

ನಮಗೆ ಜೀವನದಲ್ಲಿ ಬರುವಂತಹ ಅನುಭವಗಳು ನಮ್ಮ ಆತ್ಮದಿಂದ ಬಂದದ್ದಲ್ಲ, ನಮ್ಮ ಮನಸ್ಸಿನಿಂದ ಅಥವಾ ನಮ್ಮ ಇಂದ್ರಿಯಗಳಿಂದ ಬಂದದ್ದು, ಕೆಟ್ಟ ಅಥವಾ ಒಳ್ಳೆಯ ಅನುಭವಗಳು ಆತ್ಮದಿಂದ ಬರಲು ಸಾಧ್ಯವೇ ಇಲ್ಲ. ಆತ್ಮಾನಂದಕ್ಕೂ ಸಾಮಾನ್ಯ ಸಂತೋಷಕ್ಕೂ ಇರುವ ವ್ಯತ್ಯಾಸವನ್ನು ಗುರುತಿಸುವುದು ಹೇಗೆ? ಮನಸ್ಸು ಮತ್ತು ಇಂದ್ರಿಯಗಳಿಂದ ಬರುವ ಅನುಭವಕ್ಕೂ, ಆತ್ಮದಿಂದ ಬರುವ ಅನುಭವಕ್ಕೂ ಇರುವ ವ್ಯತ್ಯಾಸವೇನು? ನಾವೆಲ್ಲರೂ ದಿನನಿತ್ಯ ಜೀವನದಲ್ಲಿ ಮೂರು ಸ್ಥಿತಿಗಳನ್ನು ಅನುಭವಿಸುತ್ತೇವೆ. ಎಚ್ಚರದ ಸ್ಥಿತಿ ಅಥವಾ ಜಾಗ್ರತಾವಸ್ಥೆ, ಕನಸುಗಳನ್ನು ಕಾಣುವಂತಹ ಸ್ವಪ್ನಾವಸ್ಥೆ, ಹಾಗೂ ಗಾಢನಿದ್ರೆಯ ಸುಷುಪ್ತ ಅವಸ್ಥೆ. ಮನಸ್ಸಿನಿಂದ ಅಥವಾ ಇಂದ್ರಿಯಗಳಿಂದ ಬರುವಂತಹ ಅನುಭವಗಳು ಪ್ರತಿಯೊಂದು ಅವಸ್ಥೆಯಲ್ಲೂ ಬದಲಾಗುತ್ತವೆ. ನಾವು ಎಚ್ಚರವಾಗಿದ್ದಾಗಲೇ ಆಗುವ ಅನುಭವಗಳು ಬೇರೆ. ಕನಸು ಕಂಡಾಗ ಆಗುವ ಅನುಭವಗಳೇ ಬೇರೆ ಹಾಗೂ ಗಾಢ ನಿದ್ರೆಯಲ್ಲಿ ಆಗುವ ಅನುಭವವೇ ಬೇರೆ. ಆದ್ದರಿಂದ ಇವೆಲ್ಲ ಮನಸ್ಸಿನ ಅಥವಾ ಇಂದ್ರಿಯಗಳ ಮಟ್ಟದ ಅನುಭವಗಳೇ.

ಆತ್ಮದಿಂದ ಬರುವ ಅನುಭವಗಳು ಯಾವ ಸ್ಥಿತಿಯಲ್ಲೂ ಬದಲಾಗುವುದಿಲ್ಲ. ಒಬ್ಬ ಯೋಗಿಯ ದೇಹ ಎಚ್ಚರವಾಗಿರಲಿ ಅಥವಾ ನಿದ್ರಿಸುತ್ತಿರಲಿ ಅವನ ಪ್ರಜ್ಞೆಯು ಮಾತ್ರ ಸದಾ ಭಗವಂತನಲ್ಲಿ ಲೀನವಾಗಿ ಆತ್ಮಾನಂದದಿಂದ ನಲಿಯುತ್ತಿರುತ್ತದೆ. ಈ ಆತ್ಮಾನಂದ ನಿರಂತರ ಹಾಗೂ ಶಾಶ್ವತ. ಇದು ಹೊರಗಿನ ಘಟನೆಗಳಿಂದಾಗಲಿ, ಮನಸ್ಸಿನ ಸ್ಥಿತಿಗತಿಗಳಿಂದಾಗಲಿ ಅಥವಾ ಅವಸ್ಥೆಗಳಿಂದಾಗಲಿ ಬದಲಾಗುವುದಿಲ್ಲ. ಬದಲಾವಣೆ ಹೊಂದುವ ಅನುಭವಗಳು ನಮ್ಮ ಮನಸ್ಸಿನ ಯೋಚನೆ, ಭಾವನೆ, ಕಲ್ಪನೆ ಅಥವಾ ಭ್ರಮೆಗಳಿಂದ ಹುಟ್ಟುತ್ತವೆ, ಎಂದು ಕಶ್ಯಪರು ಹೇಳುತ್ತಾರೆ.

(ಮುಂದುವರಿಯುವುದು)

ಶ್ರೀ ನಿಮಿಷಾಂಬಾ ಆಶ್ರಮ, ನಂ. ೭೩, ೪ನೇ ಕ್ರಾಸ್, ಕಾನ್‌ಕಾರ್ಡ್
ಗಾರ್ಡನ್ ಸಿಟಿ ಲೇಔಟ್, ಆರ್.ವಿ. ಕಾಲೇಜು ಅಂಚೆ,
ಬೆಂಗಳೂರು–೫೬೦ ೦೫೯.

ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ **ಆಯ್ದ ಕಥೆಗಳು**

# ಭಕ್ತನು ಪ್ರೇಮ ರೂಪ

ಸುಕರಾತನು ಶ್ರೇಷ್ಠ ಸಂತ. ಆತನ ಅನುಭವದ ಮಾತು ಕೇಳಲು ಜನ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಸೇರುತ್ತಿದ್ದರು. ತನ್ನ ಆಯುಷ್ಯವನ್ನೆಲ್ಲ ಪವಿತ್ರ ಜ್ಞಾನಪ್ರಸಾರಕ್ಕೆ ಮೀಸಲಾಗಿರಿಸಿದ್ದ. ಮನೆಯ 'ಬೇಕು–ಬೇಡ'ಗಳತ್ತ ಆತ ಗಮನ ಹರಿಸಿದವನೇ ಅಲ್ಲ. ಅವನ ಹೆಂಡತಿ ಝಾಂಥಿಪಿ ಹೇಗೋ ಸಂಸಾರವನ್ನು ಸಾಗಿಸಿಕೊಂಡು ನಡೆದಿದ್ದಳು.

ಒಂದು ದಿನ ಮನೆಯಲ್ಲಿ ಊಟೋಪಚಾರಕ್ಕೆ ಏನೂ ಇರಲಿಲ್ಲ. ಝಾಂಥಿಪಿಯು ತಲೆಕಾಯ್ದು ಗಂಡನನ್ನು ಬೈಯುತ್ತಲಿದ್ದಳು. ಇದನ್ನು ಕೇಳಿಸಿಕೊಂಡು ನೆರಮನೆಯ ಗೆಳತಿ ಅಲ್ಲಿಗೆ ಬಂದಳು. "ಹೌದು ಝಾಂಥಿಪಿ ನಿನ್ನ ತಾಪ ಹೇಳತೀರದು. ನಿನ್ನಂಥ ಒಳ್ಳೆಯ ಹೆಂಡತಿಯನ್ನು ರಕ್ಷಿಸಬೇಕೆಂಬ ಬುದ್ಧಿಯಾದರೂ ನಿನ್ನ ಗಂಡನಿಗೆ ಇರಬಾರದೇ? ಇಂಥ ಗಂಡನ ಕೂಡ ನೀನು ಬದುಕಿರುವುದೇ ಆಶ್ಚರ್ಯ!" ಎಂದಳು ಗೆಳತಿ.



"ನನ್ನ ಗಂಡನ ವಿಷಯದಲ್ಲಿ ನೀನು ದಯವಿಟ್ಟು ಆಕ್ಷೇಪಿಸದಿರು ಗೆಳತಿ. ಆತನು ದುಡಿದು ಗಳಿಸುತ್ತಿಲ್ಲವೆಂದು ತಾಪವಾಗಿ ಬೈದೆನಷ್ಟೆ. ಅವನು ಕೆಟ್ಟವನೆಂದಲ್ಲ. ಆತನ ಸಾತ್ತ್ವಿಕ ಗುಣಗಳನ್ನು ನೆನಸಿಕೊಂಡಾಗ ನನ್ನ ಮನಸ್ಸಿಗೆ ಸಮಾಧಾನವಾಗುತ್ತದೆ. ಹೃದಯ ತುಂಬಿ ಬರುತ್ತದೆ. ನಾನು ಇಂಥ ಸಂತನ ಹೆಂಡತಿ ಎಂಬ ಹೆಮ್ಮೆಯಾಗುತ್ತದೆ. ಈಗಲೂ ನನ್ನ ಪತಿಯನ್ನು ನಾನೆಷ್ಟು ಪ್ರೀತಿಸುತ್ತೇನೆಂದರೆ, ಅವನು ತನ್ನನ್ನು ತಾನು ಅಷ್ಟು ಪ್ರೀತಿಸುತ್ತಿರಲಿಕ್ಕಿಲ್ಲ!" ಎಂದು ಝಾಂಥಿಪಿ ನುಡಿದಾಗ ಗೆಳತಿಗೆ ಪರಮಾಶ್ಚರ್ಯ! ●

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ

# ಮಾಸ ವೈಶಿಷ್ಟ್ಯ

ನಮ್ಮ ಹಿಂದೂ ಧರ್ಮದ ಆಚರಣೆಗಳಲ್ಲಿ ಹಬ್ಬ ಹರಿದಿನಗಳಿಗೆ, ಮಹಾನ್ ಸಂತರ, ಮಹಾನ್ ಸತ್ಪುರುಷರ ಜಯಂತಿ ಹಾಗೂ ಪುಣ್ಯ ದಿನಗಳಿಗೆ ವಿಶೇಷವಾದ ಸ್ಥಾನ ಉಂಟು. ಈ ಕುರಿತು ಪ್ರತಿ ತಿಂಗಳೂ ಮಾಸ ವೈಶಿಷ್ಟ್ಯದಲ್ಲಿ ತಿಳಿಸಿಕೊಡುತ್ತಾರೆ ಶ್ರೀ ಜಿ. ಶೇಖರ್

**1. ಕುಲಶೇಖರಾಳ್ವಾರ್ ತಿರುನಕ್ಷತ್ರ: (05–03–2020).** ಫಾಲ್ಗುಣಮಾಸ ಶುಕ್ಲ ಪಕ್ಷ ದಶಮಿಯಂದು ಕುಲಶೇಖರಾಳ್ವರ್



ಜನ್ಮದಿನ. ೧೨ ಮಂದಿ ಪ್ರಮುಖ ಶ್ರೀವೈಷ್ಣವ ಆಳ್ವಾರರುಗಳಲ್ಲಿ ಕುಲಶೇಖರಾಳ್ವಾರ್ ಏಳನೆಯವರು. ದಕ್ಷಿಣ ಭಾರತದ ಮಧ್ಯಯುಗದಲ್ಲಿ ಬಂದಂತಹ ಈತ ಒಬ್ಬ ಭಕ್ತಿಯ ದೇವತಾಶಾಸ್ತ್ರಜ್ಞ, ಭಕ್ತಿ ಕವಿ. ವಿದ್ವಾಂಸರು ಈತನನ್ನು ರಾಯಲ್ ನಾಟಕಕಾರರೊಂದಿಗೆ ಗುರುತಿಸುತ್ತಾರೆ. ಕೇರಳದ ಆರಂಭಿಕ ಚೇರ/ಪೆರುಮಾಳ್‌ರ ರಾಜನಾಗಿದ್ದ ಈತನನ್ನು ಕುಲಶೇಖರ ವರ್ಮಾನೆಂದೂ ಕರೆಯುತ್ತಾರೆ. ಕುಲಶೇಖರ್ ಆಳ್ವಾರರನ್ನು ವೈಷ್ಣವ ಕವನಗಳಾದ ಪೆರುಮಾಳ್ ತಿರುಮೋಳ್ಚಿ (ತಮಿಳು) ಮತ್ತು ಮುಕುಂದಮಾಲ (ಸಂಸ್ಕೃತ) ಲೇಖಕರೆಂದು ಪರಿಗಣಿಸುತ್ತಾರೆ.

**2. ಹೋಳಿಹಬ್ಬ: (09–03–2020).** ಫಾಲ್ಗುಣ ಶುಕ್ಲ ಹುಣ್ಣಿಮೆಯಂದು ಹೋಳಿಹಬ್ಬ ಅಥವಾ ಕಾಮನಹಬ್ಬವನ್ನು ಆಚರಿಸುತ್ತೇವೆ. ಈ ದಿನದಂದು ಅಕ್ಕಿಹಿಟ್ಟು ಮತ್ತು ಅರಿಶಿನ ಬೆರೆಸಿದ ಗುಲಾಲು ತಯಾರಿಸಿ, ಬಿದಿರಿನಿಂದ ಪಿಚಕಾರಿ ತಯಾರಿಸಿ ಬಣ್ಣದಾಟ ಆಡುವರು. ಅನಂತರ ಅಭ್ಯಂಜನ ಸ್ನಾನ ಮಾಡಿ ದೇವರಲ್ಲಿ ಪ್ರಾರ್ಥಿಸಿ,




ಮನೆಗಳಲ್ಲಿ ವಿಶೇಷ ಅಡಿಗೆಗಳನ್ನು ತಯಾರಿಸುವರು. ಉತ್ತರ ಪ್ರದೇಶದಲ್ಲಿ ಜೋಳದ ಹಿಟ್ಟಿನ ಗುಜಿಯಾ ಮತ್ತು ಪಾಪ್ಡಿ ಜನಪ್ರಿಯವಾಗಿದೆ.
ದೆಹಲಿಯಲ್ಲಿ ಈ ದಿನದಂದು ಹತ್ತು ತಲೆಯ ರಾವಣನ ಮೂರ್ತಿಯನ್ನು ಬಿದಿರಿನಿಂದ ತಯಾರಿಸಿ, ಅದಕ್ಕೆ ಹಳೇ ಬಟ್ಟೆಗಳನ್ನೆಲ್ಲ ತೊಡಿಸಿ ಗಣ್ಯರನ್ನೆಲ್ಲ ಕರೆದು, ಅವರ ಸಮ್ಮುಖದಲ್ಲಿ ದುಷ್ಟ, ದೌರ್ಜನ್ಯ ಮತ್ತು ರಾಕ್ಷಸೀ ಪ್ರವೃತಿಗೆ ಸಂಕೇತವಾದ ಲಂಕೇಶ್ವರನನ್ನು ಸುಡುವುದು ವಾಡಿಕೆ.

**3. ಶ್ರೀ ವಾದಿರಾಜಸ್ವಾಮಿಗಳ ಆರಾಧನೆ: (12–03–2020).**



ಫಾಲ್ಗುಣಮಾಸ ಕೃಷ್ಣ ಪಕ್ಷ ತೃತೀಯ ಶ್ರೀ ವಾದಿರಾಜಸ್ವಾಮಿಗಳ ಆರಾಧನೆ. ಹರಿದಾಸ ಪಂಥದಲ್ಲಿ ಪ್ರಮುಖರಾದ ಶ್ರೀ ವಾದಿರಾಜರ ಕಾಲ ೧೪೮೦–೧೬೦೦. ಹದಿನೈದನೆಯ ಶತಮಾನದ ಅಂತ್ಯದಲ್ಲಿ ಉಡುಪಿ ಜಿಲ್ಲೆಯಲ್ಲಿರುವ ಹೂವಿನಕೆರೆ ಎಂಬ ಗ್ರಾಮದಲ್ಲಿ ಜನನ. ತಂದೆ ರಾಮಾಚಾರ್ಯ ಮತ್ತು ತಾಯಿ ಸರಸ್ವತಿದೇವಿ. ಪೂರ್ವಾಶ್ರಮದ ಹೆಸರು ಭೂವರಾಹ. 'ಹಯಗ್ರೀವ' ಇವರಿಗೆ ಆರಾಧ್ಯ ದೈವ. ಶಿರಸಿ ತಾಲ್ಲೂಕಿನ ಸೋಂದಾ ಕ್ಷೇತ್ರದಲ್ಲಿ ಇವರ ಬೃಂದಾವನವಿದೆ. ಕನ್ನಡ ಮತ್ತು ಸಂಸ್ಕೃತ ಎರಡೂ ಭಾಷೆಗಳಲ್ಲಿ ವಾದಿರಾಜರು ಕೃತಿಗಳನ್ನು ರಚಿಸಿದ್ದಾರೆ. ಹಯವದನ ಎಂಬ ಅಂಕಿತದಲ್ಲಿ ಅನೇಕ ದೇವರನಾಮಗಳನ್ನು ರಚಿಸಿದ್ದಾರೆ. ಈವರೆಗೆ ವಾದಿರಾಜರು ರಚಿಸಿರುವ ೩೪೩ ಕೀರ್ತನೆಗಳು ಲಭ್ಯವಾಗಿದ್ದು, ಅದರಲ್ಲಿ ೯ ದೀರ್ಘ ಕೃತಿಗಳು.

**4. ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತೀ ಜಯಂತಿ: (09–02–2020).** ಫಾಲ್ಗುಣಮಾಸ ಕೃಷ್ಣ ಪಕ್ಷ ಬಹುಳ




ಏಕಾದಶಿಯಂದು. ದಕ್ಷಿಣ ಭಾರತದ ಶ್ರೀ ಶೃಂಗೇರೀ ಪೀಠದಲ್ಲಿ ೧೮೭೯–೧೯೧೨ರ ತನಕ ೩೩ನೇ ಅಧಿಪತಿಗಳಾಗಿ "ಅಭಿನವ ಶಂಕರರೆಂದೇ" ಕೀರ್ತಿ ಗಳಿಸಿ ರಾರಾಜಿಸಿದ್ದಂತಹವರು. ಮಹಾತಪಸ್ವಿಗಳಾದ ಜಗದ್ಗುರು ಶ್ರೀ ನೃಸಿಂಹ ಭಾರತೀ ಮಹಾಸ್ವಾಮಿಗಳು ಇವರ ಗುರುಗಳು. ಅಧರ್ಮವು ಎಲ್ಲ ಕಡೆ ತಾಂಡವವಾಡುತ್ತಿದ್ದಾಗ, ವೇದಶಾಸ್ತ್ರಗಳ ಬಗ್ಗೆ ಶ್ರದ್ಧೆಯು ಕಡಿಮೆಯಾಗಿ ಆಂಗ್ಲ ಶಿಕ್ಷಣ ಉತ್ತುಂಗ ಸ್ಥಿತಿಯಲ್ಲಿದ್ದಂತಹ ಕಾಲದಲ್ಲಿ ಶೃಂಗೇರಿಯಲ್ಲಿ ವೇದಶಾಸ್ತ್ರಗಳ ರಕ್ಷಣೆಗಾಗಿ 'ಸದ್ವಿದ್ಯಾ ಸಂಜೀವಿನೀ ಸಂಸ್ಕೃತ ಮಹಾಪಾಠಶಾಲಾ' ಎಂಬ ಹೆಸರಿನಿಂದ ಪಾಠಶಾಲೆಯನ್ನು ಆರಂಭಿಸಿ ವೇದಕ್ಕೆ, ಸಂಸ್ಕೃತ ಭಾಷೆಗೆ ಮರುಜೀವ ಕೊಟ್ಟಂತಹವರು.

**5. ಚಾಂದ್ರಮಾನ ಯುಗಾದಿ: (25–03–2020):** ಶ್ರೀ ಶಾರ್ವರಿ ಸಂವತ್ಸರ, ವಸಂತ ಋತುವಿನ



ಚೈತ್ರ ಶುಕ್ಲ ಪ್ರಥಮ ದಿನದಂದು ಈ ಯುಗಾದಿ ಹಬ್ಬ. ಭಾರತೀಯರಿಗೆ ನಿಜವಾದ ಹೊಸ ವರ್ಷದ ಆಚರಣೆಯ ಪ್ರಥಮ ಹಬ್ಬ. ಪ್ರಕೃತಿಯಲ್ಲಿ ಬದಲಾವಣೆಯನ್ನು ಕಾಣುವಂತಹ ಕಾಲ. ಎಲ್ಲ ಕಡೆ ಹಳೆ ಎಲೆಗಳು ಉದುರಿ, ಹೊಸ ಚಿಗುರಿನೊಂದಿಗೆ ಕಾಣಿಸುವ ಸೊಬಗಿನ ಸುವಾಸನೆಯ ಚೈತನ್ಯ ತುಂಬಿರುವ ದಿನ.

**6. ಮತ್ಸ್ಯ ಜಯಂತಿ: (28–03–2020):** ಚೈತ್ರಮಾಸದ




ಚೌತಿಯಂದು. ಶ್ರೀ ಮಹಾವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯದು. ವಿಷ್ಣುವು ಮೀನಿನ ರೂಪದಲ್ಲಿ ಬಂದು ಮೊದಲ ಮಾನವನಾದ ವೈವಸ್ವತ ಮನುವನ್ನು ಭಾರಿ ಪ್ರಳಯದಿಂದ ಕಾಪಾಡಿದನು ಎಂಬುದಾಗಿ ಹೇಳಲಾಗುತ್ತದೆ.

# ಶ್ರೀ ಯೋಗಿ ನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ



ದೂರವಾಣಿ: 08154–239525 / ಮೊಬೈಲ್ : 9945337398
klnarayankaiwara53@gmail.com



ಮಾರ್ಚ್ 2020ನೇ ಮಾಹೆಯ ಸಾಪ್ತಾಹಿಕ ಸೇವೆಗಳ ವಿವರ

## ನಾದಸುಧಾರಸ

ವಿನೂತನ ಯೋಜನೆಯಲ್ಲಿ ಅಮೋಘ ಸಂಕೀರ್ತನ ಸಂಗೀತ ಕಚೇರಿಗಳು

| ದಿನಾಂಕ | ಸಮಯ | ವಿದ್ವಾಂಸರ ಹೆಸರುಗಳು | ಕಾರ್ಯಕ್ರಮ |
|---|---|---|---|
| 07.03.2020<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ಎಸ್.ವಿ. ರಾಮಮೂರ್ತಿ<br>ಶ್ರೀ ಹೇಮಂತ್ ಕುಮಾರ್ – ಪಿಟೀಲು<br>ಶ್ರೀ ಹೆಚ್.ಎನ್. ಲಕ್ಷ್ಮೀನಾರಾಯಣ – ಮೃದಂಗ<br>ಶ್ರೀ ಕೆ.ವಿ. ಕೃಷ್ಣಮೂರ್ತಿ – ಖಂಜಿರಾ | ಗಾಯನ |
| 09.03.2020<br>ಸೋಮವಾರ | ಬೆಳಗ್ಗೆ 11.00 ರಿಂದ<br>12.00 ಗಂಟೆವರೆಗೆ | ಶ್ರೀ ವಾನರಾಶಿ ಬಾಲಕೃಷ್ಣ ಭಾಗವತ ಅವರಿಂದ<br>ಪೋತನ ಭಾಗವತ ಪ್ರವಚನ | ಹುಣ್ಣಿಮೆ |
| | ಸಂಜೆ 4.00 ಗಂಟೆಗೆ | ವಿಶೇಷ ಪೂಜೆ ಮತ್ತು ಆಲಂಬಗಿರಿಯಲ್ಲಿ ಗಿರಿ ಪ್ರದಕ್ಷಿಣೋತ್ಸವ<br>ಡಾ. ಎಂ.ಆರ್. ಜಯರಾಮ್ ಅವರ ನೇತೃತ್ವ | |
| 10.03.2020<br>ಮಂಗಳವಾರ | ರಾತ್ರಿ<br>8.30 ರಿಂದ 12.00 | ಶ್ರೀ ಅಮರನಾರೇಯಣಸ್ವಾಮಿ ಬ್ರಹ್ಮರಥೋತ್ಸವ ಪ್ರಯುಕ್ತ<br>ರಮಾದೇವಿ ಭಾಗವತಾರಿಣಿ, ಮದನಪಲ್ಲಿ | ಹರಿಕಥೆ |
| | 12.00 ರಿಂದ ಬೆ. 6.00 | ಹೆಚ್. ಗೊಲ್ಲಹಳ್ಳಿ ವೆಂಕಟಮುನಿಯಪ್ಪ ಮತ್ತು ತಂಡದವರಿಂದ | ಬುರ್ರಕಥೆ |
| 10.03.2020<br>ಮಂಗಳವಾರ | ರಾತ್ರಿ<br>8.30 ರಿಂದ 12.00 | ಶ್ರೀ ಯೋಗಿನಾರೇಯಣ ತಾತಯ್ಯನವರ ಬ್ರಹ್ಮರಥೋತ್ಸವ<br>ಮಂಜುಳಾ ಭಾಗವತಾರಿಣಿ, ಕೋಲಾರ | ಹರಿಕಥೆ |
| | 12.00 ರಿಂದ ಬೆ. 6.00 | ಶ್ರೀ ದಸ್ತಗಿರಿ ಸಾಬ್, ಕದಿರಿ | ಹರಿಕಥೆ |
| 14.03.2020<br>ಶನಿವಾರ | ಸಂಜೆ<br>5.00 ಗಂಟೆಗೆ | ನಾದಸುಧಾರಸ ತಂಡದವರಿಂದ | ಸಂಕೀರ್ತನೆ |
| 21.03.2020<br>ಶನಿವಾರ | ಸಂಜೆ<br>5.00 ಗಂಟೆಗೆ | ಜಿ. ಜಲಜಾ ಪ್ರಸಾದ್ ಮತ್ತು ತಂಡದವರಿಂದ<br>ಕರ್ನಾಟಕ ಶಾಸ್ತ್ರೀಯ ಸಂಗೀತ | |
| 28.03.2020<br>ಶನಿವಾರ | ಸಂಜೆ<br>5.00 ಗಂಟೆಗೆ | ಮಂಜುಳಾ ಜಗದೀಶ್ ಮತ್ತು ರೇಖಾ ವೀರಭದ್ರಾಚಾರ್<br>ಆರ್. ಜಗದೀಶ್ ಕುಮಾರ್, ಶಿಡ್ಲಘಟ್ಟ – ಪಿಟೀಲು | ಗಾಯನ |



ಬಾಲಕೃಷ್ಣ ಭಾಗವತರ್
ಸಂಯೋಜಕರು:
ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ

ಡಾ|| ಎಂ.ಆರ್. ಜಯರಾಮ್
ಧರ್ಮಾಧಿಕಾರಿಗಳು

## ಮಲ್ಲಾರ ಚಂದಾದಾರರಲ್ಲಿ ವಿನಂತಿ

ಮಲ್ಲಾರ ಕಛೇರಿಯಲ್ಲಿ ಹಂಚಿಕೆಯ ವಿಭಾಗದಿಂದ ಚಂದಾದಾರ/ಓದುಗರಿಗೆ 3ನೇ ದಿನಾಂಕದೊಳಗಾಗಿ ತಲುಪುವಂತೆ ಪತ್ರಿಕೆ ಕಳುಹಿಸಲಾಗುತ್ತಿದೆ. ಯಾವುದೇ ಕಾರಣದಿಂದ 10ನೇ ದಿನಾಂಕದೊಳಗಾಗಿ ತಲುಪದಿದ್ದರೆ ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಬೇಕು. ತಲುಪದ ಬಗ್ಗೆ ನಮ್ಮ ಕಛೇರಿಯ ಹಂಚಿಕೆ ವಿಭಾಗಕ್ಕೆ ಪೋಸ್ಟ್ ಕಾರ್ಡ್ ಮೂಲಕ 20ನೇ ದಿನಾಂಕದೊಳಗಾಗಿ ಲಿಖಿತವಾಗಿ ದೂರು ಸಲ್ಲಿಸಬೇಕು. ಪೋಸ್ಟ್ ಕಾರ್ಡ್‌ನಲ್ಲಿ ನಿಮ್ಮ ಗ್ರಾಹಕ ಸಂಖ್ಯೆ, ಸದಸ್ಯತ್ವ (ವಾರ್ಷಿಕ, ಪೋಷಕ ಇತ್ಯಾದಿ) ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ದೂರು ಬಂದ ನಂತರ ಆ ತಿಂಗಳ ಸಂಚಿಕೆಯನ್ನು ಮಾತ್ರ ನಂತರದ ತಿಂಗಳಿನ ಸಂಚಿಕೆಯೊಂದಿಗೆ ಪ್ರತ್ಯೇಕವಾಗಿ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇತರ ಹಳೆಯ ಸಂಚಿಕೆಗಳು ಲಭ್ಯವಿಲ್ಲ. ಅಂಚೆ ಅಧಿಕಾರಿಗಳನ್ನು ಸಂಪರ್ಕಿಸಲು ಅನುಕೂಲ ವಾಗುವಂತೆ ದೂರನ್ನು ಲಿಖಿತವಾಗಿ ಮಾತ್ರ ನೀಡಬೇಕಾಗಿ ವಿನಂತಿ: ಫೋನ್ ಕರೆ ಸಾಕಾಗುವುದಿಲ್ಲ. ಡಿ.ಡಿ./ಚೆಕ್‌ಗಳು 'Sri Yogi Nareyana Study Centre' ಹೆಸರಿನಲ್ಲಿ ಮಾತ್ರ ಕಳಿಸಬೇಕು; ಅಲ್ಲಿ ಬೇರೇನೂ ಇರಬಾರದು; ಕಾರ್ಯಾಲಯ ವಿಳಾಸಕ್ಕೆ ಕಳಿಸಬೇಕು.

ಸಂಪಾದಕರು.



ಕಾರ್ಯಕ್ರಮ ಉದ್ಘಾಟನೆ

# ಸಮದರ್ಶಿತ್ವದ ಸಿದ್ಧಿಯೇ ವೇದಾರ್ಥ

"ಆತ್ಮನು ಸರ್ವರಲ್ಲೂ ಸಮಾನವಾಗಿರುವುದರಿಂದ ಆತನನ್ನು ನೋಡುವುದೇ ಸಮದರ್ಶಿತ್ವ. ಸಮದರ್ಶಿತ್ವದ ಸಿದ್ಧಿಯೇ ವೇದಾರ್ಥ" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿಗಳಾದ ಡಾ. ಎಂ.ಆರ್. ಜಯರಾಮ್ ಅಭಿಪ್ರಾಯಪಟ್ಟರು.

ಗೌರಿಬಿದನೂರು ನಗರದ ಡಾ. ಹೆಚ್.ಎನ್. ಕಲಾಭವನದಲ್ಲಿ ಕೈವಾರ ಶ್ರೀಯೋಗಿನಾರೇಯಣ ಮಠದ ವತಿಯಿಂದ ಹಮ್ಮಿಕೊಳ್ಳಲಾಗಿದ್ದ ಧರ್ಮ ಚಿಂತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

"ವೇದಾರ್ಥವನ್ನು ಅರಿತುಕೊಂಡ ಯೋಗಿಗೆ ಎಲ್ಲ ಚರಾಚರ ಜೀವಗಳಲ್ಲೂ ಪರಮಾತ್ಮನ ಅಂಶವೇ ಗೋಚರಿಸುವುದರಿಂದ ಎಲ್ಲರಲ್ಲೂ ಭೇದವೆಣಿಸದೆ ಸಮದರ್ಶಿಯಾಗಿರುತ್ತಾನೆ. ದೇಹದಲ್ಲಿದ್ದರೂ ದೇಹದೊಡನೆ ಅಂಟಿಕೊಂಡಿರಬೇಕಾದ ಯಾವ ಸಂಬಂಧವೂ ಇಲ್ಲದಿರುವುದರಿಂದಲೇ ಜೀವಾತ್ಮನು ಅಂತ್ಯಕಾಲದಲ್ಲಿ ದೇಹವನ್ನು ತ್ಯಜಿಸಿ ಹೋಗುತ್ತಾನೆ, ಜಡದೇಹವು ಮಣ್ಣುಗೂಡುತ್ತದೆ. ಈ ಸತ್ಯವನ್ನು ಅರಿತುಕೊಂಡ ಜ್ಞಾನಿಯು ಯಾರಲ್ಲಿಯೂ ಭೇದ ಮಾಡದೆ ಎಲ್ಲರಲ್ಲಿಯೂ ಸಮಭಾವವನ್ನು ಕಾಣುತ್ತಾನೆ" ಎಂದರು.

"ಇತರರಲ್ಲಿ ಭೇದಭಾವವನ್ನು ಕಲ್ಪಿಸಿಕೊಂಡು, ತಾರತಮ್ಯ, ಮೇಲು-ಕೀಳು, ರಾಗದ್ವೇಷಗಳಿಂದ ವರ್ತಿಸಬಾರದು. ಈ ರೀತಿ ಭೇದ ಮಾಡುವುದರಿಂದ ಮತ್ತೆ ಮತ್ತೆ ಹುಟ್ಟು ಸಾವುಗಳ ಚಕ್ರದಲ್ಲಿ ಸಿಲುಕಬೇಕಾಗುತ್ತದೆ. ಪರಮಾತ್ಮನು ಸರ್ವವ್ಯಾಪಕನಾಗಿರುವುದರಿಂದ ಯಾರಲ್ಲೂ ಭೇದವೆಣಿಸದೆ ಎಲ್ಲರೂ ಒಂದೇ ಎಂಬ ಜ್ಞಾನವನ್ನು ಪಡೆಯುವುದೇ ವೇದಾರ್ಥದ ಸಾರಾಂಶ. ಬ್ರಹ್ಮವಿದ್ಯೆ, ಆತ್ಮ ಬೋಧನೆ ಎರಡೂ ಒಂದೇ. ವಿದ್ಯೆಗಳಲ್ಲೆಲ್ಲವೂ ಉನ್ನತವಾದ ವಿದ್ಯೆ ಬ್ರಹ್ಮವಿದ್ಯೆ" ಎಂದರು.

"ಯೋಗಿಗಳು ಅಂತರಂಗದಲ್ಲಿ ಸತ್ಯವನ್ನು ಕಂಡುಕೊಂಡು, ಅನುಭೂತಿಯನ್ನು ಹೊಂದಿ, ಜಗತ್ತಿಗೆ ಈ ಸತ್ಯವನ್ನು ಧಾರೆಯೆರೆದಿದ್ದಾರೆ. ಇವರ ಒಂದೊಂದು ಪದವನ್ನು ಅರ್ಥಮಾಡಿಕೊಳ್ಳುವುದು ಬಹಳ ಕಷ್ಟವಾಗುತ್ತದೆ. ಈ ಶರೀರವು ಪರಮಾತ್ಮನ ವಾಸಸ್ಥಳ. 84 ಲಕ್ಷ ಜೀವರಾಶಿಗಳಲ್ಲಿ ಜನ್ಮವೆತ್ತುತ್ತಾ, ಈಗ ಮಾನವ ಜನ್ಮ ಬಂದಿದೆ. ಈ ಮಾನವ ಜನ್ಮದಲ್ಲಿ ಏನಾದರೂ ಎಚ್ಚರ ತಪ್ಪಿ ನಡೆದರೆ, ಮತ್ತೆ ಮತ್ತೆ ಹುಟ್ಟು ಸಾವಿನ ಚಕ್ರದಲ್ಲಿ ಸಿಲುಕಬೇಕಾಗುತ್ತದೆ. ಇದಕ್ಕೆ ಮೂಲ ಕಾರಣ ಅಜ್ಞಾನ. ಈ ಸತ್ಯದ ಅರಿವನ್ನು ಪಡೆಯುವುದೇ ಸಾಕ್ಷಾತ್ಕಾರ. ಮಾಯೆಯು ಮಾನವರನ್ನು ಮೋಹ, ಆಶೆ, ಗರ್ವ, ದರ್ಪ, ಅಹಂಕಾರ, ಸಂಸಾರ ವ್ಯಾಮೋಹಗಳಿಂದ ಮುಕ್ತರಾಗಲು ಬಿಡುವುದಿಲ್ಲ. ಮನಸ್ಸು ಮಾಯೆಗೆ ಮರುಳಾಗಿ ಚಂಚಲವಾದ ಬುದ್ಧಿಯನ್ನು ಹೊಂದುತ್ತದೆ. ಮಾಯೆಯು ಪರಮಾತ್ಮನ ಪಾದಗಳನ್ನು ಸ್ಥಿರವಾಗಿ ನೆನಪಿಸಿಕೊಳ್ಳಲು ಸಾಧ್ಯವಾಗದಂತೆ ಮಾಡುತ್ತಿದೆ. ಹುಟ್ಟು ಸಾವುಗಳ ಚಕ್ರದಿಂದ ತಪ್ಪಿಸಿಕೊಳ್ಳಲು ಕೈವಾರದ ತಾತಯ್ಯನವರು ಹಲವಾರು ಅಂತರಂಗದ ಸತ್ಯಗಳನ್ನು ಹೇಳಿದ್ದಾರೆ. ಅದನ್ನು ಅನುಸರಿಸಿ ಕರ್ಮಗಳನ್ನು ನಾಶಪಡಿಸಿಕೊಂಡು ಜೀವನ್ಮುಕ್ತನಾಗಬೇಕು ಎಂಬುದೇ ಧರ್ಮ ಚಿಂತನೆಯ ಆಶಯ" ಎಂದರು.

**ಋಷಿಗಳ ತಪಸ್ಸಿನ ಫಲ:** "ಋಷಿಗಳ ತಪಸ್ಸಿನ ಫಲ ಎಂತಹುದು ಎಂಬುದನ್ನು ಈ ಘಟನೆಯಿಂದ ನಾವು ಮನವರಿಕೆ ಮಾಡಿಕೊಳ್ಳಬಹುದಾಗಿದೆ. ಪರೀಕ್ಷಿತ್ ಮಹಾರಾಜ ರಾಜ್ಯವಾಳುತ್ತಿದ್ದಾನೆ. ಒಮ್ಮೆ ಅರಣ್ಯದಲ್ಲಿ ಭೇಟೆಯಾಡಲು ಹೋಗಿದ್ದಾನೆ. ಆ ಸಮಯದಲ್ಲಿ ಬಾಯರಿಕೆಯಾಗಿದೆ. ಬಾಯರಿಕೆಯಾದ ಸಂದರ್ಭದಲ್ಲಿ ಅಲ್ಲಿಯೇ ಕಂಡ



ಧರ್ಮಾಧಿಕಾರಿಗಳಿಂದ ಧರ್ಮ ಸಂದೇಶ

ಶಮೀಕ ಋಷಿಮುನಿಗಳ ಆಶ್ರಮವನ್ನು ಹೊಕ್ಕಿದ್ದಾನೆ. ಅಲ್ಲಿ ನೋಡಿದರೆ ಶಮೀಕ ಋಷಿಗಳು ತಪಸ್ಸಿನಲ್ಲಿದ್ದಾರೆ. ಅವರನ್ನು ಪರೀಕ್ಷಿತ್ ರಾಜ, 'ನನಗೆ ದಾಹವಾಗಿದೆ ನೀರು ಬೇಕು' ಎಂದು ಕೇಳುತ್ತಿದ್ದಾನೆ. ಆದರೆ ಆ ತಪಸ್ವಿಯು ಸಂಪೂರ್ಣ ಅಂತರ್ಮುಖಿಯಾಗಿ ಧ್ಯಾನಸಕ್ತನಾಗಿ ತಲ್ಲೀನನಾಗಿದ್ದಾನೆ, ಪರೀಕ್ಷಿತ್ ಮಹಾರಾಜನ ಮಾತು ಕೇಳುತ್ತಿಲ್ಲ. ರಾಜನಿಗೆ ಶಮೀಕ ಋಷಿಯ ಈ ನಡೆ ಕೋಪವನ್ನು ತರಿಸುತ್ತದೆ. ರಾಜನಿಗೆ ಸಹನೆ ಇಲ್ಲ. ಪರೀಕ್ಷಿತ್ ರಾಜ ಅಹಂಕಾರದಿಂದ ಅಲ್ಲಿಯೇ ಸತ್ತು ಬಿದ್ದಿದ್ದ ಹಾವನ್ನು ತಂದು ಶಮೀಕ ಋಷಿಯ ಕೊರಳಿಗೆ ಹಾಕಿ ಅಲ್ಲಿಂದ ಹೊರಟುಹೋಗುತ್ತಾನೆ.

ಶಮೀಕ ಋಷಿಯ ಮಗನಾದ ಶೃಂಗಋಷಿ ಆಶ್ರಮಕ್ಕೆ ಬಂದು, ತಂದೆಯ ಕೊರಳಲ್ಲಿ ಇರುವ ಸತ್ತ ಹಾವನ್ನು ನೋಡುತ್ತಾನೆ. ಬಹಳ ಸಿಟ್ಟು ಬರುತ್ತದೆ. ಆಗ ಶೃಂಗಋಷಿ, 'ನನ್ನ ತಂದೆಯ ಕೊರಳಿಗೆ ಸತ್ತ ಸರ್ಪವನ್ನು ಹಾಕಿರುವವರು ಯಾರೇ ಆಗಿರಲಿ ಅವರು ಇನ್ನು 7 ದಿನಗಳಲ್ಲಿ ಸರ್ಪವು ಕಚ್ಚಿ ಸಾಯಲಿ' ಎಂದು ಶಾಪವನ್ನು ನೀಡುತ್ತಾನೆ. ಆಗ ಶಮೀಕ ಋಷಿಗೆ ಎಚ್ಚರವಾಗಿ ಈ ವಿಷಯವನ್ನು ರಾಜನಿಗೆ ತಿಳಿಸುವಂತೆ ಹೇಳುತ್ತಾನೆ. ಪರೀಕ್ಷಿತ ರಾಜನಿಗೆ ವಿಚಾರ ತಿಳಿಯುತ್ತದೆ. ಆಗ ರಾಜ ತನ್ನ ಮಗನಿಗೆ ರಾಜ್ಯಭಾರವನ್ನು ನೀಡಿ ತಾನು ಅರಣ್ಯಕ್ಕೆ ಹೋಗುತ್ತಾನೆ. ಅಲ್ಲಿ ಕೆಲವರು ಈ ಸಮಯದಲ್ಲಿ, 'ಯೋಗಿಗಳಾಗಿ ತಪಸ್ಸನ್ನು ಮಾಡಿ ಎನ್ನುತ್ತಿದ್ದಾರೆ, ಕೆಲವರು ಧ್ಯಾನವನ್ನು ಮಾಡಿ ಎನ್ನುತ್ತಿದ್ದಾರೆ.' ಆ ಸಮಯದಲ್ಲಿ ಶುಕ ಮಹರ್ಷಿಗಳು ಬರುತ್ತಿದ್ದಾರೆ. ಆಗ ಪರೀಕ್ಷಿತ್ ಮಹಾರಾಜ ಶುಕ ಮಹರ್ಷಿಗಳಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, 'ನಾನು 7 ದಿನಗಳಲ್ಲಿ ಮರಣವನ್ನು ಹೊಂದುತ್ತಿದ್ದೇನೆ. ಈ ಸಮಯದಲ್ಲಿ ನಾನು ಏನು ಮಾಡಬೇಕು ದಿಕ್ಕುತೋಚದಂತಾಗಿದೆ, ದಾರಿತೋರಬೇಕು' ಎಂದಾಗ ಶುಕಮಹರ್ಷಿಗಳು, 'ನಿನಗೆ ನಾನು 7 ರಾತ್ರಿ, ಹಗಲು ಊಟ, ನಿದ್ದೆಯನ್ನು ಬಿಟ್ಟು ಭಾಗವತವನ್ನು ಬೋಧಿಸುತ್ತೇನೆ' ಎಂದು ಭಾಗವತವನ್ನು ಬೋಧಿಸುತ್ತಾ ಕೊನೆಯ ಘಟ್ಟಕ್ಕೆ ಬಂದಿದ್ದಾರೆ. ಶ್ರೀಕೃಷ್ಣ ಪರಮಾತ್ಮನು, 'ನನ್ನ ಸಮಯ ಬಂತು ನಾನು ಹೋಗುತ್ತಿದ್ದೇನೆ. ಇನ್ನೇನು ದ್ವಾರಕಾಪಟ್ಟಣ ಮುಳುಗುತ್ತದೆ' ಎಂದು ಉದ್ದವನಿಗೆ ಹೇಳುತ್ತಿದ್ದಾರೆ. ಆಗ ಉದ್ದವ, 'ಪರಮಾತ್ಮ ನಿನ್ನನ್ನು ಬಿಟ್ಟು ನಾನಿರಲಾರೆ, ನನ್ನನ್ನು ನಿನ್ನ ಜೊತೆ ಕರೆದುಕೊಂಡು ಹೋಗು' ಎನ್ನುತ್ತಾನೆ. ಆಗ ಶ್ರೀಕೃಷ್ಣ ಪರಮಾತ್ಮನು ಆತ್ಮಬೋಧೆಯನ್ನು ಮಾಡುತ್ತಾನೆ. 'ನೀನು ಇದನ್ನು ಸಾಧನೆ ಮಾಡು, ಎಲ್ಲ ಕರ್ಮಗಳನ್ನು ನಾಶ ಮಾಡುವ ಶಕ್ತಿ ಈ ಆತ್ಮಬೋಧೆಗಿದೆ. ನಿನಗೆ ಇದರಿಂದ ಮೋಕ್ಷ ಸಿಗುತ್ತದೆ' ಎನ್ನುತ್ತಾನೆ. ಈ ಆತ್ಮವಿದ್ಯೆಯನ್ನು, 'ನಾಸ್ತಿಕರಿಗೆ, ನಟನೆ ಮಾಡುವವನಿಗೆ, ಅಹಂಕಾರದಲ್ಲಿ ಮೆರೆಯುವವನಿಗೆ, ಮೋಸ ಮಾಡುವವರಿಗೆ, ಯೋಗ ಭಕ್ತಿಯನ್ನು ಖಂಡಿಸುವವರಿಗೆ ಹೇಳಬೇಡ' ಎನ್ನುತ್ತಾನೆ. ಅಲ್ಲಿಯವರೆಗೂ ಏಕಾಗ್ರತೆಯಿಂದ ಭಾಗವತವನ್ನು ಕೇಳಿದ ಪರೀಕ್ಷಿತ್ ಮಹಾರಾಜ ಸೂಕ್ಷ್ಮ ಶರೀರದಿಂದ ಪರಮಾತ್ಮನನ್ನು ಐಕ್ಯವಾಗುತ್ತಾನೆ. ಇಲ್ಲಿ ಗುರುವಾಗಿ ಶುಕ ಮಹರ್ಷಿಗಳು ಬಂದು ಪರೀಕ್ಷಿತ್ ರಾಜನನ್ನು ಮೋಕ್ಷಕ್ಕೆ ತಲಪಿಸುತ್ತಾರೆ. ಇದು ಗುರು ಮಾಡುವ ಕೆಲಸ" ಎಂದು ಹೇಳುತ್ತಾ ಭಾಗವತದ ಈ ಪ್ರಸಂಗವನ್ನು ಸಭೆಗೆ ಮನಮುಟ್ಟುವಂತೆ ವಿವರಿಸಿದರು.





ಡಾ. ಬಾಬು ಕೃಷ್ಣಮೂರ್ತಿ ಅವರಿಂದ ಧರ್ಮಸಂದೇಶ

# ಭಗವಂತ ದೀನರ ಸ್ವತ್ತು

ಹಿರಿಯ ಅಧ್ಯಾತ್ಮ ಚಿಂತಕ ಡಾ. ಬಾಬುಕೃಷ್ಣಮೂರ್ತಿರವರು ಮಾತನಾಡುತ್ತಾ, "ಭಾರತದ ಸನಾತನ ಪರಂಪರೆಯು ಸಾಧು ಧರ್ಮವನ್ನು ಪಾಲಿಸಬೇಕು. ಮಾನವರ ಅಹಂಕಾರವನ್ನು ನಿಯಂತ್ರಿಸಲು ಗುರುಗಳ ಉಪದೇಶ ಬಹಳ ಮುಖ್ಯ. ಹಿಂದೆ ಮಹಾರಾಜರಿಗೆ ರಾಜಗುರುಗಳು ಧರ್ಮದಂಡವನ್ನು ತಲೆಯ ಮೇಲೆ ಹಿಡಿದು ಧರ್ಮ ಬೋಧನೆ ಮಾಡುತ್ತಿದ್ದರು. ರಾಮಾಯಣ, ಮಹಾಭಾರತ ಗ್ರಂಥಗಳು ಜೀವಂತ ಗ್ರಂಥಗಳು. ಭಾರತೀಯರ ನರನಾಡಿಯಲ್ಲಿ ಈ ಗ್ರಂಥಗಳು ಮಿಳಿತವಾಗಿದೆ" ಎಂದರು.

"ತಾತಯ್ಯನವರು ಅಮರನಾರೇಯಣ ಶತಕದಲ್ಲಿ ಭಗವಂತನಾದ ಶ್ರೀರಾಮನಾಮದ ಹಲವಾರು ಪದ್ಯದಲ್ಲಿ ಬೋಧನೆ ಮಾಡಿದ್ದಾರೆ. ಶ್ರೀರಾಮನ ನಾಮಸ್ಮರಣೆ ಮಾಡುತ್ತಾ ಮನಸ್ಸಿನಲ್ಲಿ ಶ್ರೀರಾಮರೂಪನಾದ ಪರಮಾತ್ಮನನ್ನು ಹುಡುಕಬೇಕು. ಇಲ್ಲಿ ತ್ರಿಕರಣಗಳ ಪೈಕಿ ಒಂದಾಗಿರುವ ಮನಸ್ಸಿನ ಶುದ್ಧಿಯ ಬಗ್ಗೆ ಹೇಳುತ್ತಾರೆ. ಪ್ರಪಂಚದಲ್ಲಿ ರಾಮಸ್ಮರಣೆ ಮಾಡುವವರಿಗೆ ಕೊರತೆಯೇನೂ ಇಲ್ಲ. ಆದರೆ ಸ್ಮರಣೆ ಮಾಡುತ್ತ ಮನಸ್ಸಿನಲ್ಲಿ ಹುಡುಕುವವರು ಕಡಮೆ. ಶ್ರೀರಾಮನ ನಾಮವು ಜಿಹ್ವೆಗೆ ಬಹಳ

ರುಚಿ. ರಾಘವನಾಮಜಪ ಸದಾ ಮಾಡುತ್ತಿರಬೇಕು. ಜಗನ್ನಾಥನಾದ ಜಯ ಸೀತಾರಾಮನ ಭಜನೆ ಮಾಡುತ್ತಿರಬೇಕು ಎನ್ನುತ್ತಾರೆ. ಶ್ರೀರಾಮನೇ ದೀನರ ಸ್ವತ್ತು. ನಾನೇ ಶೂರನೆಂಬ ಅಹಂಕಾರದ ದೊಡ್ಡಸ್ತಿಕೆ ಬಿಟ್ಟು, ದೀನನಾಗಿ ಭಗವಂತನಿಗೆ ಶರಣಾಗಬೇಕು. ಎಷ್ಟೋ ಶೂರನಾದರೂ ಹುಟ್ಟುಸಾವುಗಳ ಭಯ, ಅನಿರೀಕ್ಷಿತವಾದ ದಾರಿದ್ರ್ಯ ದುಃಖಗಳ ಭಯ ಇರುವುದರಿಂದ ಮಾನವರು ದೀನರೇ ಹೊರತು ಶೂರರಲ್ಲ. ತಾತಯ್ಯನವರು ಭಗವಂತನಾದ ಅಮರನಾರೇಯಣಸ್ವಾಮಿಗೆ ಆತ್ಮಸಮರ್ಪಣೆ ಮಾಡಿ ಅಮರನಾರೇಯಣ ಶತಕವನ್ನು ಬರೆದಿದ್ದಾರೆ. ನವವಿಧ ಭಕ್ತಿಗಳಲ್ಲಿ ಆತ್ಮನಿವೇದನೆ ಒಂದು. ಮಾತು-ಮನಸ್ಸು-ಕೃತ್ಯಗಳಿಂದ ದೇವರನ್ನು ಉಪಾಸಿಸಿದ ಭಕ್ತರಿಗೆ ದೇವರು ಒಲಿದು ಅನುಗ್ರಹಿಸುತ್ತಾನೆ" ಎಂದರು.

ಕಾರ್ಯಕ್ರಮಕ್ಕೂ ಮೊದಲು ಶ್ರೀಶಾರದಾ ಶಂಕರ ಮಠದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ಅನಂತರ ಕಲಶಗಳನ್ನು ಹೊತ್ತ ಮಹಿಳೆಯರೊಂದಿಗೆ ನಾದಸ್ವರ, ಭಜನೆಯೊಂದಿಗೆ ದೇವಾಲಯದಿಂದ ಕಾರ್ಯಕ್ರಮ ನಡೆಯುವ ಸ್ಥಳದವರೆಗೂ ಶೋಭಾಯಾತ್ರೆಯಲ್ಲಿ ಬರಲಾಯಿತು. ನಗರಸಭಾ ಸದಸ್ಯ ಕೆ.ಎಸ್. ಅನಂತರಾಜು ಸ್ವಾಗತಿಸಿದರು. ಉಪನ್ಯಾಸಕ ವೆಂಕಟರಮಣಪ್ಪ ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್‌ರವರು ವಂದಿಸಿದರು. ವಿದೂಷಿ ವಿಜಯಲಕ್ಷ್ಮಿ ತಂಡದವರು ಪ್ರಾರ್ಥಿಸಿದರು. ಶಿಕ್ಷಕ ಪ್ರಕಾಶ್ ನಿರೂಪಿಸಿದರು. ಅನ್ನಮಯ್ಯ ಗಾನಯಜ್ಞ ತಂಡದ ಕಲಾವಿದರಿಂದ ಸಾಮೂಹಿಕ ಗಾಯನ ಹಾಗೂ ಕೋಲಾಟವನ್ನು ಹಾಗೂ ದಿಕ್ಸೂಚಿನಾಟ್ಯ

ಕಾರ್ಯಕ್ರಮಕ್ಕೆ ಮೆರಗು ತಂದ ಭರತನಾಟ್ಯ


ತಂಡದವರಿಂದ ಭರತನಾಟ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಭಕ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು. ಜಿಲ್ಲಾ ಪಂಚಾಯತಿ ಅಧ್ಯಕ್ಷರಾದ ಚಿಕ್ಕನರಸಿಂಹಯ್ಯ, ನಗರಸಭಾ ಸದಸ್ಯರುಗಳಾದ ಕೆ.ಎಸ್. ಅನಂತರಾಜು, ರಮೇಶ್, ಮೋಹನ್, ತಾಲ್ಲೂಕು ಪಂಚಾಯತಿ ಅಧ್ಯಕ್ಷರಾದ ಲೋಕೇಶ್, ಮಾಜಿಪುರಸಭೆ ಅಧ್ಯಕ್ಷ ನರಸಿಂಹಮೂರ್ತಿ, ಬ್ರಾಹ್ಮಣ ಸಂಘದ ಅಧ್ಯಕ್ಷ ವೆಂಕಟನಾರಾಯಣ್, ಸವಿತ ಸಮಾಜದ ಶಿವಕುಮಾರ್, ಕಸಾಪ ಮಾಜಿ ಅಧ್ಯಕ್ಷರಾದ ವೀರಣ್ಣ, ಶಿಕ್ಷಕರ ಸಂಘದ ಕಾರ್ಯದರ್ಶಿ ರಾಮ್‌ಬಾಬು ಮುಂತಾದವರು ಉಪಸ್ಥಿತರಿದ್ದರು. ಭಕ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಹಲವಾರು ಸಂಘ ಸಂಸ್ಥೆಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.


## ಶ್ರೀಯೋಗಿನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ

## ಈ ತಿಂಗಳ ಧರ್ಮ ಚಿಂತನೆ ಕಾರ್ಯಕ್ರಮ

ಸ್ಥಳ: ಶ್ರೀ ಯೋಗಿನಾರೇಯಣ ದೇವಸ್ಥಾನ, ವಿನಾಯಕ ನಗರ, ಮುನಿಯಪ್ಪ ಲೇಔಟ್, ಪಾವಗಡ ಟೌನ್, ತುಮಕೂರು ಜಿಲ್ಲೆ

ದಿನಾಂಕ 14 ಮಾರ್ಚ್ 2020
ಶನಿವಾರ ಸಂಜೆ 5.30 ಗಂಟೆಗೆ

ಸರ್ವರಿಗೂ ಆದರದ ಸುಸ್ವಾಗತ





ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

## ಚಂದಾ ಪತ್ರಕ

**ನೀವು ಚಂದಾದಾರರಾಗಿ ! ನಿಮ್ಮ ಬಂಧು ಮಿತ್ರರನ್ನು ಚಂದಾದಾರರನ್ನಾಗಿ ಮಾಡಿ !**

**ಕೈವಾರ ಶ್ರೀ ಯೋಗಿ ನಾರೇಯಣರ** ವಿಚಾರಗಳಿಂದ ಪ್ರೇರಣೆ ಪಡೆದು, ಭಾರತೀಯ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಕುರಿತು ಅಪೂರ್ವ ಮಾಹಿತಿಯನ್ನು ನೀಡುತ್ತಿರುವ ಜನಪ್ರಿಯ ಮಾಸಪತ್ರಿಕೆ **ಮಲ್ಲಾರ**. ಸುಲಭ ಬೆಲೆಯ ಸಮೃದ್ಧ ಸಾಹಿತ್ಯದ ರೂವಾರಿ ಮಲ್ಲಾರ.

ಮಲ್ಲಾರ ಚಂದಾದಾರರಾಗಲು ಕೆಳಗಿನ ಪತ್ರಕವನ್ನು ತುಂಬಿ 'Sri Yogi Nareyana Study Centre' ಹೆಸರಿನಲ್ಲಿ ಡಿಡಿ ಅಥವಾ ಚೆಕ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಚಂದಾದಾರರಾಗಿ

For Subscription - Bank Transfer/ RTGS:
Sri Yogi Nareyana Study Centre
SB A/c No. 141201011016824,
IFSC Code: VIJB0001412.
After Transfer Please Contact No. 94480 85975

**ಮಲ್ಲಾರ ಕಳುಹಿಸಬೇಕಾದ ನನ್ನ ವಿಳಾಸ**

ಹೆಸರು:..........................................................

ವಿಳಾಸ:..........................................................

..........................................................

..........................................................

ಪಿನ್ ಕೋಡ್ ಸಂಖ್ಯೆ: ..........................................

ಮೊಬೈಲ್ /ಫೋನ್:..........................................

☐ **ಆಜೀವ ಚಂದಾ ರೂ.** 1500/-
☐ **5 ವರ್ಷಗಳ ಚಂದಾ ರೂ.** 500/-
☐ **ವಾರ್ಷಿಕ ಚಂದಾ ರೂ.** 140/-

ನಾನು ಡಿಡಿ /ಚೆಕ್ /ಮನಿಯಾರ್ಡರ್ ಮೂಲಕ

(ಚೆಕ್ /ಡಿಡಿ ಸಂ..........................................

ಬ್ಯಾಂಕ್..........................................)

ಚಂದಾ ಹಣವನ್ನು ಕಳುಹಿಸಿದ್ದೇನೆ.

**ಸಹಿ** /-

**ನಿರ್ವಾಹಕ ಸಂಪಾದಕರು**
ಮಲ್ಲಾರ ಮಾಸಪತ್ರಿಕೆ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ, ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–560 054.

**ಜಾಹೀರಾತು ನೀಡಲು ಮತ್ತು ಚಂದಾದಾರರಾಗಲು ಸಂಪರ್ಕಿಸಿ**
**ಮೊ: 9916854885**

"ಅಂತರಂಗದ ಗೆಲುವು ಸಂನ್ಯಾಸದ ಮೂಲ ಲಕ್ಷಣ. ಮನಸ್ಸಿನಲ್ಲಿ ಸಂನ್ಯಾಸಿಯಾಗಬೇಕು" ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್‌ರವರು ಅಭಿಪ್ರಾಯಪಟ್ಟರು.

ಕೈವಾರದ ಶ್ರೀಯೋಗಿನಾರೇಯಣ ಮಠದ ವತಿಯಿಂದ ಚಿಂತಾಮಣಿ ತಾಲೂಕು ಕಸಬಾ ಕಲ್ಲಹಳ್ಳಿ ಗ್ರಾಮದ ಶ್ರೀಆಂಜನೇಯಸ್ವಾಮಿ ದೇವಾಲಯದಲ್ಲಿ ಆಯೋಜಿಸಲಾಗಿದ್ದ ಆತ್ಮಬೋಧಾಮೃತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

# ಅಂತರಂಗದ ಗೆಲುವು ಸಂನ್ಯಾಸದ ಲಕ್ಷಣ


ಕಲ್ಲಹಳ್ಳಿ ಶ್ರೀ ಆಂಜನೇಯಸ್ವಾಮಿ

"ಗುರು ಉಪದೇಶದಿಂದ ಆತ್ಮಪ್ರಕಾಶವೆಂದು ಸಾರಿರುವ ಕೈವಾರದ ತಾತಯ್ಯನವರು ಅಂತರಂಗದ ಸಾಧಕ ಋಷಿಮುನಿಗಳು. ಪ್ರಾಣಶಕ್ತಿಯನ್ನು ಕೊಟ್ಟು ಜೀವವನ್ನು ಸೃಷ್ಟಿಸುವ ಶಕ್ತಿಯನ್ನು ತಾತಯ್ಯನವರು ಪಡೆದಿದ್ದರು. ತಾತಯ್ಯನವರು ಪ್ರತಿಯೊಬ್ಬ ಮಾನವರಿಗೂ ಅನುಕೂಲವಾಗುವಂತೆ ಸರಳವಾದ ಭಾಷೆಯಲ್ಲಿ ಆತ್ಮಬೋಧನೆಯನ್ನು ಮಾಡಿದ್ದಾರೆ. ಆತ್ಮವಿಚಾರದ ಚಿಂತನೆಯನ್ನು ಮಾಡಿ ಜ್ಞಾನವನ್ನು ಗಳಿಸಿಕೊಳ್ಳಬೇಕು. ಆತ್ಮಚಿಂತನೆಯಿಂದ ಮಾನವನು ಮುಕ್ತಿಯೆಡೆಗೆ ತಲಪಲು ಸಾಧ್ಯವಿದೆ. ಹಿಂದಿನ ಜನ್ಮಗಳಲ್ಲಿ ಮಾಡಿರುವ ಕರ್ಮಗಳೂ ಸಹ ಗುರುಕೃಪೆಯಿಂದ ನಾಶವಾಗುತ್ತದೆ. ಪ್ರತಿನಿತ್ಯವೂ ಬಿಡದೆ ನಿರಂತರವಾಗಿ ಗುರುಗಳ ಸ್ಮರಣೆಯನ್ನು ಮಾಡಬೇಕು" ಎಂದರು.

"ಮೋಕ್ಷವು ಬೇಕಾದರೆ ಮೊದಲನೆಯದಾಗಿ ವಿರಾಗಿಯಾಗಬೇಕು. ವೈರಾಗ್ಯವು ಮೋಕ್ಷದ ಮೊದಲ ಮೆಟ್ಟಿಲು. ವೈರಾಗ್ಯವು ಬಾಹ್ಯವಾದ ಕೇವಲ ತೋರಿಕೆಯ ತ್ಯಾಗದಿಂದ ಸಿದ್ಧಿಸುವುದಿಲ್ಲ. ವೈರಾಗ್ಯವು ಮನಸ್ಸಿನಿಂದ ಬರಬೇಕು. ಸಂಸಾರವನ್ನು ತ್ಯಜಿಸುವುದರಿಂದ ಸಂನ್ಯಾಸಿಗಳಾದೆವೆಂದು ಭಾವಿಸಿದರೆ ತಪ್ಪಾಗುತ್ತದೆ. ಕೇವಲ ಸಂಸಾರ, ಪುತ್ರ, ಬಂಧುಬಳಗವನ್ನು ಬಿಡುವುದರಿಂದ ಮಾತ್ರವೇ ವೈರಾಗ್ಯ ಬರುವುದಿಲ್ಲ. ಮನಸ್ಸಿನಲ್ಲಿ ಅವುಗಳ ಮೇಲಿನ ಆಸಕ್ತಿಯನ್ನು ಮನಸ್ಸಿನಲ್ಲಿ ಬಿಡದಿದ್ದರೆ ತೋರಿಕೆಯ ವಿರಾಗಿಯಾಗಿ ಹುಟ್ಟು–ಸಾವುಗಳ ಪ್ರಪಂಚದಲ್ಲೇ ಅಲೆದಾಡಿ ನರಳಬೇಕಾಗುತ್ತದೆ. ಎಲ್ಲವನ್ನೂ ಬಿಡಬಹುದು ಆದರೆ ಮನಸ್ಸಿನಲ್ಲಿ ಆಸೆಗಳನ್ನು ಬಿಡುವುದು ಕಷ್ಟ. ಹಾಗೇ ಬಿಡುವುದೇ ವೈರಾಗ್ಯ" ಎಂದರು.

**ನಾಮಸ್ಮರಣೆಯೇ ಶ್ರೇಷ್ಠ:** "ನಾಮಸ್ಮರಣೆಗೆ ತಾತಯ್ಯನವರು ಬಹಳ ಸುಲಭವಾದ ವಿಧಾನವನ್ನು ತಿಳಿಸಿಕೊಟ್ಟಿದ್ದಾರೆ. ಅದೇನೆಂದರೆ ರಾಮ, ರಾಮ, ರಾಮ ಎಂದು ಹೇಳಿದರೆ ಸಾಕು ಎಷ್ಟೋ ಜನ್ಮಗಳಿಂದ ಬಂದಿರುವ ಪಾಪಗಳನ್ನು ನಾಶಮಾಡಬಹುದು. ಇನ್ನು ಸುಲಭವಾಗಿ ರಾಮ ರಾಮ ಮುಕುಂದ ಮಾಧವ ರಾಮ ಸದ್ಗುರು ಕೇಶವ ರಾಮ ದಶರಥತನಯದೇವಾ ರಾಮ ಶ್ರೀ ನಾರೇಯಣ ಎಂದು ಹೇಳಿದರೆ ಸಾಕು ಇಷ್ಟರಲ್ಲಿ 10 ಬಾರಿ ಪರಮಾತ್ಮನನ್ನು ಸ್ಮರಿಸಿದ್ದೇವೆ, ಇದನ್ನೇ 108 ಸಲ ಪಠಿಸಿದರೆ 1080 ಸಲ ಪರಮಾತ್ಮನ ನಾಮ ಜಪಿಸಿದಂತೆ, ಜಪಿಸಿದಂತೆ ನಾಮ ಮಂತ್ರವಾಗುತ್ತದೆ. ಮಂತ್ರಶಕ್ತಿ ಏರ್ಪಡುತ್ತದೆ. ಈ ಮಂತ್ರಶಕ್ತಿಯು ಅಂತರಂಗಕ್ಕೆ ಕರೆದುಕೊಂಡು ಹೋಗುತ್ತದೆ. ಮನಸ್ಸು ಮತ್ತು ದೃಷ್ಟಿ ಒಂದೇ ಆದಾಗ ಮಾತ್ರ ಅಂತರಂಗಕ್ಕೆ ಹೋಗಲು ಸಾಧ್ಯ. ಪ್ರತಿಯೊಬ್ಬರ ಜೀವನದಲ್ಲಿ ಗುರುವಿನ ಪಾತ್ರ ಮಹತ್ತರವಾದುದು. ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿ, ಜ್ಞಾನದ ಬೆಳಕನ್ನು ನೀಡಿ, ನಿಶ್ಚಲವಾದ ಮನಸ್ಸನ್ನು ಗುರು ನೀಡುತ್ತಾನೆ ಎಂದು ತಾತಯ್ಯನವರು ತಿಳಿಸಿದ್ದಾರೆ" ಎಂದು ಹೇಳುತ್ತಾ ಹಲವಾರು ತಾತಯ್ಯನವರ ಕೀರ್ತನೆಗಳನ್ನು ಉದಾಹರಿಸಿದರು.

## ಮರುಸೃಷ್ಟಿ ಮಾಡಿದ ಯೋಗಿ ತಾತಯ್ಯನವರು:

"ತಾತಯ್ಯನವರು ಪ್ರತಿನಿತ್ಯ ಬ್ರಾಹ್ಮೀ ಮೂಹೂರ್ತದಲ್ಲಿ ಪೂಜಾ ಕೈಂಕರ್ಯವನ್ನು ಮುಗಿಸಿ, ಸೂರ್ಯ ನಮಸ್ಕಾರವನ್ನು ಮಾಡಲು ಹೊರಬಂದಾಗ ಪ್ರತಿನಿತ್ಯವೂ ಅರಳಿಮರದಲ್ಲಿ ಸ್ವಾಮಿಯ ವಾಹನವಾದ ಗರುಡಪಕ್ಷಿ ಬಂದು ದರ್ಶನವನ್ನು ನೀಡುತ್ತಿತ್ತು. ಇದನ್ನು ಕಂಡ ಕೆಲವು ಕಿಡಿಗೇಡಿ ಹುಡುಗರು, ತಾತಯ್ಯನವರನ್ನು ಅವಮಾನ ಮಾಡಬೇಕೆಂಬ ಉದ್ದೇಶದಿಂದ ಮರುದಿನ ಮರದಲ್ಲಿ ಮಣ್ಣಿನಿಂದ ಗರುಡಪಕ್ಷಿಯನ್ನು ತಂದು ಇಟ್ಟರು. ತಾತಯ್ಯನವರು ಎಂದಿನಂತೆ ಪೂಜೆಯನ್ನು ಮುಗಿಸಿ ಬಂದು ನಮಸ್ಕರಿಸಿದಾಗ ಮಣ್ಣಿನ ಗರುಡ ಪಕ್ಷಿಗೆ ಪ್ರಾಣ ಬಂದು ಹಾರಿಹೋಯಿತು. ಪಶ್ಚಾತ್ತಾಪ ಪಟ್ಟ ಹುಡುಗರು ಬಂದು ತಾತಯ್ಯನವರ ಪಾದಗಳಿಗೆ ನಮಸ್ಕರಿಸಿದರು. ಈ ಘಟನೆಯಿಂದ ನಾವು ತಿಳಿದುಕೊಳ್ಳುವುದೇನೆಂದರೆ ಯೋಗಿಯು



ಧರ್ಮಾಧಿಕಾರಿಗಳಿಂದ ಆತ್ಮಬೋಧೆ

ತಪಸ್ಸಿನ ಫಲದಿಂದ ಸೃಷ್ಟಿಕರ್ತನಾಗಿ, ಪ್ರಾಣ ನೀಡಿ

ಮರುಸೃಷ್ಠಿಯನ್ನು ಮಾಡುವ ಶಕ್ತಿಯನ್ನು ಹೊಂದಿರುತ್ತಾರೆ. ತಾತಯ್ಯನವರು ಸರ್ವವನ್ನೂ ತಿಳಿದವರು. ಆ ಮಕ್ಕಳ ಆಟವು ಗೊತ್ತಿತ್ತು. ಅವರ ವಿಶಾಲ ಹೃದಯದಿಂದ ಅವರನ್ನು ಕ್ಷಮಿಸಿ ಅವರಿಗೆ ಸನ್ಮಾರ್ಗದ ದಾರಿಯನ್ನು ತೋರಿದರು. ಇಂದಿಗೂ ನಾವು ತಾತಯ್ಯನವರು ಜೀವಸಮಾಧಿಸ್ಥರಾಗಿರುವ ದೇಗುಲದ ಎದುರಿಗೆ ಕೈವಾರದ ಬೆಟ್ಟದಲ್ಲಿ ಸ್ವಯಂ ನಿರ್ಮಿತವಾಗಿರುವ ಶಿಲಾಗರುಡವನ್ನು ಕಾಣಬಹುದು" ಎಂದರು.

**ಆತ್ಮಬೋಧನೆ ಜ್ಞಾನ ಭಂಡಾರ:** "ತಾತಯ್ಯನವರು ರಚಿಸಿರುವ ಆತ್ಮಬೋಧೆಯು ಭಗವದ್ಗೀತೆಯಿದ್ದಂತೆ. ಭಗವದ್ಗೀತೆಯಲ್ಲಿ ಬರುವ ಎಲ್ಲ ಯೋಗಗಳನ್ನು ಇದರಲ್ಲಿ ಆಡಕಮಾಡಿ ರಚಿಸಿದ್ದಾರೆ. ಆತ್ಮಬೋಧನೆ ಜ್ಞಾನಭಂಡಾರ. ವೇದಗಳು, ಉಪನಿಷತ್ತು, ಪುರಾಣಗಳ ಸಾರವನ್ನು ಈ ಆತ್ಮಬೋಧನೆಯಲ್ಲಿ ತಾತಯ್ಯನವರು ತಿಳಿಸಿಕೊಟ್ಟಿದ್ದಾರೆ. ಧರ್ಮ ಯಾವುದು? ಅಧರ್ಮ ಯಾವುದು? ಎಂಬುದನ್ನು ಸ್ಪಷ್ಟವಾಗಿ ತಾತಯ್ಯನವರು ತಿಳಿಸಿಕೊಟ್ಟಿದ್ದಾರೆ. ಈ ಒಂದು ಜನ್ಮದ ಚಿಂತೆಯನ್ನು ಮಾತ್ರ ಮಾಡಬೇಡಿ. ಹಿಂದೆ ನೋಡಿ, ನಾವೆಷ್ಟು ಜನ್ಮಗಳನ್ನು ಎತ್ತಿದ್ದೇವೆಯೋ ಯಾರಿಗೆ ಗೊತ್ತು. ಈ ಹುಟ್ಟು ಸಾವುಗಳ ಚಕ್ರದಲ್ಲಿ ಸಿಲುಕದೆ, ಮತ್ತೆ ಮತ್ತೆ ಹುಟ್ಟಿ ಸಾಯುವ ಸ್ಥಿತಿಯಿಂದ ಮುಕ್ತರಾಗಬೇಕಾದರೆ ಪ್ರತಿಯೊಬ್ಬರಿಗೂ ಈ ಆತ್ಮಬೋಧನೆ ಅಗತ್ಯವಾಗಿದೆ. ಮಾನವನು ಅಜ್ಞಾನದಿಂದ ಹೊರಬರಲು ಬೇಕಾಗಿರುವ ಸಾಮಗ್ರಿಗಳು ಆತ್ಮಬೋಧೆಯಲ್ಲಿದೆ. ಅಂತರಂಗಕ್ಕೆ ತಾತಯ್ಯನವರು ನೀಡಿರುವ ಬೋಧನೆಯೇ ಆತ್ಮಬೋಧನೆ. ಆತ್ಮಬೋಧನೆಯ ವಿಚಾರಗಳನ್ನು ಸಭೆಗೆ ತಿಳಿಸುತ್ತಾ, ಆತ್ಮಪೂಜೆಯನ್ನು ವಿಸ್ತಾರವಾಗಿ ತಿಳಿಸಿದರು."

ಕಾರ್ಯಕ್ರಮಕ್ಕೂ ಮೊದಲು ಗ್ರಾಮದಲ್ಲಿರುವ ಶ್ರೀ ಆಂಜನೇಯಸ್ವಾಮಿ ದೇವಾಲಯದವರೆಗೂ ಶೋಭಾಯಾತ್ರೆಯಲ್ಲಿ ಬರಲಾಯಿತು. ಶ್ರೀಆಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು. ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕರಾದ ವಾನರಾಶಿ ಬಾಲಕೃಷ್ಣ ಭಾಗವತರ್‌ರವರು ಪ್ರಾಸ್ತಾವಿಕ ನುಡಿಗಳನ್ನು ನುಡಿದರು. ವಿದೂಷಿ ಸರೋಜಮ್ಮ ಪ್ರಾರ್ಥಿಸಿದರು. ಕಲ್ಲಹಳ್ಳಿ ಲಕ್ಷ್ಮೀನಾರಾಯಣಪ್ಪ ಸ್ವಾಗತಿಸಿದರು. ನರಸಿಂಹರೆಡ್ಡಿ ವಂದಿಸಿದರು. ಗ್ರಾಮಸ್ಥರ ಪರವಾಗಿ ಡಾ .ಎಂ.ಆರ್. ಜಯರಾಮ್ ಅವರನ್ನು ವೇದಿಕೆಯಲ್ಲಿ ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮಾಜಿ ಸಚಿವರಾದ ಎ. ಚೌಡರೆಡ್ಡಿ, ಕೈವಾರ ಮಠದ ಉಪಾಧ್ಯಕ್ಷ ಜೆ. ವಿಭಾಕರರೆಡ್ಡಿ, ಖಜಾಂಚಿ ಆರ್.ಪಿ.ಎಂ. ಸತ್ಯನಾರಾಯಣ್, ನಿವೃತ್ತ ಕೆ.ಎ.ಎಸ್ ಅಧಿಕಾರಿ ಬಿ.ಎನ್. ಕೃಷ್ಣಯ್ಯ, ಎ.ಪಿ.ಎಂ.ಸಿ. ಅಧ್ಯಕ್ಷರಾದ ಕುರುಟಹಳ್ಳಿ ಕೃಷ್ಣಮೂರ್ತಿ, ಕಲ್ಲಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮದಿಂದ ನೂರಾರು ಸಂಖ್ಯೆಯಲ್ಲಿ ಭಕ್ತಾದಿಗಳು ಉಪಸ್ಥಿತರಿದ್ದರು.




# ಕೈವಾರದಲ್ಲಿ ಶಿವರಾತ್ರಿ ಸಂಭ್ರಮ

ಕೈವಾರದ ಶ್ರೀ ಭೀಮಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ ಶಿವರಾತ್ರಿ ಪ್ರಯುಕ್ತ ವಿಶೇಷ ಪೂಜಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ಬೆಳಗಿನಿಂದಲೇ ಭಕ್ತಾದಿಗಳು ದೂರದ ಊರುಗಳಿಂದ ಆಗಮಿಸಿ ಪೂಜಾ ಕೈಂಕರ್ಯದಲ್ಲಿ ಭಾಗವಹಿಸಿ ಹಣ್ಣು ಕಾಯಿ ಮಾಡಿಸುವ ದೃಶ್ಯ ಸಾಮಾನ್ಯವಾಗಿತ್ತು. ಭೀಮಲಿಂಗೇಶ್ವರ ಲಿಂಗಕ್ಕೆ ಮಹನ್ಯಾಸಪೂರ್ವಕ ರುದ್ರಾಭಿಷೇಕವನ್ನು ಅರ್ಪಿಸಲಾಯಿತು. ಪಾರ್ವತೀ ಅಮ್ಮನವರಿಗೆ ವಿಶೇಷ ಅಭಿಷೇಕ ಲಲಿತಾ ಸಹಸ್ರನಾಮಾರ್ಚನೆಯನ್ನು ಮಾಡಲಾಯಿತು. ದೇವಾಲಯವನ್ನು ವಿಶೇಷ ಹೂಗಳಿಂದ ಅಲಂಕರಿಸಲಾಗಿತ್ತು. ಭಕ್ತರು ದೇವಾಲಯದಲ್ಲಿರುವ ಪುರಾತನವಾದ ನಂದಿಯನ್ನು ಪೂಜಿಸಿದರು.

**ಹರಿದು ಬಂದ ಭಕ್ತ ಜನಸಾಗರ:** ದೇವಾಲಯಗಳ ನಗರಿಯಾದ ಕೈವಾರದ ಅಮರನಾರೇಯಣಸ್ವಾಮಿ ದೇವಾಲಯ, ಶ್ರೀ ಯೋಗಿನಾರೇಯಣಮಠದಲ್ಲಿ ಶಿವರಾತ್ರಿ ಪ್ರಯುಕ್ತ ಭಕ್ತರ ಜನಸಂದಣಿ ಅಧಿಕವಾಗಿತ್ತು. ತಾತಯ್ಯನವರ ಮೂಲ ಬೃಂದಾವನವನ್ನು ವಿಶೇಷ ಹೂಗಳಿಂದ ಅಲಂಕರಿಸಲಾಗಿತ್ತು. ಆಂಧ್ರ, ತಮಿಳುನಾಡು ಮತ್ತು ಸುತ್ತಮುತ್ತಲಿನ ಭಕ್ತರು ವಿಶೇಷವಾಗಿ



ಶ್ರೀ ಕ್ಷೇತ್ರ ಕೈವಾರದಲ್ಲಿ ಸುನೀಲ್ ರಾವ್ ಅವರಿಂದ ಬಾಲಕೃಷ್ಣ ಭಾಗವತರ್‌ಗೆ ಮಾಲಾರ್ಪಣೆ



ಯೋಗಿನಾರೇಯಣಮಠದಲ್ಲಿ ಜಾಗರಣೆ ಪ್ರಯುಕ್ತ ಆಗಮಿಸುತ್ತಾರೆ. ಬಂದ ಭಕ್ತರಿಗೆ ಶ್ರೀ ಮಠದಲ್ಲಿ ಪ್ರಸಾದ ವ್ಯವಸ್ಥೆಯನ್ನು ಮಾಡಲಾಗಿತ್ತು. ದೇವಾಲಯದಲ್ಲಿ ಸರತಿ ಸಾಲಿನಲ್ಲಿ ನಿಂತು ಭಕ್ತರು ದೇವರ ದರ್ಶನ ಪಡೆದು ಪುನೀತರಾದರು. ನಾದಸುಧಾರಸ ವೇದಿಕೆಯನ್ನು ಬೆಳಗಿನಿಂದಲೇ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಪಲ್ಲಕ್ಕಿ ಉತ್ಸವ: ಶಿವರಾತ್ರಿಯ ದಿನದ ರಾತ್ರಿಯಂದು ಕೈವಾರದ ಗ್ರಾಮಸ್ಥರಿಂದ ಶ್ರೀ ಭೀಮಲಿಂಗೇಶ್ವರ ಸ್ವಾಮಿಯವರ ಮುತ್ತಿನ ಪಲ್ಲಕ್ಕಿ ಉತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಉತ್ಸವ ಮೂರ್ತಿಗಳನ್ನು ಸರ್ವಾಲಂಕೃತವಾಗಿ ಅಲಂಕರಿಸಿ ಪಲ್ಲಕ್ಕಿಯಲ್ಲಿಟ್ಟು, ವಿಶೇಷ ಪೂಜೆಗಳನ್ನು ಸಮರ್ಪಿಸಲಾಯಿತು. ಮುತ್ತಿನ ಪಲ್ಲಕ್ಕಿಯನ್ನು ಕೈವಾರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು.

## ವಿದ್ವಾನ್ ಬಾಲಕೃಷ್ಣ ಭಾಗವತರ್ ಅವರಿಂದ ವಿಶೇಷ ಹರಿಕಥೆ

ಮಹಾಶಿವರಾತ್ರಿ ಜಾಗರಣೆಯ ಪ್ರಯುಕ್ತ ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ಜೀವನಚರಿತ್ರೆ–ಕಾಲಜ್ಞಾನದ ಹರಿಕಥೆಯನ್ನು ಮಾಡಿದ ಬಾಲಕೃಷ್ಣ ಭಾಗವತರು, ತಾತಯ್ಯನವರ ಜೀವನದ ಹಲವಾರು ಪ್ರಸಂಗವನ್ನು ಭಕ್ತಿಪೂರ್ಣವಾಗಿ ಹೇಳುತ್ತಾ ನೆರೆದಿದ್ದ ಜನರಲ್ಲಿ ಭಕ್ತಿಭಾವದ ಸಂಚಲವನ್ನು ಮೂಡಿಸಿದರು. ತಾತಯ್ಯನವರು ಶತಕಗಳ ಮೂಲಕ ಸಮಾಜಕ್ಕೆ ನೀಡಿರುವ ಸಂದೇಶವನ್ನು ಸವಿಸ್ತಾರವಾಗಿ ವಿವರಿಸಿದರು.

ಹರಿಕಥೆಗೆ ಪಕ್ಕವಾದ್ಯದಲ್ಲಿ ವಿದ್ವಾನ್ ಕೆ.ಎಸ್. ಪ್ರಶಾಂತ್ ಮೃದಂಗ, ವಿದ್ವಾನ್ ಎ.ವಿ. ವಿಶ್ವನಾಥ್ ಹಾರ್ಮೋನಿಯಂ, ವಿದ್ವಾನ್ ಎ.ವಿ. ಶ್ರೀಹರಿ ಪಿಟೀಲು, ವಿದ್ವಾನ್ ಕೆ. ರಾಮಕುಮಾರ್ ತಬಲ, ಸಹಕಾರ ನೀಡಿ ಸಹಕರಿಸಿದರು. ತಾತಯ್ಯನವರ ಭಕ್ತರಾದ ಬೆಂಗಳೂರಿನ ಶ್ರೀಯುತ ಸುನೀಲ್‌ರಾವ್‌ರವರು ಬಾಲಕೃಷ್ಣ ಭಾಗವತರ್ ಅವರಿಗೆ ಮಾಲಾರ್ಪಣೆ ಮಾಡಿ ಶುಭಕೋರಿದರು.

ನೆರೆದಿದ್ದ ಸಹಸ್ರಾರು ಭಕ್ತವೃಂದ ಹರಿಕಥೆಯನ್ನು ಕೇಳಿ ಜಾಗರಣೆ ಮಾಡಿದರು. ರಾತ್ರಿ 9ಗಂಟೆಗೆ ಪ್ರಾರಂಭವಾದ ಹರಿಕಥೆಯನ್ನು ಬೆಳಗ್ಗೆ 5.30 ಕ್ಕೆ ಸಮಾಪ್ತಿ ಮಾಡಿ, ಮಹಾಮಂಗಳಾರತಿಯನ್ನು ನೆರವೇರಿಸಲಾಯಿತು. ಭಕ್ತರೆಲ್ಲರಿಗೂ ಯೋಗಿನಾರೇಯಣ ಟ್ರಸ್ಟ್‌ನ ವತಿಯಿಂದ ಪ್ರಸಾದ ವಿನಿಯೋಗವನ್ನು ಮಾಡಲಾಯಿತು.





# ಆಲಂಬಗಿರಿಯಲ್ಲಿ ಸೂರ್ಯಪ್ರಭಾ ಉತ್ಸವ




ಆಲಂಬಗಿರಿ ಶ್ರೀ ಕಲ್ಕಿ ಲಕ್ಷ್ಮೀ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ರಥಸಪ್ತಮಿ ಪ್ರಯುಕ್ತ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಪೂಜೆಯ ಅಂಗವಾಗಿ ಗರ್ಭಗುಡಿಯಲ್ಲಿರುವ ಶ್ರೀಲಕ್ಷ್ಮೀವೆಂಕಟರಮಣಸ್ವಾಮಿಗೆ ರಜತಕವಚ ಅಲಂಕರಿಸಿ ಹೂಗಳಿಂದ ಅಲಂಕರಿಸಲಾಗಿತ್ತು. ಸರ್ವಾಂಗಸುಂದರವಾಗಿ ಅಲಂಕರಿಸಲಾಗಿದ್ದ ಸೂರ್ಯಪ್ರಭಾವಾಹನದಲ್ಲಿ ಶ್ರೀದೇವಿ ಭೂದೇವಿ ಸಮೇತ ಶ್ರೀ ಲಕ್ಷ್ಮೀವೆಂಕಟರಮಣಸ್ವಾಮಿಯ ಉತ್ಸವ ಮೂರ್ತಿಗಳನ್ನು ಕುಳ್ಳರಿಸಿ, ಮಂಗಳವಾದ್ಯದೊಂದಿಗೆ ಪ್ರಾಕಾರೋತ್ಸವವು ನಡೆಯಿತು. ಉತ್ಸವದ ಅನಂತರ ಸ್ವಾಮಿಗೆ ಅಷ್ಟಾವಧಾನ ಸೇವೆಯನ್ನು ಸಲ್ಲಿಸಿ, ಮಹಾಮಂಗಳಾರತಿಯನ್ನು ಬೆಳಗಲಾಯಿತು. ಭಾಗವಹಿಸಿದ್ದ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಭಾಗವಹಿಸಿದ್ದ ಭಕ್ತರಿಗೆ ಪ್ರಸಾದದ ವ್ಯವಸ್ಥೆಯನ್ನು ಮಾಡಲಾಗಿತ್ತು. ಭಕ್ತರು ರಥಸಪ್ತಮಿ ವಿಶೇಷ ಪೂಜೆಯಲ್ಲಿ ಭಾಗವಹಿಸಿದ್ದರು.



**ಎಂ.ಎಸ್. ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ೧೫-೦೨-೨೦೨೦ರಂದು ನಡೆದ ಅಂತರರಾಷ್ಟ್ರೀಯ ಯೋಗ ಸೆಮಿನರ್ ಅನ್ನು ಗೋಕುಲ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಎಂ.ಆರ್. ಜಯರಾಮ್ ಉದ್ಘಾಟಿಸಿದರು.**



**ಡಾ. ಎಂ.ಆರ್. ಜಯರಾಮ್ ಅವರಿಂದ ಉದ್ಘಾಟನಾ ಭಾಷಣ**



॥ ಓಂ ನಮೋ ನಾರೇಯಣಾಯ ॥

# ಸದ್ಗುರು ಶ್ರೀ ಯೋಗಿ ನಾರೇಯಣ ಮಠ

ಶ್ರೀ ಕ್ಷೇತ್ರ ಕೈವಾರ, ಚಿಂತಾಮಣಿ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ. ಮೊ: 9141275014

ಭಕ್ತ ಬಾಂಧವರೇ,

ಪ್ರಾತ: ಸ್ಮರಣೀಯರಾದ ಕಾಲಜ್ಞಾನಿ ಶ್ರೀ ಯೋಗಿನಾರೇಯಣ ತಾತಯ್ಯನವರು ತಪಸ್ಸನ್ನಾಚರಿಸಿ ಸಿದ್ಧಿಯನ್ನು ಪಡೆದು, ಶ್ರೀ ಕ್ಷೇತ್ರ ಕೈವಾರದಲ್ಲಿ ಜೀವ ಸಮಾಧಿಸ್ಥರಾಗಿ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತಿದ್ದಾರೆ. ಪ್ರತಿ ವರ್ಷದಂತೆ ಶ್ರೀ ವಿಕಾರಿನಾಮ ಸಂವತ್ಸರ ಫಾಲ್ಗುಣ ಹುಣ್ಣಿಮೆ ತಾ॥09.03.2020 ಸೋಮವಾರ ಬೆಳಿಗ್ಗೆ 11 ಗಂಟೆಗೆ ಸದ್ಗುರು ತಾತಯ್ಯನವರ ವತಿಯಿಂದ ಶ್ರೀಅಮರನಾರೇಯಣಸ್ವಾಮಿ ದೇವಾಲಯದಲ್ಲಿ **"ಶ್ರೀಕೃಷ್ಣಗಂಧೋತ್ಸವ ಸೇವೆ"**ಯನ್ನು ಧರ್ಮಾಧಿಕಾರಿಗಳಾದ ಡಾ॥ಎಂ.ಆರ್.ಜಯರಾಮ್‌ರವರು ನೆರವೇರಿಸುತ್ತಾರೆ.

**ತಾ॥ 9-3-2020 ಸೋಮವಾರ ಮಧ್ಯಾಹ್ನ 1-00 ಗಂಟೆಗೆ ತಾತಯ್ಯನವರ ಆರಾಧ್ಯ ದೈವ**

## ಶ್ರೀ ಅಮರನಾರೇಯಣಸ್ವಾಮಿ ರಥೋತ್ಸವ

ರಾತ್ರಿ 9 ರಿಂದ : ವಿ॥ ಶ್ರೀಮತಿ ರಮಾದೇವಿ ಭಾಗವತಾರಿಣಿ, ಮದನಪಲ್ಲಿ ಮತ್ತು ತಂಡದವರಿಂದ **"ಹರಿಕಥೆ"**

ರಾತ್ರಿ 12 ರಿಂದ ವಿ॥ ಶ್ರೀ ವೆಂಕಟಮುನಿಯಪ್ಪ ಮತ್ತು ತಂಡ ಹೆಚ್.ಗೊಲ್ಲಹಳ್ಳಿ ತಂಡದವರಿಂದ **"ಬುರ್ರಕಥೆ"**

**ಫಾಲ್ಗುಣ ಬಹುಳ ಪಾಡ್ಯಮಿ 10.3.2020 ಮಂಗಳವಾರ ಮಧ್ಯಾಹ್ನ 12.30 ಗಂಟೆಗೆ**

## ಸದ್ಗುರು ಶ್ರೀ ಯೋಗಿನಾರೇಯಣ ತಾತಯ್ಯನವರ ರಥೋತ್ಸವ

ರಾತ್ರಿ 9 ಕ್ಕೆ : ವಿ॥ ಶ್ರೀಮತಿ ಮಂಜುಳ ಭಾಗವತಾರಿಣಿ, ಕೋಲಾರ ಮತ್ತು ತಂಡದವರಿಂದ **"ಹರಿಕಥೆ"**

ರಾತ್ರಿ 10 ಕ್ಕೆ : ಮುತ್ತಿನ ಪಲ್ಲಕ್ಕಿ ಉತ್ಸವ

ರಾತ್ರಿ 12 ಕ್ಕೆ : ವಿ॥ ಶ್ರೀ ದಸ್ತಗೀರ್ ಸಾಬ್, ಕದರಿ ಮತ್ತು ತಂಡದವರಿಂದ **"ಬುರ್ರಕಥೆ"**

ಈ ಮೇಲ್ಕಂಡ ರಥೋತ್ಸವಗಳನ್ನು ವಿಶೇಷ ವಾದ್ಯಗೋಷ್ಠಿ, ಭಜನಾ ಕಾರ್ಯಕ್ರಮ, ಸಂಕೀರ್ತನೆ, ಹರಿಕಥೆ, ಬುರ್ರಕಥೆ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುತ್ತದೆ. ಭಕ್ತಬಾಂಧವರು ಈ ವಿಶೇಷ ಹಾಗೂ ಆಕರ್ಷಕ ರಥೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸ್ವಾಮಿ ಕೃಪೆಗೆ ಪಾತ್ರರಾಗಬೇಕಾಗಿ ಕೋರುತ್ತೇವೆ.

**ಡಾ॥ ಎಂ.ಆರ್.ಜಯರಾಮ್**
ಧರ್ಮಾಧಿಕಾರಿಗಳು

ಮಠದ ವಿಶ್ವಸ್ಥ ಮಂಡಲಿ :

ಶ್ರೀ ಜೆ. ವಿಭಾಕರರೆಡ್ಡಿ, ಉಪಾಧ್ಯಕ್ಷರು, ಶ್ರೀ ಆರ್.ಪಿ.ಎಂ. ಸತ್ಯನಾರಾಯಣ, ಖಜಾಂಚಿ

ಸದಸ್ಯರುಗಳು :

ಶ್ರೀ ಪಿ.ವೇಣುಗೋಪಾಲ್, ಶ್ರೀ ಬಿ.ಎಸ್.ಶ್ರೀನಿವಾಸ್, ಶ್ರೀ ಕೆ.ರಾಜಗೋಪಾಲ್, ಶ್ರೀ ಎಸ್.ವಿ.ಸತ್ಯನಾರಾಯಣಶೆಟ್ಟಿ, ಶ್ರೀ ಡಾ॥ಎಂ.ವಿ.ಶ್ರೀನಿವಾಸ್, ಶ್ರೀ ಕೆ.ನರಸಿಂಹಪ್ಪ, ಶ್ರೀ ಗಣೇಶ್ ಚಂದ್ರಪ್ಪ , ಶ್ರೀ ಕೆ.ಎಂ.ತ್ಯಾಗರಾಜ್

ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್
ಸಂಚಾಲಕರು, ಶ್ರೀ ಯೋಗಿ ನಾರೇಯಣ ನಾದಸುಧಾರಸ ಸಂಕೀರ್ತನಾ ಯೋಜನೆ

**ಸರ್ವರಿಗೂ ಆದರದ ಸುಸ್ವಾಗತ**


■ ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

# 'ನನ್ನನ್ನು ಋಣಮುಕ್ತನನ್ನಾಗಿ ಮಾಡು'

'ಋಣ ಇಟ್ಟುಕೊಂಡು ಸಾಯಬಾರದು' ಎನ್ನುವ ಪ್ರಜ್ಞೆ ಸದಾ ಇರುತ್ತದೆ, ಆತ್ಮಗುಣಸಂಪನ್ನರಲ್ಲಿ. "ಮಹಾಜನಗಳಿಂದ ಚಂದಾ ಸಂಗ್ರಹಿಸಿ ಅದನ್ನು ವಿನಿಯೋಗಿಸದೆ ನಾನೇ ಉಪಯೋಗಿಸಿ ಋಣಿಯಾಗಿದ್ದೇನೆ. ಆ ಋಣದಿಂದ ನನ್ನನ್ನು ವಿಮೋಚನೆಮಾಡು" ಎಂಬ ಒಂದು ಮಂತ್ರ ಕೂಷ್ಮಾಂಡಹೋಮ ಸಂಬಂಧವಾದ ಮಂತ್ರಗಳಲ್ಲಿ ಬರುತ್ತದೆ.

1955ನೆಯ ಇಸವಿ. ಆರ್.ಕೆ. ಶ್ರೀಕಂಠ ಕುಮಾರ ಸ್ವಾಮಿಗಳು ಭದ್ರಾವತಿಯ ಕಾರ್ಖಾನೆಯಲ್ಲಿ ಕೆಲಸದಲ್ಲಿದ್ದರು. ಆ ವರ್ಷ ಲಾಭ ಚೆನ್ನಾಗಿ ಬಂದು, ಉದ್ಯೋಗಿಗಳಿಗೆ ಮೂರು ತಿಂಗಳ ಬೋನಸ್ ಕೊಟ್ಟಿದ್ದರು. ಕುಮಾರಸ್ವಾಮಿಗಳ ತಂದೆ ಮಗನನ್ನು ಕರೆದು, "ಪುಟ್ಟಣ್ಣ, ನನ್ನ ತಂದೆಯವರ ಋಣ ತೀರಿಸಲು ನನಗೆ ಸಹಾಯಮಾಡುತ್ತೀಯಾ" ಎಂದು ಕೇಳಿದರು. ಮಗನಿಗೆ ಸಂದರ್ಭ ತಿಳಿದಿರಲಿಲ್ಲ; 'ಏನಣ್ಣ' ಎಂದು ಕೇಳಿದರು.

ಆಗ ತಂದೆ ಹೇಳಿದರು: "1918ರಲ್ಲಿ ನನ್ನ ತಂದೆ ಸಾಯುವಾಗ ನನ್ನ ಕೈಹಿಡಿದು 'ಅಪ್ಪಾ! ರುದ್ರಪಟ್ಟಣದಲ್ಲಿದ್ದಾಗ ಮಾರ್ಗಶಿರಮಾಸದಲ್ಲಿ ಧಾತ್ರಿಹವನವನ್ನು ಪ್ರತಿ ವರ್ಷದಂತೆ ಆ ವರ್ಷವೂ ನಡೆಸಲು ಮಹಾಜನಗಳಿಂದ ಚಂದಾ ವಸೂಲು ಮಾಡಿದ್ದೆ. 45 ರೂ. ಆಗಿತ್ತು. ಆಗ ಸಮಾರಾಧನೆ ನಡೆಸಬೇಕಾಗಿತ್ತು. ಆದರೆ ಆ ಹೊತ್ತಿಗೆ ಪ್ಲೇಗ್ ಬಂದು ಬಡಿದಿದ್ದರಿಂದ ನಾವೆಲ್ಲ ಊರು ಬಿಟ್ಟು ಬಂದೆವು. ಈಗ 15 ವರ್ಷಗಳಿಂದಲೂ ಒಂದು ವರ್ಷವಾದರೂ ಸಮಾರಾಧನೆ ನಡೆಸಿ ಋಣಮುಕ್ತನಾಗಬೇಕು ಎಂದು ಪ್ರಯತ್ನಪಟ್ಟೆ. ಅದು ಸಾಧ್ಯವಾಗಲಿಲ್ಲ. ಆ ಮಹಾಜನಗಳ ಋಣ ಇಟ್ಟುಕೊಂಡು ದೇಹತ್ಯಾಗ ಮಾಡಲು ನನಗೆ ಕಷ್ಟವಾಗಿದೆ. ಮುಂದೆ ಯಾವತ್ತಾದರೂ ಗ್ರಾಮದಲ್ಲಿ ಒಂದು ಸಮಾರಾಧನೆ ನಡೆಸಿ ನನ್ನನ್ನು ಋಣಮುಕ್ತನನ್ನಾಗಿ ಮಾಡು' ಎಂದು ಕಳಕಳಿಯಿಂದ ಕೇಳಿಕೊಂಡರು. 'ಆಗಲಿ' ಎಂದು ಒಪ್ಪಿಕೊಂಡೆ. ಆದರೆ 37 ವರ್ಷಗಳಿಂದ ಅಷ್ಟು ಹಣ ಕೂಡಿಸಲು ನನ್ನ ಕೈಯಲ್ಲಿ ಆಗಲೇ ಇಲ್ಲ. ಈಗ ನೀನೂ ಸಂಪಾದಿಸುತ್ತಿದ್ದೀಯೆ. ನಿನ್ನ ತಾತನ ಋಣ ತೀರಿಸಲು ಸಹಾಯ ಮಾಡಲು ನಿನಗೆ ಸಾಧ್ಯವೇ?"



ಕುಮಾರಸ್ವಾಮಿಗಳು, "ಅಣ್ಣ! ನಿಮ್ಮ ಕರ್ತವ್ಯಪ್ರಜ್ಞೆಗೆ ನನ್ನ ಅನಂತ ನಮಸ್ಕಾರಗಳು. ತಾತನ ಋಣವಿಮೋಚನೆ ಖಂಡಿತವಾಗಿ ಮಾಡುತ್ತೇನೆ. ರುದ್ರಪಟ್ಟಣಕ್ಕೆ ಕಾಗದ ಬರೆಯಿರಿ. ಈ ಕಾಲದಲ್ಲಿ 45 ರೂ.ಗಳಿಗೆ ಗ್ರಾಮದಲ್ಲಿ ಸಮಾರಾಧನೆ ಮಾಡಲು ಸಾಧ್ಯವಾಗುವುದಿಲ್ಲ. ಎಷ್ಟಾಗುತ್ತೆ ಎಂದು ತಿಳಿದುಕೊಳ್ಳಿ, ಮಾಡೋಣ" ಎಂದು ಹೇಳಿದರು.

ಕೂಡಲೇ ತಂದೆ ರುದ್ರಪಟ್ಟಣದ ವೇ.ಬ್ರ.ಶ್ರೀ. ಕೃಷ್ಣ ದೀಕ್ಷಿತರಿಗೆ ಕಾಗದ ಬರೆದರು. ಅವರಿಂದ ಕೂಡಲೇ ಉತ್ತರವೂ ಬಂತು. ಆಗ ಒಂದು ದಿನದ ಸಮಾರಾಧನೆಗೆ ಬರಿಯ ಹುಳಿಯನ್ನ ಪಾಯಸ ಆಂಬೊಡೆ ಸೇರಿದ ಹಾಗೆ ಖರ್ಚು 900 ರೂಪಾಯಿ ಬೇಕಾಗುವುದೆಂದು ತಿಳಿಯಿತು. ಕುಮಾರಸ್ವಾಮಿಗಳು ತಮ್ಮ ಬೋನಸ್ ಎಲ್ಲ ಸೇರಿಸಿ 800 ರೂಪಾಯಿ ಕೊಟ್ಟರು; ಹೊಸಪೇಟೆಯಲ್ಲಿದ್ದ ತಮ್ಮ ತಮ್ಮನಿಂದ ಉಳಿದ 100 ರೂಪಾಯಿ ತೆಗೆದುಕೊಂಡು ಪೂರ್ತಿಹಣವನ್ನು ರುದ್ರಪಟ್ಟಣಕ್ಕೆ ಕಳಿಸಿಕೊಟ್ಟರು.

ಸಮಾರಾಧನೆಯ ದಿನ ನಿಶ್ಚಯವಾಯಿತು. ಆ ದಿನಕ್ಕೆ ಕುಮಾರಸ್ವಾಮಿಗಳಿಗೆ ರಜ ಸಿಕ್ಕದೆ, ಅವರು ಸಮಾರಾಧನೆಯಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ಸಮಾರಾಧನೆ ತೃಪ್ತಿಕರವಾಗಿ

ನೆರವೇರಿತು.

ತಂದೆ ಕಾಗದ ಬರೆದರು: "ಪುಟ್ಟಣ್ಣ, ಸಮಾರಾಧನೆ ತೃಪ್ತಿಯಾಗಿ ನೆರವೇರಿತು. ಮಹಾಜನಗಳಿಗೆಲ್ಲ ನಮಸ್ಕರಿಸಿ 'ನಿನ್ನ ತಂದೆಯ ಋಣ ತೀರಿತು ಎಂದು ಎಲ್ಲರೂ ಒಪ್ಪಿ ನನ್ನನ್ನೂ ಅನುಗ್ರಹಿಸಬೇಕು' ಎಂದು ಪ್ರಾರ್ಥಿಸಿದೆ. ಎಲ್ಲ ಏಕಕಂಠದಿಂದ ಜಯಘೋಷ ಮಾಡಿದರು. ಪುಟ್ಟಣ್ಣ! ನೀನು ಸುಪುತ್ರ. ನಿನ್ನ ತಂದೆಯ, ತಾತನ ಋಣ ತೀರಿಸಲು ಇಷ್ಟರ ಮಟ್ಟಿಗೆ ಸಹಾಯ ಮಾಡಿದ್ದೀಯೆ.


ದೀನಬಂಧು ಚಿತ್ತರಂಜನ ದಾಸರು ತಮ್ಮ ತಂದೆಯವರು ಸತ್ತಾಗ, ಸಾಲುಗಟ್ಟಿ ಬಂದ ಸಾಲಗಾರರನ್ನೆಲ್ಲ ಕಂಡು ನಮಸ್ಕರಿಸಿ ತಮ್ಮ ತಂದೆ ಮಾಡಿದ್ದ ಸಾಲದ ಒಂದು ಕಾಸು ಸಹ ಬಿಡದೆ ತೀರಿಸುವುದಾಗಿ ಆಶ್ವಾಸನೆ ಕೊಟ್ಟು, ತಾವು ಸಂಪಾದನೆ ಮಾಡಿ, ಬಡ್ಡಿ ಸಮೇತ ಎಲ್ಲ ಸಾಲ ತೀರಿಸಿದರಂತೆ. ಹಾಗೆ ನೀನೂ ಮಾಡಿದ್ದೀಯೆ. ನಿನ್ನ ತಾತ ಯಾವ ಲೋಕದಲ್ಲಿ ಇದ್ದರೂ ತಮ್ಮ ಮೊಮ್ಮಗನ ಧಾರ್ಮಿಕತೆ ಕಂಡು ಖಂಡಿತ ಆನಂದಪಟ್ಟಿರುತ್ತಾರೆ. ಅವರ ಅನುಗ್ರಹ ಸದಾ ನಿನ್ನ ಮೇಲಿರಲಿ."

'ಬ್ರಾಹ್ಮಿ', ೬೮೮ಬಿ, ಆಶ್ರಮ ರಸ್ತೆ, ೩ನೇ ಬ್ಲಾಕ್,
ಜಯಲಕ್ಷ್ಮೀಪುರಂ, ಮೈಸೂರು – ೫೭೦ ೦೧೨.



# ಇದೇ ಕ್ಷಣ, ಭಕ್ತಿ ಕ್ಷಣ

ಓರ್ವ ಅನುಭಾವಿ ಗುರು. ಆತನ ಬಳಿಗೆ ಒಬ್ಬ ವ್ಯಕ್ತಿ ಬಂದ. ಆತ ದೊಡ್ಡ ಸಿರಿವಂತ. ಐವತ್ತರ ವಯಸ್ಸು. ಗುರುಗಳಿಗೆ ವಂದಿಸಿ ಹೇಳಿದ, "ಗುರುಗಳೇ, ದೇವರ ಕರುಣೆಯಿಂದ ನಾನು ಸಾಕಷ್ಟು ಸಂಪಾದಿಸಿದ್ದೇನೆ. ನನ್ನ ಕುಟುಂಬದವರೆಲ್ಲ ಸೌಖ್ಯದಿಂದ ಇದ್ದಾರೆ. ನನಗೀಗ ದೇವರನ್ನು ಕಾಣುವ ಹಂಬಲವಾಗಿದೆ. ಆತನನ್ನು ಕಾಣುವ ಒಂದು ಸರಳ ಸಾಧನ ತಿಳಿಸಿರಿ. ಆ ಸಾಧನವನ್ನು ಯಾವಾಗ ಅನುಸರಿಸಬೇಕು ಎಂಬುದನ್ನೂ ಹೇಳಿರಿ."



ಸಿರಿವಂತನ ಆತುರತೆಯನ್ನು ಕಂಡು ಗುರುಗಳು ಉಪಾಯದಿಂದ ಹೇಳಿದರು, "ದೇವನನ್ನು ಕಾಣಲು ಬಹಳ ಸುಲಭ ಸಾಧನವೊಂದಿದೆ. ನಿನ್ನ ಮರಣದ ಮುಂಚೆ ದೇವನನ್ನು ಒಮ್ಮೆ ಮನಸಾರೆ ಸ್ಮರಿಸಿಬಿಡು. ಸಾಕು, ಅದೇ ಕ್ಷಣ ಆತ ನಿನ್ನ ಅನುಭವಕ್ಕೆ ಬರುತ್ತಾನೆ!"

"ಮರಣದ ಮುಂಚೆ ದೇವನನ್ನು ಒಮ್ಮೆ ನೆನೆಯಬೇಕಷ್ಟೆ. ನನಗೆ ಈಗ ಐವತ್ತು ವರ್ಷ. ಇನ್ನೂ ಸಾಕಷ್ಟು ಸಮಯವಿದೆ!" ಎಂದು ಸಿರಿವಂತ ಸಂತಸದಿಂದ ಗುರುಗಳಿಗೆ ವಂದಿಸಿ ಮನೆಗೆ ನಡೆದ.

"ನಿಲ್ಲು, ಯಾವಾಗ ನೆನೆಯುವೆ?" ಎಂದರು ಗುರುಗಳು.


"ಹೌದು, ಗುರುಗಳೇ ಮರತೇಬಿಟ್ಟೆ. ನನ್ನ ಮರಣವೆಂದು ಹೇಳಿ ಗುರುಗಳೇ" ಎಂದನು ಸಿರಿವಂತ.

"ನನ್ನ ಮರಣವೇ ನನಗೆ ಗೊತ್ತಿಲ್ಲ. ಇನ್ನು ನಿನ್ನ ಮರಣ ನನಗೇನು ಗೊತ್ತು? ನಾಳೆಯೇ ನೀನು ಪ್ರಾಣ ಬಿಡಬಹುದು. ಅಥವಾ ಇನ್ನೂ ಐವತ್ತು ವರುಷಗಳ ಅನಂತರ ನಿನ್ನ ಕೊನೆಯಾಗಬಹುದು. ಎಲ್ಲ ಅನಿಶ್ಚಿತ ಈ ಜೀವನ! ಆದ್ದರಿಂದ ನೀನು ಬೇಗ ಜಾಣನಾಗು. ನಾಳೆಯೇ ನೀನು ಪ್ರಾಣ ಬಿಡಬಹುದೆಂದು ಇಂದೇ ಈಗಲೇ ದೇವನನ್ನು ನೆನೆದು ಧನ್ಯನಾಗು!" ಎಂದರು ಗುರುಗಳು. ಸಿರಿವಂತನೀಗ ನಿಜವಾಗಿಯೂ ಜಾಣನಾಗಿದ್ದ. 'ಇದೇ ಕ್ಷಣ; ಭಕ್ತಿ ಸಾಮ್ರಾಜ್ಯದಲ್ಲಿ ಪ್ರವೇಶಿಸುವ ಕ್ಷಣ!' ಎಂದರಿತ.

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ



ಅನಂತರ ಭೀಮನು ತನ್ನನ್ನು ತಾನೇ ಸಮಾಧಾನಪಡಿಸಿಕೊಂಡ...
ಹತ್ತಿರದಲ್ಲಿಯೇ ಯಾವುದೋ ನಗರವಿದ್ದಹಾಗೆ ತೋರುತ್ತದೆ.
2010 © MALAY FEATURES PB 608, KOTTAYAM -1
ಈ ಬಗೆಯಾಗಿ ಭೀಮನು ತನ್ನ ತಾಯಿ ಮತ್ತು ಸೋದರರ ಸನಿಹದಲ್ಲಿ ಕುಳಿತುಕೊಂಡ.


ಜನಮೇಯನು ಸರ್ಪಯಾಗ ಮಾಡುವಾಗ ವೈಶಂಪಾಯನರು ಮಹಾಭಾರತ ಕಥೆಯನ್ನು ಹೇಳಲು ತೊಡಗಿದರು. ಐವರು ಪಾಂಡವರು ತಮ್ಮ ತಾಯಿಯ ಜೊತೆಯಲ್ಲಿ ಅರಗಿನ ಮನೆಯ ಅಗ್ನಿಯಿಂದ ತಪ್ಪಿಸಿಕೊಂಡು ಒಂದು ಕಾಡಿಗೆ ಹೋದರು.
ಬಾ ಪ್ರಿಯ ಸುತ್ತಾಡಿ ಬರೋಣವಂತೆ.
ಇಲ್ಲಿಂದ ಭೀಮಪುತ್ರ ಘಟೋತ್ಕಚನ ಕಥೆ ಪ್ರಾರಂಭ ಆಗುವುದು
2020 © MALAY FEATURES PB 608, KOTTAYAM-1
ಆ ದಿನಗಳಲ್ಲೇ ಭೀಮನು ಹಿಡಿಂಬಿಯನ್ನು ವಿವಾಹವಾದ.

# ಮಹಾಭಾರತ-6

ಕಥೆ: ಕುಮಾರ ಮೋಹನ್ ಚಲಮ್
ಕಲೆ: ಅಜಯನ್ ಸಂತೂ



**Licensed to post without prepayment-WPP-102 MALLARA Monthly, MARCH-2020,**
**64 pages and cost Rs. 12/- RNI. No. KARBIL/2009/30225 Reg. KA/BGW-492/2018-2020**
**Published and Posted at Bengaluru PSO, Bengaluru-560026 on 30th of every month.**



ನೇಪಾಳದ ಕಠ್ಮಂಡುವಿನಲ್ಲಿರುವ ಶಿವ ಪಾರ್ವತಿ ದೇವಸ್ಥಾನ